Bennett & Coleman
THE TIMES OF INDIA
www.vijaykarnataka.com

ಶುಕ್ರವಾರ,12 ಜೂನ್ 2026 | ಪುಟಗಳು: 15+4 | ಬೆಲೆ: ₹ 5.00
ಸಂಪುಟ: 27 | ಸಂಚಿಕೆ: 162 c

VK
ವಿಜಯ ಕರ್ನಾಟಕ

ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಫಿಫಾ ವಿಶ್ವಕಪ್: ಇಂದು ಅಮೆರಿಕ-ಪರಗ್ವೆ ಮುಖಾಮುಖಿ

- ಅಮೆರಿಕ -ಪರಗ್ವೆ ಎಲ್ಲ ಸ್ಪರ್ಧೆಗಳಿಂದ 9 ಬಾರಿ ಮುಖಾಮುಖಿ
- 5ರಲ್ಲಿ ಯುಎಸ್‌ಎ ಜಯ; 2ರಲ್ಲಿ ಪರಗ್ವೆ ಗೆಲುವು; 2 ಡ್ರಾ
- ಅಮೆರಿಕ-ಪರಗ್ವೆ ವಿಶ್ವಕಪ್‌ನಲ್ಲಿ (1930) ಒಮ್ಮೆ ಮಾತ್ರ ಸೆಣಸು

P10

THE BIGGEST JEWELLERY SALE OF THE YEAR

HURRY ONLY 3 DAYS

ಜೋಯಾಲುಕ್ಕಾಸ್

SHOP NOW

ನಂಬಲಾಗದ ಫ್ಲಾಟ್
40% OFF
ಎಲ್ಲಾ ಆಭರಣಗಳ ಮಜೂರಿಯ ಮೇಲೆ

ಚಿನ್ನ, ವಜ್ರ, ಅನ್‌ಕಟ್ ವಜ್ರ, ಪ್ಲಾಟಿನಂ
ಅಮೂಲ್ಯ ಹರಳು ಮತ್ತು ಬೆಳ್ಳಿ ಆಭರಣ

ಆಫರ್ 14ನೇ ಜೂನ್ ವರೆಗೆ ಅನ್ವಯ

ಭಾರತ ಇನ್ನಷ್ಟು ಬಲವಾಗಿ ಬೆಳಗಲು
ನಿಮ್ಮ ಹಳೆಯ ಚಿನ್ನ ನೆರವಾಗುತ್ತದೆ

ಜೋಯಾಲುಕ್ಕಾಸ್‌ನಲ್ಲಿ ನಿಮ್ಮ ಹಳೆಯ ಚಿನ್ನವನ್ನು ಸಮಕಾಲೀನ ಆಭರಣಗಳಾಗಿ ಮರುಕಲ್ಪಿಸಿ ಮತ್ತು ಭಾರತದ ಅಮೂಲ್ಯ ಆಸ್ತಿಯನ್ನು ಸುಭದ್ರವಾಗಿ ಮುಂದುವರಿಸಿ.

ತ್ವರಿತ ನಗದು
ಯಾವುದೇ ಜ್ಯುವೆಲ್ಲರಿಯ ನಿಮ್ಮ ಹಳೆಯ ಚಿನ್ನವನ್ನು ಮಾರಾಟ ಮಾಡಿ, 15 ನಿಮಿಷದಲ್ಲಿ ತ್ವರಿತ ನಗದು ಪಡೆಯಿರಿ.

0% ಕಡಿತ
ಯಾವುದೇ ಜ್ಯುವೆಲ್ಲರಿಯ ಹಳೆಯ ಚಿನ್ನಾಭರಣ ವಿನಿಮಯದ ಮೇಲೆ

*T&C Apply. Not applicable for Gold coins & bars.

SHOP ONLINE @ joyalukkas.com

Joyalukkas
World's favourite jeweller

BENGALURU: M G ROAD • DICKENSON ROAD • JAYANAGAR • MALLESWARAM • MARATHAHALLI • PHOENIX MARKETCITY • KAMMANAHALLI • FORUM SOUTH BENGALURU, PRESTIGE FALCON CITY • HSR LAYOUT • KORAMANGALA • RAJAJINAGAR | MANGALURU • MYSURU • HUBBALLI • SHIVAMOGGA • BELAGAVI • UDUPI • HASSAN • DAVANAGERE • KALABURAGI
INDIA • USA • UK • UAE • KSA • QATAR • BAHRAIN • KUWAIT • OMAN • SINGAPORE • MALAYSIA • AUSTRALIA

ಲಲಿತಾಭಿನಂದನ
ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ
ಅಭಿನಂದನಾ ಸಮಾರಂಭ
ಜೂನ್ 12 2026
ಶುಕ್ರವಾರ ಬೆಳಗ್ಗೆ 10 ಗಂಟೆಗೆ
ಘಟಿಕೋತ್ಸವ ಭವನ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ
ಮಾನಸ ಗಂಗೋತ್ರಿ ಆವರಣ, ಮೈಸೂರು.
"ಎಲ್ಲಾ ಆತ್ಮೀಯ ಸ್ನೇಹಿತರಿಗೆ ವಿನಂತಿ: ಕಾರ್ಯಕ್ರಮಕ್ಕೆ ಹಾರ, ತುರಾಯಿ ತರಬೇಡಿ. ನಿಮ್ಮ ಸಾನ್ನಿಧ್ಯವೇ ನಮಗೆ ಮಹತ್ತರವಾದ ಆಶೀರ್ವಾದ."
VISMAYA
8050302424
ಕರುನಾಡಿನ ಹೆಮ್ಮೆ ಅಂತಾರಾಷ್ಟ್ರೀಯ ಖ್ಯಾತಿಯ
ನೃತ್ಯ ತಾರೆಯರಾದ ಕರ್ನಾಟಕ ಕಲಾಶ್ರೀ ನೃತ್ಯ ಚೂಡಾಮಣಿ
ಶ್ರೀಮತಿ ನಿರುಪಮಾ - ರಾಜೇಂದ್ರ
ಮತ್ತು ತಂಡದಿಂದ
ನೃತ್ಯ ಸಂಭ್ರಮ ವೈಭವ
ಮೈಸೂರಿನ ವೇದಿಕೆಯಲ್ಲಿ ಅತ್ಯಪೂರ್ವವಾದ ನೃತ್ಯ ಪ್ರದರ್ಶನ
ನೋಡುವ ಕಂಗಳ ಸೌಭಾಗ್ಯ ಆಸ್ವಾದಿಸುವ ಮನಸ್ಸುಗಳ ರಸಾಯನ
ಶುಭಕೋರುವವರು : ಶ್ರೀ ಜಿ.ಟಿ.ದೇವೇಗೌಡರ ಅಭಿಮಾನಿಗಳು ಚಾಮುಂಡೇಶ್ವರಿ ಕ್ಷೇತ್ರ, ಮೈಸೂರು

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 162

ಶುಕ್ರವಾರ,12 ಜೂನ್ 2026 | ಪುಟಗಳು: 15+4 | ಬೆಲೆ: ₹ 5.00

c

VK

ವಿಜಯ ಕರ್ನಾಟಕ

ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಜುಲೈ 4ರಿಂದ ಶ್ರೀಲಂಕಾ ಪ್ರವಾಸ: ಭಾರತ ಅಂಡರ್ -19 ತಂಡಕ್ಕೆ ರಾಹುಲ್ ದ್ರಾವಿಡ್ ಪುತ್ರ ಅನ್ವಯ್ ಆಯ್ಕೆ P10

ಜವಳಿ ಉದ್ಯಮ ಚೇತರಿಕೆ

ಪ್ರತಿಸುಂಕ ರದ್ದತಿ, ಜಾಗತಿಕ ಮಾರುಕಟ್ಟೆ ವಿಸ್ತರಣೆ ಪರಿಣಾಮ

■ **ಎಕನಾಮಿಕ್ ಟೈಮ್ಸ್** ಮುಂಬಯಿ

ಅಮೆರಿಕದ ಪ್ರತಿಸುಂಕ ಸಮರದಿಂದ ಕಂಗಾಲಾಗಿದ್ದ ಭಾರತದ ಜವಳಿ ಉದ್ಯಮ ಈಗ ಚೇತರಿಸಿಕೊಂಡಿದೆ. ಇದಕ್ಕೂ ಅಮೆರಿಕವೇ ಕಾರಣ ಎನ್ನುವುದು ಸೋಜಿಗ!

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿದ್ದ ಪ್ರತಿಸುಂಕವನ್ನು ಅಮೆರಿಕದ ಸುಪ್ರೀಂ ಕೋರ್ಟ್ ರದ್ದುಪಡಿಸಿದೆ. ಆ ಬಳಿಕ ಅಲ್ಲಿಂದ ಮತ್ತೆ ಭಾರಿ ಬೇಡಿಕೆ ಬಂದಿದೆ. ಜತೆಗೆ, ಪ್ರತಿಸುಂಕದ ಪರಿಣಾಮವನ್ನು ಸಮರ್ಥವಾಗಿ ಎದುರಿಸಲು ಭಾರತ ಹಲವು ದೇಶಗಳ ದ್ವಿಪಕ್ಷೀಯ ಮಾರಾಟದ ಒಪ್ಪಂದ ಮಾಡಿಕೊಂಡಿದೆ. ಹೀಗಾಗಿ ದೇಶದ ಜವಳಿ ಉತ್ಪನ್ನಗಳಿಗೆ ಜಾಗತಿಕವಾಗಿಯೂ ಬೇಡಿಕೆ ಹೆಚ್ಚಾಗುತ್ತಿದೆ.

''ಭಾರತೀಯ ಜವಳಿ ಉದ್ಯಮದ ಸಂಕಷ್ಟದ ದಿನಗಳು ಕಳೆದಿವೆ. ಹೆಚ್ಚಿನ ಬೇಡಿಕೆ, ಸುಧಾರಣೆಗೆ ಪೂರಕವಾದ ನೀತಿ ಒತ್ತಾಸೆಯಿಂದ ಇದು ಸಾಧ್ಯವಾಗಿದೆ. ಹಲವು ದೇಶಗಳೊಂದಿಗೆ ಭಾರತ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಂಡಿರುವುದರಿಂದ ಜಾಗತಿಕ ಪೂರೈಕೆ ಸರಪಳಿ ಹೆಚ್ಚು ಬಲಗೊಳ್ಳುತ್ತಿದೆ. ಹೀಗಾಗಿ ಜವಳಿ ಕ್ಷೇತ್ರ ಹೊಸ ನವಚೈತನ್ಯದ ಹಂತಕ್ಕೆ ಪ್ರವೇಶ ಪಡೆದಿದೆ,'' ಎಂದು ಬ್ರೋಕರೇಜ್ ಸಂಸ್ಥೆ 'ದೋಲತ್ ಕ್ಯಾಪಿಟಲ್' ವರದಿ ತಿಳಿಸಿದೆ.

ಭಾರತದ ಜವಳಿ ಉತ್ಪನ್ನಗಳ ಮೇಲೆ ಅಮೆರಿಕ ಶೇ.50ರಷ್ಟು ಪ್ರತಿಸುಂಕ ವಿಧಿಸಿತ್ತು. ಆದರೆ ಇದಕ್ಕೆ ಅಮೆರಿಕದ ಸುಪ್ರೀಂಕೋರ್ಟ್ ಮಾನ್ಯತೆ ನೀಡಲಿಲ್ಲ. ಇದರಿಂದ ಸುಂಕದ ಪ್ರಮಾಣ ಶೇ.10ಕ್ಕೆ ಇಳಿಯಿತು. ಈ ದಂಡನಾ ಸುಂಕ ರದ್ದುಗೊಂಡ ನಂತರ ದೇಶದ ಜವಳಿ ವಲಯ ರಫ್ತು ಪ್ರಮಾಣದಲ್ಲಿ ಸ್ಥಿರತೆಯನ್ನು ಸಾಧಿಸಲು ನೆರವಾಗಿದೆ. ಅಮೆರಿಕದಲ್ಲಿ ನಮ್ಮ ಸಿದ್ಧ ಉಡುಪುಗಳ ಮೇಲೆ ಶೇ. 65–69ರಷ್ಟು ಸುಂಕವಿತ್ತು. ಇದರಿಂದ ನಮ್ಮ ರಫ್ತುದಾರರು ಸ್ಪರ್ಧಾತ್ಮಕ ಶಕ್ತಿಯನ್ನು ಕಳೆದುಕೊಂಡಿದ್ದರು. ಪ್ರತಿ ಸುಂಕ ಇಳಿಕೆ ನಂತರ ಅಮೆರಿಕದಲ್ಲಿ ಭಾರತದ ಜವಳಿಗೆ ಹೆಚ್ಚಿನ ಬೇಡಿಕೆ ಉಂಟಾಗಿದೆ. ಉಭಯ ದೇಶಗಳ ನಡುವೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಚೌಕಟ್ಟಿಗೆ ಅಂತಿಮ ರೂಪ ಸಿಗುತ್ತಿದೆ. ಮುಂದಿನ ದಿನಗಳಲ್ಲಿ ಕೇವಲ ಜವಳಿ ವಲಯವಷ್ಟೇ ಅಲ್ಲ, ಹಲವು ವಲಯಗಳಿಗೆ ಹೆಚ್ಚಿನ ಬಲ ಸಿಗಲಿದೆ ಎಂದು ವರದಿ ವಿಶ್ಲೇಷಿಸಿದೆ.

ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳ ಬಲ

ನೂಲು ಉದ್ಯಮ ಹೆಚ್ಚು ಬಲಗೊಳ್ಳುತ್ತಿದೆ. ಹತ್ತಿ ದರದಲ್ಲಿ ಭಾರತ ಪೈಪೋಟಿ ನೀಡುವ ಮಟ್ಟಕ್ಕೆ ಬೆಳೆದಿದೆ. ನೂಲಿನ ಲಾಭದ ಪ್ರಮಾಣ ಏರುಗತಿಯಲ್ಲಿದೆ. ಭಾರತ ಬ್ರಿಟನ್, ಐರೋಪ್ಯ ಒಕ್ಕೂಟ ಮತ್ತು ಆಸೀಸ್‌ನೊಂದಿಗೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಮಾಡಿಕೊಂಡಿದೆ. ಇದು ಉದ್ಯಮಕ್ಕೆ ಹೆಚ್ಚಿನ ಬಲ ನೀಡಿದೆ. ಜಾಗತಿಕ ಖರೀದಿದಾರರು ಬಾಂಗ್ಲಾದೇಶ ಮತ್ತು ಕಾಂಬೋಡಿಯಾದಂತಹ ಸುಂಕ ಮುಕ್ತ ದೇಶಗಳ ಮೇಲಿನ ಅತಿಯಾದ ಅವಲಂಬನೆಯಿಂದ ದೂರ ಸರಿದು ತಮ್ಮ ಸರಬರಾಜು ಸರಪಳಿಯನ್ನು ವೈವಿಧ್ಯಗೊಳಿಸಲು ಸಕ್ರಿಯವಾಗಿ ನೋಡುತ್ತಿದ್ದಾರೆ. ಇದು ಭಾರತವನ್ನು ದೀರ್ಘಾವಧಿಯ ಅತ್ಯಂತ ಆಕರ್ಷಕ ಪೂರೈಕೆ ಪರ್ಯಾಯವನ್ನಾಗಿ ಮಾಡಿದೆ ಎಂದು ಅದು ಹೇಳಿದೆ.

ಕೆಲವೊಂದು ಸವಾಲುಗಳ ನಡುವೆಯೂ ಅಮೆರಿಕದ ಮಾರುಕಟ್ಟೆ ಚೇತರಿಕೆ ತೋರುತ್ತಿದೆ. ಇದರಿಂದ ನಮ್ಮ 2027ರ ಹಣಕಾಸು ವರ್ಷದ ಮೊದಲ ತ್ರೈಮಾಸಿಕದ ಆರಂಭದ ವೇಳೆಗೆ, ಹಣದುಬ್ಬರದ ಒತ್ತಡ ಮತ್ತು ಸ್ಥೂಲ ಆರ್ಥಿಕ ಅಸ್ಥಿರತೆಯ ಹೊರತಾಗಿಯೂ ಬೇಡಿಕೆಯು ಸ್ಥಿರವಾಗಿದೆ ಮತ್ತು ಬಲವಾದ ಚೇತರಿಕೆಯ ಗುಣವನ್ನು ತೋರಿಸುತ್ತಿದೆ ಎಂದು ವರದಿ ಪ್ರತಿಪಾದಿಸಿದೆ. ದೇಶೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ನೂಲಿನ ಬೇಡಿಕೆಯಲ್ಲಿ ಸ್ಥಿರತೆ ಕಾಣಿಸುತ್ತಿದೆ.

ಮಧ್ಯಪ್ರಾಚ್ಯ ಬಿಕ್ಕಟ್ಟು, ಕಚ್ಚಾ ತೈಲ ಏರಿಕೆಯಿಂದ ಉತ್ಪಾದನಾ ವೆಚ್ಚಗಳ ಹೆಚ್ಚಳವಾಗಿದೆ. ಇಂಥ ಸವಾಲುಗಳ ನಡುವೆಯೂ ಜವಳಿ ವಲಯವು ಸುಸ್ಥಿರ ಬೆಳವಣಿಗೆಗೆ ಸಜ್ಜಾಗಿದೆ ಎಂದು ದೋಲತ್ ಕ್ಯಾಪಿಟಲ್ ಪ್ರಬಲವಾಗಿ ಪ್ರತಿಪಾದಿಸಿದೆ. ಬಲವಾದ ವಿದೇಶಿ ಹಾಗೂ ಸ್ವದೇಶಿ ಬೇಡಿಕೆ, ಶಿಸ್ತುಬದ್ಧ ಬಂಡವಾಳ ಹಂಚಿಕೆ ಮತ್ತು ಸಾಲ ಕಡಿತಗೊಳಿಸುವ ಪ್ರಯತ್ನಗಳು ಸ್ಥಿತಿಸ್ಥಾಪಕತ್ವವನ್ನು ಒದಗಿಸುವುದನ್ನು ಮುಂದುವರಿಸಿದ್ದು, ಈ ವಲಯವನ್ನು ಬಲವಾದ ಮತ್ತು ಹೆಚ್ಚು ಸುಸ್ಥಿರ ಬೆಳವಣಿಗೆಯ ಹಾದಿಯಲ್ಲಿ ನಿಲ್ಲಿಸಿವೆ ಎಂದು ವರದಿ ಹೇಳಿದೆ.

ಪ್ರತಿಸುಂಕ ರದ್ದತಿ ನಂತರ ಅಮೆರಿಕದಲ್ಲಿ ಭಾರಿ ಬೇಡಿಕೆ

ಹಲವು ದೇಶಗಳಿಗೆ ಮಾರುಕಟ್ಟೆ ವಿಸ್ತರಣೆ

> **ಪಿಎಂ ಮಿತ್ರ ಪಾರ್ಕ್‌ಗಳ ಸ್ಥಾಪನೆ ಸೇರಿದಂತೆ ಕೇಂದ್ರ ಸರಕಾರವು ಜವಳಿ ಉದ್ಯಮಕ್ಕೆ ಹಲವು ಉತ್ತೇಜಕ ಕ್ರಮ ಕೈಗೊಂಡಿದೆ. ದೇಶದಲ್ಲಿ ಹತ್ತಿ ಉತ್ಪಾದನೆ ಹೆಚ್ಚಿರುವ ಕಾರಣ ಜವಳಿ ಉದ್ಯಮಗಳು ಹತ್ತಿ ಆಮದು ಮಾಡಿಕೊಳ್ಳಬೇಕಾದ ಸ್ಥಿತಿ ಇಲ್ಲ. ಮುಕ್ತ ವ್ಯಾಪಾರ ಒಪ್ಪಂದದ ಫಲವಾಗಿ ಭಾರತೀಯ ಜವಳಿ ಉದ್ಯಮದ ಮಾರುಕಟ್ಟೆ ವಿಸ್ತರಿಸುತ್ತಿದೆ.**
> – **ಗಿರಿರಾಜ ಸಿಂಗ್** ಕೇಂದ್ರ ಜವಳಿ ಸಚಿವ

ಭಾರತೀಯ ಜವಳಿ ಉದ್ಯಮದ ನೋಟ

₹18,187 ಲಕ್ಷ ಕೋಟಿ
(190 ಶತಕೋಟಿ ಡಾಲರ್)
2025–26ರಲ್ಲಿ ಭಾರತದ ಜವಳಿ ಉದ್ಯಮದ ಒಟ್ಟಾರೆ ವಹಿವಾಟು

₹33.36 ಲಕ್ಷ ಕೋಟಿ
(350 ಶತಕೋಟಿ ಡಾಲರ್)
ಕೇಂದ್ರ ಸರಕಾರ ನಿಗದಿಪಡಿಸಿದಂತೆ 2030ರ ಹೊತ್ತಿಗೆ ವಹಿವಾಟು ಗುರಿ

₹8.5 ಲಕ್ಷ ಕೋಟಿ
2024–25ರಲ್ಲಿ ದೇಸಿ ಮಾರುಕಟ್ಟೆಯಲ್ಲಿ ಜವಳಿ ಉದ್ಯಮದ ವಹಿವಾಟು

₹16 ಲಕ್ಷ ಕೋಟಿ
2025–26ರಲ್ಲಿ ದೇಸಿ ಮಾರುಕಟ್ಟೆಯಲ್ಲಿ ಜವಳಿ ಉದ್ಯಮದ ವಹಿವಾಟು

5.3 ಕೋಟಿ	ಜನರು ದೇಶದಲ್ಲಿ ಜವಳಿ ಉದ್ಯಮವನ್ನು ಅವಲಂಬಿಸಿದ್ದಾರೆ
191	ದೇಶಗಳಿಗೆ ಪ್ರಸ್ತುತ ಭಾರತದ ಜವಳಿ ಉತ್ಪನ್ನಗಳು ರಫ್ತಾಗುತ್ತಿವೆ
10%	ಸದ್ಯ ಅಮೆರಿಕದಲ್ಲಿ ಭಾರತೀಯ ಜವಳಿ ಉತ್ಪನ್ನಗಳಿಗೆ ವಿಧಿಸುತ್ತಿರುವ ಆಮದು ಸುಂಕ

ಮತ್ತೆ ಬಂಗಾರದ ಬೆಲೆ ಕುಸಿತ

ಹೊಸದಿಲ್ಲಿ: ಅಪರಂಜಿ ಚಿನ್ನದ ಧಾರಣೆ ಗುರುವಾರ ಕೂಡ ಕುಸಿಯಿತು. ಹೊಸದಿಲ್ಲಿಯಲ್ಲಿ 10 ಗ್ರಾಂಗೆ 2,100 ರೂ. ಕಡಿಮೆಯಾಗಿ 1,53,900 ರೂ.ನಲ್ಲಿ ಸ್ಥಿರವಾಗಿದೆ. ಬುಧವಾರ 4,300 ರೂ. ಇಳಿಕೆಯಾಗಿತ್ತು. ಇತ್ತೀಚಿನ ದಿನಗಳಲ್ಲಿ ಕೇವಲ 2 ವಹಿವಾಟು ದಿನಗಳಲ್ಲಿ ಒಟ್ಟು 6,400 ರೂ. ಇಳಿಕೆಯಾಗಿದೆ. ಬೆಳ್ಳಿ ಧಾರಣೆಯಲ್ಲಿ ಬುಧವಾರ 10 ಸಾವಿರ ರೂ. ಕಡಿಮೆಯಾಗಿ ಕೆ.ಜಿಗೆ 2,45,000 ರೂ. ಆಗಿತ್ತು. ಇದು ಯಥಾಸ್ಥಿತಿಯನ್ನು ಕಾಯ್ದುಕೊಂಡಿತು.

ಮಧ್ಯಪ್ರಾಚ್ಯ ಬಿಕ್ಕಟ್ಟು ಉಲ್ಬಣಿಸಿರುವುದರಿಂದ ಹೂಡಿಕೆದಾರರು ಎಚ್ಚರಿಕೆಯ ಹೆಜ್ಜೆ ಇಡುತ್ತಿದ್ದಾರೆ. ಇಂಧನ ಬೆಲೆ ಏರಿಕೆ ಮತ್ತು ಹಣದುಬ್ಬರದ ಆತಂಕ ಹೆಚ್ಚುತ್ತಿರುವುದರಿಂದ ಚಿನ್ನ ಮತ್ತು ಬೆಳ್ಳಿ ಆಕರ್ಷಣೆ ಕುಗ್ಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲೂ ಚಿನ್ನದ ಬೆಲೆ ಔನ್ಸ್‌ಗೆ 4,072.21 ಡಾಲರ್ ಇತ್ತು. ವಹಿವಾಟಿನಲ್ಲಿ ಸ್ಥಿರತೆ ಕಾಯ್ದುಕೊಂಡಿತು. ಬೆಳ್ಳಿ ಬೆಲೆಯಲ್ಲಿ ಅಲ್ಪ ಇಳಿಕೆಯಾಗಿ ಔನ್ಸ್‌ಗೆ 63.18 ಡಾಲರ್ ಆಗಿತ್ತು.

ಬೆಂಗಳೂರಿನಲ್ಲೂ ಇಳಿಕೆ: ಬೆಂಗಳೂರಿನಲ್ಲಿ ಅಪರಂಜಿ ಚಿನ್ನದ ಬೆಲೆಯಲ್ಲಿ 10 ಗ್ರಾಂಗೆ 2,130 ರೂ. ಇಳಿದು, 1,45,640 ರೂ. ಆಗಿದೆ. ಇಷ್ಟೇ ತೂಕದ ಆಭರಣ ಚಿನ್ನದ ಧಾರಣೆಯಲ್ಲಿ 1,950 ರೂ. ಇಳಿದು 1,33,500 ರೂ. ಆಗಿದೆ. ಬೆಳ್ಳಿ ಬೆಲೆಯಲ್ಲಿ ಯಾವುದೇ ಏರಿಳಿಗಳಿಲ್ಲದೆ ಕೆ.ಜಿ.ಗೆ 2,50,000 ರೂ.ನಲ್ಲೇ ಸ್ಥಿರವಾಗಿದೆ.

ಕಳೆಗುಂದಿದ ಷೇರುಪೇಟೆ

ಮುಂಬಯಿ: ಇರಾನ್–ಅಮೆರಿಕ ನಡುವಿನ ಶಾಂತಿ ಮಾತುಕತೆ ಮುರಿದುಬೀಳುವ ಸೂಚನೆಯು ಭಾರತೀಯ ಷೇರುಪೇಟೆ ಮೇಲೆ ಭಾರಿ ಪರಿಣಾಮ ಬೀರಿತು. ವಿದೇಶಿ ಸಾಂಸ್ಥಿಕ ನಿಧಿಯ ನಿರಂತರ ಹೊರಹರಿವು ಮತ್ತು ರೂಪಾಯಿ ಮೌಲ್ಯದಲ್ಲಿನ ಕುಸಿತದಿಂದ ಮಾರುಕಟ್ಟೆಯಲ್ಲಿ ಕಳಾಹೀನ ಸ್ಥಿತಿ ಕಂಡುಬಂದಿತು. ಮುಂಬಯಿ ಷೇರುಪೇಟೆ ಸೂಚ್ಯಂಕ 'ಸೆನ್ಸೆಕ್ಸ್' 150.63 ಅಂಕ ಇಳಿದು 73,832.55 ರಲ್ಲಿ ವಹಿವಾಟು ಮುಗಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 'ನಿಫ್ಟಿ' 53.35 ಅಂಕ ಪತನವಾಗಿ 23,161.60ರಲ್ಲಿ ವಹಿವಾಟು ಕೊನೆಗೊಂಡಿತು. ಐಟಿ ವಲಯದ ಷೇರುಗಳು ಶೇ.1.78ರಷ್ಟು ಕುಸಿತ ಕಂಡಿದೆ, ಔದ್ಯಮಿಕ ವಲಯ ಶೇ.1.40, ಕ್ಯಾಪಿಟಲ್ ಗೂಡ್ಸ್ ಶೇ.1.40, ಯುಟಿಲಿಟೀಸ್ ಷೇರುಗಳು ಶೇ. 1.17 ಮತ್ತು ವಿದ್ಯುತ್ ವಲಯದ ಷೇರುಗಳು ಶೇ. 1.07ರಷ್ಟು ಕುಸಿತ ದಾಖಲಿಸಿದವು.

ಏಷ್ಯಾದ ಮಾರುಕಟ್ಟೆಗಳಲ್ಲಿ ದಕ್ಷಿಣ ಕೊರಿಯಾದ ಕೋಸ್ಪಿ ಮತ್ತು ಜಪಾನ್‌ನ ನಿಕ್ಕೈ 225 ಅಲ್ಪ ಪ್ರಮಾಣದ ಏರಿಕೆ ದಾಖಲಿಸಿದರೆ, ಶಾಂಘೈನ ಎಸ್‌ಎಸ್‌ಇ ಕಾಂಪೊಸಿಟ್ ಸೂಚ್ಯಂಕ ಮತ್ತು ಹಾಂಕಾಂಗ್‌ನ ಹ್ಯಾಂಗ್‌ಸೆಂಗ್ ಕುಸಿತದೊಂದಿಗೆ ಮುಕ್ತಾಯಗೊಂಡವು.

ಕಚ್ಚಾ ತೈಲ ಬೆಲೆ ಇಳಿಕೆ

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆ ಗುರುವಾರ ಶೇ.1ರಷ್ಟು ಇಳಿದು ಬ್ಯಾರೆಲ್‌ಗೆ 92.16 ಡಾಲರ್ ಆಯಿತು. ಇನ್ನೊಂದೆಡೆ ಡಾಲರ್ ಎದುರು ರೂಪಾಯಿ ಮೌಲ್ಯವೂ 50 ಪೈಸೆ ಕುಸಿದು 95.75 ರೂ. ಆಯಿತು. ಮಧ್ಯಪ್ರಾಚ್ಯ ಬಿಕ್ಕಟ್ಟು, ವಿದೇಶಿ ನಿಧಿಯ ಹೊರ ಹರಿವು ಹೆಚ್ಚಿದ್ದರಿಂದ ರೂಪಾಯಿ ಬಲಗೊಳ್ಳಲಿಲ್ಲ.

ರೈತರ ಕಲ್ಯಾಣವೇ ಸರಕಾರದ ಗುರಿ
ಪ್ರಧಾನಿ ನರೇಂದ್ರ ಮೋದಿ ಘೋಷಣೆ

ಹೊಸದಿಲ್ಲಿ: ಅನ್ನದಾತರು ದೇಶದ ಆಹಾರ ಭದ್ರತೆಯ ಆಧಾರ ಸ್ತಂಭಗಳು. ಅವರ ಜೀವನ ಸುಗಮಗೊಳಿಸಲು ನಮ್ಮ ಸರಕಾರ ಸಾಧ್ಯವಿರುವ ಎಲ್ಲ ಕೆಲಸಗಳನ್ನೂ ಮಾಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ.

''ಪಿಎಂ–ಕಿಸಾನ್ ಸಮ್ಮಾನ್ ನಿಧಿ ಹಾಗೂ ಫಸಲ್ ಬಿಮಾದಂತಹ ಯೋಜನೆಗಳು ರೈತರ ಆದಾಯವನ್ನು ಹೆಚ್ಚಿಸಿವೆ ಮತ್ತು ಕೃಷಿಯನ್ನು ಹೆಚ್ಚು ಸಬಲೀಕರಣಗೊಳಿಸಿವೆ. ಇದಲ್ಲದೆ ಪಿಎಂ–ಕುಸುಮ್ ಯೋಜನೆಯು ಸೌರ ವಿದ್ಯುತ್‌ಅನ್ನು ಒದಗಿಸುತ್ತಿದೆ. ಇದರಿಂದ ಕೃಷಿ ವೆಚ್ಚ ಕಡಿಮೆಯಾಗುತ್ತಿದೆ,'' ಎಂದು ಪ್ರಧಾನಿ ಪ್ರತಿಪಾದಿಸಿದ್ದಾರೆ.

''ರೈತರು, ಪಶುಪಾಲಕರು ಮತ್ತು ಮೀನುಗಾರರಿಗೆ ಸುಲಭವಾದ, ಕಡಿಮೆ ಬಡ್ಡಿಯ ಸಾಲಗಳನ್ನು ಒದಗಿಸುವಲ್ಲಿ ಕಿಸಾನ್ ಕ್ರೆಡಿಟ್ ಕಾರ್ಡ್ ಅತ್ಯಂತ ಪ್ರಯೋಜನಕಾರಿ ಎಂಬುದು ಸಾಬೀತಾಗಿದೆ. ಹಾಗೆಯೇ 'ಬೀಜದಿಂದ ಮಾರುಕಟ್ಟೆಯವರೆಗೆ' ಎಂಬ ಉಪಕ್ರಮವು ಬೆಳೆಗಳಿಗೆ ಯೋಗ್ಯವಾದ ಬೆಲೆಯನ್ನು ಪರಿಣಾಮಕಾರಿಯಾಗಿ ಖಾತ್ರಿಪಡಿಸುತ್ತಿದೆ,'' ಎಂದು ಪ್ರಧಾನಿ ಪ್ರತಿಪಾದಿಸಿದ್ದಾರೆ.

''ರೈತರ ಕಲ್ಯಾಣ ಸರಕಾರದ ಪ್ರಮುಖ ಆದ್ಯತೆಗಳಲ್ಲಿ ಒಂದಾಗಿದೆ, ಆದಕ್ಕಾಗಿಯೇ ಅವರಿಗೆ ಆಧುನಿಕ ಕೃಷಿ ಸೌಲಭ್ಯಗಳನ್ನು ಒದಗಿಸಲು ನಿರಂತರ ಒತ್ತು ನೀಡಲಾಗುತ್ತಿದೆ. ಡ್ರೋನ್‌ಗಳು, ಮಣ್ಣಿನ ಆರೋಗ್ಯ ಕಾರ್ಡ್‌ಗಳು ಮತ್ತು ನೈಸರ್ಗಿಕ ರಸಗೊಬ್ಬರಗಳಿಗೆ ಸಂಬಂಧಿಸಿದ ಅಭಿಯಾನಗಳು ರೈತರು ತಮ್ಮ ಬೆಳೆ ಇಳುವರಿಯನ್ನು ಹೆಚ್ಚಿಸಲು ಹೆಚ್ಚು ಬಲ ನೀಡಿವೆ,'' ಎಂದಿದ್ದಾರೆ.

ಖಾದ್ಯ ತೈಲಗಳ ಪ್ರಮಾಣಿತ ಪ್ಯಾಕ್ ಗಾತ್ರ
ಆದೇಶ ಸ್ವಾಗತಿಸಿದ ಫ್ರೀಡಂ ಆಯಿಲ್

■ **ವಿಕ ಸುದ್ದಿಲೋಕ** ಬೆಂಗಳೂರು

ಖಾದ್ಯ ತೈಲಗಳ ಪ್ರಮಾಣಿತ ಪ್ಯಾಕ್ ಗಾತ್ರಗಳ ಕುರಿತ ಕೇಂದ್ರ ಸರಕಾರದ ಆದೇಶವನ್ನು ಸ್ವಾಗತಿಸಿರುವ ಫ್ರೀಡಂ ಹೆಲ್ತಿ ಕುಕಿಂಗ್ ಆಯಿಲ್ಸ್ ಕಂಪನಿಯು, ಈ ಪ್ರಗತಿಪರ ಮತ್ತು ಗ್ರಾಹಕಸ್ನೇಹಿ ಕ್ರಮವು ಖಾದ್ಯ ತೈಲ ವಿಭಾಗದಲ್ಲಿ ಪಾರದರ್ಶಕತೆ, ಏಕರೂಪತೆ ಹಾಗೂ ಬೆಲೆಯನ್ನು ಸುಲಭವಾಗಿ ಹೋಲಿಕೆ ಮಾಡಲು ಸಹಕಾರಿಯಾಗಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದೆ.

ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯವು 'ಲೀಗಲ್ ಮೆಟ್ರಾಲಜಿ' ಚೌಕಟ್ಟಿನಡಿ ಹೊರಡಿಸಿರುವ ಹೊಸ ಆದೇಶವು ಗ್ರಾಹಕರಲ್ಲಿ ಹೆಚ್ಚಿನ ಸ್ಪಷ್ಟತೆ ಮೂಡಿಸಲು, ಪ್ಯಾಕಿಂಗ್ ವಿಧಾನಗಳಲ್ಲಿ ಸ್ಥಿರತೆ ಸುಧಾರಿಸಲು ಮತ್ತು ಖಾದ್ಯ ತೈಲ ಮಾರುಕಟ್ಟೆಯಲ್ಲಿ ಗ್ರಾಹಕರು ಸೂಕ್ತ ಮಾಹಿತಿ ಆಧಾರಿತ ಖರೀದಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಕಾರಿಯಾಗಿದೆ ಎಂದು ಕಂಪನಿ ಅಭಿಪ್ರಾಯಪಟ್ಟಿದೆ.

''ಖಾದ್ಯ ತೈಲಗಳಿಗಾಗಿ ಪ್ರಮಾಣಿತ ಪ್ಯಾಕ್ ಗಾತ್ರಗಳ ಅಧಿಸೂಚನೆ ಹೊರಡಿಸಿದ ಕೇಂದ್ರ ಸರಕಾರಕ್ಕೆ ಧನ್ಯವಾದ ಸಲ್ಲಿಸುತ್ತೇವೆ. ಗ್ರಾಹಕರ ಹಿತದೃಷ್ಟಿಯಿಂದ ಇದು ಮಹತ್ವದ ಹೆಜ್ಜೆಯಾಗಿದ್ದು, ಮಾರುಕಟ್ಟೆಗೆ ಅಗತ್ಯವಿದ್ದ ಸ್ಪಷ್ಟತೆ ಮತ್ತು ಸ್ಥಿರತೆಯನ್ನು ತರಲಿದೆ. ಕೇಂದ್ರದ ಆದೇಶದಂತೆ ಖಾದ್ಯ ತೈಲಗಳ ಪ್ಯಾಕ್ ಗಾತ್ರಗಳನ್ನು ಪ್ರಮಾಣೀಕರಿಸಲಾಗಿದೆ.

ಕಂಪನಿಗಳು ಇದಕ್ಕೆ ಹೊಂದಿಕೊಳ್ಳಲು ಕಾಲಾವಕಾಶ ಸಹ ನೀಡಲಾಗಿದೆ. ಈ ಸಮಯೋಚಿತ ಸುಧಾರಣೆಯು ಖಾದ್ಯ ತೈಲ ವಿಭಾಗದಲ್ಲಿ ಪಾರದರ್ಶಕತೆ, ಹೆಚ್ಚಿನ ಹೊಣೆಗಾರಿಕೆ, ನ್ಯಾಯಸಮ್ಮತತೆ ಮತ್ತು ಗ್ರಾಹಕರ ಹಿತರಕ್ಷಣೆಯನ್ನು ಬಲಪಡಿಸುತ್ತದೆ,'' ಎಂದು ಫ್ರೀಡಂ ಹೆಲ್ತಿ ಕುಕಿಂಗ್ ಆಯಿಲ್ಸ್ ಕಂಪನಿಯ ಮಾರಾಟ ಮತ್ತು ಮಾರುಕಟ್ಟೆ ವಿಭಾಗದ ಹಿರಿಯ ಉಪಾಧ್ಯಕ್ಷ ಪಿ. ಚಂದ್ರಶೇಖರ್ ರೆಡ್ಡಿ ತಿಳಿಸಿದ್ದಾರೆ.

''ಖಾದ್ಯ ತೈಲಗಳ ಪ್ಯಾಕ್ ಗಾತ್ರದ ಸ್ಪಷ್ಟತೆ ಮತ್ತು ಗ್ರಾಹಕರ ಜಾಗೃತಿಯ ಮಹತ್ವವನ್ನು ಕಂಪನಿಯು ಈ ಹಿಂದೆಯೇ ಪ್ರಸ್ತಾಪಿಸಿತ್ತು. ಪ್ಯಾಕ್‌ನ ಗಾತ್ರದ ಮೇಲಿನ ಗ್ರಾಹಕರ ಗ್ರಹಿಕೆಯೇ ಖರೀದಿ ನಿರ್ಧಾರದ ಮೇಲೆ ನೇರ ಪ್ರಭಾವ ಬೀರುವುದರಿಂದ ಸ್ಪಷ್ಟ ಮತ್ತು ಪ್ರಮಾಣಿತ ಪ್ಯಾಕೇಜಿಂಗ್ ವಿಧಾನಗಳ ಅಗತ್ಯತೆಯನ್ನು ಜಗತ್ತಿಗೆ ಮನವರಿಕೆ ಮಾಡಲು ಕಂಪನಿಯು ನಿರಂತರವಾಗಿ ಶ್ರಮಿಸುತ್ತಿದೆ. ಖರೀದಿ ಸಮಯದಲ್ಲಿ ಗ್ರಾಹಕರ ಗೊಂದಲ ನಿವಾರಿಸಲು, ಅವರ ತಿಳಿವಳಿಕೆ ಹೆಚ್ಚಿಸಲು ಮತ್ತು ಮೌಲ್ಯಾಧಾರಿತ ಆಯ್ಕೆಗಳನ್ನು ಪ್ರೋತ್ಸಾಹಿಸಲು ಇದು ಪೂರಕವಾಗಿದೆ,'' ಎಂದು ಹೇಳಿದ್ದಾರೆ.

''ಗ್ರಾಹಕರಿಗೆ ಸೂಕ್ತ ಮತ್ತು ಉಪಯುಕ್ತ ಮಾಹಿತಿ ನೀಡಿ, ಅವರು ಉತ್ತಮ ಖರೀದಿ ನಿರ್ಧಾರ ತೆಗೆದುಕೊಳ್ಳುವಂತೆ ಮಾಡುವುದು ನಮ್ಮ ಪ್ರಮುಖ ಉದ್ದೇಶ. ಖರೀದಿ ಸ್ಥಳದಲ್ಲಿ ಗ್ರಾಹಕರಿಗೆ ನಂಬಿಕೆ, ಪಾರದರ್ಶಕತೆ ಮತ್ತು ಆತ್ಮವಿಶ್ವಾಸ ತುಂಬಲು ಜಾಗೃತಿ ಅಭಿಯಾನಗಳನ್ನು ಮುಂದುವರಿಸಲು ಬದ್ಧರಾಗಿದ್ದೇವೆ. ಕಂಪನಿಯು ಖಾದ್ಯ ತೈಲದ ಗುಣಮಟ್ಟ, ಪಾರದರ್ಶಕತೆ ಮತ್ತು ಗ್ರಾಹಕರ ವಿಶ್ವಾಸ ಕಾಯ್ದುಕೊಳ್ಳುವ ಬದ್ಧತೆಯನ್ನು ಪುನರುಚ್ಚರಿಸುತ್ತದೆ,'' ಎಂದು ಕಂಪನಿಯ ಮಾರುಕಟ್ಟೆ ವಿಭಾಗದ ಮುಖ್ಯಸ್ಥ ಚೇತನ್ ಪಿಂಪಳಖುಟೆ ತಿಳಿಸಿದ್ದಾರೆ.

Bennett & Coleman
THE TIMES OF INDIA
ಶುಕ್ರವಾರ,12 ಜೂನ್ 2026 | ಪುಟಗಳು: 15+4 | ಬೆಲೆ: ₹ 5.00
www.vijaykarnataka.com
c
VK
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA
ಸಂಪುಟ: 27 | ಸಂಚಿಕೆ: 162

ವಿಜಯ ಕರ್ನಾಟಕ

ಫಿನ್ಲೆಂಡ್ ವಿದೇಶಾಂಗ ಸಚಿವರ ಜತೆ ಜೈಶಂಕರ್ ಸಭೆ: ಎಐ, ಸೆಮಿಕಂಡಕ್ಟರ್ ಕುರಿತು ಚರ್ಚೆ

₹13,350	₹14,564	₹2,50,000
1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ)	1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ)	1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ಬೆಂಗಳೂರು ದರ

ಶಾಸಕರ ಸಹಿ ನಕಲು ಪ್ರಕರಣ: ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿಗೆ ಸಿಐಡಿ ಗ್ರಿಲ್

ನಾರಿ ಶಕ್ತಿಗೆ ಗೌರವ

ಮಹಿಳೆಯರಿಗಾಗಿ ತೆರೆಯಲಾದ 32 ಕೋಟಿಗೂ ಹೆಚ್ಚು ಜನ್ ಧನ್ ಖಾತೆಗಳು
3 ಕೋಟಿಗೂ ಹೆಚ್ಚು ಮಹಿಳೆಯರು 'ಲಕ್ಷಾಧಿಪತಿ ದೀದಿ'ಯರಾಗಿದ್ದಾರೆ
ಮಹಿಳೆಯರಿಗೆ ₹16 ಲಕ್ಷ ಕೋಟಿಗೂ ಅಧಿಕ ಮುದ್ರಾ ಸಾಲ ನೀಡುವ ಮೂಲಕ ಉದ್ಯಮಶೀಲತೆಗೆ ಬಲವರ್ಧನೆ
12 ವರ್ಷಗಳ ವಿಶ್ವಾಸ, ವಿಕಾಸ, ಜನಕಲ್ಯಾಣ
Government of Bharat
CBC 46101/13/0010/2627

ವಿಕ ಹೊಂಗಿರಣ

ತನ್ನ ಕರ್ತವ್ಯವನ್ನು ಸರಿಯಾಗಿ ಪಾಲಿಸುತ್ತಿರುವವನಿಗೆ ಜಗತ್ತು ಎಂದಿಗೂ ಬೇಸರವಾಗಿ ಕಾಣುವುದಿಲ್ಲ.
-ಮಹಾತ್ಮ ಗಾಂಧಿ

SBI
The banker to every Indian
ತ್ವರಿತ ಬ್ಯಾಂಕಿಂಗ್ ಪರಿಹಾರಗಳಿಗಾಗಿ ವಾಟ್ಸ್‌ಪ್‌ನಲ್ಲಿ Hi ಎಂದು ಹೇಳಿ
ಸೇವೆಗಳು
- ನಿಮ್ಮ ಬ್ಯಾಲೆನ್ಸ್, ಮಿನಿ ಸ್ಟೇಟ್‌ಮೆಂಟ್‌ಗಳನ್ನು ಪರಿಶೀಲಿಸಿ
- ಖಾತೆ ಸ್ಟೇಟ್‌ಮೆಂಟ್, ಪಿಂಚಣಿ ಸ್ಲಿಪ್ ಇತ್ಯಾದಿಗಳನ್ನು ಡೌನ್ಲೋಡ್ ಮಾಡಿ.
- ನಿಮ್ಮ ಕೆವೈಸಿ ಅನ್ನು ಪರಿಷ್ಕರಿಸಿ
- ಉತ್ಪನ್ನ ಮಾಹಿತಿಯನ್ನು ಮತ್ತು ಇನ್ನೂ ಹೆಚ್ಚಿನದನ್ನು ಪಡೆಯಿರಿ

*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ
₹120/- ಕೋಲಾರ 118/- ತುಮಕೂರು 118/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹160/-
ಕೋಲಾರ 158/- ತುಮಕೂರು 158/-
ವಿಥ್ ಸ್ಕಿನ್ ₹226/- ಕೋಲಾರ 223/- ತುಮಕೂರು 223/-
ವಿಥೌಟ್ ಸ್ಕಿನ್ ₹258/- ಕೋಲಾರ 254/- ತುಮಕೂರು 254/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಅಮೆರಿಕ ದಾಳಿಗೆ ಇರಾನ್ ಎದಿರೇಟು | ತೈಲ ಮಾರುಕಟ್ಟೆಯಲ್ಲಿ ಮತ್ತೆ ದರ ಹೆಚ್ಚಳ ಭೀತಿ

ಹರ್ಮುಜ್ ಮುಚ್ಚಿದ ಇರಾನ್

ಟೆಹರಾನ್: ವಿಶ್ವದ ಪ್ರಮುಖ ಜಲ ಮಾರ್ಗವೆನಿಸಿರುವ ಹರ್ಮುಜ್ ಜಲಸಂಧಿಯನ್ನು ಸಂಪೂರ್ಣವಾಗಿ ಬಂದ್ ಮಾಡಿರುವುದಾಗಿ ಇರಾನ್ ಸೇನೆ ಐಆರ್‌ಜಿಸಿ ಗುರುವಾರ ಘೋಷಿಸಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ''ಸಂಧಾನ ಮಾತುಕತೆ ವಿಫಲವಾಗಿದ್ದು, ಇದಕ್ಕೆ ಇರಾನ್ ಬೆಲೆ ತೆರಬೇಕು,'' ಎಂದು ಎಚ್ಚರಿಕೆ ನೀಡಿದ ಕೆಲವೇ ಗಂಟೆಗಳ ಬಳಿಕ ಅಮೆರಿಕ ಪಡೆಗಳು ಹೊಸದಾಗಿ ಇರಾನ್ ಹಲವು ಭಾಗಗಳ ಮೇಲೆ ದಾಳಿ ನಡೆಸಿವೆ. ಇದಕ್ಕೆ ಪ್ರತಿಯಾಗಿ ಐಆರ್‌ಜಿಸಿಯು ಕುವೈತ್, ಬಹರೇನ್ ಮತ್ತು ಜೋರ್ಡಾನ್‌ನಲ್ಲಿರುವ ಅಮೆರಿಕದ ವಾಯು ಮತ್ತು ನೌಕಾ ನೆಲೆಗಳ ಮೇಲೆ ಪ್ರತಿದಾಳಿ ನಡೆಸಿದ್ದಲ್ಲದೇ ಹರ್ಮುಜ್ ಜಲಸಂಧಿಯನ್ನು ಸಂಪೂರ್ಣ ಬಂದ್ ಮಾಡಿ ದಿಟ್ಟ ಪ್ರತಿರೋಧ ತೋರಿದೆ.

ಜಲಸಂಧಿಯನ್ನು ದಾಟುವ ಸಾಹಸಕ್ಕೆ ಕೈಹಾಕಿದರೆ ಅಂಥ ಯಾವುದೇ ಶಿಪ್‌ಗಳನ್ನು ಮುಲಾಜಿಲ್ಲದೇ ಹೊಡೆದು ಉರುಳಿಸಲಾಗುವುದು ಎಂದು ಐಆರ್‌ಜಿಸಿ ಎಚ್ಚರಿಸಿದೆ. ಇದರಿಂದ ತೈಲ ಮತ್ತು ಅನಿಲ ಟ್ಯಾಂಕರ್ ಶಿಪ್‌ಗಳು ಹಾಗೂ ವಾಣಿಜ್ಯ ಹಡುಗಳ ಸಂಚಾರಕ್ಕೆ ಅಡಚಣೆಯಾಗಲಿದೆ. ಈ ಬೆಳವಣಿಗೆಯು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇನ್ನೂ ಹೆಚ್ಚಾಗುವ ಆತಂಕ ತಂದಿಟ್ಟಿದೆ. ಇದರ ಬಿಸಿ ಭಾರತವೂ ಸೇರಿದಂತೆ ವಿಶ್ವದ ಅನೇಕ ರಾಷ್ಟ್ರಗಳಿಗೆ ತಟ್ಟಲಿದೆ.

ಹರ್ಮುಜ್ ಜಲಸಂಧಿಯಲ್ಲಿ ಅಮೆರಿಕ ಪಡೆಗಳು ಹಾಗೂ ಇರಾನ್‌ನ ಐಆರ್‌ಜಿಸಿ ನಡುವೆ ದಾಳಿ-ಪ್ರತಿದಾಳಿ ತೀವ್ರಗೊಂಡಿವೆ ಎಂದು ಇರಾನ್ ಮಾಧ್ಯಮಗಳನ್ನು ಉಲ್ಲೇಖಿಸಿ ಅಂತಾರಾಷ್ಟ್ರೀಯ ಸುದ್ದಿಸಂಸ್ಥೆಗಳು ವರದಿ ಮಾಡಿವೆ. ಸ್ವಯಂ ರಕ್ಷಣೆ ನೆಪದಲ್ಲಿ ಅಮೆರಿಕವು ಟೆಹರಾನ್, ಬಂದರು ನಗರಿ ಬಂದರ್ ಅಬ್ಬಾಸ್, ಕರಾವಳಿ ತೀರದ ಸಿರಿಕ್, ಕೆಶ್‌ಮ್ ದ್ವೀಪ, ಮಿನಾಬ್, ಇಶ್ಫಹಾನ್ ಪ್ರಾಂತ್ಯಗಳ ಮೇಲೆ ವೈಮಾನಿಕ ದಾಳಿ ನಡೆಸಿದೆ ಎಂದು ಇರಾನ್ ಆರೋಪಿಸಿದೆ. ಈ ಮಧ್ಯೆ, ಇರಾನ್, ಜಲಸಂಧಿಯನ್ನು ಪೂರ್ಣವಾಗಿ ಮುಚ್ಚಿರುವುದಾಗಿ ಹೇಳಿದ್ದರೂ, ಅಮೆರಿಕವು ತನ್ನ ಕೆಲವು ವಾಣಿಜ್ಯ ಹಡಗುಗಳು ಈ ಪ್ರದೇಶದಲ್ಲಿ ಸಂಚಾರ ನಡೆಸುತ್ತಿವೆ ಎಂದು ಪ್ರತಿಪಾದಿಸಿದೆ.

ಹರ್ಮುಜ್ ಜಲಸಂಧಿಯಲ್ಲಿ ಅಮೆರಿಕ ದಾಳಿಗೆ ತುತ್ತಾದ ಭಾರತೀಯ ಹಡಗು ಜಲವೀರ್.

ಮೂವರು ಭಾರತೀಯರ ಸಾವು: ಒಮನ್ ಕರಾವಳಿಯಲ್ಲಿ ಭಾರತೀಯ ನಾವಿಕರಿದ್ದ 'ಎಂ.ಟಿ.ಜಲವೀರ್' ನೌಕೆಯ ಮೇಲೆ ಅಮೆರಿಕ ಪಡೆಗಳು ಎರಡು ಹೆಲ್‌ಫೈರ್ ಕ್ಷಿಪಣಿ ಮೂಲಕ ದಾಳಿ ನಡೆಸಿವೆ. ಶಿಪ್‌ನಲ್ಲಿದ್ದ 20 ಭಾರತೀಯ ನಾವಿಕರನ್ನು ರಕ್ಷಿಸಲಾಗಿದೆ. ಕಳೆದ ಮೂರು ದಿನದಲ್ಲಿ ಭಾರತದ ಮೂರನೇ ಹಡಗಿನ ಮೇಲೆ ನಡೆದ ದಾಳಿ ಇದಾಗಿದೆ. ಇದಕ್ಕೂ ಮೊದಲು 'ಪಲಾವು' ದ್ವೀಪ ರಾಷ್ಟ್ರದ ಧ್ವಜ ಹೊಂದಿದ್ದ ಸೆಟ್ಟೆಬೆಲ್ಲೊ ಹಡಗಿನ ಮೇಲೆ ಮಂಗಳವಾರ ದಾಳಿ ನಡೆಸಲಾಗಿತ್ತು. ಇದರಲ್ಲಿ ಮೂವರು ಭಾರತೀಯರು ಮೃತಪಟ್ಟಿದ್ದರು. 21 ಜನರನ್ನು ರಕ್ಷಿಸಲಾಗಿತ್ತು. ಸೋಮವಾರ ಎಂಟಿ ಮ್ಯಾರಿವಾಕ್ಸ್ ಹಡಗು ಕೂಡ ದಾಳಿಗೆ ಗುರಿಯಾಗಿತ್ತು. ವಾಣಿಜ್ಯ ಹಡಗುಗಳ ಮೇಲಿನ ದಾಳಿ ಖಂಡಿಸಿರುವ ಭಾರತ, ಹೊಸದಿಲ್ಲಿಯ ಅಮೆರಿಕ ರಾಯಭಾರ ಕಚೇರಿಯಲ್ಲಿ ಪ್ರತಿಭಟನೆ ದಾಖಲಿಸಿದೆ. ಸಾಗರ ಮಾರ್ಗದಲ್ಲಿ ಭದ್ರತೆ ಹೆಚ್ಚಿಸುವಂತೆ ವಿಶ್ವಸಂಸ್ಥೆಯಲ್ಲಿ ಅಹವಾಲು ಮಂಡಿಸಿದೆ.

ಇಂಧನ ದರ ಮತ್ತೆ ದುಬಾರಿ?

ಭಾರತವು ಪೆಟ್ರೋಲ್, ಡೀಸೆಲ್ ಅಗತ್ಯತೆಯ ಶೇ.88 ರಷ್ಟನ್ನು ಆಮದು ಮಾಡಿಕೊಳ್ಳುತ್ತಿದೆ. ಇದರಲ್ಲಿ ಸುಮಾರು ಅರ್ಧದಷ್ಟು ಹರ್ಮುಜ್ ಜಲಸಂಧಿ ಮೂಲಕವೇ ಸಾಗಣೆಯಾಗುತ್ತದೆ. ಈ ಜಲ ಮಾರ್ಗ ಮತ್ತೆ ಬಂದ್ ಆಗಿರುವುದರಿಂದ ಪೆಟ್ರೋಲ್, ಡೀಸೆಲ್, ಎಲ್‌ಪಿಜಿ, ಪೂರೈಕೆಯಲ್ಲಿ ಅಡಚಣೆ ಉಂಟಾಗಿ ದರಗಳು ಇನ್ನಷ್ಟು ಏರುವ ಭೀತಿ ಹೆಚ್ಚಿದೆ.

ಉಲ್ಟಾ ಹೊಡೆದ ಟ್ರಂಪ್

ಶಾಂತಿ ಒಪ್ಪಂದಕ್ಕೆ ವಿಳಂಬ ಮಾಡುತ್ತಿರುವ ಇರಾನ್ ವಿರುದ್ಧ ಭಾರತೀಯ ಕಾಲಮಾನ ಶುಕ್ರವಾರ ಬೆಳಗಿನ ಹೊತ್ತಿಗೆ ಸೇನಾ ಕಾರ್ಯಾಚರಣೆ ನಡೆಸುವುದಾಗಿ ಹೇಳಿದ್ದ ಅಮೆರಿಕ ಅಧ್ಯಕ್ಷ ಟ್ರಂಪ್ ಗುರುವಾರ ರಾತ್ರಿ ಹೊತ್ತಿಗೆ ಉಲ್ಟಾ ಹೊಡೆದಿದ್ದಾರೆ. ''ಸಂಧಾನ ಒಪ್ಪಂದ ಏರ್ಪಡುವ ಸೂಚನೆ ಹಿನ್ನೆಲೆಯಲ್ಲಿ ಉದ್ದೇಶಿತ ದಾಳಿಯನ್ನು ರದ್ದುಗೊಳಿಸಲಾಗಿದೆ,'' ಎಂದಿದ್ದಾರೆ.

80:20 ಅನುಪಾತವೇ ಖಾತ್ರಿಯಾಗಲಿ

ಉದ್ಯೋಗ ಖಾತ್ರಿ ವಿಬಿ-ಜಿ ರಾಮ್ ಜಿಯಲ್ಲಿ ರಾಜ್ಯಕ್ಕೆ ಆರ್ಥಿಕ ಹೊರೆ
60 ದಿನಗಳ ಕೂಲಿ ಬಿಡುವು ಕೈಬಿಡಿ: ಸಚಿವ ಖಂಡ್ರೆ ಒತ್ತಾಯ

■ **ವಿಕ ಸುದ್ದಿಲೋಕ** ಬೆಂಗಳೂರು

ಗ್ರಾಮೀಣ ಜನರಿಗೆ ಉದ್ಯೋಗ ಖಾತರಿ ನೀಡುವ ನೂತನ 'ವಿಬಿ ಜಿ ರಾಮ್ ಜಿ' ಯೋಜನೆಯಡಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವಿನ ವೇತನ ಅನುಪಾತವನ್ನು ಕನಿಷ್ಠ 80:20ಕ್ಕೆ ಹೆಚ್ಚಿಸಬೇಕು ಹಾಗೂ ವರ್ಷದಲ್ಲಿ 60 ದಿನಗಳ ಕಾಲ ಕೂಲಿ ನೀಡದಿರುವ (ಬಿಡುವು) ಪ್ರಸ್ತಾಪವನ್ನು ಸಂಪೂರ್ಣವಾಗಿ ಕೈಬಿಡಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಕೇಂದ್ರ ಸರಕಾರವನ್ನು ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ಯುಪಿಎ ಸರಕಾರದ ಅವಧಿಯಲ್ಲಿ 2006 ರಲ್ಲಿ ಜಾರಿ ಮಾಡಲಾದ ಮನರೇಗಾ ಯೋಜನೆಯಡಿ ಒದಗಿಸಲಾಗುವ ಉದ್ಯೋಗಕ್ಕೆ ನೀಡುವ ಕೂಲಿಯ ಶೇ.90 ರಷ್ಟು ಹಣವನ್ನು ಕೇಂದ್ರ ಸರಕಾರ ನೀಡುತ್ತಿತ್ತು. ರಾಜ್ಯ ಸರಕಾರಗಳು ಕೇವಲ ಶೇ.10 ರಷ್ಟು ಭರಿಸುತ್ತಿದ್ದವು. ಎನ್‌ಡಿಎ ಸರಕಾರ ಜುಲೈ 1 ರಿಂದ ಜಾರಿ ಮಾಡುತ್ತಿರುವ ವಿಬಿ ಜಿ ರಾಮ್ ಜಿ ಯೋಜನೆಯಲ್ಲಿ 60:40 ಅನುಪಾತ ನಿಗದಿ ಮಾಡಲಾಗಿದೆ. ಶೇ.40 ರಷ್ಟು ಪಾಲು ಭರಿಸುವುದು ರಾಜ್ಯ ಸರಕಾರಗಳಿಗೆ ಹೆಚ್ಚಿನ ಹೊರೆಯಾಗುತ್ತದೆ. ಹಾಗಾಗಿ ಹಿಂದಿನಂತೆ 90:10 ಅನುಪಾತದಲ್ಲಿ ಸಾಧ್ಯವಾಗದಿದ್ದರೆ ಕನಿಷ್ಠ 80:20 ಅನುಪಾತಕ್ಕಾದರೂ ಹೆಚ್ಚಿಸಬೇಕು,'' ಎಂದು ಒತ್ತಾಯಿಸಿದರು.

''ಯೋಜನೆಯಡಿ ವರ್ಷದಲ್ಲಿ 60 ದಿನಗಳ ಕಾಲ ಉದ್ಯೋಗ ನೀಡುವುದಿಲ್ಲ ಎಂಬ ಕೇಂದ್ರ ಸರಕಾರದ ಧೋರಣೆಯೂ ಸಮರ್ಥನೀಯವಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಕೃಷಿ ಕಾರ್ಯಕ್ಕೆ ಯಂತ್ರೋಪಕರಣಗಳು ಬಂದಿದ್ದು, ಬಹುತೇಕ ಗ್ರಾಮೀಣ ಭೂಮಿರಹಿತ ಕೂಲಿ ಕಾರ್ಮಿಕರಿಗೆ ಉದ್ಯೋಗ ಸಿಗುತ್ತಿಲ್ಲ. ಹಾಗಾಗಿ ಅವರಿಗೆ ಆಸರೆಯಾಗಿರುವ ಉದ್ಯೋಗ ಖಾತರಿಗೆ ರಜೆ ನೀಡುವ ಪ್ರಸ್ತಾಪವನ್ನು ಕೈಬಿಡುವ ಅಗತ್ಯವಿದೆ,'' ಎಂದು ಪ್ರತಿಪಾದಿಸಿದರು.

''ಈ ತಿಂಗಳ 28 ಮತ್ತು 29ರಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅಧ್ಯಕ್ಷತೆಯಲ್ಲಿ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರ ಸಭೆ ನಡೆಯಲಿದ್ದು, ವೇತನ ಅನುಪಾತ ಹೆಚ್ಚಳ ಮಾಡಬೇಕು ಮತ್ತು 2 ತಿಂಗಳ ಬಿಡುವು ಪ್ರಸ್ತಾಪವನ್ನು ಕೈಬಿಡಬೇಕು ಎಂದು ಒತ್ತಾಯಿಸುತ್ತೇನೆ. ಮನರೇಗಾದ ನೂತನ ಸ್ವರೂಪವಾದ ವಿಬಿ-ಜಿ ರಾಮ್ ಜಿ ಯೋಜನೆಯಡಿ ಇಂತಹ ಕೆಲಸಗಳನ್ನು ಮಾತ್ರ ಮಾಡಬೇಕು ಎಂದು ಕೇಂದ್ರ ಸರಕಾರ ರಾಜ್ಯಗಳಿಗೆ ನಿರ್ಬಂಧ ವಿಧಿಸುವುದು ಕೂಡ ಸರಿಯಲ್ಲ. ರಾಜ್ಯಗಳಿಗೆ ಉದ್ಯೋಗ ಆಯ್ಕೆಮಾಡಿಕೊಳ್ಳುವ ಸ್ವಾತಂತ್ರ್ಯ ಇರಬೇಕು,'' ಎಂದು ಹೇಳಿದರು.

ಉಚಿತ ಬಸ್ ಪಾಸ್ ಅಧಿಕೃತ

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಮೊದಲ ಸಂಪುಟ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುವ ಯೋಜನೆಗೆ ಚಾಲನೆ ನೀಡಲು ಸಾರಿಗೆ ಇಲಾಖೆಯಿಂದ ಆದೇಶ ಹೊರಡಿಸಲಾಗಿದೆ. ಜತೆಗೆ ಪಾಸ್ ಸಂಬಂಧ ವಿದ್ಯಾರ್ಥಿಗಳು ಈಗಾಗಲೇ ಪಾವತಿಸಿರುವ ಹಣವನ್ನು 15 ದಿನದಲ್ಲಿ ವಾಪಸ್ ಮಾಡುವುದಾಗಿ ತಿಳಿಸಲಾಗಿದೆ.

ಉಚಿತ ಬಸ್ ಪಾಸ್ ಸೌಲಭ್ಯ ಸಂಬಂಧ ವಿದ್ಯಾರ್ಥಿಗಳು ಸೇವಾ ಸಿಂಧು ಪೋರ್ಟಲ್‌ನಲ್ಲಿ ಶಾಲೆಗಳು ಸೇರಿದಂತೆ ಎಲ್ಲಿಂದಲಾದರೂ ಆನ್‌ಲೈನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಸಾರಿಗೆ ಸಚಿವ ಬೈರತಿ ಸುರೇಶ್, ''ಇದೇ ಮೊದಲ ಬಾರಿಗೆ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡಲಾಗುತ್ತಿದೆ. ಇದು ಕಾಂಗ್ರೆಸ್ ಸರಕಾರದ ಮತ್ತೊಂದು ಐತಿಹಾಸಿಕ ಗ್ಯಾರಂಟಿಯಾಗಿದೆ. ಇದುವರೆಗೆ ವಿದ್ಯಾರ್ಥಿನಿಯರಿಗೆ ಮಾತ್ರ ಉಚಿತ ಬಸ್ ಪಾಸ್ ಸೌಲಭ್ಯವಿತ್ತು. ಈಗಾಗಲೇ ಹಣ ಪಾವತಿಸಿ ಪಾಸ್ ತೆಗೆದುಕೊಂಡ ವಿದ್ಯಾರ್ಥಿಗಳಿಗೆ ಈ ಮೊತ್ತವನ್ನು ವಾಪಸ್ ನೀಡಲಾಗುವುದು,'' ಎಂದು ತಿಳಿಸಿದ್ದಾರೆ.

ಪಾಸ್ ವಿತರಣೆ ಮಾರ್ಗಸೂಚಿ

- ವಿದ್ಯಾರ್ಥಿಯ ಶೈಕ್ಷಣಿಕ ಅರ್ಹತಾ ಮಾನದಂಡ, ದೂರದ ಮಿತಿ, ಪಾಸಿನ ಕಾಲಾವಧಿ ಅನುಸರಿಸುವುದು.
- ಸೇವಾ ಸಿಂಧು ಪೋರ್ಟಲ್‌ನಲ್ಲಿ ಶಾಲೆ ಸೇರಿದಂತೆ ಎಲ್ಲಿಂದಲಾದರೂ ಅರ್ಜಿ ಸಲ್ಲಿಸುವುದು.
- ಈಗಾಗಲೇ ವಿತರಿಸಿದ ಪಾಸ್ ಚಾಲ್ತಿಯಲ್ಲಿರುತ್ತದೆ. ಆದರೆ, ವಿದ್ಯಾರ್ಥಿಗಳು ಪಾವತಿಸಿದ ಮೊತ್ತ ವಾಪಸ್ ನೀಡಲಾಗುವುದು.
- ರಾಜ್ಯದಲ್ಲಿ ವಾಸವಿದ್ದು ನೆರೆ ರಾಜ್ಯಗಳಲ್ಲಿ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವವರಿಗೆ ಪಾಸ್ ನೀಡುವುದು. ಹಾಗೆಯೇ ನೆರೆ ರಾಜ್ಯಗಳಲ್ಲಿ (ಗಡಿ ಪ್ರದೇಶ) ವಾಸವಿದ್ದು, ರಾಜ್ಯದೊಳಗಿನ ವಿದ್ಯಾಸಂಸ್ಥೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೂ ಪಾಸ್ ವಿತರಿಸುವುದು.

ಶಿವಶ್ರೀಗೆ ಬಿಸ್ಮಿಲ್ಲಾ ಯುವ ಪುರಸ್ಕಾರ

ಬೆಂಗಳೂರು: ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರ ಪತ್ನಿ, ಗಾಯಕಿ ಶಿವಶ್ರೀ ಸ್ಕಂದ ಪ್ರಸಾದ್ ಅವರನ್ನು ಸಂಗೀತ ನಾಟಕ ಅಕಾಡೆಮಿಯ 2025ನೇ ಸಾಲಿನ 'ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ'ಕ್ಕೆ ಆಯ್ಕೆ ಮಾಡಲಾಗಿದೆ. 2024 ಮತ್ತು 25 ನೇ ಸಾಲಿಗೆ ಒಟ್ಟು 106 ಕಲಾವಿದರನ್ನು ಈ ಗೌರವಕ್ಕೆ ಆಯ್ಕೆ ಮಾಡಲಾಗಿದೆ. ಸಂಗೀತ, ನೃತ್ಯ ಸೇರಿದಂತೆ ವಿವಿಧ ಕಲೆಯಲ್ಲಿ ಸೇವೆ ಸಲ್ಲಿಸುವ ಯುವ ಕಲಾವಿದರಿಗೆ ಭಾರತ ರತ್ನ ಉಸ್ತಾದ್ ಬಿಸ್ಮಿಲ್ಲಾ ಖಾನ್ ಸ್ಮರಣಾರ್ಥ ಈ ಪ್ರಶಸ್ತಿ ನೀಡಲಾಗುತ್ತದೆ. ಪುರಸ್ಕಾರಕ್ಕೆ ತಮ್ಮನ್ನು ಆಯ್ಕೆ ಮಾಡಿದ್ದಕ್ಕೆ ಶಿವಶ್ರೀ ಅವರು, ''ದೇವರಿಗೆ ಹಾಗೂ ನನ್ನ ಗುರುಗಳಿಗೆ ಈ ಗೌರವವನ್ನು ಸಮರ್ಪಿಸುತ್ತೇನೆ,'' ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಹರ್ಷ ವ್ಯಕ್ತಪಡಿಸಿದ್ದಾರೆ.

ಎಥೆನಾಲ್ ಪೆಟ್ರೋಲ್ ಅಬಕಾರಿ ಸುಂಕ ರದ್ದು

ಹೊಸದಿಲ್ಲಿ: ಭವಿಷ್ಯದಲ್ಲಿ ಎಥೆನಾಲ್ ಮಿಶ್ರಿತ ಪೆಟ್ರೋಲ್ ಉತ್ಪಾದನೆ ಮತ್ತು ಬಳಕೆಗೆ ಉತ್ತೇಜನ ನೀಡಲು ಕೇಂದ್ರ ಸರಕಾರವು ಎಥೆನಾಲ್ ಮಿಶ್ರಿತ ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು ಸಂಪೂರ್ಣವಾಗಿ ತೆಗೆದುಹಾಕಿದೆ. ಆದರೆ ಇದರ ಪ್ರಯೋಜನ ಸಾಮಾನ್ಯ ಗ್ರಾಹಕರಿಗೆ ಆಗುವುದಿಲ್ಲ. ಏಕೆಂದರೆ ಸದ್ಯ ಲಭ್ಯವಿರುವ ಇ-20 ಪೆಟ್ರೋಲ್ ಮಿಶ್ರಣಕ್ಕೆ ಈ ವಿನಾಯಿತಿ ಅನ್ವಯಿಸುವುದಿಲ್ಲ. ಇ-22 (ಶೇ. 22 ರಷ್ಟು ಎಥೆನಾಲ್ ಮತ್ತು ಶೇ.78ರಷ್ಟು ಪೆಟ್ರೋಲ್), ಇ-25, ಇ-27 ಮತ್ತು ಇ-30 ಪೆಟ್ರೋಲ್ ಮಿಶ್ರಣಗಳಿಗೆ ಈ ಸುಂಕ ವಿನಾಯತಿ ಅನ್ವಯಿಸುತ್ತದೆ.

ಸದ್ಯಕ್ಕೆ ಭಾರತದ ಬಹುತೇಕ ಬಂಕ್‌ಗಳಲ್ಲಿ ಸಿಗುತ್ತಿರುವುದು ಇ-20 (ಶೇ. 20 ಎಥೆನಾಲ್) ಪೆಟ್ರೋಲ್ ಆಗಿದೆ. ಭವಿಷ್ಯದಲ್ಲಿ ದೇಶವು ಶೇ.30 ಎಥೆನಾಲ್ ಮಿಶ್ರಣದ ಗುರಿ ಹೊಂದಿದ್ದು, ಅದಕ್ಕೆ ಪೂರಕವಾಗಿ ತೈಲ ಕಂಪನಿಗಳಿಗೆ ಈ ತೆರಿಗೆ ವಿನಾಯಿತಿ ನೀಡಲಾಗಿದೆ. ಎಥೆನಾಲ್ ಅನ್ನು ಕಬ್ಬು, ಜೋಳ ಹಾಗೂ ಧಾನ್ಯಗಳಿಂದ ತಯಾರಿಸಲಾಗುತ್ತದೆ. ಇದರ ಬಳಕೆ ಹೆಚ್ಚಾದಂತೆ ದೇಶದ ರೈತರ ಆದಾಯವೂ ಹೆಚ್ಚಾಗಲಿದೆ. ಜತೆಗೆ ಕಚ್ಚಾ ತೈಲದ ಆಮದು ಪ್ರಮಾಣವನ್ನು ಕಡಿಮೆ ಮಾಡಬಹುದು.

ಶೂನ್ಯ ಪ್ರೀಮಿಯಂಗೆ 7 ಲಕ್ಷ ರೂ. ಜೀವ ವಿಮೆ!

ತಿಳಿಯಿರಿ ಭವಿಷ್ಯ ನಿಧಿಯ ವಿಮಾ ಪರಿಹಾರ ಯೋಜನೆ

ಹೊಸದಿಲ್ಲಿ: ನೌಕರರ ಭವಿಷ್ಯ ನಿಧಿ ಖಾತೆ ಹೊಂದಿರುವವರಿಗೆ ಯಾವುದೇ ಪ್ರೀಮಿಯಂ ಇಲ್ಲದೆ 7 ಲಕ್ಷ ರೂ.ವರೆಗೆ ಉಚಿತ ಜೀವ ವಿಮೆ ಸೌಲಭ್ಯ ಸಿಗುತ್ತದೆ. ಉದ್ಯೋಗಿಗಳ ಠೇವಣಿ ಜತೆ ಸಂಯೋಜನೆಗೊಂಡಿರುವ ವಿಮಾ ಯೋಜನೆ (ಇಡಿಎಲ್‌ಐ)ಆಗಿದೆ. ಇತ್ತೀಚೆಗೆ ಕೇಂದ್ರ ತಿದ್ದುಪಡಿ ಮಾಡಿದ್ದು ಕನಿಷ್ಠ ಇಡಿಎಲ್‌ಐ ಲಾಭ 2.5 ಲಕ್ಷ ರೂ. ಇದೆ. ಒಂದು ವೇಳೆ ಮೃತಪಡುವ ಮುನ್ನ ಉದ್ಯೋಗಿಯ ಪಿಎಫ್ ಶಿಲ್ಕು 50 ಸಾವಿರ ರೂ.ಗಿಂತ ಕಡಿಮೆ ಇದ್ದರೂ ಕನಿಷ್ಠ 50 ಸಾವಿರ ರೂ. ವಿಮೆ ಪರಿಹಾರದ ಖಾತ್ರಿ ನೀಡಲಾಗಿದೆ.

ವಿಕ PF CORNER

ಇಪಿಎಫ್ ಖಾತೆ ಹೊಂದಿರುವ ಪ್ರತಿಯೊಬ್ಬ ಉದ್ಯೋಗಿಗೂ ಈ ವಿಮಾ ರಕ್ಷಣೆ ಸ್ವಯಂಚಾಲಿತವಾಗಿ ಅನ್ವಯಿಸುತ್ತದೆ. ಈ ವಿಮೆಗಾಗಿ ಉದ್ಯೋಗಿ ಯಾವುದೇ ಪ್ರೀಮಿಯಂ ಪಾವತಿಸಬೇಕಾಗಿಲ್ಲ ಅಥವಾ ಪ್ರತ್ಯೇಕವಾಗಿ ನೋಂದಣಿ ಮಾಡಿಕೊಳ್ಳಬೇಕಾಗಿಲ್ಲ. ಕಂಪನಿಯು ಇಪಿಎಫ್ ಖಾತೆಗೆ ಕೊಡುಗೆ ನೀಡುವಾಗ ಅದರ ಜೊತೆಗೆ ಉದ್ಯೋಗಿಯ ಮೂಲ ವೇತನದ ಶೇ. 0.5 ರಷ್ಟು ಹಣವನ್ನು ಈ ಇಡಿಎಲ್‌ಐ ಯೋಜನೆಗೆ ಜಮಾ ಮಾಡುತ್ತದೆ. ಯಾವುದೇ ಇಪಿಎಫ್ ಸದಸ್ಯರು ಉದ್ಯೋಗದಲ್ಲಿರುವಾಗ ಮರಣ ಹೊಂದಿದರೆ ಮಾತ್ರ ವಿಮಾ ರಕ್ಷಣೆ ಸಿಗಲಿದೆ. ನಾಮಿನಿ ಅಥವಾ ಕಾನೂನುಬದ್ಧ ವಾರಸುದಾರರು ಈ ವಿಮಾ ಹಣವನ್ನು ಕ್ಲೇಮ್ ಮಾಡಬಹುದು.

ವಿಮಾ ಕವರೇಜ್ ಹೇಗೆ?

ಹಿಂದಿನ 12 ತಿಂಗಳ ಸರಾಸರಿ ವೇತನ ಮತ್ತು ಖಾತೆಯಲ್ಲಿ ಇರುವ ಪಿಎಫ್ ಶಿಲ್ಕು ಆಧಾರದ ಮೇಲೆ ವಿಮೆ ಪರಿಹಾರ ಮೊತ್ತವನ್ನು ಲೆಕ್ಕ ಹಾಕಲಾಗುತ್ತದೆ. ಒಂದು ವರ್ಷ ಸಕ್ರಿಯ ಖಾತೆ ಹೊಂದಿರುವ ಇಪಿಎಫ್ ಸದಸ್ಯರಿಗೆ ಕನಿಷ್ಠ 2.25 ಲಕ್ಷ ರೂ. ಮತ್ತು ಗರಿಷ್ಠ ಏಳು ಲಕ್ಷ ರೂ.ವರೆಗೆ ಜೀವ ವಿಮಾ ಕವರೇಜ್ ಇರುತ್ತದೆ. ಆದರೆ, ಕನಿಷ್ಠ 12 ತಿಂಗಳು ಅವರ ಇಪಿಎಫ್ ಖಾತೆ ಸಕ್ರಿಯವಾಗಿರಬೇಕು. ಖಾತೆದಾರರು ಮೃತಪಟ್ಟಾಗ ಅವರ ಇಪಿಎಫ್ ಖಾತೆ ಚಾಲ್ತಿಯಲ್ಲಿರಬೇಕು. ಮೃತ ಉದ್ಯೋಗಿಯ ಹಿಂದಿನ 12 ತಿಂಗಳ ಸರಾಸರಿ ವೇತನ ಮತ್ತು ಪಿಎಫ್ ಶಿಲ್ಕು ಆಧಾರದ ಮೇಲೆ ವಿಮೆ ಪರಿಹಾರ ಮೊತ್ತವನ್ನು ಲೆಕ್ಕ ಹಾಕಲಾಗುತ್ತದೆ. ಉದ್ಯೋಗಿಯ ಮೂಲ ವೇತನ ಕಳೆದ 12 ತಿಂಗಳುಗಳಿಂದ 15,000 ರೂ.ಗಿಂತ ಹೆಚ್ಚಾಗಿದ್ದು, ಅವರ ಒಟ್ಟು ಇಪಿಎಫ್ ಶಿಲ್ಕು ಸರಾಸರಿ 3.5 ಲಕ್ಷ ರೂ.ಗಿಂತಲೂ ಹೆಚ್ಚಿದ್ದರೆ ಗರಿಷ್ಠ 7 ಲಕ್ಷ ರೂ. ಪೂರ್ಣ ಮೊತ್ತ ಸಿಗುತ್ತದೆ.

ತಕ್ಷಣ ಏನು ಮಾಡಬೇಕು?

- ಪ್ರತಿಯೊಬ್ಬ ಉದ್ಯೋಗಿಯೂ ತಮ್ಮ ಇಪಿಎಫ್ ಖಾತೆಗೆ 'ಇ-ನಾಮಿನೇಷನ್' ಮಾಡಬೇಕು
- ತಮ್ಮ ಯುಎಎನ್ ಹಾಗೂ ಇಪಿಎಫ್ ಖಾತೆಗಳ ವಿವರವನ್ನು ಕುಟುಂಬದವರೊಂದಿಗೆ ಹಂಚಿಕೊಳ್ಳಬೇಕು
- ನಾಮಿನಿ ವಿವರಗಳು ಅಪ್‌ಡೇಟ್ ಆಗಿದ್ದರೆ ಮಾತ್ರ ಸಂಕಷ್ಟದ ಸಮಯದಲ್ಲಿ ಕುಟುಂಬಕ್ಕೆ ಯಾವುದೇ ಅಡೆತಡೆಯಿಲ್ಲದೆ ವಿಮಾ ಹಣ ಪಾವತಿಯಾಗುತ್ತದೆ

ಕ್ಲೇಮ್ ಹೇಗೆ?

ಇಪಿಎಫ್ ಸದಸ್ಯರು ಸೇವೆಯಲ್ಲಿದ್ದಾಗ ಮರಣ ಹೊಂದಿದರೆ ನಾಮಿನಿ ಅಥವಾ ಕಾನೂನುಬದ್ಧ ವಾರಸುದಾರರು ಮರಣ ಪ್ರಮಾಣಪತ್ರ, ನಾಮಿನಿಯ ಕೆವೈಸಿ, ಬ್ಯಾಂಕ್ ಪಾಸ್‌ಬುಕ್, ವಾರಸುದಾರರ ಪ್ರಮಾಣ ಪತ್ರವನ್ನು ಲಗತ್ತಿಸಿ ಫಾರ್ಮ್ 5 ಐಎಫ್ ತುಂಬಬೇಕು. ಈ ಅರ್ಜಿಯನ್ನು ಉದ್ಯೋಗಿ ಕೆಲಸ ಮಾಡುತ್ತಿದ್ದ ಕಂಪನಿ / ನೇರವಾಗಿ ಇಪಿಎಫ್‌ಒ ಕಚೇರಿಗೆ ಸಲ್ಲಿಸಬಹುದು.

ನಿಮ್ಮ ಹಳೆಯ ಚಿನ್ನದಿಂದ ನಿಮ್ಮ ಹಣಕ್ಕಿಂತ ಹೆಚ್ಚಿನ ಚಿನ್ನವನ್ನು ಖರೀದಿಸಬಹುದು.
ಇಂದೇ ಎಕ್ಸ್‌ಚೇಂಜ್ ಮಾಡಿಕೊಳ್ಳಿ!

ಪ್ರತಿ ಗ್ರಾಂಗೆ ಹಳೆಯ ಚಿನ್ನಾಭರಣಗಳ ಎಕ್ಸ್‌ಚೇಂಜ್‌ನ ಮೇಲೆ ₹550* ಹೆಚ್ಚಾಗಿ ಪಡೆಯಿರಿ.
ಪ್ರತಿ 8 ಗ್ರಾಂಗೆ ₹4400* ವರೆಗೆ ಉಳಿತಾಯ
ಯಾವುದೇ ಜ್ಯುವೆಲರಿಯಿಂದ ಖರೀದಿಸಿದ ಯಾವುದೇ ಕ್ಯಾರೆಟ್‌ನ ಹಳೆಯ ಚಿನ್ನವನ್ನು ವಿನಿಮಯ ಮಾಡಿಕೊಂಡರೆ 0% ಕಡಿತ*
PRINCE JEWELLERY
BENGALURU: 11th Main Road, Near Cosmopolitan Club, 3rd Block, Jayanagar. Ph: 080-4264 9999
*Terms and conditions apply. Offer not applicable for gold coins and bullions. This offer cannot be combined with any other offers and closure of advance purchase plan. The offer on silver articles is not valid for exchange. Limited period offer. Ample car parking space available in all our showrooms. www.princejewellery.com. Open on Sundays.

Bennett & Coleman THE TIMES OF INDIA
ಸಂಪಾದಕೀಯ EDITORIAL

ಮಾದಕತೆ ವಿರುದ್ಧ ಸಮರ

ವ್ಯಸನಮುಕ್ತ ಬಾಲ್ಯ ಎಲ್ಲರ ಆದ್ಯತೆಯಾಗಲಿ

ರಾಜಧಾನಿ ಬೆಂಗಳೂರಿನ ಹದಿಹರೆಯದವರಲ್ಲಿ ಹೆಚ್ಚುತ್ತಿರುವ ಮಾದಕ ವ್ಯಸನದ ಕುರಿತಾದ ಇತ್ತೀಚಿನ ಸಮೀಕ್ಷಾ ವರದಿ ತೀವ್ರ ಆತಂಕವನ್ನು ಸೃಷ್ಟಿಸಿದೆ. ಪ್ರತಿ ಮೂವರು ಹದಿಹರೆಯದವರಲ್ಲಿ ಒಬ್ಬರು ಮದ್ಯ ಅಥವಾ ತಂಬಾಕು ಸೇವನೆಗೆ ದಾಸರಾಗುತ್ತಿದ್ದಾರೆ ಮತ್ತು ಮದ್ಯಪಾನ ಆರಂಭಿಸುವ ಸರಾಸರಿ ವಯಸ್ಸು 17 ವರ್ಷಕ್ಕೆ ಇಳಿದಿದೆ ಎಂಬುದು ಸ್ವಸ್ಥ ಸಮಾಜವೊಂದಕ್ಕೆ ಎಚ್ಚರಿಕೆಯ ಗಂಟೆಯೂ ಹೌದು. ಸಮೀಕ್ಷೆಯಲ್ಲಿ ಭಾಗವಹಿಸಿದವರ ಪೈಕಿ ಶೇ.33ರಷ್ಟು ಮಂದಿ ಮದ್ಯಪಾನಕ್ಕೆ ಹಾಗೂ ಶೇ.18ರಷ್ಟು ಮಂದಿ ತಂಬಾಕು ವ್ಯಸನಕ್ಕೆ ಒಳಗಾಗಿರುವುದು ನಮ್ಮ ಮಕ್ಕಳ ಆರೋಗ್ಯ ಮತ್ತು ಭವಿಷ್ಯದ ದೃಷ್ಟಿಯಿಂದ ಆತಂಕ ಹುಟ್ಟಿಸುವ ವಿಚಾರ. ಈ ಹಿನ್ನೆಲೆಯಲ್ಲಿ, ಅಪ್ರಾಪ್ತ ವಯಸ್ಸಿನ ಮದ್ಯಪಾನವನ್ನು ತಡೆಗಟ್ಟುವ ತುರ್ತು ಅಗತ್ಯವನ್ನು ಗುರುತಿಸಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಪೊಲೀಸ್ ಅಧಿಕಾರಿಗಳಿಗೆ ನೀಡಿರುವ ಖಡಕ್ ಸೂಚನೆಗಳು ಮತ್ತು ಕಠಿಣ ಮಾರ್ಗಸೂಚಿಗಳು ನಿಜಕ್ಕೂ ಸ್ವಾಗತಾರ್ಹ. ವಾಣಿಜ್ಯ ಲಾಭಕ್ಕಾಗಿ ನಮ್ಮ ಯುವ ಪೀಳಿಗೆಯ ಭವಿಷ್ಯವನ್ನು ಬಲಿಗೊಡಲು ಸಾಧ್ಯವಿಲ್ಲ ಎಂಬ ಸರಕಾರದ ನಿಲುವು ಶ್ಲಾಘನೀಯ.



ಪಬ್‌ಗಳು, ಲಾಂಜ್, ರೆಸ್ಟೋರೆಂಟ್ ಮತ್ತು ಮದ್ಯ ಮಾರಾಟ ಅಂಗಡಿಗಳಿಗೆ ಅಪ್ರಾಪ್ತ ವಯಸ್ಕರ ಪ್ರವೇಶವನ್ನು ಕಡ್ಡಾಯವಾಗಿ ನಿಷೇಧಿಸಿರುವುದು ಹಾಗೂ ಮಾನ್ಯವಾದ ಸರಕಾರಿ ಗುರುತಿನ ಚೀಟಿ ಇಲ್ಲದೆ ಪ್ರವೇಶ ನಿರಾಕರಿಸಬೇಕು ಎಂಬ ನಿಯಮವನ್ನು ಜಾರಿಗೆ ತಂದಿರುವುದು ಸದ್ಯದ ತುರ್ತು ಅಗತ್ಯವಾಗಿತ್ತು. ಬಾರ್‌ಗಳಲ್ಲಿ ಅಪ್ರಾಪ್ತರು ಕಂಡುಬಂದರೆ ಕೇವಲ ತಕ್ಷಣದ ಸಿಬ್ಬಂದಿಯನ್ನಷ್ಟೇ ಅಲ್ಲದೆ, ನೇರವಾಗಿ ಸಂಸ್ಥೆಯ ಮಾಲೀಕರು, ವ್ಯವಸ್ಥಾಪಕರು ಮತ್ತು ಪರವಾನಗಿ ಹೊಂದಿರುವವರನ್ನೇ ಹೊಣೆಗಾರರನ್ನಾಗಿ ಮಾಡಲು ನಿರ್ಧರಿಸಿರುವುದು ಸೂಕ್ತವೇ ಆಗಿದೆ. ಪ್ರವೇಶ ದ್ವಾರಗಳಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಕಡ್ಡಾಯಗೊಳಿಸಿ, ಅದರ ದೃಶ್ಯಾವಳಿಗಳನ್ನು ಸಂರಕ್ಷಿಸಿಡಬೇಕೆಂಬ ಸೂಚನೆಯು ಕಾನೂನು ಉಲ್ಲಂಘಿಸುವವರಿಗೆ ತಕ್ಕ ಪಾಠ ಕಲಿಸಲು ನೆರವಾಗಲಿದೆ. ಕೇವಲ ನಿಯಮಗಳನ್ನು ರೂಪಿಸುವುದಷ್ಟೇ ಅಲ್ಲದೆ, ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಪೊಲೀಸರು ಸ್ಥಳೀಯ ಸಂಸ್ಥೆಗಳು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಮತ್ತು ನಾಗರಿಕ ಗುಂಪುಗಳೊಂದಿಗೆ ಸಮನ್ವಯ ಸಾಧಿಸಲು ಮುಂದಾಗಿರುವುದು ಈ ಅಭಿಯಾನವನ್ನು ಸಾಮಾಜಿಕ ಚಳವಳಿಯಾಗಿ ರೂಪಿಸಲು ನೆರವಾಗಬಲ್ಲದು.

ಆದಾಗ್ಯೂ, ಸರಕಾರದ ಈ ಕಠಿಣ ಕ್ರಮಗಳು ಕೇವಲ ಕಾಗದದ ಮೇಲಿನ ಆದೇಶಗಳಾಗಿ ಉಳಿಯದೆ ಕಟ್ಟುನಿಟ್ಟಾಗಿ ಜಾರಿಯಾಗಬೇಕಿದೆ. ಪೊಲೀಸ್ ಇಲಾಖೆಯು ಯಾವುದೇ ಪ್ರಭಾವ ಹಾಗೂ ಒತ್ತಡಗಳಿಗೆ ಮಣಿಯದೆ ನಿರಂತರ ದಾಳಿ ಮತ್ತು ತಪಾಸಣೆಗಳನ್ನು ನಡೆಸುವ ಮೂಲಕ ಮಾದಕ ಜಾಲಗಳಲ್ಲಿ ಕಾನೂನಿನ ಭಯವನ್ನು ಹುಟ್ಟಿಸಬೇಕಿದೆ. ಕೇವಲ ಆಡಳಿತ ವ್ಯವಸ್ಥೆಯಷ್ಟೇ ಅಲ್ಲದೆ, ಪೋಷಕರು ಮತ್ತು ಶೈಕ್ಷಣಿಕ ಸಂಸ್ಥೆಗಳು ಕೂಡ ಮಕ್ಕಳ ನಡವಳಿಕೆಯ ಮೇಲೆ ನಿಗಾ ಇಡುವ ಜವಾಬ್ದಾರಿಯನ್ನು ಹೊಂದಬೇಕಿದೆ. ಆರೋಗ್ಯವಂತ ಸಮಾಜದ ನಿರ್ಮಾಣಕ್ಕಾಗಿ ಮತ್ತು ನಮ್ಮ ಮಕ್ಕಳ ಸುಂದರ ಭವಿಷ್ಯಕ್ಕಾಗಿ ಸರಕಾರ ಕೈಗೊಂಡಿರುವ ಈ ಕಠಿಣ ನಿರ್ಧಾರಕ್ಕೆ ಪ್ರತಿಯೊಬ್ಬ ನಾಗರಿಕರೂ ಕೈಜೋಡಿಸಿ ಯಶಸ್ವಿಗೊಳಿಸಬೇಕಾದ್ದು ಇಂದಿನ ಅನಿವಾರ್ಯತೆಯೂ ಹೌದಾಗಿದೆ.

ದಮಯಂತಿಗೆ ಸತ್ವ ಪರೀಕ್ಷೆ

ವಿದರ್ಭ ದೇಶದ ರಾಜನ ಮಗಳು ದಮಯಂತಿ. ಅವಳ ಸೌಂದರ್ಯ ಮತ್ತು ಸದ್ಗುಣಗಳ ಬಗ್ಗೆ ಎಲ್ಲೆಡೆ ಕೀರ್ತಿ ಹರಡಿತ್ತು. ಅದೇ ಸಮಯದಲ್ಲಿ ನಿಷಧ ದೇಶದ ರಾಜ ನಳನು ಧರ್ಮನಿಷ್ಠ, ಪರಾಕ್ರಮಿ ಮತ್ತು ಪ್ರಜಾಪ್ರಿಯನಾಗಿ ಗುರುತಿಸಿಕೊಂಡಿದ್ದ. ಅವರು ಮುಖಾಮುಖಿಯಾಗಿ ಭೇಟಿಯಾಗದಿದ್ದರೂ, ಮನಸ್ಸಿನಲ್ಲಿ ಪರಸ್ಪರ ಪ್ರೀತಿ ಮೂಡಿತ್ತು.



ಒಂದು ದಿನ ನಳನು ಅರಮನೆಯ ತೋಟದಲ್ಲಿ ಹಂಸವೊಂದನ್ನು ಹಿಡಿದ. ಅದು ಮಾತಾಡಬಲ್ಲ ಹಂಸ. "ರಾಜನೇ, ನನ್ನನ್ನು ಬಿಡು. ನಾನು ದಮಯಂತಿ ಬಳಿಗೆ ಹೋಗಿ ನಿನ್ನ ಗುಣಗಳನ್ನು ಹೇಳುತ್ತೇನೆ. ಪ್ರೀತಿಯನ್ನು ಅರಳಿಸುತ್ತೇನೆ," ಎಂದು ಬೇಡಿಕೊಂಡಿತು. ಅದರಂತೆಯೇ, ದಮಯಂತಿ ಬಳಿಗೆ ಹೋಗಿ ನಳನ ಸೌಂದರ್ಯ, ಧೈರ್ಯ ಮತ್ತು ಒಳ್ಳೆಯತನವನ್ನು ವರ್ಣಿಸಿತು. ದಮಯಂತಿ ಮನಸ್ಸಿನಲ್ಲಿ ನಳನ ಮೇಲಿನ ಪ್ರೀತಿ ಇನ್ನಷ್ಟು ಗಾಢವಾಯಿತು.

ಮುಂದೆ ದಮಯಂತಿ ವಿವಾಹಕ್ಕಾಗಿ ಸ್ವಯಂವರ ಏರ್ಪಟ್ಟಿತು. ಅನೇಕ ರಾಜಕುಮಾರರು, ದೇವತೆಗಳಾದ ಇಂದ್ರ, ಅಗ್ನಿ, ವರುಣ ಮತ್ತು ಯಮ ಕೂಡ ದಮಯಂತಿಯನ್ನು ವರಿಸಲು ಬಂದರು. ನಳನ ಬಗ್ಗೆ ದಮಯಂತಿಗಿದ್ದ ಒಲವು ದೇವತೆಗಳಿಗೆ ಗೊತ್ತಿತ್ತು. ಹೀಗಾಗಿ, ದೇವತೆಗಳು ನಳನ ರೂಪದಲ್ಲೇ ಸಭೆಯಲ್ಲಿ ಕುಳಿತರು. ದಮಯಂತಿಗೆ ನಿಜವಾದ ನಳ ಯಾರು ಎಂಬುದು ತಿಳಿಯಲಿಲ್ಲ. ಆದರೆ ಮನಸ್ಸಿನಲ್ಲೇ "ನಾನು ಮನಸಾರೆ ನಳನನ್ನೇ ವರಿಸಲು ಬಯಸಿದ್ದೇನೆ. ದಯವಿಟ್ಟು ನಳನನ್ನು ಗುರುತಿಸುವ ಶಕ್ತಿ ನೀಡಿ," ಎಂದು ದೇವರನ್ನು ಪ್ರಾರ್ಥಿಸಿದಳು. ಬಳಿಕ, ಸ್ವಯಂವರದಲ್ಲಿ ನಿಂತಿದ್ದವರನ್ನು ಗಮನಿಸಿದಳು. ನಳನ ರೂಪದಲ್ಲಿದ್ದ ದೇವತೆಗಳ ಕಾಲುಗಳು ನೆಲಕ್ಕೆ ತಾಗುತ್ತಿರಲಿಲ್ಲ, ಅವರ ದೇಹದಲ್ಲಿ ಬೆವರು ಇರಲಿಲ್ಲ, ಹೂಮಾಲೆಗಳು ಒಂದಿಷ್ಟೂ ಒಣಗಿರಲಿಲ್ಲ. ಹೀಗಾಗಿ, ಅಸಲಿ ನಳನನ್ನು ಗುರುತಿಸಲು ಸಾಧ್ಯವಾಯಿತು. ವಿವಾಹ ನೆರವೇರಿತು. ಇದರಿಂದ ಕಲಿಯು ಕೋಪಗೊಂಡು, "ನಳನ ಜೀವನವನ್ನು ಹಾಳು ಮಾಡುತ್ತೇನೆ," ಎಂದು ಪ್ರತಿಜ್ಞೆ ಮಾಡಿದ. ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದ. ಆ ಸಮಯ ಬಂದೇ ಬಿಟ್ಟಿತು! ಕಲಿಯ ಪ್ರಭಾವದಿಂದ ನಳನು ತನ್ನ ಸಹೋದರ ಪುಷ್ಕರನೊಂದಿಗೆ ಜೂಜಾಟದಲ್ಲಿ ಸೋತ. ಆರಲ್ಲಿ, ತನ್ನ ರಾಜ್ಯ, ಸಂಪತ್ತು ಎಲ್ಲವನ್ನೂ ಕಳೆದುಕೊಂಡ. ಕೊನೆಗೆ ದಮಯಂತಿಯೊಂದಿಗೆ ಕಾಡಿಗೆ ಹೋಗಬೇಕಾಯಿತು.

ಒಮ್ಮೆ ರಾಜ- ರಾಣಿಯಾಗಿದ್ದ ದಂಪತಿ, ಈಗ ಊಟಕ್ಕೂ ಪರದಾಡುವ ಪರಿಸ್ಥಿತಿ ಎದುರಿಸಿದರು. ಕಾಡಿನಲ್ಲಿ ದಮಯಂತಿ ಅನೇಕ ಸಂಕಷ್ಟಗಳನ್ನು ಅನುಭವಿಸಿದಳು. ಆದರೂ ಪತಿಯ ಮೇಲಿನ ಪ್ರೀತಿ ಮತ್ತು ನಂಬಿಕೆಯನ್ನು ಬಿಡಲಿಲ್ಲ.

ಒಂದು ರಾತ್ರಿ ನಳನು "ನನ್ನ ಜತೆ ಇದ್ದರೆ ದಮಯಂತಿ ಇನ್ನಷ್ಟು ಕಷ್ಟಪಡುತ್ತಾಳೆ," ಎಂದು ಯೋಚಿಸಿದ. ಮಲಗಿದ್ದ ದಮಯಂತಿಯನ್ನು ಬಿಟ್ಟು ದೂರ ಹೋದ. ಬೆಳಗ್ಗೆ ಎದ್ದ ದಮಯಂತಿ ಪತಿಯನ್ನು ಕಾಣದೆ ಅತ್ತಳು. ಆದರೂ ಧೈರ್ಯ ಕಳೆದುಕೊಳ್ಳಲಿಲ್ಲ, ಪತಿಗಾಗಿ ಹುಡುಕತೊಡಗಿದಳು. ಹಲವು ವರ್ಷ ಹುಡುಕಾಟ ನಡೆಸಿ, ಕೊನೆಗೆ ತನ್ನ ಬುದ್ಧಿವಂತಿಕೆಯಿಂದ ನಳನಿರುವ ಸ್ಥಳವನ್ನು ಪತ್ತೆಹಚ್ಚಿದಳು. ಅವರ ಪುನರ್ಮಿಲನ ಭಾವನಾತ್ಮಕವಾಗಿತ್ತು. ನಂತರ ನಳನು ತನ್ನ ಕೌಶಲ್ಯ ಮತ್ತು ಜ್ಞಾನದಿಂದ ಮತ್ತೆ ಜೂಜಾಟದಲ್ಲಿ ಸಹೋದರನನ್ನು ಸೋಲಿಸಿ ರಾಜ್ಯವನ್ನು ಮರಳಿ ಪಡೆದ.

ನಿರೂಪಣೆ: **ನಟೇಶ್**

ವಿಕ ಅಕ್ಷಯ ಕಥಾ Timeless Tales

ವಿಕ ತಗೋ ಕನ್ನಡ

ಏತಿ- ಪ್ರೇತಿ

ಇದು 'ಸರಸ - ವಿರಸ; ಅನುಕೂಲ- ಪ್ರತಿಕೂಲ' ಎನ್ನುವಂಥ ಪರಸ್ಪರ ವಿರುದ್ಧ ಅರ್ಥಗಳ ಜೋಡುನುಡಿ. ಇದನ್ನು 'ಏತಿ ಅಂದರೆ ಪ್ರೇತಿ ಅಂದಂತೆ' ಎಂದು ಬಳಸುತ್ತೇವೆ; ಒಬ್ಬರು ಬೇಕು ಎಂದರೆ ಮತ್ತೊಬ್ಬರು ಬೇಡ ಎನ್ನುವಂತೆ. ಸಾಮರಸ್ಯವಿಲ್ಲದ ಸಂಸಾರದಲ್ಲಿ, ಸನ್ನಿವೇಶಗಳಲ್ಲಿ ಇದು ಚೆನ್ನಾಗಿ ಹೊಂದಿಕೊಳ್ಳುತ್ತದೆ. ಇದಕ್ಕೆ ಒಳ್ಳೆಯ ಉದಾಹರಣೆ – ಲಕ್ಷ್ಮೀಶ ಕವಿಯ 'ಜೈಮಿನಿ ಭಾರತ'ದಲ್ಲಿ ಬರುವ 'ಉದ್ದಾಲಕ – ಚಂಡಿ' ಪ್ರಕರಣ. ಗಂಡನಿಗೆ ಚಂಡಿಯು 'ನೀನೆಂದುದಂ ಮಾಡೆ' ಎನ್ನುತ್ತಾಳೆ. ಅವನಿಗೆ 'ಮುಳ್ಳಿಡಿದ ಮರವೇರಿದಂತೆ' ಆಗುತ್ತದೆ. ಏತಿ ಅಂದರೆ ಪ್ರೇತಿ ಎನ್ನುವವಳಿಂದ ಸರಿಯಾದ ಕೆಲಸವನ್ನು ಮಾಡಿಸಲು, ಉದ್ದಾಲಕನಿಗೆ ಕೌಂಡಿನ್ಯ ಮುನಿಯು 'ಅವಳಿಂದ ಮಾಡಿಸಬೇಕಾದ ಕೆಲಸಕ್ಕೆ ವ್ಯತಿರಿಕ್ತವಾದುದನ್ನು ಹೇಳು' ಎಂದು ಉಪಾಯವನ್ನು ಹೇಳಿಕೊಡುತ್ತಾರೆ. ಇದರಿಂದ ಅವನು ಅವಳ ಛಲಿತನವನ್ನು ಹತೋಟಿಮಾಡಿ, ನೆಮ್ಮದಿಯಿಂದ ಸಂಸಾರ ಮಾಡುತ್ತಾನೆ. ಮುಂದೇನಾಯಿತು? ಚಂಡಿಯ ಕಥೆಯನ್ನು ಓದಿ.

- ಜಿ.ವಿ. ಅರುಣ

ಪದ ಸೂಚಿಸಿದವರು: **ಶಾರದಾ ನರಸೀಪುರ** ಬೆಂಗಳೂರು

ಬತ್ತಳಿಕೆ

● **ಬಿ.ಎನ್. ಭರತ್**



ಇರಾನ್‌ನ ಯಾವುದೋ ಪ್ರಾಂತ್ಯದ ಮೇಲೆ ಕ್ಷಿಪಣಿಗಳು ಅಪ್ಪಳಿಸಿದಾಗ, ಅಲ್ಲಿನ ನೆಲ ಮಾತ್ರವಲ್ಲ, ಮಂಗಳೂರಿನ ಸಣ್ಣ ಬಾಡಿಗೆ ಮನೆಯೊಂದರಲ್ಲಿ ವಾಸಿಸುವ ರಾಮಣ್ಣ ಶೆಟ್ಟರ ಎದೆಯೂ ನಡುಗಿತ್ತು. ಗಲ್ಫ್ ರಾಷ್ಟ್ರದಲ್ಲಿ ಸಣ್ಣ ಕೆಲಸದಲ್ಲಿದ್ದ ಮಗ ಕಳುಹಿಸುತ್ತಿದ್ದ ಹಣದಿಂದಲೇ ರಾಮಣ್ಣನವರ ಸಂಸಾರ ನಡೆಯುತ್ತಿತ್ತು. ಈಗ ಯುದ್ಧದ ಕಿಚ್ಚಿಗೆ ಮಗನ ಕೆಲಸವೇ ಹೋಗಿದೆ, ಇತ್ತ ಭಾರತದಲ್ಲಿ ಇವರ ಮನೆಯ ಒಲೆ ಹೊತ್ತಿಸುವುದೂ ಕಷ್ಟವಾಗಿದೆ. ಕೇವಲ ರಾಮಣ್ಣನ ಕುಟುಂಬ ಮಾತ್ರವಲ್ಲ; ಇರಾನ್ ಗಡಿಯ ಹರ್ಮುಜ್ ಜಲಸಂಧಿಯಲ್ಲಿ ಹಡಗುಗಳು ನಿಂತಾಗ, ಭಾರತದ ಹೆದ್ದಾರಿಯಲ್ಲಿ ಲಾರಿಯೊಂದನ್ನು ನಂಬಿ ಬದುಕುವ ಚಾಲಕ ಡೀಸೆಲ್ ಬೆಲೆ ಏರಿಕೆ ಕಂಡು ಮುಖ ಬಾಡಿಸಿಕೊಂಡಿದ್ದಾನೆ. ಸಾವಿರಾರು ಮೈಲು ದೂರದ ಯುದ್ಧದ ಒಂದೊಂದು ಕಿಡಿಯೂ ಇವತ್ತು ಭಾರತದ ಸಾಮಾನ್ಯ ಪ್ರಜೆಯ ಬದುಕನ್ನು, ಅವನ ಜೇಬನ್ನು ಸುಡುತ್ತಿದೆ. ಜಗತ್ತಿನ ಒಂದು ಮೂಲೆಯಲ್ಲಿ ಉರಿಯುತ್ತಿರುವ ಯುದ್ಧದ ಬೆಂಕಿ, ನಮ್ಮ ದೇಶದ ಕೋಟಿಕೋಟಿ ಕನಸುಗಳ ಮೇಲೆ ಹೇಗೆ ತಣ್ಣೀರು ಎರಚುತ್ತಿದೆ ಎಂಬುದಕ್ಕೆ ಇವೇ ಸಾಕ್ಷಿ.

ಇನ್ನು 2047ರ ವಿಕಸಿತದ ಭಾರತದ ಕತೆಯೇನು? ಸ್ವಾತಂತ್ರ್ಯದ ಶತಮಾನೋತ್ಸವಕ್ಕೆ ಇನ್ನೇನು 21 ವರ್ಷ. ಅಂದು ಭಾರತವು ವಿಶ್ವದ ನಂ.1 ಆಗಲು ಈಗಿನ ಅಭಿವೃದ್ಧಿಯ ವೇಗ ಬೇಕಾದಷ್ಟಾಯಿತು ಎಂಬ ಲೆಕ್ಕಾಚಾರ, ಮುಂದಿನ ರೋಡ್‌ಮ್ಯಾಪ್ ಹಾಕಿಕೊಂಡಿರುವಾಗಲೇ ಧುತ್ತನೆ ಎಲ್ಲಿಂದಲೋ ಯುದ್ಧದ ಬಿಕ್ಕಟ್ಟು ದೇಶದ ಆರ್ಥಿಕತೆಯನ್ನು ಬುಡಮೇಲು ಮಾಡುತ್ತಿದೆ. ಇನ್ನೇನು ಯುದ್ಧ ನಿಂತಿತು ಎನ್ನುತ್ತಿರುವಾಗಲೇ, ಪುನಃ ಈಗ ಉದ್ವಿಗ್ನತೆ ಮನೆಮಾಡಿರುವುದು ವಿಕಸಿತ ಭಾರತದ ಕನಸಿಗೆ ಕೊಟ್ಟ ಏಟಿನಂತೆಯೇ ತೋರುತ್ತಿದೆ.

ವಿಕಸಿತ ಭಾರತವಾಗಲು ಗುರಿಗಳೇನು?

ಇನ್ನು ಎರಡು ದಶಕಗಳಲ್ಲಿ 30ರಿಂದ 40 ಲಕ್ಷ ಕೋಟಿ ಡಾಲರ್‌ನ ಆರ್ಥಿಕತೆ ಆಗಬೇಕೆಂಬುದು ಪ್ರಮುಖ ಗುರಿಯಾಗಿದೆ (ಈಗಿನ ಮಟ್ಟ 4.2 ಲಕ್ಷ ಕೋಟಿ ಡಾಲರ್). ಹಾಗೆಯೇ ವ್ಯಕ್ತಿಯ ತಲಾ ಆದಾಯವನ್ನು 14.35 ಲಕ್ಷ ರೂ.ನಿಂದ 17.23 ಲಕ್ಷ ರೂ.ಗೆ ಏರಿಸುತ್ತಾ ಮೇಲ್ಮಟ್ಟದ ಆದಾಯದ ರಾಷ್ಟ್ರವನ್ನಾಗಿಸುವುದು ಮತ್ತು ಕಾರ್ಖಾನೆಗಳಲ್ಲಿ ಉತ್ಪಾದನೆಯಾಗುವ ಉತ್ಪನ್ನಗಳು ರಾಷ್ಟ್ರದ ಜಿಡಿಪಿಯ ಶೇ.25ರಷ್ಟನ್ನು ತಲುಪುವ ಗುರಿಯನ್ನೂ ಹೊಂದಲಾಗಿದೆ. ವಿಶ್ವಬ್ಯಾಂಕಿನ ಪ್ರಕಾರ, ತಲಾ ಆದಾಯವು 14.35 ಲಕ್ಷ ರೂ.ನ ಆಸುಪಾಸಿನಲ್ಲಿದ್ದರೆ ಅದು ಮೇಲ್ಮಟ್ಟದ ವರಮಾನದ ದೇಶ. ಸದ್ಯ ಭಾರತದ ತಲಾ ಆದಾಯ ಇರುವುದು 2.58 ಲಕ್ಷ ರೂಪಾಯಿ.

- **ಅಂದರೆ, ಮುಂದಿನ 20 ವರ್ಷಗಳಲ್ಲಿ 14.35 ಲಕ್ಷ ರೂ. ಮಟ್ಟವನ್ನು ತಲುಪಬೇಕೆಂದಾದರೆ ವಾರ್ಷಿಕ ಶೇ.8.5ರ ಪ್ರಗತಿ ಬೇಕೆಂದಾಯಿತು.**
- **ಸದ್ಯ ನಮ್ಮ ಜನಸಂಖ್ಯೆಯು ವಾರ್ಷಿಕ ಶೇ.1ರಂತೆ ವೃದ್ಧಿಸುವ ಕಾರಣ ತಲಾ ಆದಾಯದಲ್ಲಿ ಗುರಿ ಮುಟ್ಟಬೇಕೆಂದಾದರೆ ಶೇ.9ರಷ್ಟು ಪ್ರಗತಿ ಹೊಂದಬೇಕು. ಇದು ಸ್ವಲ್ಪ ಕಠಿಣ ಗುರಿಯೇ ಸರಿ.**

ಯುದ್ಧದಿಂದಾಗಿ ಭಾರತದ ಮೇಲೆ ಏನೆಲ್ಲ ಪರಿಣಾಮ?

ಇಸ್ರೇಲ್ ಮತ್ತು ಅಮೆರಿಕ ದೇಶಗಳು ಇರಾನ್ ವಿರುದ್ಧ ನಡೆಸುತ್ತಿರುವ ಯುದ್ಧದಿಂದಾಗಿ ವಿಶ್ವದಲ್ಲಿ ತೀವ್ರ ತಳಮಳ ಉಂಟಾಗಿದೆ. ಹಲವು ಸರಕುಗಳ ಆಮದು-ರಫ್ತಿನಲ್ಲಿ ಏರುಪೇರುಗಳು ಉಂಟಾಗಿವೆ. ಯುದ್ಧದ ಮೊದಲು ಒಂದು ಬ್ಯಾರೆಲ್ ಕಚ್ಚಾ ತೈಲಕ್ಕೆ 72 ಡಾಲರ್ ಇದ್ದದ್ದು 120ರ ಗಡಿಯನ್ನೂ ತಲುಪಿ, ಈಗ 95ರ ಆಸುಪಾಸಿನಲ್ಲಿದೆ. ನಮ್ಮ ಆಂತರಿಕ ತೈಲ ಬೇಡಿಕೆಯ ಶೇ.85ರಷ್ಟನ್ನು ಆಮದು ಮಾಡಿಕೊಳ್ಳುವ ಕಾರಣ ನಮ್ಮ ಆಮದಿನ ವೆಚ್ಚದಲ್ಲಿ ಈಗ ಶೇ.50ರಷ್ಟು ಹೆಚ್ಚಳ ಉಂಟಾಗಿದೆ. ಹಾಗೆಯೇ ಡಾಲರ್ ವಿರುದ್ಧ ರೂಪಾಯಿಯು 91 ರಿಂದ 97ರ ಆಸುಪಾಸಿಗೆ ಕುಸಿದು ಈಗ 95ರ ಮೇಲೆಯೇ ಇರುವುದೂ ಎರಡು ಅಲಗಿನ ಕತ್ತಿಯಂತೆ ನಮ್ಮ ಬೊಕ್ಕಸಕ್ಕೆ ಭಾರೀ ಹೊಡೆತ ನೀಡಿದೆ. ದೇಶದ ಹಲವು ಅಭಿವೃದ್ಧಿ ಕಾರ್ಯಗಳಿಗೆ ಇದರಿಂದ ತೊಡಕುಂಟಾಗಿದೆ.

ಜನರ ಜೇಬಿನೊಳಗೆ ಯುದ್ಧದ ಕಾವು

ಈ ಹಿಂದೆ 1990–91ರ ಇರಾನ್–ಇರಾಕ್ ಕೊಲ್ಲಿ ಯುದ್ಧದ ಪರಿಣಾಮವಾಗಿ ನಮ್ಮ ಜಿಡಿಪಿಯು ಶೇ.5ರಿಂದ ಶೇ.1ಕ್ಕೆ ಕುಸಿದಿತ್ತು. ವಿದೇಶಿ ವಿನಿಮಯ ದಾಸ್ತಾನು (ಫೋರೆಕ್ಸ್ ರಿಸರ್ವ್) ಕೇವಲ 1.5 ಶತಕೋಟಿ ಡಾಲರ್‌ಗಳಷ್ಟೇ ಇದ್ದು, ಬರೀ 3 ವಾರಗಳ ಆಮದಿಗೆ ಸಾಕಾಗುವಷ್ಟು ಇತ್ತು ಅಷ್ಟೆ. ಆಗ ಸರಕಾರವು ದೇಶದ ಚಿನ್ನವನ್ನು ಇಂಗ್ಲೆಂಡಿನಲ್ಲಿ ಒತ್ತೆ ಇಟ್ಟು, ಐಎಂಎಫ್‌ನಿಂದ ತುರ್ತು ಸಾಲ ತೆಗೆದುಕೊಳ್ಳಬೇಕಾಗಿ ಬಂದಿತ್ತು. ಆದರೆ, ಈಗ ಆ ರೀತಿಯ ಭೀತಿ ಇಲ್ಲ, 680 ಶತಕೋಟಿ ಡಾಲರ್‌ನ ಉತ್ತಮ ಮಟ್ಟದಲ್ಲಿ ದಾಸ್ತಾನು ಇದೆ. ಆದಾಗ್ಯೂ ಈಗಾಗಲೇ ಹಣದುಬ್ಬರ ಹೆಚ್ಚಲು ಪ್ರಾರಂಭವಾಗಿದೆ. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಹೋಟೆಲ್ ತಿಂಡಿ ಮೊದಲಾದವುಗಳ ಬೆಲೆ ಹೆಚ್ಚಾಗಿ ಜನಸಾಮಾನ್ಯರ ಜೇಬಿಗೆ ಹೊರೆಯಾಗುತ್ತಿದೆ.

ಸಾಮಾನ್ಯವಾಗಿ ಹಣದುಬ್ಬರ ಹೆಚ್ಚುವಾಗ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ಹೆಚ್ಚಿಸಿ, ಬ್ಯಾಂಕುಗಳು ವಿವಿಧ ಉದ್ದೇಶಗಳಿಗೆ ನೀಡುವ ಸಾಲಗಳನ್ನು ಸ್ವಲ್ಪ ದುಬಾರಿ ಮಾಡಿ ಹಣದುಬ್ಬರವನ್ನು ಹತೋಟಿಯಲ್ಲಿಡುವ ಪ್ರಯತ್ನ ಮಾಡುತ್ತದೆ. ಜೂನ್ ತಿಂಗಳ ದ್ವಿಮಾಸಿಕ ಹಣಕಾಸು ನೀತಿಯಲ್ಲಿ ಆರ್‌ಬಿಐ ಆ ಕ್ರಮಕ್ಕೆ ಕೈಹಾಕದಿದ್ದರೂ, ಮುಂದಿನ ತಿಂಗಳುಗಳಲ್ಲಿ ಹಣದುಬ್ಬರ ಏರುತ್ತಲೇ ಹೋದರೆ, ಆಗ ರೆಪೊ ದರವನ್ನು ಏರಿಸುವ ಹೆಜ್ಜೆ ಇಡಬೇಕಾಗಿ ಬರಬಹುದು. ಆಗ ಎಲ್ಲ ಬ್ಯಾಂಕ್ ಸಾಲಗಳಿಗೂ ಹೆಚ್ಚಿನ ಬಡ್ಡಿ ನೀಡಬೇಕಾಗುವುದು.

ವಿಕಸಿತ ಭಾರತದ ಕನಸಿಗೆ ಯುದ್ಧ ಅಡ್ಡಿಯೇ?

ವಿಕ ಫೋಕಸ್

ಸ್ವಲ್ಪ ಅಡ್ಜೆಸ್ಟ್ ಮಾಡ್ಕೊಳ್ಳಿ 'ಎಕಾನಮಿ' ಇದು…

2020ರಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗವು ಭಾರತವೂ ಸೇರಿದಂತೆ ಇಡೀ ವಿಶ್ವಕ್ಕೇ ಆತಂಕಗಳನ್ನು ಸೃಷ್ಟಿಸಿತ್ತು. ಆಗ ರೋಗದ ವೈರಾಣುವಿನ ಹರಡುವಿಕೆಯನ್ನು ತಡೆಗಟ್ಟುವ ದೃಷ್ಟಿಯಿಂದ ನಮ್ಮಲ್ಲಿ 21 ದಿನಗಳ ಲಾಕ್‌ಡೌನ್ ಘೋಷಿಸಲಾಗಿತ್ತು. ಹಾಗಾಗಿ, 2020–21ರ ಅವಧಿಯಲ್ಲಿ ಸುಮಾರು 14 ಕೋಟಿ ಜನರು ನಿರುದ್ಯೋಗಿಗಳಾದರು, 30 ಲಕ್ಷಗಳಷ್ಟು ಟ್ರಕ್ಕುಗಳು ಓಡಾಟವನ್ನು ನಿಲ್ಲಿಸಿದ್ದವು ಹಾಗೂ ಆರ್ಥಿಕ ಉತ್ಪನ್ನಗಳ ಉತ್ಪಾದನೆಯಲ್ಲಿ ಶೇ.7.3ರಷ್ಟು ಕುಸಿತ ಉಂಟಾಯಿತು ಎಂಬ ವರದಿಗಳಿವೆ. ದೇಶದಲ್ಲಿ ಆಗಲೇ ಅಡ್ಜೆಸ್ಟ್‌ಮೆಂಟ್ ಎಕಾನಮಿಯ ಪರಿಚಯವಾಗಿತ್ತು.

- **ಮಿತವ್ಯಯದ ಕರೆಯಾಚೆಗೆ…:** ಸದ್ಯದ ವಿಷಮ ಪರಿಸ್ಥಿತಿಯಲ್ಲೂ ಪ್ರಧಾನಿ ಮೋದಿ ಅವರು ನೀಡಿದ ಮಿತವ್ಯಯದ ಕರೆ ಸಮಯೋಚಿತ. ಆದರೂ ಈ ಕರೆಯ ಸಾಧಕ–ಬಾಧಕಗಳನ್ನು ಆರ್ಥಿಕತೆಯ ಪ್ರಗತಿಯ ದೃಷ್ಟಿಯಿಂದ ವಿಶ್ಲೇಷಿಸಬೇಕಾಗಿದೆ. ಚಿನ್ನದ ಖರೀದಿಯನ್ನು ಒಂದು ವರ್ಷದ ಕಾಲ ಮುಂದೂಡುವುದು, ವಿದೇಶಿ ಪ್ರವಾಸಗಳನ್ನು ಕಡಿಮೆ ಮಾಡುವುದು, ಆಂತರಿಕವಾಗಿ ತೈಲವನ್ನು ಕಡಿಮೆ ಬಳಸಿ ಸಾರ್ವಜನಿಕ ಸಾರಿಗೆಯನ್ನು ಆಶ್ರಯಿಸುವುದು, ಮನೆಯಿಂದಲೇ ಕೆಲಸ (ವರ್ಕ್ ಫ್ರಂ ಹೋಮ್) ಮಾಡುವುದಕ್ಕೆ ಒತ್ತು ನೀಡುವುದು ಇವೆಲ್ಲವೂ ಸದ್ಯಕ್ಕೆ ಬೇಕಾದುದು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಇದರಿಂದ ಜನರ ಸಂಪಾದನೆ, ಉಳಿತಾಯ, ದೇಶದ ಬೊಕ್ಕಸಕ್ಕೆ ಜಮೆಯಾಗುವ ತೆರಿಗೆಯ ಮೊತ್ತ ಇವೆಲ್ಲವೂ ಕಡಿಮೆಯಾಗಿ ಅಭಿವೃದ್ಧಿಗಾಗಿ ಅಗತ್ಯವಿರುವ ಹಣಕಾಸಿನಲ್ಲೂ ವ್ಯತ್ಯಯ ಉಂಟಾಗುವ ಸಾಧ್ಯತೆಗಳಿವೆ.
- **ತೈಲದ ಎಫೆಕ್ಟ್:** ಸದ್ಯದ ಯುದ್ಧದಿಂದಾಗಿ ಜನ ಚಿನ್ನದ ಖರೀದಿ ಮುಂದೂಡಿದಾಗ ದೇಶದಾದ್ಯಂತವಿರುವ ಲಕ್ಷಾಂತರ ಚಿನ್ನದ ಕೆಲಸಗಾರರ ಸಂಪಾದನೆಯು ಇಳಿಮುಖವಾಗುವುದು. ಇದರಿಂದ ಹಲವಾರು ವಸ್ತುಗಳ ಖರೀದಿಯನ್ನು ಅವರು ಮುಂದೂಡುವ ಕಾರಣ ಅವರಿಂದ ಸರಕಾರಕ್ಕೆ ದೊರಕುವ ಆದಾಯ ತೆರಿಗೆ ಮತ್ತು ಚಿನ್ನದಂಗಡಿಗಳ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪ್ರಮಾಣದಲ್ಲಿ ಇಳಿಮುಖ ಕಂಡುಬರಲಿದೆ. ಆಂತರಿಕ ತೈಲದ ಬಳಕೆ ತಗ್ಗಿಸುವುದು ಮತ್ತು ವರ್ಕ್ ಫ್ರಂ ಹೋಮ್ ಮಾಡುವುದರಿಂದ ದೇಶದಾದ್ಯಂತ ಹೊಸ ದ್ವಿಚಕ್ರ ವಾಹನ, ಮೋಟಾರು ಕಾರು, ಟ್ಯಾಕ್ಸಿಗಳ ಮಾರಾಟದಲ್ಲಿ ಇಳಿಮುಖ ಕಂಡುಬರುವ ಸಾಧ್ಯತೆಗಳಿವೆ. ಇದರಿಂದ ಸಾರಿಗೆ ಇಲಾಖೆಗಳಿಗೆ ಲಭಿಸುವ ನೋಂದಣಿ ಶುಲ್ಕ, ಮಾರಾಟ ತೆರಿಗೆ, ವಾಹನ ವಿಮೆ, ಪೆಟ್ರೋಲ್– ಡೀಸೆಲ್‌ಗಳ ಮೇಲಿನ ತೆರಿಗೆ, ಟ್ಯಾಕ್ಸಿ ಚಾಲಕರ ಸಂಪಾದನೆ ಎಲ್ಲವೂ ಸ್ವಲ್ಪ ಮಟ್ಟಿನ ಕುಸಿತಕ್ಕೆ ಒಳಗಾಗಲಿವೆ.
- **ಉದ್ಯೋಗ ಪರಿಣಾಮ:** ವಾಹನಗಳ ಮಾರಾಟ ಕಡಿಮೆಯಾಗಿ ಅಲ್ಲಿನ ಉದ್ಯೋಗಿಗಳ ಸಂಖ್ಯೆಯಲ್ಲೂ ಕಡಿತ ಉಂಟಾಗುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ. ಉದ್ಯೋಗಿಗಳ ಸಂಪಾದನೆ ಕಡಿಮೆಯಾದಂತೆ ಅವರು ಮನೆ ಕೊಂಡುಕೊಳ್ಳುವುದು, ಇತರ ವಸ್ತುಗಳನ್ನು ಕೊಂಡುಕೊಳ್ಳುವುದು ಇವುಗಳನ್ನೆಲ್ಲ ಮುಂದೂಡುತ್ತಾರೆ. ಆಗ ಸಂಬಂಧಪಟ್ಟ ಉದ್ಯಮಗಳಾದ ಸಿಮೆಂಟ್, ಸ್ಟೀಲ್, ಪೇಂಟ್, ಫರ್ನಿಚರ್ ಇವುಗಳ ಮಾರಾಟವು ಕುಂಠಿತಗೊಳ್ಳಬಹುದು. ಬ್ಯಾಂಕುಗಳಲ್ಲಿ ವಾಹನ ಸಾಲ, ವೈಯಕ್ತಿಕ ಸಾಲ, ಗೃಹ ಸಾಲ ಇವೆಲ್ಲವೂ ಕಡಿಮೆಯಾಗಿ ಬ್ಯಾಂಕುಗಳ ಲಾಭ ಕಡಿಮೆಯಾಗುವ ಸಂಭವವಿದೆ. ಇದರಿಂದ ಬ್ಯಾಂಕುಗಳು ಸರಕಾರಕ್ಕೆ ನೀಡುವ ತೆರಿಗೆ, ಡಿವಿಡೆಂಡ್ ಇವುಗಳು ಕುಸಿಯಲಿವೆ.
- **ಸರಪಳಿ ಪರಿಣಾಮ:** ಹಾಗೆಯೇ, 15ರಿಂದ 20 ಲಕ್ಷಗಳಷ್ಟು ಟ್ರಕ್ಕುಗಳು ಈಗಾಗಲೇ ಓಡಾಟ ನಿಲ್ಲಿಸಿವೆ. ರಸಗೊಬ್ಬರದ ಉತ್ಪಾದನೆಯಲ್ಲಿ ಶೇ.25ರಷ್ಟು, ಉಕ್ಕಿನ ಉತ್ಪಾದನೆಯಲ್ಲಿ ಶೇ.50ರಷ್ಟು ಕುಸಿತ ಕಂಡುಬಂದಿದೆ. ಜವಳಿ, ಸಿರಾಮಿಕ್ಸ್, ಗಾಜು ಮುಂತಾದ ಉದ್ಯಮಗಳಲ್ಲೂ ಉತ್ಪಾದನೆ ಕುಂಠಿತಗೊಂಡಿದೆ. ಇವೆಲ್ಲವೂ ಸರಪಳಿಯಂತೆ ಒಂದಕ್ಕೊಂದು ಬೆಸೆದುಕೊಂಡಿವೆ. ಈ ಕಾರಣಗಳಿಂದಲೇ ಜಿಡಿಪಿ ಪ್ರಗತಿಯಲ್ಲಿ ಶೇ.0.2 ರಿಂದ 0.5ರಷ್ಟು ಇಳಿತ ಕಂಡುಬರುವ ಸಾಧ್ಯತೆಗಳಿವೆ ಎಂದು ತಜ್ಞರು ಅಭಿಪ್ರಾಯಪಡುತ್ತಿದ್ದಾರೆ.

ದೊಡ್ಡ ಹೂಡಿಕೆಗಳೇ ಕೈಹಿಡಿಯಬೇಕಷ್ಟೇ

ದೇಶದಲ್ಲಿ ವೈಯಕ್ತಿಕ ಕುಟುಂಬಗಳ ಉಳಿತಾಯವು ಜಿಡಿಪಿಯಲ್ಲಿ ಗಣನೀಯ ಪ್ರಮಾಣವಾದ ಶೇ.18ರಿಂದ 20ರಷ್ಟಿದೆ. ಹಾಗೆಯೇ, ಕಾರ್ಪೊರೇಟ್ ವಲಯವು ಶೇ.11ರಿಂದ 12ರಷ್ಟು ದೇಣಿಗೆಯನ್ನೂ, ಸರಕಾರಿ ವಲಯವು ಶೇ.2ರಿಂದ 4ರಷ್ಟನ್ನೂ ಪಾಲು ಹೊಂದಿದೆ. ಮಧ್ಯಪ್ರಾಚ್ಯದ ಯುದ್ಧ ಹಾಗೂ ಆ ಬಳಿಕದ ಪರಿಣಾಮಗಳಿಂದಾಗಿ ಈ ಉಳಿತಾಯದ ಮಟ್ಟವು ಕೊಂಚ ಮಟ್ಟಿಗೆ ಮಂಕಾಗಬಹುದು. ಆಗ ಇದು ಜಿಡಿಪಿಯ ಮೇಲೆ ಪ್ರಭಾವ ಬೀರಲಿದೆ. ದೇಶದಲ್ಲಿ ಬಹಳಷ್ಟು ಯೋಜನೆಗಳಿಗೆ ದೊಡ್ಡದೊಡ್ಡ ಹೂಡಿಕೆಗಳ ಅವಶ್ಯಕತೆ ಇದೆ. ಇದಕ್ಕಾಗಿ ವಿದೇಶಿ ನೇರ ಬಂಡವಾಳ, ವಿದೇಶಿ ಸಾಂಸ್ಥಿಕ ಹೂಡಿಕೆಗಳು, ನಮ್ಮ ಉಳಿತಾಯದಿಂದಾಗುವ ದೇಶೀಯ ಹೂಡಿಕೆಗಳು, ಅನಿವಾಸಿ ಭಾರತೀಯರ ಠೇವಣಿಗಳು ಇವೆಲ್ಲವೂ ಬೇಕು. ಹೂಡಿಕೆದಾರರು ಬೇರೆಡೆಗಿಂತ ಹೆಚ್ಚಿನ ಬಡ್ಡಿಯನ್ನೋ, ಲಾಭವನ್ನೋ ಖಂಡಿತವಾಗಿ ನಿರೀಕ್ಷಿಸುವರು.

ಒಪ್ಪಂದಗಳು ದೇಶದ ಖಜಾನೆ ಕಾಪಾಡುತ್ತವೆಯೇ?

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರತಿಸುಂಕ ವಿಧಿಸಿದ ಬಳಿಕ, ಅಮೆರಿಕಕ್ಕೆ ಭಾರತದ ರಫ್ತು ಕಡಿಮೆಯಾಗಿದೆ. ವ್ಯಾಪಾರ ಒಪ್ಪಂದದ ಮಾತುಕತೆಗಳು ನಡೆಯುತ್ತಿರುವ ಸಂದರ್ಭದಲ್ಲೇ, ಈಗ ಮತ್ತೆ ಟ್ರಂಪ್ ಅವರು ಸುಂಕ ಏರಿಕೆಯ ಪ್ರಸ್ತಾಪವನ್ನಿಟ್ಟಿದ್ದಾರೆ. ಭಾರತವು ಈಗಾಗಲೇ ಯುರೋಪಿಯನ್ ಯೂನಿಯನ್ ರಾಷ್ಟ್ರಗಳೊಂದಿಗೆ 'ಮದರ್ ಆಫ್ ಆಲ್ ಡೀಲ್ಸ್' ಒಪ್ಪಂದ, ರಷ್ಯಾ, ಚೀನಾ, ಜಪಾನ್, ದಕ್ಷಿಣ ಕೊರಿಯಾ, ನ್ಯೂಜಿಲೆಂಡ್, ನಾರ್ವೆ, ನೆದರ್ಲೆಂಡ್ಸ್ ಮುಂತಾದ ದೇಶಗಳೊಡನೆಯೂ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳಿಗೆ ಸಹಿ ಮಾಡಿರುವುದು, ರಫ್ತನ್ನು ಹೆಚ್ಚಿಸುವ ಹಾಗೂ ಆರ್ಥಿಕ ಪ್ರಗತಿಗೆ ಮುನ್ನುಡಿ ಬರೆಯುವ ಹೆಜ್ಜೆಗಳಾಗಿವೆ.

(ಲೇಖಕರು: ವಿಶ್ರಾಂತ ಬ್ಯಾಂಕ್ ಎಜಿಎಂ)

ಪ್ರೀತಿಯ ಮೋದಿಗೆ, ನೆಹರು ಬರೆದ ಆತ್ಮೀಯ ಓಲೆ

ಕಾಲ್ನಡಿಗೆ
ಚೀ.ಜ. ರಾಜೀವ

ಪ್ರಿಯ ಪ್ರಧಾನಿಗಳೇ,

ಚುನಾಯಿತ ಪ್ರಧಾನಿಯಾಗಿ ನನ್ನ ದಾಖಲೆಯನ್ನು ಹಿಂದಿಕ್ಕಿದ ಸಡಗರದಲ್ಲಿರುವ ನಿಮಗೆ ಹೃತ್ಪೂರ್ವಕ ಅಭಿನಂದನೆಗಳು. ಮುಖ್ಯಮಂತ್ರಿಯಾಗಿ, ಪ್ರಧಾನಿಯಾಗಿ ಎರಡು ದಶಕಕ್ಕೂ ಹೆಚ್ಚು ಕಾಲ ಅಧಿಕಾರದಲ್ಲಿ ಮುಂದುವರಿಯುವುದು ಸಾಮಾನ್ಯದ ಮಾತಲ್ಲ. 'ಫಸ್ಟ್ ಪಾಸ್ಟ್ ದಿ ಪೋಸ್ಟ್' ಚುನಾವಣಾ ಪದ್ಧತಿಯ ಮಿತಿಯ ನಡುವೆಯೂ, ಬಹುಜನರ ವಿಶ್ವಾಸಗಳಿಸುವ ಕೆಲಸ ಮಾಡಿದಾಗಲಷ್ಟೇ ಇದು ಸಾಧ್ಯ. ನಮ್ಮ ನಡುವಿನ ಕೆಲವು ಬುದ್ಧಿಜೀವಿಗಳು ವಾದಿಸುವಂತೆ ನೀವೇನೋ ಮ್ಯಾಜಿಕ್ ಮಾಡಿ ಅಥವಾ ಜನರನ್ನು ಮರುಳು ಮಾಡಿ ಈ ಗೆಲುವು ಸಾಧಿಸಿದ್ದೀರಿ ಎಂದು ಹೇಳಲಾರೆ. ಜನರ ತೀರ್ಪನ್ನು ಗೌರವಿಸುವ ಕನಿಷ್ಠ ಪ್ರಜಾಪ್ರಭುತ್ವದ ಪ್ರಜ್ಞೆ ನನಗಿದೆ. ಹಾಗಾಗಿ ನಿಮ್ಮ ಸೇವಾ ಮನೋಭಾವ, ದೇಶದ ಪ್ರಗತಿಯ ಕುರಿತ ನಿಷ್ಠೆ ಮತ್ತು ಪರಿಶ್ರಮವನ್ನು ಮುಕ್ತವಾಗಿ ಶ್ಲಾಘಿಸುವೆ.

ಹಾಗೆ ನೋಡಿದರೆ, ನಾನು ಭಾರತದ ಪ್ರಧಾನಿಯಾಗಿ ನೇಮಕಗೊಂಡಾಗ ನೀವಿನ್ನೂ ಜನಿಸಿರಲಿಲ್ಲ. ಇನ್ನು ನಾನು ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಚುನಾಯಿತ ಪ್ರಧಾನಿಯಾದಾಗ ನೀವು ಎರಡು ವರ್ಷದ ಮಗು. ಈ ವಯಸ್ಸಿನ ಲೆಕ್ಕಾಚಾರದಲ್ಲಿ ನೋಡಿದರೆ ನನಗೂ ನಿಮಗೂ ತಂದೆ- ಮಗನ ನಂಟು. ಆದರೂ, ನಿಮ್ಮನ್ನು ಏಕವಚನದಲ್ಲಿ ಸಂಬೋಧಿಸಲಾರೆ. ಏಕೆಂದರೆ, ನನ್ನ ಕುರಿತು ನಿಮ್ಮ ಅಭಿಮಾನಿ ಪಡೆಯಲ್ಲಿರುವ ತೀವ್ರ ನಕಾರಾತ್ಮಕ ಭಾವನೆಗಳು ಇಂಥದೊಂದು ಆತ್ಮೀಯ ಸಂಬಂಧಕ್ಕೆ ಅಡ್ಡಿಯಾಗಬಹುದು. ಈ ನಂಟು ನಿಮಗೆ ಬೇಸರ ತರದಿದ್ದರೂ, ನಿಮ್ಮ ಅಭಿಮಾನಿಗಳಿಗೆ ಇಷ್ಟವಾಗದೇ ಇರಬಹುದು. ಸದ್ಯದ ಭಾರತದಲ್ಲಿ ನನ್ನನ್ನು ಇಷ್ಟಪಡುವವರು ಕೂಡ, 'ಮೋದಿ ಜತೆ ನಮ್ಮ ನೆಹರು ಹೋಲಿಕೆಯೇ?' ಎಂದು ಮೂಗು ಮುರಿಯುತ್ತಿದ್ದಾರೆ. ಅಂಥವರು ನಾನು ವ್ಯಕ್ತಿಪೂಜೆಯ ಕಡು ವಿರೋಧಿ ಎಂಬುದನ್ನೇ ಮರೆತಂತಿದೆ. ನಾನು ಬಹುವಾಗಿ ಮೆಚ್ಚುತ್ತಿದ್ದ ಬಾಪೂಜಿಯವರನ್ನು ನಾನು ಆರಾಧಿಸಲಿಲ್ಲ, ಗಾಂಧೀಜಿ ನಮ್ಮಂತೆಯೇ ರಕ್ತಮಾಂಸಗಳ ಮನುಷ್ಯರಾಗಿದ್ದರು, ಅವರ ಎಲ್ಲ ಒಲವು–ನಿಲುವುಗಳನ್ನು ನಾನು ಒಪ್ಪಿರಲಿಲ್ಲ, ಇದರ ಹೊರತಾಗಿ ಅವರೊಬ್ಬ ಶ್ರೇಷ್ಠ ವ್ಯಕ್ತಿಯಾಗಿದ್ದರಷ್ಟೆ. ಹಾಗಾಗಿ, ಈ ಪತ್ರವನ್ನು ನಾನು ಬಹುವಚನದಲ್ಲೇ ಮುಂದುವರಿಸುವೆ.

ಪ್ರಿಯ ಪ್ರಧಾನ ಸೇವಕರೇ,

ನಾನು ದೇಶದ ಜವಾಬ್ದಾರಿ ಹೊತ್ತಾಗ ಭಾರತದಲ್ಲಿದ್ದದ್ದು ಕೇವಲ 34 ಕೋಟಿ ಜನಸಂಖ್ಯೆ, ಶೇ.12 ರಷ್ಟು ಸಾಕ್ಷರತೆ, ಶೇ.70ರಷ್ಟು ಭೀಕರ ಬಡತನ ಮತ್ತು ಕೇವಲ 249 ರೂಪಾಯಿಗಳ ವಾರ್ಷಿಕ ತಲಾದಾಯ. ಇಂದು ನೀವು 145 ಕೋಟಿ ಜನಸಂಖ್ಯೆ, ಶೇ.81 ರಷ್ಟು ಸಾಕ್ಷರತೆ, ಕೇವಲ ಶೇ.6ರಷ್ಟು ಕಡುಬಡತನ ಹಾಗೂ ವಾರ್ಷಿಕ 2 ಲಕ್ಷ ರೂಪಾಯಿ ತಲಾದಾಯವಿರುವ, ಜಗತ್ತಿನ ಮುಂಚೂಣಿಯಲ್ಲಿ ಮುನ್ನುಗ್ಗುತ್ತಿರುವ ಅಭಿವೃದ್ಧಿಶೀಲ ದೇಶದ ಚುಕ್ಕಾಣಿ ಹಿಡಿದಿದ್ದೀರಿ. ಅಂದಿನ ನನ್ನ ಕಾಲದ ಆದ್ಯತೆಗಳೇ ಬೇರೆ, ಇಂದಿನ ನಿಮ್ಮ ಕಾಲದ ಸವಾಲುಗಳೇ ಬೇರೆ. ಹಾಗಾಗಿ ಇವೆರಡನ್ನೂ ತಕ್ಕಡಿಯಲ್ಲಿಟ್ಟು ಯಾರು ಹೆಚ್ಚು, ಯಾರು ಕಡಿಮೆ ಎಂದು ತೀರ್ಪು ನೀಡುವ ಕೆಲಸವನ್ನು ನಾವು ನಿಷ್ಪಕ್ಷಪಾತ ಇತಿಹಾಸಕಾರರಿಗೆ ಬಿಟ್ಟುಬಿಡೋಣ.

ಹ್ಞಾಂ, ದೇಶ ವಿಭಜನೆ, ಕಾಶ್ಮೀರ ಬಿಕ್ಕಟ್ಟು ಹಾಗೂ 1962ರ ಚೀನಾ ಯುದ್ಧದ ಸಂದರ್ಭದಲ್ಲಿ ನಾನು ತೆಗೆದುಕೊಂಡ ಕೆಲವು ನಿರ್ಧಾರಗಳು, ಅಲ್ಪಸಂಖ್ಯಾತರ ಓಲೈಕೆ ರಾಜಕಾರಣ ಇತ್ಯಾದಿಗಳ ಕುರಿತು ಒಂದಿಷ್ಟು ವಲಯದಲ್ಲಿ ತೀವ್ರ ಆಕ್ಷೇಪಗಳಿವೆ. ನೀವು ಅವುಗಳನ್ನು ಆಗಾಗ್ಗೆ ಪ್ರಸ್ತಾಪಿಸುತ್ತಿರುತ್ತೀರಿ ಎಂದು ಬಲ್ಲೆ. ಅದರಲ್ಲಿ ತಪ್ಪೇನೂ ಇಲ್ಲ. ಆದರೆ, ಒಂದಂತೂ ಖಚಿತ–ನನ್ನ ಕೆಲ ನಿರ್ಧಾರಗಳು ತಪ್ಪಾಗಿದ್ದರೂ, ಉದ್ದೇಶ ಮಾತ್ರ ಪ್ರಾಮಾಣಿಕವಾಗಿಯೇ ಇತ್ತು.

ಪ್ರಿಯ ಮೋದಿ,

ನೀವು ಮುನ್ನಡೆಸುತ್ತಿರುವ ಭಾರತ ದಿನೇದಿನೇ ಸಿದ್ಧಾಂತಗಳ ಹೆಸರಿನಲ್ಲಿ ಧ್ರುವೀಕರಣಗೊಳ್ಳುತ್ತಿದೆ ಎಂದು ಕೇಳಿ ಮನಸ್ಸಿಗೆ ಬೇಸರವಾಯಿತು. ಭಿನ್ನತೆಯೊಂದಿಗೆ ಬೆರೆಯುವ ಉದಾರತೆಯನ್ನು ಎಲ್ಲರೂ ಮೈಗೂಡಿಸಿಕೊಂಡರೆ ಒಳ್ಳೆಯದು. ಬಲಿಷ್ಠ ಪ್ರತಿಪಕ್ಷಗಳೇ ಇಲ್ಲದಂಥ ಸ್ಥಿತಿ ಸೃಷ್ಟಿಯಾಗುತ್ತಿರುವುದು ನಾನು ಕೇಳಿದ ಇನ್ನೊಂದು ಆತಂಕದ ಸುದ್ದಿ. ನಿಜಕ್ಕೂ ಇದು ಭಾರತದ ಪ್ರಜಾಪ್ರಭುತ್ವದ ಆರೋಗ್ಯಕ್ಕೆ ಒಳ್ಳೆಯದಲ್ಲ. ನನ್ನ ಅಧಿಕಾರಾವಧಿಯಲ್ಲೂ ಪ್ರತಿಪಕ್ಷಗಳಿಗೆ ಸಂಸತ್ತಿನಲ್ಲಿ ದೊಡ್ಡ ಸಂಖ್ಯಾಬಲವಿರಲಿಲ್ಲ, ಆದರೆ, ನಾನು ಅಧಿಕಾರದಲ್ಲಿದ್ದಷ್ಟು ಕಾಲ, ನನ್ನ ರಾಜಕೀಯ ವಿರೋಧಿಗಳನ್ನು ಮತ್ತು ಪ್ರತಿಪಕ್ಷಗಳ ಧ್ವನಿಯನ್ನು ಪ್ರೀತಿಯಿಂದ ಬೆಳೆಸುತ್ತಲೇ ಬಂದೆ. ಹ್ಞಾಂ, ನನ್ನ ಕಾಲದಲ್ಲಿ ರಾಮ ಮನೋಹರ್‌ಲೋಹಿಯಾ ಎಂಬ ಧೀಮಂತ ಸಮಾಜವಾದಿ ನಾಯಕರೊಬ್ಬರಿದ್ದರು. ನನ್ನ ಆರ್ಥಿಕ ಮತ್ತು ವಿದೇಶಾಂಗ ನೀತಿಗಳೆಂದರೆ ಅವರಿಗೆ ತೀವ್ರ ಅಲರ್ಜಿ. ಸದಾ ನನ್ನ ವಿರುದ್ಧ ಟೀಕಾಪ್ರಹಾರ ನಡೆಸುತ್ತಿದ್ದರು. ಅದೊಮ್ಮೆ, 'ನೆಹರೂ ಬಡವರ ದುಡ್ಡಿನಲ್ಲಿ ವೈಭೋಗದ ಶೋಕಿ ಮಾಡುತ್ತಿದ್ದಾರೆ' ಎಂದು ವೈಯಕ್ತಿಕವಾಗಿ ದಾಳಿ ನಡೆಸಿದ್ದೂ ಉಂಟು. ಅಂಥ ಲೋಹಿಯಾ ಅವರು 1962ರ ಸಾರ್ವತ್ರಿಕ ಚುನಾವಣೆಯಲ್ಲಿ ಫೂಲ್‌ಪುರ ಕ್ಷೇತ್ರದಿಂದ ನೇರವಾಗಿ ನನ್ನ ವಿರುದ್ಧವೇ ಕಣಕ್ಕಿಳಿದು, "ದೇಶದ ಪ್ರಧಾನಿ ಸುರಕ್ಷಿತ ಕ್ಷೇತ್ರದಿಂದ ಸುಲಭವಾಗಿ ಗೆದ್ದು ಬರಬಾರದು, ಪ್ರಜಾಪ್ರಭುತ್ವದಲ್ಲಿ ಪ್ರಧಾನಿಗೂ ತಕ್ಕ ಪೈಪೋಟಿ ಇರಬೇಕು," ಎಂದಿದ್ದರು. 1952, 1957ರ ಚುನಾವಣೆಗಳಲ್ಲಿ ಭಾರಿ ಬಹುಮತದಿಂದ ನಿರಾಯಾಸವಾಗಿ ಗೆದ್ದಿದ್ದ ನನಗೆ ಲೋಹಿಯಾ ಅವರ ಮಾತಿನಲ್ಲಿದ್ದ ಪ್ರಜಾಪ್ರಭುತ್ವದ ಸತ್ಯದರ್ಶನವಾಯಿತು. ಹಾಗಾಗಿ, ನಾನು ಆ ಕ್ಷೇತ್ರಕ್ಕೆ ಪ್ರಚಾರಕ್ಕೆ ಹೋಗದೇ ಇರಲು ನಿರ್ಧರಿಸಿದೆ. ಲೋಹಿಯಾ ಅವರು ಹಳ್ಳಿ ಹಳ್ಳಿ ತಿರುಗಿ ನನ್ನ ವಿರುದ್ಧ ತೀವ್ರ ವಾಗ್ದಾಳಿ ನಡೆಸುತ್ತಿದ್ದರು, ಜನರನ್ನು ಆಕರ್ಷಿಸುತ್ತಿದ್ದರು. ದಿನೇದಿನೆ ಫೂಲ್‌ಪುರದಲ್ಲಿ ನನ್ನ ಪರಿಸ್ಥಿತಿ ಕಠಿಣವಾಗತೊಡಗಿತು. ಕೊನೆಗೆ, ಮಗಳು ಇಂದಿರಾಳ ತೀವ್ರ ಒತ್ತಾಯಕ್ಕೆ ಮಣಿದು ಕೇವಲ ಒಂದೇ ಒಂದು ದಿನ ಪ್ರಚಾರಕ್ಕೆ ಹೋದೆ.

ಲೋಹಿಯಾ ಅದನ್ನೂ ಬಿಡದೇ ಲೇವಡಿ ಮಾಡಿದರು. "ಓಹೋ… ಕಡೆಗೂ ರಾಜಕುಮಾರ ಸಾಮಾನ್ಯ ಪ್ರಜೆಯಂತೆ ಮತ ಕೇಳಲು ಬರಬೇಕಾಯಿತು. ಇದು ಪ್ರಜಾಪ್ರಭುತ್ವದ ಅಸಲಿ ಗೆಲುವು," ಎಂದರು. ನಾನು ಅದನ್ನು ಮುಗುಳ್ನಗೆಯಿಂದಲೇ ಸ್ವಾಗತಿಸಿದೆ. ಫಲಿತಾಂಶ ಬಂದಾಗ ನಾನು ಪ್ರಯಾಸದಿಂದ ಗೆದ್ದೆ. ಆದರೆ, ನನ್ನಲ್ಲಿ ಯಾವುದೇ ದ್ವೇಷವಿರಲಿಲ್ಲ. ಚುನಾವಣಾ ರಾಜಕಾರಣ ಇರಬೇಕಾಗಿದ್ದೇ ಹೀಗೆ; ಗೆಲ್ಲುವ ನಾಯಕನಿಗೆ ತಾಯ್ತನದ ಔದಾರ್ಯವಿರಬೇಕು, ಎದುರಾಳಿಗಳ ಟೀಕೆಗಳನ್ನು ಸದಭಿಪ್ರಾಯದಿಂದ ಸ್ವೀಕರಿಸುವ ಹೃದಯವಿರಬೇಕು!



ಹ್ಞಾಂ, ಪ್ರಿಯ ಪ್ರಧಾನಿಗಳೇ,

ಚುನಾವಣಾ ರಾಜಕಾರಣಕ್ಕೆ ಸಂಬಂಧಿಸಿದಂತೆ ಮತ್ತೊಂದು ಘಟನೆ ನೆನಪಾಗುತ್ತಿದೆ. 1957ರ ಲೋಕಸಭಾ ಚುನಾವಣೆಯಲ್ಲಿ ಅಟಲ್ ಬಿಹಾರಿ ವಾಜಪೇಯಿ ಎಂಬ ಯುವಕ ಭಾರತೀಯ ಜನಸಂಘದಿಂದ ಉತ್ತರ ಪ್ರದೇಶದ ಬಲರಾಮಪುರ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರು. ಆ ವೇಳೆಗೆ ಅವರ ಬಗ್ಗೆ ಕೇಳಿ ತಿಳಿದಿದ್ದೆ. ಹಾಗಾಗಿ, ಆ ಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿಯ ಪರವಾಗಿ ಪ್ರಚಾರ ಮಾಡಲು ಹೋಗದಿರಲು ನಾನು ನಿರ್ಧರಿಸಿದೆ. ಅಸಲು ನನಗೆ ಸಮಯವೂ ಇರಲಿಲ್ಲ, ಜತೆಗೆ, ಅಟಲ್ ಅವರಂಥ ಅದ್ಭುತ ವಾಗ್ಮಿ, ದೇಶದ ಭವಿಷ್ಯದ ನಾಯಕ ಸಂಸತ್ತಿನಲ್ಲಿ ಇರಬೇಕು ಎಂಬುದು ನನ್ನ ಆಸೆಯಾಗಿತ್ತು. ಉನ್ನತ ನಾಯಕನಾದವನು ತನ್ನ ಪಕ್ಷದಲ್ಲಷ್ಟೇ ಅಲ್ಲ, ಎದುರಾಳಿ ಪಾಳಯದಲ್ಲೂ ಯೋಗ್ಯ ನಾಯಕರನ್ನು ಗುರುತಿಸಿ ಬೆಳೆಸಬೇಕು. ಕೊನೆಗೆ ಆ ಚುನಾವಣೆಯಲ್ಲಿ ವಾಜಪೇಯಿ ಗೆದ್ದು ಮೊದಲ ಬಾರಿಗೆ ಲೋಕಸಭೆ ಪ್ರವೇಶಿಸಿದಾಗ ನನಗಿಂತ ಹೆಚ್ಚು ಖುಷಿಪಟ್ಟವರು ಯಾರೂ ಇರಲಿಲ್ಲ. ಅಟಲ್ ಅವರ ದೇಶಪ್ರೇಮ ಮತ್ತು ಭಾಷಣದ ಶೈಲಿ ನನಗಂತೂ ಬಹುವಾಗಿ ಹಿಡಿಸಿತ್ತು. ಒಮ್ಮೆ ವಿದೇಶಿ ಗಣ್ಯರು ಭಾರತಕ್ಕೆ ಬಂದಾಗ ನಾನು ಅಟಲ್ ಅವರನ್ನು ಪರಿಚಯಿಸಿ, 'ಇವರು ಮುಂದೊಂದು ದಿನ ಖಂಡಿತವಾಗಿಯೂ ಭಾರತದ ಉನ್ನತ ಹುದ್ದೆ ಅಲಂಕರಿಸುತ್ತಾರೆ' ಎಂದು ಭವಿಷ್ಯ ನುಡಿದಿದ್ದೆ. 1996ರಲ್ಲಿ ಅದು ನಿಜವೂ ಆಯಿತು. ಪ್ರಧಾನಿ ಹುದ್ದೆ ಎಂಬುದು ಕೇವಲ ಕಾಂಗ್ರೆಸ್ಸಿನ ಸ್ವತ್ತಲ್ಲ; ಅಂತೆಯೇ ಜನಸಂಘ ಎಂಬುದು ರಾಜಕೀಯ ಅಸ್ಪೃಶ್ಯ ಪಕ್ಷವೂ ಅಲ್ಲ. ನಾನಿರುವಾಗಲೇ ಒಂದಿಷ್ಟು ವಿಚಾರವಾದಿಗಳು ಜನಸಂಘವನ್ನು ಪ್ರತ್ಯೇಕ ದೃಷ್ಟಿಯಲ್ಲಿ ನೋಡುತ್ತಿದ್ದರು. ಅವರಿಗೆ ಪ್ರಜಾಪ್ರಭುತ್ವದ ನಿಜವಾದ ಸೌಂದರ್ಯವೇ ಗೊತ್ತಿರಲಿಲ್ಲ. ಎಡ, ಬಲ, ಮಧ್ಯಮ ಸೇರಿದಂತೆ ಎಲ್ಲ ರೀತಿಯ ಸಿದ್ಧಾಂತಗಳೂ ಇರಬೇಕಲ್ಲವೇ? ಎಲ್ಲರೂ ಎಡರಂಗದ ಕ್ರಾಂತಿಕಾರಿಗಳಾದರೆ ಅಥವಾ ಎಲ್ಲರೂ ಬಲರಂಗದ ದೇಶಭಕ್ತರಾದರೆ ಪ್ರಜಾಪ್ರಭುತ್ವದ ವೈವಿಧ್ಯತೆಯಲ್ಲಿ ಏನು ಸ್ವಾರಸ್ಯ?

ಪ್ರಿಯ ಬಿಜೆಪಿ ವರಿಷ್ಠರೆ,

ದೇಶದ ಅಭಿವೃದ್ಧಿಗಾಗಿ ಶ್ರಮಿಸಿದ ನಿಮಗೆ ನಿಮ್ಮ ಅಭಿಮಾನಿಗಳು 'ವಿಕಾಸ ಪುರುಷ' ಎಂದೋ, 'ಅಭಿವೃದ್ಧಿಯ ಹರಿಕಾರ' ಎಂದೋ ಕರೆಯುವುದು ಸಹಜವೇ. ಆದರೆ, ಇಂಥ ಹೊಗಳಿಕೆಗಳು ಮತ್ತು ಜಯಘೋಷಗಳು ಎಂದಿಗೂ ನಿಮ್ಮ ತಲೆಗೇರದಿರಲಿ.

1937ರ ದಿನಗಳವು. ಸ್ವಾತಂತ್ರ್ಯ ಹೋರಾಟ ಮುನ್ನಡೆಸುತ್ತಿದ್ದ ಕಾಂಗ್ರೆಸ್ ವಲಯದಲ್ಲಿ ಜನಪ್ರಿಯನಾಗಿದ್ದೆ. ಹೋದ ಕಡೆಯಲ್ಲೆಲ್ಲಾ ಜನ ನನ್ನ ಒಂದು ನೋಟಕ್ಕಾಗಿ ಮುಗಿ ಬೀಳುತ್ತಿದ್ದರು. ಅಂಥ ವೈಭವದ ದಿನಗಳಲ್ಲಿ ಕೋಲ್ಕೊತಾದ 'ದಿ ಮಾಡರ್ನ್ ರಿವ್ಯೂ' ಎಂಬ ಪತ್ರಿಕೆಯಲ್ಲಿ ನನ್ನ ವಿರುದ್ಧವೊಂದು ದೊಡ್ಡ ಲೇಖನ ಪ್ರಕಟವಾಯಿತು. ಅದನ್ನು 'ಚಾಣಕ್ಯ' ಎಂಬ ಕಾವ್ಯನಾಮದಲ್ಲಿ ಯಾರೋ ಬರೆದಿದ್ದರು. ಅದರಲ್ಲಿ 'ಈ ನೆಹರುಗೆ ಸಿಗುತ್ತಿರುವ ಅತಿಯಾದ ಸಾರ್ವಜನಿಕ ಪ್ರಶಂಸೆ ಮತ್ತು ಜಯಘೋಷಗಳು ಅವರನ್ನು ಭವಿಷ್ಯದಲ್ಲಿ ಒಬ್ಬ ಸರ್ವಾಧಿಕಾರಿಯನ್ನಾಗಿ ರೂಪಿಸಬಹುದು. ಅವರ ಮುಖಭಾವ, ನಡಿಗೆ, ವೇಷಭೂಷಣ, ಭಾಷಣದ ಶೈಲಿ–ಎಲ್ಲವೂ ಒಬ್ಬ ಸರ್ವಾಧಿಕಾರಿಯ ಗುಣಗಳನ್ನು ನೆನಪಿಸುತ್ತವೆ. ಮೊದಲು ಜನ ನೆಹರು ಅವರನ್ನು ಹೊಗಳುವುದನ್ನು ನಿಲ್ಲಿಸಲಿ,'' ಎಂದು ಅತ್ಯಂತ ಕಟುವಾಗಿ ಬರೆಯಲಾಗಿತ್ತು!

ಅದನ್ನು ಓದಿ ಇಡೀ ಕಾಂಗ್ರೆಸ್ ಪಾಳಯವೇ ಒಮ್ಮೆ ಬೆಚ್ಚಿಬಿದ್ದಿತ್ತು. ಯಾರೋ ಪಕ್ಷದ ಒಳಗಿನ ಬುದ್ಧಿವಂತ ಶತ್ರುವೇ 'ಚಾಣಕ್ಯ'ನ ಹೆಸರಿನಲ್ಲಿ ಇದನ್ನು ಬರೆದಿರಬೇಕು ಎಂದೇ ಎಲ್ಲರೂ ಭಾವಿಸಿದ್ದರು. ಆದರೆ, ಹಲವು ವರ್ಷಗಳ ಬಳಿಕ ನಾನೇ ಆ ರಹಸ್ಯವನ್ನು ಮುಗುಳ್ನಗುತ್ತಾ ಬಿಚ್ಚಿಟ್ಟೆ. ಅದನ್ನು ಬರೆದಿದ್ದು ಬೇರೆ ಯಾರೂ ಅಲ್ಲ, ಸ್ವತಃ ನಾನೇ! ಇತರರು ನಮ್ಮನ್ನು ವಿಮರ್ಶಿಸುವುದನ್ನು ನಿಲ್ಲಿಸಿದಾಗ ಅಥವಾ ಸುತ್ತಲೂ ಸ್ತುತಿಪಾಠಕರು ತುಂಬಿಕೊಂಡಾಗ, ಒಬ್ಬ ನಾಯಕನಾದವನಿಗೆ ಸ್ವಯಂ–ವಿಮರ್ಶೆ ಮತ್ತು ಹಾಸ್ಯಪ್ರಜ್ಞೆ ಅತ್ಯಂತ ಅನಿವಾರ್ಯ, ಅಲ್ಲವೇ? ಪತ್ರ ದೀರ್ಘವಾಯಿತು. ಉಳಿದಂತೆ ನಾವಿಬ್ಬರೂ ಭಾರತದ ಹೆಮ್ಮೆಯ ಸೇವಕರೇ.

- ನಿಮ್ಮ ಪ್ರೀತಿಯ
ಜವಾಹರಲಾಲ್ ನೆಹರು

Bennett & Coleman
THE TIMES OF INDIA
ಶುಕ್ರವಾರ,12 ಜೂನ್ 2026 | ಪುಟಗಳು: 15+4 | ಬೆಲೆ: ₹ 5.00
www.vijaykarnataka.com
c
ಸಂಪುಟ: 27 | ಸಂಚಿಕೆ: 162

VK

ವಿಜಯ ಕರ್ನಾಟಕ

ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಕಷ್ಟದ ಸಮಯದಲ್ಲಿ ಮಮತಾ ಬ್ಯಾನರ್ಜಿ ಕೈ ಬಿಡುವುದಿಲ್ಲ: ಸಂಸದ ಶತ್ರುಘ್ನ ಸಿನ್ಹಾ ಭರವಸೆ

ಶ್ರುತಿ ಸಿನಿ ಜನರೇಷನ್

ಲವಲVK ನೋಡಿ

ಬಾಹ್ಯಾಕಾಶ ಕ್ಷೇತ್ರದಲ್ಲಿ ಖಾಸಗಿ ಹೂಡಿಕೆ ಉತ್ತೇಜನ ಇಂದಿನ ಅಗತ್ಯ: ಸಚಿವ ಜಿತೇಂದ್ರ ಸಿಂಗ್

ಬೆಂಗಳೂರಿಗೆ ಬೇಕು ವಿಶೇಷ ಅನುದಾನ | ಎಲ್ಲ ರಾಜ್ಯಗಳಿಗೆ ಸಿಗಲಿ ಸಮಾನ ಗೌರವ

ಪ್ರಧಾನಿ ಸಮ್ಮುಖದಲ್ಲೇ ನೀತಿ ಆಯೋಗದ ಸಭೆಯಲ್ಲಿ ಸಿಎಂ ಡಿಕೆಶಿ ಪ್ರತಿಪಾದನೆ

ರಾಜ್ಯ ಜಾರಿ ಏಜೆನ್ಸಿಯಲ್ಲ

■ **ವಿಕ ಸುದ್ದಿಲೋಕ** ಬೆಂಗಳೂರು

ಕೇಂದ್ರ ಸರಕಾರವು ರಾಜ್ಯಗಳನ್ನು ಕೇವಲ ಯೋಜನೆಗಳನ್ನು ಜಾರಿಗೊಳಿಸುವ 'ಅನುಷ್ಠಾನ ಏಜೆನ್ಸಿಗಳು' ಎಂದು ಪರಿಗಣಿಸಬಾರದು. ದೇಶದ ಪ್ರತಿಯೊಂದು ಪ್ರಾಂತ್ಯದ ನೈಜ ಸ್ಥಿತಿಗೆ ತಕ್ಕಂತೆ ಪರಿಹಾರ ಹುಡುಕಲು ಕೇಂದ್ರವು ರಾಜ್ಯಗಳನ್ನು ಸಮಾನ ಪಾಲುದಾರರನ್ನಾಗಿ ನೋಡಬೇಕು ಎಂದು ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಆಗ್ರಹಿಸಿದ್ದಾರೆ.

ಹೊಸದಿಲ್ಲಿಯಲ್ಲಿ ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ನೀತಿ ಆಯೋಗದ ಆಡಳಿತ ಮಂಡಳಿಯ 11ನೇ ಸಭೆಯಲ್ಲಿ 'ವಿಕಸಿತ ಭಾರತ – 2047ಕ್ಕೆ ಸಮಗ್ರ ಮಾನವ ಅಭಿವೃದ್ಧಿ' ಎಂಬ ವಿಷಯದ ಕುರಿತು ಮಾತನಾಡಿದರು.

''ಪ್ರತಿಯೊಬ್ಬರಿಗೂ ಸಾಮಾಜಿಕ ಸಮಾನತೆ ಮತ್ತು ಸಮಾನ ಅವಕಾಶಗಳನ್ನು ಕಲ್ಪಿಸುವ ಮೂಲಕವೇ ದೇಶದ ಆರ್ಥಿಕ ಬೆಳವಣಿಗೆ ಸಾಧ್ಯ ಎಂಬುದನ್ನು ರಾಜ್ಯದ ಗ್ಯಾರಂಟಿ ಯೋಜನೆಗಳು ಸಾಬೀತುಪಡಿಸಿವೆ,'' ಎಂದು ಹೆಮ್ಮೆಯಿಂದ ಹೇಳಿದ ಶಿವಕುಮಾರ್, ಕೇಂದ್ರ ಸರಕಾರದ ಮುಂದೆ ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟರು.

''ಖಾಸಗಿ ಶಾಲೆಗಳಿಗೆ ಸಮಾನವಾಗಿ ತಂತ್ರಜ್ಞಾನ ಮತ್ತು ಗುಣಮಟ್ಟದ ಶಿಕ್ಷಣ ನೀಡಲು ಸರಕಾರಿ ಶಾಲಾ–ಕಾಲೇಜುಗಳಿಗೆ ಕೇಂದ್ರದಿಂದ ಒಂದು ಬಾರಿಯ ವಿಶೇಷ ಮೂಲಸೌಕರ್ಯ ಅನುದಾನ ನೀಡಬೇಕು,'' ಎಂದು ಸರಕಾರಿ ಶಾಲೆಗಳಿಗೆ ವಿಶೇಷ ಅನುದಾನ ಕೋರಿದರು.

''ಗ್ರಾಮೀಣ ಭಾಗದ ಆರೋಗ್ಯ ಮತ್ತು ಶಿಕ್ಷಣದ ಸುಧಾರಣೆಗೆ ಕಾರ್ಪೊರೇಟ್ ಸಂಸ್ಥೆಗಳ ಸಿಎಸ್‌ಆರ್ ನಿಧಿಯನ್ನು ಕಡ್ಡಾಯವಾಗಿ ಬಳಸಲು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಮೂಲಕ ನಿಯಮ ಜಾರಿಗೆ ತರಬೇಕು,'' ಎಂದು ಸಲಹೆ ನೀಡಿದರು.

''ಕೇವಲ ಬೆಂಗಳೂರಿಗೆ ಸೀಮಿತವಾಗದೆ, ರಾಜ್ಯದ ಇತರೆ ಪ್ರಾದೇಶಿಕ ನಗರಗಳಲ್ಲೂ ಆರ್ಥಿಕ ಪ್ರಗತಿ ಕೇಂದ್ರಗಳನ್ನು ಬಲಪಡಿಸಲು ಕೇಂದ್ರ ನೆರವಾಗಬೇಕು. ದೇಶದ ಬೆಳವಣಿಗೆಯ ಕೇಂದ್ರಬಿಂದುವಾಗಿರುವ ಬೆಂಗಳೂರಿಗೆ ಬೇರೆ ಬೇರೆ ರಾಜ್ಯಗಳಿಂದ ವಲಸೆ ಬರುವವರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದೆ. ಹೀಗಾಗಿ ಇಲ್ಲಿನ ಮೂಲಸೌಕರ್ಯಗಳ ಮೇಲಿನ ಒತ್ತಡ ನಿರ್ವಹಿಸಲು ಕೇಂದ್ರ ಸರಕಾರ ವಿಶೇಷ ಹೆಚ್ಚುವರಿ ಅನುದಾನ ನೀಡಬೇಕು,'' ಎಂದು ಮನವಿ ಮಾಡಿಕೊಂಡರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗುರುವಾರ ಹೊಸದಿಲ್ಲಿಯಲ್ಲಿ ಪ್ರಧಾನಿ ಮೋದಿ ಅವರಿಗೆ ಬಸವ ಸ್ಮರಣಿಕೆಯನ್ನು ನೀಡಿ ಗೌರವಿಸಿದರು.

> ಅಭಿವೃದ್ಧಿಯು ಜನರ ಜೀವನ ಗುಣಮಟ್ಟ ಸುಧಾರಿಸಬೇಕು ಎಂಬುದು ಕರ್ನಾಟಕ ಆಡಳಿತದ ಆದರ್ಶವಾಗಿದ್ದು, ನಮ್ಮ ಸರಕಾರದ 'ಗ್ಯಾರಂಟಿ ಮಾದರಿ'ಯು ಮಾನವ ಬಂಡವಾಳದ ಗುಣಮಟ್ಟವನ್ನು ಹೆಚ್ಚಿಸಿದೆ.
>
> **- ಡಿ.ಕೆ.ಶಿವಕುಮಾರ್** ಮುಖ್ಯಮಂತ್ರಿ

ಸಿಎಂ ವಿಶ್ವಾಸದ ಮಾತು

- ವಿಕಸಿತ ಭಾರತಕ್ಕೆ ಕರ್ನಾಟಕವೇ ಎಂಜಿನ್
- ದೇಶದ ಜಿಡಿಪಿಗೆ ಶೇ. 9.19 ಕೊಡುಗೆ ನೀಡುತ್ತಿರುವ ರಾಜ್ಯ ನನ್ನದು
- ಕ್ಯಾಲಿಫೋರ್ನಿಯಾಗಿಂತ ಹೆಚ್ಚು ಐಟಿ ವೃತ್ತಿಪರರು ನಮ್ಮಲ್ಲಿದ್ದಾರೆ
- 2032ರ ವೇಳೆಗೆ ಒಂದು ಟ್ರಿಲಿಯನ್ ಡಾಲರ್ ಆರ್ಥಿಕತೆಯ ಗುರಿ ನಮ್ಮದು

ರಾಜ್ಯದ ಬೇಡಿಕೆಗಳು

1 ಸರಕಾರಿ ಶಾಲೆಗಳಿಗೆ ವಿಶೇಷ ಅನುದಾನ
2 ಕಡ್ಡಾಯ ಸಿಎಸ್‌ಆರ್ ನಿಯಮ
3 ಬೆಂಗಳೂರಿನ ಆಚೆಗೂ ಉದ್ಯೋಗ ಸೃಷ್ಟಿ
4 ಬೆಂಗಳೂರಿಗೆ ಹೆಚ್ಚುವರಿ ಮೂಲಸೌಕರ್ಯ ನಿಧಿ

ಬುರುಡೆ ಸಂಚಿನ ಕೇಸಲ್ಲಿ ನಟ ಪ್ರಕಾಶ್ ರಾಜ್ ಹೆಸರು ಪ್ರಸ್ತಾಪ

ಬೆಂಗಳೂರು: ಧರ್ಮಸ್ಥಳ ಗ್ರಾಮದ ವಿವಾದಾತ್ಮಕ 'ತಲೆಬುರುಡೆ ಪ್ರಕರಣ'ದ ತನಿಖಾ ವರದಿಯನ್ನು ಬಹಿರಂಗಪಡಿಸುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿ ಸಂಬಂಧ ಹೈಕೋರ್ಟ್ ಗುರುವಾರ ರಾಜ್ಯ ಸರಕಾರ ಮತ್ತು ಎಸ್‌ಐಟಿಗೆ ನೋಟಿಸ್ ಜಾರಿಗೊಳಿಸಿದೆ.

ಇದೇ ವೇಳೆ, ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ನಟ ಪ್ರಕಾಶ್ ರಾಜ್, ಗಿರೀಶ್ ಮಟ್ಟಣ್ಣವರ್‌ಸೇರಿದಂತೆ ಹಲವು ಜನ ಸೇರಿಕೊಂಡು ಸುಮಾರು 200 ಕೋಟಿ ರೂಪಾಯಿ ವೆಚ್ಚದ ಬೃಹತ್ ಷಡ್ಯಂತ್ರ ರೂಪಿಸಿದ್ದರು ಎಂಬ ಆರೋಪ ಅರ್ಜಿಯಲ್ಲಿ ಕೇಳಿಬಂದಿದೆ.

ಪ್ರಕರಣದ ತನಿಖೆಯ ಪ್ರಸ್ತುತ ಸ್ಥಿತಿಗತಿ ಬಗ್ಗೆ ಮಾಹಿತಿ ನೀಡಲು ಎಸ್‌ಐಟಿಗೆ ಸೂಚಿಸಬೇಕು ಎಂದು ಕೋರಿ ಚಿನ್ನಯ್ಯ ಎಂಬುವವರು ಸಲ್ಲಿಸಿದ್ದ ಅರ್ಜಿ, ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ಪೀಠದ ಮುಂದೆ ವಿಚಾರಣೆಗೆ ಬಂದಿತು. ಉಭಯ ಪಕ್ಷಗಳ ವಾದ ಆಲಿಸಿದ ನ್ಯಾಯಾಲಯ, ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿತಲ್ಲದೆ, ತನಿಖೆಯ ವಿವರ ಒದಗಿಸುವಂತೆ ಸರಕಾರಕ್ಕೆ ನಿರ್ದೇಶನ ನೀಡಿ ವಿಚಾರಣೆಯನ್ನು ಜೂನ್ 29ಕ್ಕೆ ಮುಂದೂಡಿತು.

ಸಂಸತ್ತಿನ ಮೇಲ್ಮನೆಗೆ ಖರ್ಗೆ ಟೀಮ್

ಕಾಂಗ್ರೆಸ್‌ನ ಖೇರಾ, ಮನ್ಸೂರ್, ಬಿಜೆಪಿಯ ಪ್ರೊ.ನಾಗರಾಜ್ ಅವಿರೋಧ ಆಯ್ಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯಸಭೆಯ ದ್ವೈವಾರ್ಷಿಕ ಚುನಾವಣೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಕಾಂಗ್ರೆಸ್‌ನ ಪವನ್ ಖೇರಾ, ಮನ್ಸೂರ್ ಅಲಿಖಾನ್ ಹಾಗೂ ಬಿಜೆಪಿಯ ಪ್ರೊ.ಎಂ.ನಾಗರಾಜ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು, ಮಲ್ಲಿಕಾರ್ಜುನ ಖರ್ಗೆ, ಬಿಜೆಪಿಯ ಈರಣ್ಣ ಕಡಾಡಿ, ನಾರಾಯಣ ಕೊರಗಪ್ಪ ರಾಜ್ಯಸಭಾ ಅವಧಿ ಇದೇ 25ಕ್ಕೆ ಕೊನೆಗೊಳ್ಳಲಿರುವ ಹಿನ್ನೆಲೆಯಲ್ಲಿ ನಾಲ್ಕು ಸ್ಥಾನಗಳಿಗೆ ಚುನಾವಣೆ ನಡೆದಿತ್ತು.

ಮಲ್ಲಿಕಾರ್ಜುನ ಖರ್ಗೆ ಅವರು ಪುನರಾಯ್ಕೆ ಬಯಸಿ ನಾಮಪತ್ರ ಸಲ್ಲಿಸಿದ್ದರು. ಜತೆಗೆ ಆಯಾ ಪಕ್ಷಗಳ ತೀರ್ಮಾನದಂತೆ ಉಳಿದ ಮೂವರು ಉಮೇದುವಾರಿಕೆ ಸಲ್ಲಿಸಿದ್ದರು. ಎಲ್ಲ ನಾಮಪತ್ರಗಳು ಕ್ರಮವಾಗಿದ್ದು, ಗುರುವಾರ ನಾಮಪತ್ರ ಹಿಂಪಡೆಯಲು ಕಡೆಯ ದಿನವಾಗಿತ್ತು. ನಾಮಪತ್ರ ಹಿಂಪಡೆಯುವ ಅವಧಿ ಮುಕ್ತಾಯವಾಗುತ್ತಿದ್ದಂತೆ ಚುನಾವಣಾಧಿಕಾರಿಯಾದ ಎಂ.ಕೆ.ವಿಶಾಲಾಕ್ಷಿ ನಾಲ್ಕೂ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿರುವುದಾಗಿ ಘೋಷಿಸಿದರು.

ಪವನ್ ಖೇರಾ, ಮನ್ಸೂರ್ ಅಲಿಖಾನ್, ಪ್ರೊ.ಎಂ.ನಾಗರಾಜ್ ಚುನಾವಣಾಧಿಕಾರಿಗಳಿಂದ ಪ್ರಮಾಣ ಪತ್ರ ಸ್ವೀಕರಿಸಿದರು. ಖರ್ಗೆ ಅವರು ಶುಕ್ರವಾರ ಪ್ರಮಾಣ ಪತ್ರವನ್ನು ಸ್ವೀಕರಿಸಲಿದ್ದಾರೆ.

ಪ್ರಮಾಣ ಪತ್ರ ಸ್ವೀಕರಿಸಿ ಪ್ರತಿಕ್ರಿಯಿಸಿದ ಪ್ರೊ.ಎಂ.ನಾಗರಾಜ್, ''ನನಗೆ ಅವಕಾಶ ನೀಡಿದ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ವರಿಷ್ಠರಿಗೆ ಧನ್ಯವಾದ ಸಲ್ಲಿಸುತ್ತೇನೆ. ಹಾಗೆಯೇ ಪಕ್ಷದ ಶಾಸಕರಿಗೂ ಧನ್ಯವಾದ ಅರ್ಪಿಸುತ್ತೇನೆ. ಈಗ ದೊರಕಿರುವ ಹೊಸ ಅವಕಾಶವನ್ನು ಬಳಸಿಕೊಂಡು ಎಲ್ಲರ ನಿರೀಕ್ಷೆಗಳಿಗೆ ತಕ್ಕಂತೆ ಕೆಲಸ ಮಾಡುತ್ತೇನೆ,'' ಎಂದು ಹೇಳಿದರು.

ಕನ್ನಡ ಕಲಿತು ಮಾತನಾಡುತ್ತೇನೆ: ಕಾಂಗ್ರೆಸ್‌ನ ಪವನ್ ಖೇರಾ ಪ್ರತಿಕ್ರಿಯಿಸಿ, ''ರಾಜ್ಯಸಭೆಗೆ ಕರ್ನಾಟಕದಿಂದ ನನ್ನನ್ನು ಆಯ್ಕೆ ಮಾಡಿದ್ದಕ್ಕಾಗಿ ಸಂಬಂಧಪಟ್ಟ ಎಲ್ಲರಿಗೂ ಧನ್ಯವಾದ ಸಲ್ಲಿಸುತ್ತೇನೆ. ಮುಂದಿನ ದಿನಗಳಲ್ಲಿ ಕನ್ನಡ ಭಾಷೆ ಕಲಿತು ಮಾತನಾಡುತ್ತೇನೆ,'' ಎಂದು ತಿಳಿಸಿದರು.

ಮನ್ಸೂರ್ ಅಲಿಖಾನ್ ಮಾತನಾಡಿ, ''ಅವಕಾಶ ನೀಡಿದ್ದಕ್ಕಾಗಿ ಪಕ್ಷದ ಹೈಕಮಾಂಡ್, ಕೇಂದ್ರ ಹಾಗೂ ರಾಜ್ಯ ನಾಯಕರಿಗೆ ಧನ್ಯವಾದ ಸಲ್ಲಿಸುತ್ತೇನೆ. ರಾಜ್ಯಸಭೆಯಲ್ಲಿ ಕರ್ನಾಟಕ ಹಾಗೂ ದೇಶದ ಒಳಿತಾಗಿ ಕಾರ್ಯ ನಿರ್ವಹಿಸುತ್ತೇನೆ,'' ಎಂದರು.

ನಿಮ್ಮ ತಲೆ ಮೇಲೆ ನಿತ್ಯ ಮೂಡಲಿದೆ ಜ್ಞಾನದ ಕ್ಯೂಆರ್ **ಕೋಡು** ಸ್ಕ್ಯಾನ್ ಮಾಡಿ, ಜಾಣರಾಗಿ

ನಿರೀಕ್ಷಿಸಿ... ವಿಕ curiosity

ವೈದ್ಯ ಆಕಾಂಕ್ಷಿ ವಿದ್ಯಾರ್ಥಿಗಳಿಗೆ ಅನ್ಯಾಯವಾಗದಂತೆ ಸಿಇಟಿ ಕೌನ್ಸೆಲಿಂಗ್ »04

ನೀತಿ ಆಯೋಗದ ಸಭೆಯಲ್ಲಿ ರಾಜ್ಯದ ಶಕ್ತಿ ಪ್ರದರ್ಶನ | ಅಭಿವೃದ್ಧಿ ಎಂದರೆ ಜನರ ಜೀವನಮಟ್ಟ ಸುಧಾರಣೆ

ದೇಶದ ಜಿಡಿಪಿಗೆ ರಾಜ್ಯವೇ ಚಾಲಕ ಶಕ್ತಿ!

ಗ್ಯಾರಂಟಿ ಮಾದರಿ ಯಶೋಗಾಥೆ ಬಿಚ್ಚಿಟ್ಟ ಡಿ.ಕೆ.ಶಿವಕುಮಾರ್

■ **ವಿಕ ಸುದ್ದಿಲೋಕ** ಬೆಂಗಳೂರು

ಅಭಿವೃದ್ಧಿಯು ಜನರ ಜೀವನ ಗುಣಮಟ್ಟ ಸುಧಾರಿಸಬೇಕು ಎಂಬುದು ಕರ್ನಾಟಕ ಆಡಳಿತದ ಆದರ್ಶವಾಗಿದ್ದು, ನಮ್ಮ ಸರಕಾರದ 'ಗ್ಯಾರಂಟಿ ಮಾದರಿ'ಯು ಮಾನವ ಬಂಡವಾಳದ ಗುಣಮಟ್ಟವನ್ನು ಹೆಚ್ಚಿಸಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಹೊಸದಿಲ್ಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ನೀತಿ ಆಯೋಗದ ಆಡಳಿತ ಮಂಡಳಿಯ 11ನೇ ಸಭೆಯಲ್ಲಿ 'ವಿಕಸಿತ ಭಾರತ -2047ಕ್ಕೆ ಸಮಗ್ರ ಮಾನವ ಅಭಿವೃದ್ಧಿ' ಕುರಿತು ಮಾತನಾಡಿದ ಸಿಎಂ, ''ಪ್ರತಿಯೊಬ್ಬರಿಗೂ ಸಾಮಾಜಿಕ ಸಮಾನತೆ ಮತ್ತು ಅವಕಾಶಗಳನ್ನು ಕಲ್ಪಿಸುವ ಮೂಲಕ ಆರ್ಥಿಕ ಬೆಳವಣಿಗೆ ಸಾಧಿಸಬಹುದಾಗಿದೆ. ರಾಜ್ಯದ 'ಗ್ಯಾರಂಟಿ ಮಾದರಿ'ಯು ಈ ಆಶಯವನ್ನು ಸಾಕಾರಗೊಳಿಸುತ್ತಿದೆ,'' ಎಂದು ಪ್ರತಿಪಾದಿಸಿದರು.

''ದೇಶದ ಜನಸಂಖ್ಯೆಯಲ್ಲಿ ಶೇ.5ರಷ್ಟಿರುವ ರಾಜ್ಯವು ದೇಶದ ಜಿಡಿಪಿಗೆ ಶೇ.9.19 ಕೊಡುಗೆ ನೀಡುತ್ತಿದೆ. ಸೇವಾ ರಫ್ತು ವಲಯದಲ್ಲಿ ದೇಶದ ಶೇ.40 ಪಾಲು ರಾಜ್ಯದ್ದಾಗಿದ್ದು ಕ್ಯಾಲಿಫೋರ್ನಿಯಾಗಿಂತ ಹೆಚ್ಚು ಐಟಿ ವೃತ್ತಿಪರರು ರಾಜ್ಯದಲ್ಲಿದ್ದಾರೆ. ಶಿಕ್ಷಣದ ಭದ್ರ ಬುನಾದಿಯಿಂದಾಗಿ ರಾಜ್ಯವು ಭಾರತದ ಬೆಳವಣಿಗೆಯ ಪ್ರಬಲ ಚಾಲಕ ಶಕ್ತಿಯಾಗಿದೆ. ಸಂಶೋಧನೆ, ನಾವೀನ್ಯತೆ ಮತ್ತು ತಂತ್ರಜ್ಞಾನ ಉದ್ದಿಮೆ ವಲಯಗಳಲ್ಲಿ ಸಾಧನೆಯಿಂದಾಗಿ ಕರ್ನಾಟವು ಮಾನವ ಬಂಡವಾಳದ ಶಕ್ತಿ ಕೇಂದ್ರ ಹಾಗೂ ಆರ್ಥಿಕ ಬೆಳವಣಿಗೆಯ ಕೇಂದ್ರಬಿಂದುವಾಗಿ ಮುಂದುವರಿದಿದೆ. ಈ ಮೂಲಕ ವಿಕಸಿತ ಭಾರತದ ಆಶಯ ಸಾಕಾರಗೊಳಿಸುವಲ್ಲಿ ನಮ್ಮ ರಾಜ್ಯ ಮಹತ್ವದ ಕೊಡುಗೆ ನೀಡಲಿದೆ,'' ಎಂದು ವಿವರಿಸಿದರು.

ಹೊಸದಿಲ್ಲಿಯ ಕರ್ನಾಟಕ ಭವನದಲ್ಲಿ ಗುರುವಾರ ಸಿಎಂ ಡಿ.ಕೆ. ಶಿವಕುಮಾರ್ ರಾಜ್ಯದ ಹಿರಿಯ ಅಧಿಕಾರಿಗಳ ಸಭೆ ನಡೆಸಿದರು.

ಜಲಶಕ್ತಿ ಸಚಿವರ ಭೇಟಿ

ಸಿಎಂ ಡಿ.ಕೆ.ಶಿವಕುಮಾರ್ ಅವರ ದಿಲ್ಲಿ ಪ್ರವಾಸದ ಅವಧಿ ಮತ್ತೊಂದು ದಿನಕ್ಕೆ ವಿಸ್ತರಣೆಯಾಗಿದ್ದು, ರಾಜ್ಯದ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಅವರನ್ನು ಶುಕ್ರವಾರ ಭೇಟಿಯಾಗಿ ಮಾತುಕತೆ ನಡೆಸಲಿದ್ದಾರೆ. ಈ ಸಭೆಗೆ ಆಗಮಿಸುವಂತೆ ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಅವರಿಗೂ ಸಿಎಂ ಸೂಚನೆ ಕೊಟ್ಟಿದ್ದಾರೆ. ಕೃಷ್ಣಾ ನ್ಯಾಯಾಧಿಕರಣ-2ರ ಅಂತಿಮ ತೀರ್ಪಿನ ಅಧಿಸೂಚನೆಗೆ ಒತ್ತಡ ತರುವುದು, ಮೇಕೆದಾಟು ಕುಡಿಯುವ ನೀರಿನ ಯೋಜನೆ ಸೇರಿದಂತೆ ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ವಿಸ್ತೃತ ಮಾಹಿತಿಯೊಂದಿಗೆ ಹಾಜರಾಗುವಂತೆ ಜಲಸಂಪನ್ಮೂಲ ಇಲಾಖೆ ಅಧಿಕಾರಿಗಳಿಗೆ ಸಿಎಂ ಕಾರ್ಯಾಲಯದಿಂದ ಸೂಚನೆ ಕೊಡಲಾಗಿದೆ.

ಯುವ ಶಕ್ತಿಗೆ ಬಲ

ತಾವು ಮುಖ್ಯಮಂತ್ರಿಯಾದ ಬಳಿಕ ಘೋಷಣೆ ಮಾಡಿರುವ 'ಭಾರತ್ ಜೋಡೋ ಯುವ ಸಂಘ'ಗಳ ರಚನೆ ಕುರಿತಂತೆ ಸಭೆಯಲ್ಲಿ ಪ್ರಸ್ತಾಪಿಸಿದ ಡಿ.ಕೆ.ಶಿವಕುಮಾರ್, ''ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ 10 ಸಾವಿರ ಯುವ ಸಂಘಗಳನ್ನು ರಚಿಸಿ ಕಾರ್ಪಸ್ ನಿಧಿ ಒದಗಿಸುವ ಮೂಲಕ ಸಮಗ್ರ ಯುವ ಸಬಲೀಕರಣಕ್ಕೆ ಒತ್ತು ನೀಡಲಾಗುತ್ತಿದೆ,'' ಎಂದು ತಿಳಿಸಿದರು.

''ಪರಿಶಿಷ್ಟರಿಗೆ ಒಟ್ಟಾರೆ ಯೋಜನಾ ವೆಚ್ಚದ ಶೇ.24 ರಷ್ಟು ಅನುದಾನ ಬಳಕೆಯಿಂದಾಗಿ ರಾಜ್ಯದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕಗಳಲ್ಲಿನ ಅಂತರ ವರ್ಷದಿಂದ ವರ್ಷಕ್ಕೆ ತಗ್ಗುತ್ತಿದೆ. 'ಕರ್ನಾಟಕ ಪಬ್ಲಿಕ್ ಶಾಲೆ' ಮಾದರಿಯು ಬಡ ಕುಟುಂಬಗಳ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಖಾತರಿಗೊಳಿಸಿದೆ,'' ಎಂದು ಹೇಳಿದರು.

ಟ್ರಿಲಿಯನ್ ಆರ್ಥಿಕತೆ ಗುರಿ

''ನಮ್ಮ 'ಕ್ಯಾಂಪಸ್ -ಟು -ಕರಿಯರ್' ಉಪಕ್ರಮವು ಶಿಕ್ಷಣವನ್ನು ಉದ್ಯಮದ ಅಗತ್ಯಗಳಿಗೆ ಜೋಡಿಸುತ್ತಿದ್ದು, ಭವಿಷ್ಯಕ್ಕೆ ಸನ್ನದ್ಧ ಕಾರ್ಯಪಡೆಯನ್ನು ಸಜ್ಜುಗೊಳಿಸುತ್ತಿದೆ. ರಾಜ್ಯವನ್ನು 2032ರ ವೇಳೆಗೆ ಒಂದು ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಿ ರೂಪಿಸುವ ಗುರಿಯಂತೆ ಜಾಗತಿಕ ಸ್ಪರ್ಧಾತ್ಮಕ ಕಾರ್ಯಪಡೆ ಅಣಿಗೊಳಿಸಲು 3 ಮಿಲಿಯನ್ ಯುವಕರಿಗೆ ಕೌಶಲ ನೀಡುವ ಗುರಿಯನ್ನು ಹೊಂದಲಾಗಿದೆ. 'ಕಲಿಕೆ ಜತೆಗೆ ಕೌಶಲ' ಕಾರ್ಯಕ್ರಮವು 8 ವಿವಿಗಳ 88 ಸಾವಿರ ವಿದ್ಯಾರ್ಥಿಗಳನ್ನು ಒಳಗೊಂಡಿದೆ,'' ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ನೀರಾವರಿ+18 ಬೇಡಿಕೆ ಸಲ್ಲಿಕೆ

ಹೊಸದಿಲ್ಲಿಯಲ್ಲಿ ಪ್ರಧಾನಿ ಮೋದಿ ಭೇಟಿಯಾದ ಸಿಎಂ ಡಿಕೆಶಿ

■ **ವಿಕ ಸುದ್ದಿಲೋಕ** ಬೆಂಗಳೂರು

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೊಸದಿಲ್ಲಿಯಲ್ಲಿ ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ರಾಜ್ಯದ ನಾನಾ ಅಭಿವೃದ್ಧಿ ಯೋಜನೆಗಳಿಗೆ ಅಗತ್ಯ ನೆರವು ಮತ್ತು ಸಹಕಾರಕ್ಕಾಗಿ ಕೋರಿಕೆ ಸಲ್ಲಿಸಿದರು.

ನೀತಿ ಆಯೋಗದ ಸಭೆಯಲ್ಲಿ ಭಾಗವಹಿಸಿದ ಬಳಿಕ ರಾಷ್ಟ್ರಪತಿ ಭವನದಲ್ಲಿ ಪ್ರಧಾನಿ ಅವರನ್ನು ಡಿ.ಕೆ.ಶಿವಕುಮಾರ್ ಭೇಟಿಯಾದರು. ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಡಿ.ಕೆ.ಶಿವಕುಮಾರ್ ಅವರಿಂದ ಪ್ರಧಾನಿಯವರ ಮೊದಲ ಭೇಟಿ ಇದಾಗಿತ್ತು. ನರೇಂದ್ರ ಮೋದಿ ಅವರಿಗೆ ಬಸವೇಶ್ವರರ ಪುತ್ಥಳಿಯನ್ನು ನೀಡಿ ಸನ್ಮಾನಿಸಿದರು.

ಮೇಕೆದಾಟು ಯೋಜನೆ ಸೇರಿದಂತೆ ಕೇಂದ್ರದ ಮುಂದೆ ಬಾಕಿಯಿರುವ ಪ್ರಸ್ತಾವನೆಗಳಿಗೆ ಶೀಘ್ರ ಅನುಮೋದನೆ ನೀಡಬೇಕು ಎಂಬುದು ಸೇರಿದಂತೆ ರಾಜ್ಯದ ಒಟ್ಟು 18 ಪ್ರಮುಖ ಬೇಡಿಕೆಗಳನ್ನು ಒಳಗೊಂಡ ಮನವಿ ಪತ್ರವನ್ನು ಡಿ.ಕೆ. ಶಿವಕುಮಾರ್ ಅವರು ಪ್ರಧಾನಿಯವರಿಗೆ ಸಲ್ಲಿಸಿದರು.

■ **ಮೇಕೆದಾಟು ಯೋಜನೆಗೆ ಅನುಮತಿ**

ಮೇಕೆದಾಟು ಯೋಜನೆಗೆ ತಮಿಳುನಾಡಿನ ತಕರಾರನ್ನು ಸುಪ್ರೀಂಕೋರ್ಟ್ ವಜಾಗೊಳಿಸಿದ್ದು, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯುಎಂಎ) ಮತ್ತು ಕೇಂದ್ರ ಜಲ ಆಯೋಗ ಈ ಯೋಜನೆಗೆ ಅನುಮತಿ ವಿಚಾರದಲ್ಲಿ ನಿರ್ಣಯ ಮಾಡಲು ಸೂಚಿಸಿದೆ. ಅಂತೆಯೇ, ಯೋಜನೆಗೆ ಕೇಂದ್ರದ ಶೀಘ್ರ ಅನುಮೋದನೆ ಕೊಡಿಸಬೇಕು.

■ **ಗೆಜೆಟ್ ಹೊರಡಿಸಿ**

ಕೃಷ್ಣಾ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ನ್ಯಾಯಾಧಿಕರಣದ ಅಂತಿಮ ತೀರ್ಪಿನ ಗೆಜೆಟ್ ಅಧಿಸೂಚನೆ ಹೊರಡಿಸಬೇಕು. ಕೃಷ್ಣಾ ಮೇಲ್ದಂಡೆ ಯೋಜನೆ -3ಕ್ಕೆ ರಾಜ್ಯ ಸರಕಾರ ದೊಡ್ಡ ಪ್ರಮಾಣದಲ್ಲಿ ಹಣ ಹೂಡಿಕೆ ಮಾಡಿದ್ದು, ಈ ಯೋಜನೆಯನ್ನು ಪೂರ್ಣಗೊಳಿಸಿ ನಮ್ಮ ಪಾಲಿನ ನೀರು ಬಳಸಿಕೊಳ್ಳಲು ನೆರವಾಗಬೇಕು.

■ **ಭದ್ರಾ ಮೇಲ್ದಂಡೆಗೆ ನೆರವು**

ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರದ 2023-24ನೇ ಸಾಲಿನ ಬಜೆಟ್‌ನಲ್ಲಿ 5,300 ಕೋಟಿ ರೂ. ನೆರವನ್ನು ಪ್ರಕಟಿಸಲಾಗಿತ್ತು. ಇದಾಗಿ ಮೂರು ವರ್ಷ ಕಳೆದರೂ ಹಣಕಾಸು ನೆರವು ಬಿಡುಗಡೆಯಾಗಿಲ್ಲ. ಮಧ್ಯ ಕರ್ನಾಟಕದ ಬರಪೀಡಿತ ಭಾಗದ ಲಕ್ಷಾಂತರ ಜನರಿಗೆ ಸಹಾಯವಾಗುವ ಈ ಯೋಜನೆ ಪೂರ್ಣಗೊಳಿಸಲು ಪಿಎಂಕೆಎಸ್‌ವೈ -ಎಐಬಿಪಿ ಸ್ಕೀಂನಡಿ ಶೀಘ್ರ ಹಣಕಾಸು ನೆರವು ಒದಗಿಸಬೇಕು.

■ **ಮಹದಾಯಿ ಸಾಕಾರಕ್ಕೆ ನೆರವಾಗಿ**

ಹುಬ್ಬಳ್ಳಿ-ಧಾರವಾಡ ಭಾಗಕ್ಕೆ ಶಾಶ್ವತ ಕುಡಿಯುವ ನೀರು ಪೂರೈಕೆ ಯೋಜನೆಯಾದ ಕಳಸಾ-ಬಂಡೂರಿ ನಾಲಾ ತಿರುವು ಯೋಜನೆಗೆ (ಮಹದಾಯಿ) ಕೇಂದ್ರ ಜಲಶಕ್ತಿ ಸಚಿವಾಲಯ 2022ರ ಡಿಸೆಂಬರ್‌ನಲ್ಲಿಯೇ ಅನುಮತಿ ನೀಡಿದೆ. ಬಾಕಿ ಇರುವ ಅರಣ್ಯ ಮತ್ತು ವನ್ಯಜೀವಿ ಸಚಿವಾಲಯದ ಅನುಮೋದನೆ ಶೀಘ್ರ ಕೊಡಿಸಬೇಕು.

■ **ಎಐಬಿಪಿ ಸ್ಕೀಂನಡಿ ನೆರವು**

ಕೇಂದ್ರ ನೆರವಿನ ಪಿಎಂಕೆಎಸ್‌ವೈ-ಎಐಬಿಪಿ ಮತ್ತಿತರ ಸ್ಕೀಂಗಳಡಿ ಸೊಂತಿ ಏತ ನೀರಾವರಿ ಯೋಜನೆ, ಇಂಡಿ ಶಾಖಾ ನಾಲೆ ಆಧುನೀಕರಣ ಸೇರಿ ಒಟ್ಟು 11,122 ಕೋಟಿ ರೂ. ಅಂದಾಜು ಮೊತ್ತದ ಪ್ರಸ್ತಾವನೆಗಳನ್ನು ಕೇಂದ್ರ ಜಲಶಕ್ತಿ ಸಚಿವಾಲಯಕ್ಕೆ ಕಳೆದ ವರ್ಷವೇ ಸಲ್ಲಿಸಲಾಗಿದೆ. ಈ ಪ್ರಸ್ತಾವನೆಗಳಿಗೆ ಶೀಘ್ರ ಅನುಮೋದನೆ ನೀಡಬೇಕು.

■ **ನ್ಯಾಯಯುತ ಪಾಲು ಕೊಡಿಸಿ**

ನದಿಗಳ ಜೋಡಣೆ ಕಾರ್ಯಕ್ರಮದಡಿ ಗೋದಾವರಿ -ಕಾವೇರಿ ಮತ್ತು ಬೇಡ್ತಿ -ವರದಾ ಯೋಜನೆಗಳಲ್ಲಿ ಕರ್ನಾಟಕಕ್ಕೆ ಕನಿಷ್ಠ 40 ರಿಂದ 45 ಟಿಎಂಸಿ ನ್ಯಾಯಯುತ ಪಾಲು ಸಿಗಬೇಕು. ರಾಜ್ಯದ ಬರಪೀಡಿತ ಪ್ರದೇಶಗಳಿಗೆ ನೀರುಣಿಸಲು ಸಾಧ್ಯವಾಗುವಂತೆ ರಾಜ್ಯದ ಈ ಬೇಡಿಕೆಯನ್ನು ಪರಿಗಣಿಸಬೇಕು.

■ **ಪಂಚಾಯ್ತಿಗಳಿಗೆ ಅನುದಾನ**

ಗ್ರಾಪಂಗಳಿಗೆ 15ನೇ ಹಣಕಾಸು ಆಯೋಗದ ಅನುದಾನವನ್ನು ಶೀಘ್ರ ಬಿಡುಗಡೆ ಮಾಡಬೇಕು. ರಾಜ್ಯವು ಎಲ್ಲ ಷರತ್ತುಗಳನ್ನು ಪೂರೈಸಿದ ನಂತರವೂ 2025 -26ನೇ ಸಾಲಿನ ಒಟ್ಟು 2,860 ಕೋಟಿ ರೂ. ಅನುದಾನ ಬಂದಿಲ್ಲ.

- ರಾಜ್ಯದಲ್ಲಿ ಬಾಕಿ ಇರುವ ರಾಷ್ಟ್ರೀಯ ಹೆದ್ದಾರಿಗಳ ಮೇಲ್ದರ್ಜೆ ಯೋಜನೆಗಳಿಗೆ ಕೂಡಲೇ ಮಂಜೂರಾತಿ ನೀಡಬೇಕು.
- ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಕೇಂದ್ರ ಅರಣ್ಯ, ಪರಿಸರ ಮತ್ತು ವನ್ಯಜೀವಿ ಸಚಿವಾಲಯದ ಅನುಮೋದನೆ ಕೊಡಬೇಕು.
- ಕಲ್ಯಾಣ ಕರ್ನಾಟಕಕ್ಕೆ ಸಂವಿಧಾನದ 371(ಜೆ) ಅಡಿಯಲ್ಲಿ ಹೆಚ್ಚಿನ ಹಣಕಾಸು ನೆರವು ನೀಡಬೇಕು.
- ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆಗೆ ಶೀಘ್ರ ಒಪ್ಪಿಗೆ ನೀಡಬೇಕು.

ಮೋದಿ ಪ್ರಧಾನಿ ದಾಖಲೆ ಅರ್ಧಸತ್ಯ

■ **ವಿಕ ಸುದ್ದಿಲೋಕ** ಬೆಂಗಳೂರು



ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್ ಟಾಂಗ್

ಪಂಡಿತ್ ಜವಾಹರಲಾಲ್ ನೆಹರು ಅವರಿಗಿಂತ ಹೆಚ್ಚಿನ ಅವಧಿ ಪ್ರಧಾನಿ ಹುದ್ದೆಯಲ್ಲಿ ನರೇಂದ್ರ ಮೋದಿ ಆಡಳಿತ ನಡೆಸಿದ್ದಾರೆ ಎಂಬ ಅರ್ಧಸತ್ಯ ಹೇಳುವ ಮೂಲಕ ಬಿಜೆಪಿ ಇತಿಹಾಸವನ್ನೇ ತಿರುಚುವ ಹತಾಶೆಯ ಪ್ರಯತ್ನ ನಡೆಸಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಆಕ್ಷೇಪಿಸಿದ್ದಾರೆ.

''ಮೋದಿ ಅವರಿಗೆ ದೇಶದ ಪ್ರಥಮ ಪ್ರಧಾನಿ ನೆಹರು ಏರಿದ ಸ್ಥಾನವನ್ನು ಏರಲೂ ಸಾಧ್ಯವಿಲ್ಲ, ನೆಹರು ಅವರು ಇಳಿದ ಜ್ಞಾನದ ಆಳಕ್ಕೆ ಇಳಿಯಲೂ ಸಾಧ್ಯವಿಲ್ಲ, ಬಿಜೆಪಿಯವರು ಇತಿಹಾಸವನ್ನು ತಿರುಚಬಹುದೇ ಹೊರತು ಬದಲಾಯಿಸಲು ಸಾಧ್ಯವಿಲ್ಲ'' ಎಂದು ಹೇಳಿದ್ದಾರೆ.

ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ''ನೆಹರು ಅವರು ಈ ದೇಶದ ಪ್ರಧಾನಿಯಾಗಿ ಆಡಳಿತ ನಡೆಸಿದ ಕಾಲಾವಧಿ 16 ವರ್ಷ 286 ದಿನಗಳು. ಮೋದಿ ಆಡಳಿತಾವಧಿ ಕೇವಲ 12 ವರ್ಷಗಳು ಮಾತ್ರ. ಬಿಜೆಪಿ ಯಾವ ದಾಖಲೆಯ ಬಗ್ಗೆ ಮಾತಾಡುತ್ತಿದೆ,'' ಎಂದು ಪ್ರಶ್ನಿಸಿದ್ದಾರೆ.

''ನೆಹರು 1952ರ ಸಾರ್ವತ್ರಿಕ ಚುನಾವಣೆ ನಂತರ ಪ್ರಧಾನಿಯಾದರು ಎಂದು ಬಿಜೆಪಿ ಹೊಸ ಇತಿಹಾಸ ಬರೆಯಲು ಹೊರಟಿದೆ. ಹಾಗಿದ್ದರೆ 1947 ರಿಂದ 1950 ರವರೆಗೆ ಸರ್ದಾರ್ ಪಟೇಲ್ ಅವರು ಉಪ ಪ್ರಧಾನಿ ಮತ್ತು ಗೃಹ ಸಚಿವರಾಗಿದ್ದನ್ನೂ ಬಿಜೆಪಿ ನಿರಾಕರಿಸುತ್ತಿದೆಯೆ? ಅಥವಾ ನೆಹರು ಅವರಂತೆ ವಿವಿಧತೆಯಲ್ಲಿ ಏಕತೆ ಪ್ರತಿಪಾದಿಸಿದ ಪಟೇಲ್ ಅವರನ್ನೂ ಅವಮಾನಿಸುತ್ತಿದೆಯೇ? ಸ್ವಾತಂತ್ರ್ಯ ಬಂದ ದಿನದಿಂದಲೇ ದೇಶಕ್ಕೆ ಸರಕಾರವಿತ್ತು. ಪ್ರಧಾನಿಯೂ ಇದ್ದರು. ಇದು ಶಾಲಾ ಮಕ್ಕಳಿಗೂ ಗೊತ್ತಿರುವ ಇತಿಹಾಸ. ಇತಿಹಾಸವನ್ನು ಅಧ್ಯಯನ ಮಾಡದವರು ಚರಿತ್ರೆಯನ್ನು ಅಳಿಸುವ ಮೂಲಕ ವಿಜಯೋತ್ಸವ ಆಚರಿಸುತ್ತಿರುವುದು ಹಾಸ್ಯಾಸ್ಪದ,'' ಎಂದು ಟೀಕಿಸಿದ್ದಾರೆ.

''ನೆಹರು ಅವರು ಜೈಲಲ್ಲಿ ಕಳೆದ ಬರೋಬ್ಬರಿ 9 ವರ್ಷಗಳನ್ನು ಯಾರೊಂದಿಗೆ ಹೋಲಿಕೆ ಮಾಡುತ್ತೀರಿ? ನರೇಂದ್ರ ಮೋದಿ ಅಥವಾ ಸಂಘ ಪರಿವಾರದ ಯಾರಾದರೊಬ್ಬರನ್ನು ನೆಹರು ಅವರಂತೆ ಜೈಲುವಾಸ ಅನುಭವಿಸಿದ ವ್ಯಕ್ತಿಯನ್ನು ತೋರಿಸಲು ಸಾಧ್ಯವೇ? ದೇಶ ವಿಭಜನೆಯಿಂದ ಉದ್ಭವಿಸಿದ ಸಮಸ್ಯೆಗಳ ನಡುವೆ ದುರ್ಬಲ ಆರ್ಥಿಕ ವ್ಯವಸ್ಥೆ ಭಾರತಕ್ಕೆ ವೈಜ್ಞಾನಿಕ ತಳಹದಿ ಕಟ್ಟಿದವರು ನೆಹರು. ಸುಳ್ಳಿನ ವಿಜಯೋತ್ಸವಗಳು ಕ್ಷಣಿಕವಾಗಿರಬಹುದು. ಆದರೆ, ಸತ್ಯದ ಮುಂದೆ ಅವುಗಳ ಆಯುಷ್ಯ ಅತ್ಯಂತ ಅಲ್ಪ,'' ಎಂದು ಬಿಜೆಪಿಗೆ ತಿರುಗೇಟು ನೀಡಿದ್ದಾರೆ.

ಗೃಹಲಕ್ಷ್ಮಿ ಸ್ಥಗಿತ ಇಲ್ಲ: ದಿನೇಶ್

■ **ವಿಕ ಸುದ್ದಿಲೋಕ** ಬೆಂಗಳೂರು

ದುರುಪಯೋಗ ತಡೆದು ಅರ್ಹರಿಗೆ ಸೌಲಭ್ಯ ತಲುಪಿಸುವ ದೃಷ್ಟಿಯಿಂದ ಗೃಹಲಕ್ಷ್ಮಿ ಯೋಜನೆ ಪರಿಷ್ಕರಣೆಗೆ ಆಗ್ರಹಿಸಲಾಗಿದೆ. ಇದನ್ನು ಸ್ಥಗಿತಗೊಳಿಸುವ ಯಾವುದೇ ಉದ್ದೇಶ ರಾಜ್ಯ ಸರಕಾರಕ್ಕಿಲ್ಲ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಹಾಗೂ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

''ಪ್ರತಿಪಕ್ಷದವರು ಈ ವಿಚಾರದಲ್ಲಿ ಗೊಂದಲ ಮೂಡಿಸುತ್ತಿದ್ದಾರೆ. ಇದುವರೆಗೆ 1.24 ಕೋಟಿಗೂ ಅಧಿಕ ಮಹಿಳೆಯರಿಗೆ ಪ್ರತಿ ತಿಂಗಳು ತಲಾ 2,000 ರೂ. ದಂತೆ ಈ ಯೋಜನೆಯ ಹಣ ತಲುಪುತ್ತಿದೆ. ಇತ್ತೀಚಿನ ಅಂಕಿ, ಅಂಶದಂತೆ ಯೋಜನೆಯ ಫಲಾನುಭವಿಗಳಲ್ಲಿ 1.95 ಲಕ್ಷಕ್ಕೂ ಹೆಚ್ಚು ಕುಟುಂಬದ ಯಜಮಾನಿಯರು ಮರಣ ಹೊಂದಿದ್ದಾರೆ. ತಾಂತ್ರಿಕ ಕಾರಣದಿಂದಾಗಿ ಮೃತಪಟ್ಟವರ ಬ್ಯಾಂಕ್ ಖಾತೆಗಳಿಗೂ ಹಣ ಸಂದಾಯವಾಗುತ್ತಿರುವುದು ಗಮನಕ್ಕೆ ಬಂದಿದೆ. ಈ ರೀತಿಯ ದುರುಪಯೋಗವನ್ನು ತಡೆಯುವ ಕೆಲಸವನ್ನು ಸರಕಾರದಿಂದ ಮಾಡಲಾಗುತ್ತಿದೆ,'' ಎಂದು ಸ್ಪಷ್ಟಪಡಿಸಿದ್ದಾರೆ.

''ಈ ಬಗ್ಗೆ ಸಿಎಂ ಅವರಿಗೆ ಮನವಿ ಸಲ್ಲಿಸಲಾಗಿದೆ. ಫಲಾನುಭವಿಗಳ 'ಜೀವಿತ ಪ್ರಮಾಣ ಪತ್ರ' ಕಡ್ಡಾಯಗೊಳಿಸಲು ಕೋರಲಾಗಿದೆ. ಈ ಮನವಿ ಪುರಸ್ಕರಿಸಿರುವ ಮುಖ್ಯಮಂತ್ರಿಯವರು ಯೋಜನೆಯ ಪರಿಷ್ಕರಣೆಗೆ ಮುಂದಾಗಿದ್ದಾರೆ. ಯಾವುದೇ ಕಾರಣಕ್ಕೂ ಸೌಲಭ್ಯ ಪಡೆಯುತ್ತಿರುವ ಅರ್ಹ ಫಲಾನುಭವಿಗೆ ತೊಂದರೆ, ನಷ್ಟ ಆಗುವುದಿಲ್ಲ'' ಎಂದು ಹೇಳಿದ್ದಾರೆ.

ದಲಿತರ ಕಡೆಗಣನೆ, ಬೃಹತ್ ಪ್ರತಿಭಟನೆ

■ **ವಿಕ ಸುದ್ದಿಲೋಕ** ಬೆಂಗಳೂರು

ದಲಿತ ಸಮುದಾಯದ ರಾಜಕೀಯ ನಾಯಕರನ್ನು ಕಡೆಗಣಿಸುತ್ತಿರುವ ಕಾಂಗ್ರೆಸ್‌ನ ಧೋರಣೆ ಖಂಡಿಸಿ ರಾಜ್ಯ ದಲಿತ ಸಂಘಟನೆಗಳ ಒಕ್ಕೂಟವು ರಾಜಧಾನಿಯಲ್ಲಿ ಗುರುವಾರ ಬೃಹತ್ ಪ್ರತಿಭಟನೆ ನಡೆಸಿತು.

ಶೋಷಿತರ ಸ್ವಾಭಿಮಾನ ಹೋರಾಟದ ಹೆಸರಿನಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ದಲಿತ ಸಮುದಾಯದ ಸಾವಿರಾರು ಜನ ಪಾಲ್ಗೊಂಡರು. ಕಾಂಗ್ರೆಸ್ ಶಾಸಕ ಎಚ್.ಸಿ.ಮಹದೇವಪ್ಪರ ಭಾವಚಿತ್ರ ಪ್ರದರ್ಶಿಸಿದ ಪ್ರತಿಭಟನಾಕಾರರು, ತಮ್ಮ ನಾಯಕನಿಗೆ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿದರು.

''ಸಂವಿಧಾನ, ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ಸಮಾಜದ ಏಳಿಗೆಗೆ ಶ್ರಮಿಸಿದ ಹಿರಿಯ ದಲಿತ ನಾಯಕರ ಕೊರತೆ ರಾಜ್ಯ ರಾಜಕಾರಣದಲ್ಲಿ ಎದ್ದು ಕಾಣುತ್ತಿದೆ. ದಶಕಗಳಿಂದ ಕಾಂಗ್ರೆಸ್ ಬೆಂಬಲಿಸುತ್ತ ಬಂದಿರುವ ದಲಿತ ಸಮುದಾಯಕ್ಕೆ ವಂಚನೆ ಮಾಡಲಾಗುತ್ತಿದೆ. ಉನ್ನತ ಹುದ್ದೆಗಳ ಆಮಿಷವೊಡ್ಡಿ ಪ್ರಭಾವಿ ದಲಿತ ನಾಯಕರನ್ನು ರಾಜಕೀಯವಾಗಿ ಮುಗಿಸುವ ಹುನ್ನಾರ ನಡೆಯುತ್ತಿದೆ,'' ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಒಕ್ಕೂಟದ ಅಧ್ಯಕ್ಷ ಎಚ್.ಸಿ.ಸಿದ್ದಲಿಂಗಯ್ಯ ಮಾತನಾಡಿ, ''ಶತಮಾನಗಳಿಂದಲೂ ತಳ ಸಮುದಾಯಗಳ ಪರವಾಗಿ ಧ್ವನಿ ಎತ್ತುತ್ತಾ ಬಂದಿರುವ ನಾಯಕರ ರೆಕ್ಕೆ ಪುಕ್ಕ ಕತ್ತರಿಸುವ ಕೆಲಸ ನಡೆಯುತ್ತಿದೆ. ದಲಿತರ ರಾಜಕೀಯ ಪ್ರಾತಿನಿಧ್ಯವನ್ನು ಹತ್ತಿಕ್ಕುವ ಪ್ರಯತ್ನವಾಗಿದೆ. ಪ್ರಜಾಪ್ರಭುತ್ವದ ಆಶಯಗಳ ಅನ್ವಯ ಡಿ.ಕೆ.ಶಿವಕುಮಾರ್ ಸರಕಾರದಲ್ಲಿ ದಲಿತ ಸಮುದಾಯದ ನಾಯಕರಿಗೆ ಸೂಕ್ತ ಸ್ಥಾನಮಾನ ಸಿಗಬೇಕು.'' ಎಂದು ಹೇಳಿದರು.

10 ಲಕ್ಷ ಜನ ಸೇರಿಸಿ ಹೋರಾಟ: ''ಹಳೆ ಮೈಸೂರು ಭಾಗ ಸೇರಿದಂತೆ ರಾಜ್ಯದೆಲ್ಲೆಡೆ ದಲಿತ ಸಂಘಟನೆಗಳಿಗೆ ಬೆನ್ನೆಲುಬಾಗಿ ನಿಂತಿರುವ ಶಾಸಕ ಎಚ್.ಸಿ.ಮಹದೇವಪ್ಪನವರಿಗೆ ಸಚಿವ ಸ್ಥಾನ ನೀಡಬೇಕು. ಸಮುದಾಯದ ನಾಯಕತ್ವ ನಾಶವಾದರೆ ಇಡೀ ಸಮುದಾಯವೇ ಅಸ್ತಿತ್ವ ಕಳೆದುಕೊಳ್ಳುತ್ತದೆ. ಮುಂದೆ 10 ಲಕ್ಷ ಜನರನ್ನು ಸೇರಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಉಗ್ರ ಹೋರಾಟ ನಡೆಸುತ್ತೇವೆ,'' ಎಂದು ಉರಿಲಿಂಗ ಪೆದ್ದಿಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಕಸ ವಿಲೇವಾರಿ ಟೆಂಡರ್, ವರದಿ ಬಹಿರಂಗಕ್ಕೆ ಅಶೋಕ್ ಸವಾಲು

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ಕಸ ಮಾಫಿಯಾ ಗ್ಯಾಂಗ್‌ನ ಏಜೆಂಟರಾಗಿ ಆರ್.ಅಶೋಕ್ ಮಾತನಾಡುತ್ತಿದ್ದಾರೆ ಎಂಬ ಸಿಎಂ ಡಿ.ಕೆ.ಶಿವಕುಮಾರ್ ಟೀಕೆಗೆ ಪ್ರತ್ಯುತ್ತರ ನೀಡಿರುವ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್, ''ನಾನು ಏಜೆಂಟ್ ಆಗಿಯೇ ಮಾತನಾಡುತ್ತಿದ್ದೇನೆ. ಆದರೆ ನಿಮ್ಮಂತೆ ಯಾವುದೋ ಮಾಫಿಯಾ ಹಿತಾಸಕ್ತಿ ಕಾಯುವ ಕಮಿಷನ್ ಏಜೆಂಟ್ ಆಗಿ ಅಲ್ಲ'' ಎಂದು ತಿರುಗೇಟು ನೀಡಿದ್ದಾರೆ.

ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅಶೋಕ್, ''ರಾಜ್ಯದ ಏಳೂವರೆ ಕೋಟಿ ಕನ್ನಡಿಗರ ಧ್ವನಿಯಾಗಿ ನಿಂತಿರುವ ಜನತಾ ಏಜೆಂಟ್ ನಾನು. ಪ್ರತಿಪಕ್ಷ ನಾಯಕನಾಗಿ ನಿಮ್ಮ ಲೂಟಿ ದಂಧೆಯನ್ನು ಪ್ರಶ್ನಿಸುವುದು ನನ್ನ ಸಂವಿಧಾನ ಬದ್ಧ ಕರ್ತವ್ಯ. ಅದಕ್ಕೆ ಯಾರ ಅಪ್ಪಣೆಯೂ ಬೇಕಿಲ್ಲ'' ಎಂದು ಟಾಂಗ್ ನೀಡಿದ್ದಾರೆ.

''ಹೈಕಮಾಂಡ್ ಬಾಗಿಲಲ್ಲಿ ಕಾಡಿ ಬೇಡಿ, ಅತ್ತು ಕರೆದು, ಕೊನೆಗೂ ಸಿಎಂ ಸೀಟು ಗಿಟ್ಟಿಸಿಕೊಂಡಿರುವ ತಮಗೆ ಪ್ರತಿಪಕ್ಷಗಳು ಕನಿಷ್ಠ 'ಹನಿಮೂನ್ ಅವಧಿ' ನೀಡುತ್ತಿಲ್ಲ ಎಂಬ ಹತಾಶೆ, ಭಯ, ಆತಂಕವಿರುವುದು ನನಗೆ ಅರ್ಥವಾಗುತ್ತದೆ. ಆದರೆ ನಿಮ್ಮ ಪಕ್ಷದ ಶಾಸಕರೇ ದಿನ ಬೆಳಗಾದರೆ ನಿಮ್ಮ ವಿರುದ್ಧ ಅಸಮಾಧಾನದ ಜಾಗಟೆ ಬಾರಿಸುತ್ತಾ ದಿಲ್ಲಿಗೆ ದಂಡೆತ್ತಿ ಹೋಗುತ್ತಿರುವಾಗ ನಿಮಗೆ 'ಹನಿಮೂನ್ ಅವಧಿ' ಎಲ್ಲಿಂದ ಸಿಗಬೇಕು? ನಿಮ್ಮ ಮನೆಯಲ್ಲೇ ಬೆಂಕಿ ಉರಿಯುತ್ತಿರುವಾಗ ನನ್ನ ಮೇಲೆ ರಾಜಕೀಯ ಗೂಬೆ ಕೂರಿಸಬೇಡಿ,'' ಎಂದು ಚಾಟಿ ಬೀಸಿದ್ದಾರೆ.

''ನಮ್ಮ ಪಾರದರ್ಶಕತೆ, ಕಾರ್ಯವೈಖರಿ ಸಹಿಸಲು ಅವರಿಂದ ಸಾಧ್ಯವಾಗುತ್ತಿಲ್ಲ ಎಂಬ ಡಿ.ಕೆ.ಶಿವಕುಮಾರ್ ಅವರ ಹೇಳಿಕೆ ಶತಮಾನದ ಅತಿ ದೊಡ್ಡ ಹಾಸ್ಯ. ನಿಮ್ಮ ಹಿನ್ನೆಲೆ ಏನು, ನಿಮ್ಮ 'ಆಡಳಿತ ವೈಖರಿ'ಯ ವಾಸ್ತವಿಕ ಚರಿತ್ರೆ ಏನು, ತಾವು ಕಟ್ಟಿಕೊಂಡಿರುವ ಪಾರದರ್ಶಕ ಸಾಮ್ರಾಜ್ಯ ಎಂಥದ್ದು ಎಂಬುದು ಇಡೀ ಕರ್ನಾಟಕಕ್ಕೆ ಗೊತ್ತಿದೆ. ನಿಮ್ಮಿಂದ ಪಾರದರ್ಶಕತೆಯ ಪಾಠ ಕಲಿಯುವ ದೌರ್ಭಾಗ್ಯ ಕನ್ನಡಿಗರಿಗಿಲ್ಲ'' ಎಂದು ಲೇವಡಿ ಮಾಡಿದ್ದಾರೆ.

ಸತೀಶ್ ಜಾರಕಿಹೊಳಿ ಸ್ಪಷ್ಟನೆ

ಸಿದ್ದರಾಮಯ್ಯ ಜತೆ ಸಂಬಂಧ ಹಾಳಾಗಿಲ್ಲ

ಬೆಂಗಳೂರು: ''ಸಿದ್ದರಾಮಯ್ಯ ಅವರೊಂದಿಗೆ ನನ್ನ ಸಂಬಂಧ ಹಾಳಾಗಿಲ್ಲ, ನಮ್ಮ ನಡುವೆ ಯಾವುದೇ ಗೊಂದಲ, ಅಸಮಾಧಾನವೂ ಇಲ್ಲ'' ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ''ಸಿದ್ದರಾಮಯ್ಯ ಹಾಗೂ ನನ್ನ ಸಂಬಂಧ ಮೊದಲಿನಂತೆಯೇ ಇದೆ. ಪಕ್ಷದ ಹೊರತಾಗಿ ಅಹಿಂದ ಸಂಘಟನೆ ಇದ್ದೇ ಇರುತ್ತದೆ ಮತ್ತು ಅದನ್ನು ಬಲಪಡಿಸುವ ಕೆಲಸ ಮಾಡುತ್ತೇವೆ,'' ಎಂದು ತಿಳಿಸಿದರು.

ಪಕ್ಷದ ಅಧ್ಯಕ್ಷ ಸ್ಥಾನದ ನಿರೀಕ್ಷೆ ಕೈಗೂಡದ ಬಗ್ಗೆ ಪ್ರತಿಕ್ರಿಯಿಸಿ, ''ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೂ ಮುಖ್ಯಮಂತ್ರಿ ಸ್ಥಾನಕ್ಕೂ ಸಂಬಂಧವಿಲ್ಲ, ಡಿ.ಕೆ.ಶಿವಕುಮಾರ್ ಅವರು ಕೆಲಸ ಮಾಡಿದ್ದಕ್ಕಾಗಿ ಅಧಿಕಾರ ಸಿಕ್ಕಿದೆ. ಪಕ್ಷಕ್ಕೆ ದುಡಿದವರಿಗೆ ಅಧಿಕಾರ ಸಿಗಲೇಬೇಕು. ನನಗೂ ಪಕ್ಷದಲ್ಲಿ ಕೂಲಿ ಸಿಕ್ಕಿದೆ. ಕೆಲಸ ಮಾಡುವವರಿಗೆ ಹುದ್ದೆಯ ಆವಶ್ಯಕತೆ ಇಲ್ಲ'' ಎಂದು ಹೇಳಿದರು.

ದಿಲ್ಲಿಗೆ ತೆರಳಿದ್ದ ಶಾಸಕ | ಡಿಸಿಎಂ ಜತೆ ಮಾತುಕತೆ ವೇಳೆ ಆರೋಗ್ಯ ವ್ಯತ್ಯಯ

ಷಡಕ್ಷರಿ ಆರೋಗ್ಯ ದಿಢೀರ್ ಏರುಪೇರು

■ **ವಿಕ ಸುದ್ದಿಲೋಕ** ತುಮಕೂರು

ಹೊಸದಿಲ್ಲಿಗೆ ತೆರಳಿದ್ದ ತಿಪಟೂರು ಶಾಸಕ ಕೆ.ಷಡಕ್ಷರಿ ಆರೋಗ್ಯದಲ್ಲಿ ದಿಢೀರ್ ವ್ಯತ್ಯಯ ಕಂಡುಬಂದಿದ್ದು, ಕೂಡಲೇ ಅವರನ್ನು ಅಲ್ಲಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕರ್ನಾಟಕ ಭವನದಲ್ಲಿ ವಾಸ್ತವ್ಯವಿದ್ದ ಕೆ.ಷಡಕ್ಷರಿ ಗುರುವಾರ ಬೆಳಗ್ಗೆ ಅಲ್ಲಿ ಡಿಸಿಎಂ ಡಾ.ಜಿ.ಪರಮೇಶ್ವರ್ ಜತೆ ಮಾತನಾಡುತ್ತಾ ಚಹಾ ಸೇವಿಸಿದ್ದರು. ಈ ವೇಳೆ ಇದ್ದಕ್ಕಿದ್ದಂತೆ ಮಾತು ನಿಂತಿದೆ, ಮಾತನಾಡಲು ಅವರಿಗೆ ಸಾಧ್ಯವಾಗಲಿಲ್ಲ, ಕೂಡಲೇ ಅಲ್ಲಿಗೆ ಧಾವಿಸಿದ ವಿಧಾನ ಪರಿಷತ್ ಸದಸ್ಯ ರಾಜೇಂದ್ರ ಆರ್. ನೆರವಿನಿಂದ ಪರಮೇಶ್ವರ್ ಅವರು ಷಡಕ್ಷರಿ ಅವರನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದಾರೆ.

ಪರಮೇಶ್ವರ್ ಅವರು ಷಡಕ್ಷರಿ ಅವರ ಆರೋಗ್ಯ ಸ್ಥಿತಿಯ ಕುರಿತು ವೈದ್ಯರ ಬಳಿ ಮಾಹಿತಿ ಪಡೆದುಕೊಂಡಿದ್ದು, ಅಗತ್ಯವಿರುವ ಎಲ್ಲ ರೀತಿಯ ಸೂಕ್ತ ಚಿಕಿತ್ಸೆ ನೀಡುವಂತೆ ಸೂಚಿಸಿದರು.

ಶಾಸಕ ಕೆ.ಷಡಕ್ಷರಿ ಅವರ ಆರೋಗ್ಯವನ್ನು ಡಿಸಿಎಂ ಡಾ.ಜಿ.ಪರಮೇಶ್ವರ್ ವಿಚಾರಿಸಿದರು. ಎಂಎಲ್‌ಸಿ ಆರ್.ರಾಜೇಂದ್ರ, ಕೆಪಿಸಿಸಿ ಸದಸ್ಯ ವಿ.ಯೋಗೇಶ್ ಇದ್ದರು.

ರಾತ್ರಿ ಸರಿಯಾಗಿ ನಿದ್ರೆ ಮಾಡಿರಲಿಲ್ಲ ಎನ್ನಲಾಗಿದೆ. ವಿಷಯ ತಿಳಿಯುತ್ತಿದ್ದಂತೆ ಷಡಕ್ಷರಿ ಅವರ ಸಹೋದರನ ಮಗ ನಿಖಿಲ್ ರಾಜ್ ತಿಪಟೂರಿಂದ ಬೆಂಗಳೂರು ಮೂಲಕ ಹೊಸದಿಲ್ಲಿಗೆ ತೆರಳಿದರು. ಚಿಕಿತ್ಸೆ ನಂತರ ಷಡಕ್ಷರಿ ಅವರ ಆರೋಗ್ಯ ಚೇತರಿಸಿಕೊಂಡಿದೆ. ಅಧಿಕ ರಕ್ತದೊತ್ತಡದಿಂದ ಆರೋಗ್ಯ ಸಮಸ್ಯೆ ಕಂಡುಬಂದಿತ್ತು. ಈಗ ಅವರು ಮಾತನಾಡಿದ್ದಾರೆ, ಸುಧಾರಿಸಿಕೊಳ್ಳುತ್ತಿದ್ದಾರೆಂದು ಕುಟುಂಬ ಮೂಲ ತಿಳಿಸಿದೆ.

ಪಂಚಾಂಗ 12-06-2026

ಪರಾಭವ ನಾಮ ಸಂವತ್ಸರ
ಅಯನ: ಉತ್ತರಾಯಣ.
ಋತು: ಗ್ರೀಷ್ಮ. **ಮಾಸ:** ಅಧಿಕ ಜ್ಯೇಷ್ಠ. **ಪಕ್ಷ:** ಕೃಷ್ಣ. **ಮಳೆ ನಕ್ಷತ್ರ:** ಮೃಗಶಿರಾ. **ನಿತ್ಯನಕ್ಷತ್ರ:** ಅಶ್ವಿನಿ.
ತಿಥಿ: ದ್ವಾದಶಿ. **ಯೋಗ:** ಅತಿಗಂಡ.
ಕರಣ: ಕೌಲವ.
ವಾರ: ಶುಕ್ರವಾರ.

ರಾಹು ಕಾಲ: ಬೆ. 10.30 - 12.00
ಗುಳಿಕ ಕಾಲ: ಬೆ. 7.30-9.00
ಯಮಗಂಡ ಕಾಲ: ಮ. 3.00-4.30
ಸೂರ್ಯ ಉದಯ: ಬೆ. 5.54
ಸೂರ್ಯ ಅಸ್ತ: ಸಂ.6.44

ವೈಫಲ್ಯ ಮರೆಮಾಚಲು ಕೇಂದ್ರದ ದೂಷಣೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯ ಕಾಂಗ್ರೆಸ್ ಸರಕಾರ ತನ್ನ ವೈಫಲ್ಯ ಮುಚ್ಚಿಕೊಳ್ಳಲು ಕೇಂದ್ರ ಸರಕಾರ ತಾರತಮ್ಯ ಧೋರಣೆ ತೋರುತ್ತಿದೆ, ಅನ್ಯಾಯ ಮಾಡುತ್ತಿದೆ ಎಂಬುದಾಗಿ ಪದೇಪದೆ ದೂರುವ ಕೆಲಸ ಮಾಡುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಕ್ಷೇಪಿಸಿದ್ದಾರೆ.



ರಾಜ್ಯ ಬಿಜೆಪಿ ಕಚೇರಿಯಲ್ಲಿ ಗುರುವಾರ ಮಾತನಾಡಿದ ಅವರು ಹೀಗೆ ಹೇಳಿದರು. ಸಂಸದ ಗೋವಿಂದ ಕಾರಜೋಳ ಮಾತನಾಡಿ, ''ನಲ್ಲಿಗಳಲ್ಲಿ ನೀರು ಹರಿಸುವ ಜವಾಬ್ದಾರಿ ರಾಜ್ಯ ಸರಕಾರದ್ದು. ಕೇಂದ್ರ ಸರಕಾರವು ಜಲಜೀವನ್ ಮಿಷನ್ ಯೋಜನೆಯಡಿ ನೀಡುವ ಅನುದಾನವನ್ನು ಸದುಪಯೋಗಪಡಿಸಿಕೊಂಡು ಸುರಕ್ಷಿತ, ಶುದ್ಧ ಕುಡಿಯುವ ನೀರನ್ನು ಪ್ರತಿ ಮನೆಗೂ ಕೊಡುವ ಜವಾಬ್ದಾರಿ ರಾಜ್ಯ ಸರಕಾರದ ಮೇಲಿದೆ. ಸಮರ್ಪಕ ನೀರಿನ ಮೂಲವನ್ನು ಗುರುತಿಸದಿರುವುದು ರಾಜ್ಯ ಸರಕಾರದ ವೈಫಲ್ಯ,'' ಎಂದು ದೂರಿದರು.

ಅಬ್ಬಲಗೆರೆ ಬರಡು ನೆಲಕ್ಕೆ ಹಸಿರಿನ ಹೊದಿಕೆ | ನೆಮ್ಮದಿಯ ಬದುಕಿಗೆ ಇದುವೇ ಬೆಳಕು

ಮೊಮ್ಮಗಳಿಗಾಗಿ ಎಕರೆ ಕಾಡು ಬೆಳೆಸಿದ ಅಜ್ಜ!

■ **ಆತೀಶ್ ಬಿ.ಕನ್ನಾಳೆ** ಶಿವಮೊಗ್ಗ
aatish.kannale@timesofindia.com

ಮೊಮ್ಮಕ್ಕಳೆಂದರೆ ಯಾರಿಗೆ ತಾನೆ ಪ್ರೀತಿ ಇರಲ್ಲ ಹೇಳಿ? ಅವರಿಗೋಸ್ಕರ ಸರ್ವಸ್ವವನ್ನೂ ನೀಡುವ ಅಜ್ಜ-ಅಜ್ಜಿಯಂದಿರು ನಮ್ಮಲ್ಲಿದ್ದಾರೆ. ಆದರೆ ಇಲ್ಲೊಬ್ಬರು ತನ್ನ ಮೊಮ್ಮಗಳಿಗಾಗಿ ಒಂದು ಎಕರೆಯಲ್ಲಿ ಕಾಡು ಬೆಳೆಸಿ ಕೊಡುಗೆ ರೂಪದಲ್ಲಿ ನೀಡಿದ್ದಾರೆ!

ಜಮೀನಿದ್ದರೆ ಒಂದೊಳ್ಳೆ ತೋಟ ಮಾಡಿ, ಒಂದಿಷ್ಟು ವರ್ಷ ಕಷ್ಟಪಟ್ಟರೆ ಸಾಕು, ಅಡಕೆ ಫಸಲು ಶುರುವಾಗುತ್ತೆ ಎಂಬ ಕಾಲದಲ್ಲಿ ತಾಲೂಕಿನ ಅಬ್ಬಲಗೆರೆ ಗ್ರಾಮದಲ್ಲಿ ಒಂದು ಎಕರೆ ಜಮೀನು ಖರೀದಿಸಿ ಆರು ವರ್ಷಗಳಿಂದ ಕಾಡು ಪ್ರಭೇದದ ಗಿಡಗಳನ್ನು ಬೆಳೆಸುತ್ತಿರುವ ಟಿ.ಎಸ್. ಮಹಾದೇವಸ್ವಾಮಿ ಅವರು ಆಸ್ಟ್ರೇಲಿಯಾದಲ್ಲಿರುವ ಮೊಮ್ಮಗಳು 'ಆರ್ಪಿ'ಯನ್ನು ಈ ಕಿರುಕಾಡಿನಲ್ಲಿ ಕಾಣುತ್ತಾರೆ. ಮೈಸೂರು ಪೇಪರ್ ಮಿಲ್‌ನಲ್ಲಿ ಕಚೇರಿ ಮೇಲ್ವಿಚಾರಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಇವರು ಪರಿಸರಕ್ಕೆ ಪೂರಕವಾಗಿ ಬದುಕುತಿದ್ದಾರೆ.

ಎಕರೆಯಲ್ಲಿ 61 ಪ್ರಭೇದದ ಮರ: ಗಾಳಿಮರ, ಬುಗರಿ, ಕದಂಬ, ಪೆಥೋಡಿಯಾ, ಬೆಟ್ಟದನೆಲ್ಲಿ, ಹೊಂಗೆ, ಕಕ್ಕೆ, ಮಹಾಗನಿ, ದೂಪ, ಹೊಳೆಮತ್ತಿ, ಹಿಪ್ಪೆ, ನೇರಳೆ, ಚಳ್ಳೆ, ಬನ್ನಿ, ಅಂಟುವಾಳ, ಹಲಸು, ಹೆಬ್ಬೇವು, ಅಂಜೂರ, ನೋನಿ, ಆಲ, ಬಸವನಪಾದ, ಬೂರಗ... ಹೀಗೆ ಸುಮಾರು 61 ಪ್ರಭೇದದ 400 ಮರಗಳೀಗ ಆಕಾಶದೆತ್ತರಕ್ಕೆ ಬೆಳೆದು ನಿಂತಿವೆ. ಆರು ವರ್ಷಗಳ ಹಿಂದೆ ಕೃಷಿಗೂ ಯೋಗ್ಯವಾಗಿರದ ಭೂಮಿ ಇಂದು ಹಸಿರಿನಿಂದ ನಳನಳಿಸುತ್ತಿದೆ. ನೂರಾರು ಪ್ರಭೇದದ ಪಕ್ಷಿಗಳಿಗೆ ಆಶ್ರಯ ನೀಡಿದೆ. ಪಾರಿಜಾತ, ಹೊಳೆದಾಸವಾಳ ಸೇರಿದಂತೆ ವಿವಿಧ ಹೂವುಗಳನ್ನು ನೀಡುವ ಗಿಡಗಳನ್ನು ಬೆಳೆಸಿದ್ದು, ಚಿಟ್ಟೆಗಳ ನಿತ್ಯ ಔತಣಕೂಟ ಇಲ್ಲಿ ನಡೆಯುತ್ತದೆ.



ಕಾಡು ಮತ್ತು ಕಾಡು ಪ್ರಾಣಿಗಳೆಂದರೆ ಮೊಮ್ಮಗಳಿಗೆ ವಿಶೇಷ ಪ್ರೀತಿ ಮತ್ತು ಕುತೂಹಲ. ಹೀಗಾಗಿ, ಏನನ್ನೋ ಕೊಡುಗೆಯಾಗಿ ನೀಡುವುದಕ್ಕಿಂತ ಪರಿಸರಕ್ಕೆ ಪೂರಕವಾಗಲ್ಲ ಕಾಡೇ ನೀಡಿದರೆ ಹೇಗೆ ಎಂಬ ಆಲೋಚನೆ ಬಂತು. ಅದನ್ನೇ ಮಾಡಿದೆ.
-ಟಿ.ಎಸ್. ಮಹಾದೇವಸ್ವಾಮಿ

ನನ್ನ ಭೂಮಿ ಹೆಜ್ಜೆ
ವಿಕ ಅಭಿಯಾನ

ಪ್ರತಿ ಮರದಲ್ಲಿ ನಾನಿದ್ದೇನೆ...: ''ಪ್ರತಿ ಮರದಲ್ಲಿ ನಾನಿದ್ದೇನೆ; ನನ್ನಲ್ಲಿ ಮರಗಳಿವೆ. ಇಲ್ಲಿರುವ ಮರಗಳಲ್ಲಿ ನಾನು ಜೀವಿಸುತ್ತಿದ್ದೇನೆ. ನಿತ್ಯವೂ ಅವುಗಳೊಂದಿಗೆ ಮಾತಾಡುತ್ತೇನೆ. ಅವೂ ನನಗೆ ಸ್ಪಂದಿಸುತ್ತವೆ. ಬೆಳಗ್ಗೆ ಬಂದಷ್ಟು ಸಮಯ ಇಲ್ಲಿ ಕಳೆದು, ಮರಗಳನ್ನು ಸ್ಪರ್ಶಿಸಿದರೆ ಸಿಗುವ ಅನುಭೂತಿಯೇ ಬೇರೆ. ಮೊಮ್ಮಗಳೊಂದಿಗೆ ಸಮಯ ಕಳೆದಂತೆ ಭಾಸವಾಗುತ್ತದೆ. ಪರಿಸರದ ಮೇಲಿರುವ ಪ್ರೀತಿಯಿಂದಾಗಿ ಗಿಡ ನೆಟ್ಟು ಬೆಳೆಸಲು ಕಷ್ಟ ಎನಿಸಲಿಲ್ಲ,'' ಎನ್ನುತ್ತಾರೆ ಟಿ.ಎಸ್. ಮಹಾದೇವಸ್ವಾಮಿ.

ನಿಮ್ಮ ಸುತ್ತಲೂ ಇಂತಹ ಪರಿಸರ ಸಂರಕ್ಷಣೆಯ ಕುತೂಹಲಕಾರಿ ಯಶೋಗಾಥೆಗಳು ಗಮನಕ್ಕೆ ಬಂದರೆ ಬರೆದು ಈ ನಂಬರ್‌ಗೆ ವಾಟ್ಸ್‌ಆ್ಯಪ್ ಮಾಡಿ.
63664 22240

ಕಾಡಿನಿಂದ ಸಿಗುವ ಪಂಚಾಮೃತಗಳು

1. ಸಂಪೂರ್ಣ ಸತ್ವ ಕಳೆದುಕೊಂಡಿದ್ದ ಬರಡು ಭೂಮಿಗೆ ಈ ಕಾಡು ಮರುಜೀವ ನೀಡಿದೆ.
2. ಮನುಷ್ಯನ ಆರೋಗ್ಯಕ್ಕೆ ಹಾನಿಕಾರಕವಾದ ಬೆಂಜೀನ್ ಮತ್ತು ಫಾರ್ಮಾಲ್ಡಿಹೈಡ್‌ನಂತಹ ಬಾಷ್ಪಶೀಲ ಸಾವಯವ ಸಂಯುಕ್ತಗಳನ್ನು ಈ ಮರಗಳು ಹೀರಿಕೊಳ್ಳುವುದರಿಂದ ಸುತ್ತಮುತ್ತಲಿನ ಗಾಳಿ ಶುದ್ಧವಾಗುತ್ತಿದೆ.
3. ನಿತ್ಯವೂ ಮರಗಿಡಗಳ ಮಧ್ಯೆ ಸಮಯ ಕಳೆಯುವುದರಿಂದ ಮಾನಸಿಕ ಒತ್ತಡ ನಿವಾರಣೆಯಾಗಿ, ಅಧಿಕ ರಕ್ತದೊತ್ತಡ ತಹಬದಿಗೆ ಬರುತ್ತದೆ.
4. ಹಸಿರನ್ನು ಕಣ್ತುಂಬಿಕೊಳ್ಳುವುದೇ ಕಣ್ಣಿಗೆ ಒಂದು ಉತ್ತಮ ವ್ಯಾಯಾಮ. ಇದು ದೇಹದಲ್ಲಿ ಒತ್ತಡ ಹೆಚ್ಚಿಸುವ 'ಕಾರ್ಟಿಸಲ್' ಹಾರ್ಮೋನ್ ಪ್ರಮಾಣವನ್ನು ತಗ್ಗಿಸಿ, ಮನಸ್ಸಿಗೆ ಶಾಂತಿ ನೀಡುತ್ತದೆ.
5. ಈ ಭಾಗಕ್ಕೆ ಭೇಟಿ ನೀಡುವ ಸುತ್ತಮುತ್ತಲಿನ ರೈತರಿಗೆ ರಾಸಾಯನಿಕ ಮುಕ್ತ, ಸಹಜ ಕೃಷಿ ಮತ್ತು ಅರಣ್ಯ ಕೃಷಿ ಮಾಡಲು ಇದು ಉತ್ತಮ ಪ್ರೇರಣೆಯಾಗಿದೆ.

ಪರಿಷತ್‌ನ 7 ಸ್ಥಾನಕ್ಕೆ ಜೂ.18ಕ್ಕೆ ಮತದಾನ

■ **ವಿಕ ಸುದ್ದಿಲೋಕ** ಬೆಂಗಳೂರು

ವಿಧಾನಸಭೆಯಿಂದ ವಿಧಾನಪರಿಷತ್‌ನ 7 ಸ್ಥಾನಗಳಿಗೆ ನಡೆದಿರುವ ಚುನಾವಣೆಗೆ ನಾಮಪತ್ರ ಸಲ್ಲಿಸಲು ಕಡೆಯ ದಿನವಾಗಿದ್ದ ಗುರುವಾರ ಎಂಟು ಅಭ್ಯರ್ಥಿಗಳ ಪೈಕಿ ಯಾರೊಬ್ಬರೂ ನಾಮಪತ್ರ ಹಿಂಪಡೆಯದ ಕಾರಣ ಇದೇ 18ರಂದು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದೆ. ಅದೇ ದಿನ ಸಂಜೆ 5 ಗಂಟೆಗೆ ಮತ ಎಣಿಕೆ ನಡೆಯಲಿದೆ.

ಈ ಚುನಾವಣೆಗೆ ಕಾಂಗ್ರೆಸ್‌ನಿಂದ ಬಿ.ಕೆ. ಹರಿಪ್ರಸಾದ್, ತಿಪ್ಪಣ್ಣಪ್ಪ ಕಮಕನೂರ, ವಿ.ಪಿ. ಮೋಹನ್, ಮಳವಳ್ಳಿ ಶಿವಣ್ಣ, ವಿನಯ್ ಕಾರ್ತಿಕ್, ಬಿಜೆಪಿಯಿಂದ ರಘು ಕೌಟಿಲ್ಯ, ಲಿಂಗರಾಜ್ ಪಾಟೀಲ್ ಹಾಗೂ ಜೆಡಿಎಸ್‌ನಿಂದ ಗೋವಿಂದ ರಾಜು ಕಣದಲ್ಲಿದ್ದಾರೆ. ವಿಧಾನಸಭೆಯಲ್ಲಿ ಪಕ್ಷಗಳ ಬಲಾಬಲ ಆಧರಿಸಿ 7 ಸ್ಥಾನಗಳ ಪೈಕಿ ಕಾಂಗ್ರೆಸ್ 4 ಹಾಗೂ ಬಿಜೆಪಿ 2 ಸ್ಥಾನಗಳನ್ನು ಅನಾಯಾಸವಾಗಿ ಪಡೆಯಲಿವೆ. ಬಾಕಿ 1 ಸ್ಥಾನಕ್ಕೆ ಕಾಂಗ್ರೆಸ್ ಹಾಗೂ ಜೆಡಿಎಸ್ ಅಭ್ಯರ್ಥಿ ನಡುವೆ ಗೆಲುವಿಗೆ ತೀವ್ರ ಹಣಾಹಣಿ ನಡೆಯುವ ಸಾಧ್ಯತೆಯಿದೆ.

ಈ ನಡುವೆ ಕಾಂಗ್ರೆಸ್ ಅಭ್ಯರ್ಥಿ ಮಳವಳ್ಳಿ ಶಿವಣ್ಣ ತಮ್ಮ ವಿರುದ್ಧದ ಕೆಲವು ಪ್ರಕರಣಗಳ ವಿವರಗಳನ್ನು ನಾಮಪತ್ರದೊಂದಿಗಿನ ಪ್ರಮಾಣ ಪತ್ರದಲ್ಲಿ ನಮೂದಿಸದೆ ಮರೆಮಾಚಿದ್ದಾರೆ ಎಂದು ಆರೋಪಿಸಿ ಜೆಡಿಎಸ್‌ನ ಗೋವಿಂದರಾಜು ಚುನಾವಣಾಧಿಕಾರಿ ಎಂ.ಕೆ.ವಿಶಾಲಾಕ್ಷಿ ಅವರಿಗೆ ಗುರುವಾರ ದೂರು ನೀಡಿರುವ ಬೆಳವಣಿಗೆ ನಡೆದಿದೆ.

ಈ ವಿಚಾರ ತಿಳಿದ ಮಳವಳ್ಳಿ ಶಿವಣ್ಣ ಚುನಾವಣಾಧಿಕಾರಿಗಳನ್ನು ಭೇಟಿಯಾಗಿ ಸಮಜಾಯಿಷಿ ನೀಡಿದ್ದಾರೆ. ತಾವು ಕೆಲವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ್ದು, ಅದನ್ನು ರದ್ದುಪಡಿಸುವಂತೆ ಕೋರಿ ಅವರು ನ್ಯಾಯಾಲಯದ ಮೊರೆ ಹೋಗಿದ್ದಾರೆ. ಹಾಗಾಗಿ ಆ ಪ್ರಕರಣಗಳ ವಿವರ ಉಲ್ಲೇಖಿಸಿಲ್ಲ ಎಂಬುದಾಗಿ ಸ್ಪಷ್ಟನೆ ನೀಡಿದ್ದಾರೆ.

> ಅಭ್ಯರ್ಥಿಗಳಾದ ಗೋವಿಂದರಾಜು ಹಾಗೂ ಶಿವಣ್ಣ ಅವರು ಪ್ರತ್ಯೇಕವಾಗಿ ಸಲ್ಲಿಸಿರುವ ಮನವಿ ಪತ್ರಗಳ ಕಾನೂನಾತ್ಮಕ ಪರಿಶೀಲನೆ ಕಾರ್ಯ ನಡೆದಿದೆ. ಹಾಗೆಯೇ ಇಂತಹ ವಿಚಾರವಾಗಿ ಆಯೋಗದ ಮಾರ್ಗಸೂಚಿಗಳಿದ್ದರೆ ಆ ಬಗ್ಗೆಯೂ ಪರಿಶೀಲಿಸಲಾಗುತ್ತಿದ್ದು, ಶುಕ್ರವಾರ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.
> -ಎಂ.ಕೆ.ವಿಶಾಲಾಕ್ಷಿ, ಚುನಾವಣಾಧಿಕಾರಿ

ಮೊದಲೇ ಸಲ್ಲಿಸಬೇಕಿತ್ತು: ನಾಮಪತ್ರ ಸಲ್ಲಿಕೆಗೆ ಜೂ.8 ಕಡೆಯ ದಿನವಾಗಿತ್ತು. ಜೂ.9ರಂದು ನಾಮಪತ್ರಗಳ ಪರಿಶೀಲನೆ ಕಾರ್ಯ ನಿಗದಿಯಾಗಿತ್ತು. ಹಾಗಾಗಿ ಜೂ.9ರಂದು ಬೆಳಗ್ಗೆ 11 ಗಂಟೆಯೊಳಗೆ ಅಥವಾ ನಾಮಪತ್ರಗಳ ಪರಿಶೀಲನೆ ಕಾರ್ಯ ಪ್ರಗತಿಯಲ್ಲಿದ್ದಾಗ ಆಕ್ಷೇಪಣೆ ಸಲ್ಲಿಸಿದ್ದರೆ ಮಾನ್ಯತೆ ಇರುತ್ತಿತ್ತು. ಆದರೆ ಪರಿಶೀಲನೆ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಸಲ್ಲಿಕೆಯಾಗದ ಕಾರಣ ಎಲ್ಲ ಅಭ್ಯರ್ಥಿಗಳ ನಾಮಪತ್ರ ಕ್ರಮಬದ್ಧವಾಗಿರುವುದಾಗಿ ಪ್ರಕಟಿಸಲಾಗಿದೆ. ಹಾಗಾಗಿ ಈಗ ಸಲ್ಲಿಕೆಯಾಗಿರುವ ಆಕ್ಷೇಪಣೆಗೆ ಹೆಚ್ಚಿನ ಮಹತ್ವ ಇರುವುದಿಲ್ಲ ಎಂದು ಮೂಲಗಳು ಹೇಳಿವೆ.

ಪ್ರಧಾನಿ ಮೋದಿ ಆಡಳಿತ ಸುವರ್ಣಾಕ್ಷರದ್ದು: ಬಿವೈವಿ

■ **ವಿಕ ಸುದ್ದಿಲೋಕ** ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿಯವರ ಆಡಳಿತದ ದಿನಗಳು ಸುವರ್ಣಾಕ್ಷರದಲ್ಲಿ ಬರೆದಿಡುವಂಥದ್ದು. ದೀರ್ಘಕಾಲ ನಿರಂತರವಾಗಿ ಚುನಾಯಿತ ಪ್ರಧಾನಿಯಾಗಿ ಆಡಳಿತ ನಡೆಸಿದ ಅವರು ಕೇವಲ ನೆಹರು ಅವರ ದೀರ್ಘಾವಧಿ ಆಡಳಿತ ದಾಖಲೆಯನ್ನಷ್ಟೇ ಸರಿಗಟ್ಟಿಲ್ಲ, ಅವರಿಗಿರುವ ಆಡಳಿತ ಅನುಭವವೂ ಒಂದು ದಾಖಲೆ. ಗುಜರಾತ್ ಸಿಎಂ ಆಗಿಯೂ ಅವರು ಅಪಾರ ಆಡಳಿತ ಅನುಭವ ಹೊಂದಿದ್ದರು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಬಣ್ಣಿಸಿದ್ದಾರೆ.

ಬಿಜೆಪಿ ಕಚೇರಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ''ಹಿಂದೆ ಕೇಂದ್ರದಲ್ಲಿದ್ದ ಕಾಂಗ್ರೆಸ್ ಸರಕಾರದಲ್ಲಿ ಭ್ರಷ್ಟಾಚಾರರಹಿತ ಆಡಳಿತ ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿ ಇತ್ತು. 10 ವರ್ಷ ಯುಪಿಎ ಸರಕಾರದ ಆಡಳಿತದಿಂದ ದೇಶದ ಜನ ಬೇಸತ್ತಿದ್ದರು. ಇದಕ್ಕೆಲ್ಲ ಪರಿಹಾರವೆಂಬಂತೆ ನರೇಂದ್ರ ಮೋದಿ ಅವರು ದೇಶದ ಚುಕ್ಕಾಣಿ ಹಿಡಿದು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ. ಹಗರಣವಿಲ್ಲದಂತೆ ಆಡಳಿತ ನಡೆಸಿರುವುದು ದಾಖಲೆಯಾಗಿದೆ,'' ಎಂದು ಹೇಳಿದರು.

ರಾಹುಲ್ ಭೇಟಿಯಾದ ಬಿಕೆಎಚ್

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷರಾಗಿ ನೇಮಕಗೊಂಡಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರನ್ನು ದಿಲ್ಲಿಯಲ್ಲಿ ಭೇಟಿಯಾದ ಬಿ.ಕೆ.ಹರಿಪ್ರಸಾದ್ ಧನ್ಯವಾದ ಅರ್ಪಿಸಿದ್ದಾರೆ. ಕೆಪಿಸಿಸಿ ಅಧ್ಯಕ್ಷರಾದ ಬಳಿಕ ಮೊದಲ ಬಾರಿಗೆ ದಿಲ್ಲಿಗೆ ಭೇಟಿ ನೀಡಿದ ಹರಿಪ್ರಸಾದ್ ಹೈಕಮಾಂಡ್‌ನ ಇತರ ನಾಯಕರನ್ನೂ ಭೇಟಿಯಾಗಿ ಕೃತಜ್ಞತೆ ಸಲ್ಲಿಸಿದರು. ಜತೆಗೆ ದಿಲ್ಲಿಯಲ್ಲಿ ನಡೆದ ನಾನಾ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳ ಸಭೆಯಲ್ಲೂ ಹರಿಪ್ರಸಾದ್ ಭಾಗಿಯಾಗಿದ್ದಾರೆ.

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.
RNI No. 71653/99
Vol. 27 Issue No.162

ಧರ್ಮಸ್ಥಳ ವಿರುದ್ಧ ₹200 ಕೋಟಿ ಭಾರಿ ಷಡ್ಯಂತ್ರ?

ವೀರೇಂದ್ರ ಹೆಗ್ಗಡೆ ವಿರುದ್ಧ ಸ್ಕೆಚ್। ನಟ ಪ್ರಕಾಶ್ ರಾಜ್ ಸೇರಿ ಹಲವರ ಹೆಸರು ಪ್ರಸ್ತಾಪಿಸಿದ ಮುಖ್ಯ ಸಾಕ್ಷಿ

ವಿಕ ಸುದ್ದಿಲೋಕ ಬೆಂಗಳೂರು

ಧರ್ಮಸ್ಥಳ ಗ್ರಾಮದ ವಿವಾದಾತ್ಮಕ 'ತಲೆಬುರುಡೆ ಪ್ರಕರಣ'ದ ತನಿಖಾ ವರದಿಯನ್ನುಬಹಿರಂಗಪಡಿಸುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿ ಸಂಬಂಧ ಹೈಕೋರ್ಟ್ ಗುರುವಾರ ರಾಜ್ಯ ಸರಕಾರ ಮತ್ತು ಎಸ್ಐಟಿಗೆ ನೋಟಿಸ್ ಜಾರಿಗೊಳಿಸಿದೆ. ಇದೇ ವೇಳೆ, ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ನಟ ಪ್ರಕಾಶ್ ರಾಜ್, ಗಿರೀಶ್ ಮಟ್ಟಣ್ಣವರ್‌ಸೇರಿದಂತೆ ಹಲವು ಗಣ್ಯರು ಸುಮಾರು 200 ಕೋಟಿ ರೂಪಾಯಿ ವೆಚ್ಚದ ಬೃಹತ್ ಷಡ್ಯಂತ್ರ ರೂಪಿಸಿದ್ದರು ಎಂಬ ಆರೋಪ ಅರ್ಜಿಯಲ್ಲಿ ಕೇಳಿಬಂದಿದೆ.

ಪ್ರಕರಣದ ತನಿಖೆಯ ಪ್ರಸ್ತುತ ಸ್ಥಿತಿಗತಿ ಬಗ್ಗೆ ಮಾಹಿತಿ ನೀಡಲು ಎಸ್ ಐಟಿಗೆ ಸೂಚಿಸಬೇಕು ಎಂದು ಕೋರಿ ಚಿನ್ನಯ್ಯ ಎಂಬುವವರು ಸಲ್ಲಿಸಿದ್ದ ಅರ್ಜಿ, ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ಪೀಠದ ಮುಂದೆ ವಿಚಾರಣೆಗೆ ಬಂದಿತು. ಉಭಯ ಪಕ್ಷಗಳ ವಾದ ಆಲಿಸಿದ ನ್ಯಾಯಾಲಯ, ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿತಲ್ಲದೆ, ತನಿಖೆಯ ವಿವರ ಒದಗಿಸುವಂತೆ ಸರಕಾರಕ್ಕೆ ನಿರ್ದೇಶನ ನೀಡಿ ವಿಚಾರಣೆಯನ್ನು ಜೂನ್ 29ಕ್ಕೆ ಮುಂದೂಡಿತು.

ಬುರುಡೆ ಪ್ರಕರಣದ ಎಸ್ಐಟಿ ತನಿಖಾ ವರದಿ ಕೋರಿ ಹೈಕೋರ್ಟ್‌ಗೆ ಅರ್ಜಿ; ಸರಕಾರ ಎಸ್ಐಟಿಗೆ ನೋಟಿಸ್

ಅರ್ಜಿದಾರರ ಪರ ವಕೀಲರು, ''ನಿಜವಾದ ಆರೋಪಿಗಳನ್ನು ಹೆಸರಿಸಿದ್ದರೂ ಎಸ್ಐಟಿ ಕ್ರಮ ಕೈಗೊಂಡಿಲ್ಲ, ಪ್ರಾಥಮಿಕ ವರದಿಯಲ್ಲಿರುವವರ ಮೇಲೆ ಸರಿಯಾದ ತನಿಖೆ ನಡೆದಿಲ್ಲ, ಇಷ್ಟು ದಿನಗಳಾದರೂ ಎಸ್ಐಟಿ ಎಫ್ಐಆರ್ ಸಂಖ್ಯೆ 39/2025ರ ತನಿಖೆ ಪೂರ್ಣಗೊಳಿಸಿಲ್ಲ, ಹಾಗಾಗಿ, ಎಸ್ ಐಟಿ ಹಾಗೂ ಸರಕಾರಕ್ಕೆ ನಿರ್ದೇಶನ ನೀಡಬೇಕು,'' ಎಂದು ಕೋರಿದರು.

ಪ್ರಕಾಶ್ ರಾಜ್ ಮತ್ತಿತರರ ಷಡ್ಯಂತ್ರ:ತನ್ನನ್ನು ದಾಳವಾಗಿ ಬಳಸಿಕೊಂಡು ಧರ್ಮಸ್ಥಳದ ಘನತೆಗೆ ಧಕ್ಕೆ ತರಲು ಸಂಚು ರೂಪಿಸಲಾಗಿತ್ತು ಎಂದು ಅರ್ಜಿದಾರ ಚಿನ್ನಯ್ಯ ಉಲ್ಲೇಖಿಸಿದ್ದಾರೆ. ಈ ಕುರಿತು ಎಸ್ಐಟಿ ತನಿಖೆ ಪೂರ್ಣಗೊಳಿಸಲು ನಿರ್ದೇಶನ ನೀಡಬೇಕೆಂದು ಕೋರಿರುವ ಅವರು, ಈ ಭಾರಿ ಷಡ್ಯಂತ್ರದಲ್ಲಿನಟ ಪ್ರಕಾಶ್ ರಾಜ್, ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣವರ್, ವಿಠಲ್ ಗೌಡ, ಬೆಂಗಳೂರಿನ ಜಯಂತ್ ಹಾಗೂ ಯೂಟ್ಯೂಬರ್‌ಗಳಾದ ಸಮೀರ್ ಎಂ.ಡಿ., ಅಜಯ್ ಮತ್ತು ದಿನೇಶ್ ಸೇರಿದಂತೆ ಹಲವರ ಪಾತ್ರವಿದೆ ಎಂದು ಹೆಸರಿಸಿದ್ದಾರೆ.

ಚಿನ್ನಯ್ಯ ಅರ್ಜಿಯ ಸಾರಾಂಶ

- ವಿಠಲ್‌ಗೌಡ ತಮ್ಮನ್ನು (ಚಿನ್ನಯ್ಯ) ಮಹೇಶ್ ಶೆಟ್ಟಿ ತಿಮರೋಡಿಗೆ ಪರಿಚಯಿಸಿದರು. ಧರ್ಮಸ್ಥಳದಲ್ಲಿ ಅನೇಕ ಶವಗಳನ್ನು ದಹನ ಮಾಡಲಾಗಿದೆ ಎಂದಿದ್ದರು. ನಂತರ ಗಿರೀಶ್ ಮಟ್ಟಣ್ಣವರ್, ವಿಠಲ್ ಗೌಡ, ಗಣೇಶ್ ಮತ್ತಿತರರು ಕೇರಳ, ತಮಿಳುನಾಡು ಸೇರಿ ಹಲವೆಡೆ ಕರೆದೊಯ್ದರು.
- ಆಗಿಂದಾಗ್ಗೆ 5 ಸಾವಿರ, 15 ಸಾವಿರ ಹಣ ನೀಡುತ್ತಿದ್ದರು. ಬೆಂಗಳೂರಿನ ಜಯಂತ್ ಮನೆಗೆ ಕರೆದೊಯ್ದು ತಲೆ ಬುರುಡೆ ಕೊಟ್ಟು ಕೈಯಲ್ಲಿ ಹಿಡಿದುಕೊಳ್ಳುವಂತೆ ಸೂಚಿಸಿ ಫೋಟೊ ತೆಗೆದುಕೊಂಡರು. ನಂತರ ಸುಜಾತಾ ಭಟ್‌ರೊಂದಿಗೆ ಮಟ್ಟಣ್ಣನವರ್ ತಮ್ಮನ್ನೂ ಸುಪ್ರೀಂಕೋರ್ಟ್‌ಗೆ ಕರೆದೊಯ್ದರು. ನಂತರ ಉಜಿರೆಯಲ್ಲಿ ತಿಮರೋಡಿ ನಿವಾಸದಲ್ಲಿ ಕೂಡಿ ಹಾಕಲಾಗಿತ್ತು. ಸಂಜೆ ವೇಳೆ ಮಟ್ಟಣ್ಣನವರ್ ಮತ್ತು ತಿಮರೋಡಿ ಅವರಿಗೂ ಮಸಾಜ್ ಮಾಡಲು ಒತ್ತಾಯಿಸಲಾಗುತ್ತಿತ್ತು. ವಕೀಲರು ಹೇಳಿದಂತೆ ಕೋರ್ಟ್‌ಗೆ ಹೇಳದಿದ್ದರೆ ಕೊಂದು ಅದೇ ಜಾಗದಲ್ಲಿ ಹೂಳುವುದಾಗಿ ಬೆದರಿಸಿದ್ದರು.
- ಸಮೀರ್‌ಎಂ.ಡಿ. ಅಜಯ್ ಅವರ ಯೂ ಟ್ಯೂಬ್ ಚಾನಲ್‌ಗಳಲ್ಲಿ ಅವರ ಸೂಚನೆಯಂತೆ ಹೇಳಿಸಿ ರೆಕಾರ್ಡ್ ಮಾಡಿಸಲಾಯಿತು. ತಲೆ ಬುರುಡೆ ನೀಡಿ ಪೊಲೀಸರಿಗೆ ದೂರು ಕೊಟ್ಟ ಬಳಿಕ ಕೇರಳದ ರೆಸಾರ್ಟ್‌ಗೆ ಕರೆದೊಯ್ದರು. ಅಲ್ಲಿ ನಟ ಪ್ರಕಾಶ್ ರಾಜ್‌ಗೆ ಕರೆ ಮಾಡಿ ಫೋನ್ ನೀಡಿದರು. ಪ್ರಕಾಶ್ ರಾಜ್ ತಮಿಳಿನಲ್ಲಿ ಮಾತನಾಡಿ ಮಟ್ಟಣ್ಣನವರ್ ಹೇಳಿಕೊಟ್ಟಂತೆ ಹೇಳಿಕೆ ನೀಡಬೇಕು ಎಂದಿದ್ದರು.
- ತಿಮರೋಡಿ ಹಾಗೂ ಮಟ್ಟಣ್ಣನವರ್ ಬಂಗಲೆಗುಡ್ಡದ ಸ್ಥಳ ಗುರುತಿಸಿ ಅಲ್ಲಿ ಉತ್ಖನನ ನಡೆಸಿ ಸರಕಾರದ ಹಣ ವ್ಯಯ ಮಾಡಿಸುವಂತೆ ಸೂಚಿಸಿದರು. ಯೋಜನೆಯ ಬಜೆಟ್ 200 ಕೋಟಿ ರೂ. ಇದ್ದು ವೀರೇಂದ್ರ ಹೆಗ್ಗಡೆ ಅವರನ್ನು ಜೈಲಿಗೆ ಕಳುಹಿಸಲು ಸಹಕರಿಸಿದರೆ 50 ಲಕ್ಷ ರೂ. ನೀಡುವುದಾಗಿ ಭರವಸೆ ನೀಡಿದರು.
- ತಿಮರೋಡಿ, ಮಟ್ಟಣ್ಣನವರ್, ವಿಠಲ್‌ಗೌಡ, ಜಯಂತ್, ಯೂಟ್ಯೂಬರ್‌ಗಳಾದ ಸಮೀರ್ ಎಂ.ಡಿ., ಅಜಯ್, ದಿನೇಶ್ ಅವರು ಹೇಳಿದ ಜಾಗಗಳನ್ನು ಎಸ್ಐಟಿಗೆ ತೋರಿಸುವಂತೆ ಸೂಚಿಸಿ ಹಾಗೆ ಮಾಡದಿದ್ದರೆ ತಮ್ಮ ಪತ್ನಿಯನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದರು. ಧರ್ಮಸ್ಥಳದ ವಿರುದ್ಧ ಅವರ ಷಡ್ಯಂತ್ರದಿಂದ ಭೀತನಾಗಿ ಸತ್ಯ ಹೇಳಲು ತೀರ್ಮಾನಿಸಿದೆ. ನಂತರ ಎಸ್ಐಟಿ ಮುಂದೆ ಷಡ್ಯಂತ್ರದ ಹೇಳಿಕೆ ನೀಡಿದೆ.

T&C apply. *Section 80E exemption is subject to the old tax regime as per the Income Tax Act, 1961. **As per the Union Budget 2025-26. The education loan facility provided by Credila Financial Services Limited will be at the sole discretion of the Company and within the Company's prescribed credit and underwriting norms/guidelines prevailing at the time of processing and disbursing the education loan. The Company maintains the right to change the interest rate at any time and at its sole discretion, without prior notice. Formerly known as HDFC Credila Financial Services Limited.

ಸಲೈನ್‌ನಲ್ಲಿ ವಿಷ ಬೆರೆಸಿ ಹತ್ಯೆ?

ಬೆಳಗಾವಿ: ಅಪಘಾತದಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದ ವೇಳೆ ಮಾಜಿ ಸೈನಿಕ ಹುಕ್ಕೇರಿ ತಾಲೂಕಿನ ಘೋಡಗೇರಿ ಗ್ರಾಮದ ಸಂದೀಪ ಮಂಜರಗಿ (46) ಮೃತಪಟ್ಟ ಪ್ರಕರಣದಲ್ಲಿ ಆತನ ಪತ್ನಿಯ ಸಂಚಿನ ಶಂಕೆ ವ್ಯಕ್ತವಾಗಿದೆ.



ನೀಟ್ ಅಭ್ಯರ್ಥಿಗಳಿಗೆ ಅನ್ಯಾಯವಾಗದಂತೆ ಕೌನ್ಸೆಲಿಂಗ್

■ **ವಿಕ ಸುದ್ದಿಲೋಕ** ಬೆಂಗಳೂರು

ವೈದ್ಯಕೀಯ, ದಂತ ವೈದ್ಯಕೀಯ ಸೀಟು ಬಯಸಿ ನೀಟ್ ಬರೆದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಅನ್ಯಾಯವಾಗದಂತೆ ಸಿಇಟಿ ಕೌನ್ಸೆಲಿಂಗ್ ಪ್ರಕ್ರಿಯೆ ನಡೆಸುವುದಾಗಿ ಅಭಯ ನೀಡಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ), ಸೀಟು ಹಂಚಿಕೆ ಬಗ್ಗೆ ತಲೆಕೆಡಿಸಿಕೊಳ್ಳದೆ ನಿಶ್ಚಿಂತೆಯಿಂದ ಜೂನ್ 21ರಂದು ನೀಟ್ ಬರೆಯುವಂತೆ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ತುಂಬಿದೆ.

ವಿಜಯ ಕರ್ನಾಟಕ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಹಮ್ಮಿಕೊಂಡಿರುವ 'ವಿಕ ಎಜುಕೇಷನ್ ಫೇರ್'ನಲ್ಲಿ ಗುರುವಾರ ಭಾಗವಹಿಸಿ ಮಾತನಾಡಿದ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ, ''ಮೆರಿಟ್ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳಿಗೆ ಸೀಟು ಕಲ್ಪಿಸಲು ಕೆಇಎ ಸಿದ್ಧತೆ ಮಾಡಿಕೊಂಡಿದೆ. ಹೀಗಾಗಿ, ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗದೇ ನಿರಾಳವಾಗಿ ನೀಟ್‌ಗೆ ತಯಾರಿ ನಡೆಸಿ,'' ಎಂದು ಸಲಹೆ ನೀಡಿದರು.

''ಈ ಬಾರಿ ಎಂಜಿನಿಯರಿಂಗ್ ಹಾಗೂ ವೈದ್ಯ ಕೋರ್ಸ್‌ಗಳಿಗೆ ಪ್ರತ್ಯೇಕವಾಗಿ ಕೌನ್ಸೆಲಿಂಗ್ ಪ್ರಕ್ರಿಯೆ ನಡೆಸುತ್ತಿರುವುದರಿಂದ ನೀಟ್ ಬರೆಯುವ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗದಂತೆ ಸೀಟು ಹಂಚಿಕೆಗೆ ಕ್ರಮ ವಹಿಸಲಾಗಿದೆ. ಎರಡನೇ ಸುತ್ತಿನ ಕೌನ್ಸೆಲಿಂಗ್ ವೇಳೆಗೆ ನೀಟ್ ಫಲಿತಾಂಶ ಹೊರಬೀಳುವ ನಿರೀಕ್ಷೆಯಿದೆ. ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್ ಕೋರ್ಸ್‌ಗಳಿಗೆ ಎರಡನೇ ಸುತ್ತಿನಲ್ಲಿ ಕೌನ್ಸೆಲಿಂಗ್‌ನಲ್ಲಿ ಭಾಗಿಯಾಗಲು ಅವಕಾಶ ಕಲ್ಪಿಸಲಾಗುವುದು,'' ಎಂದು ಭರವಸೆ ನೀಡಿದರು.

''ನೀಟ್ ಫಲಿತಾಂಶ ವಿಳಂಬ ಹಿನ್ನೆಲೆಯಲ್ಲಿ ಈ ಬಾರಿ ಪ್ರೀ ರೌಂಡ್ ಕೌನ್ಸೆಲಿಂಗ್ ನಡೆಸಲಿದ್ದೇವೆ. ಮೊದಲ ಸುತ್ತಿನಲ್ಲೇ ವಿಶೇಷಚೇತನರು, ಇತರೆ ವಿಶೇಷ ವರ್ಗಗಳನ್ನು ವರ್ಗೀಕರಣ ಮಾಡಲಿದ್ದೇವೆ. ಇದರಿಂದ ಹೆಚ್ಚಿನ ಅಪ್‌ಗ್ರೇಡ್‌ಗೆ ಅವಕಾಶ ಸಿಗಲಿದೆ. ಜತೆಗೆ, ಮಾರ್ಕ್ (ಅಂಕ) ಫಲಿತಾಂಶದ ಬಳಿಕವೂ ಆಪ್ಷನ್ (ಆಯ್ಕೆ/ಇಚ್ಛೆ) ದಾಖಲಿಸಲು ಅವಕಾಶ ಕಲ್ಪಿಸಲಾಗುತ್ತದೆ,'' ಎಂದರು.

2ನೇ ಸುತ್ತಿನ ಬಳಿಕ ಪ್ರವೇಶ ಕಡ್ಡಾಯ: ''ಈ ಹಿಂದೆ ಎರಡನೇ ಸುತ್ತಿನ ಕೌನ್ಸೆಲಿಂಗ್ ಬಳಿಕ, ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್ ಕೋರ್ಸ್‌ಗಳಿಗೆ ಕಡ್ಡಾಯವಾಗಿ ವಿದ್ಯಾರ್ಥಿಗಳು ಪ್ರವೇಶ ಪಡೆಯಬೇಕಿತ್ತು. ಎಂಜಿನಿಯರಿಂಗ್ ವಿದ್ಯಾರ್ಥಿಗಳು ಮುಂದಿನ ಸುತ್ತಿನ ಕೌನ್ಸೆಲಿಂಗ್ ವರೆಗೆ ಕಾದುನೋಡಲು ಅವಕಾಶ ನೀಡಲಾಗಿತ್ತು. ಆದರೆ, ಈ ಬಾರಿ ಎರಡನೇ ಸುತ್ತಿನ ಕೌನ್ಸೆಲಿಂಗ್ ಬಳಿಕವೂ ಎಲ್ಲರೂ ಕಡ್ಡಾಯವಾಗಿ ಹಂಚಿಕೆಯಾದ ಕಾಲೇಜುಗಳಿಗೆ ಪ್ರವೇಶ ಪಡೆಯಬೇಕು. ಪ್ರವೇಶ ಪಡೆಯದಿದ್ದರೆ ಕೌನ್ಸೆಲಿಂಗ್ ಪ್ರಕ್ರಿಯೆಯಿಂದ ಹೊರಬರಬೇಕು ಎಂಬ ನಿಯಮ ಜಾರಿಗೆ ತರಲಾಗುತ್ತಿದೆ,'' ಎಂದರು. ''2ನೇ ಸುತ್ತಿನಲ್ಲಿ ಕಾಲೇಜುಗಳಿಗೆ ದಾಖಲಾದ ವರಿಗೂ 3ನೇ ಸುತ್ತಿನ ಕೌನ್ಸೆಲಿಂಗ್‌ನಲ್ಲಿ ಅವಕಾಶ ಇರಲಿದೆ. ಮೂರನೇ ಸುತ್ತಿನ ಬಳಿಕ ಅಪ್‌ಗ್ರೇಡ್ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕವನ್ನು ವಾಪಸ್ ನೀಡಲು ವೈದ್ಯಕೀಯ ಶಿಕ್ಷಣ ಸಚಿವರ ಸಮ್ಮುಖದಲ್ಲಿ ಕಾಲೇಜುಗಳ ಆಡಳಿತ ಮಂಡಳಿಗಳು ಒಪ್ಪಿಗೆ ನೀಡಿವೆ. ಇದರಿಂದ ವಿದ್ಯಾರ್ಥಿಗಳು ಶುಲ್ಕ ವಾಪಸಾತಿ ಬಗ್ಗೆ ಆತಂಕಪಡುವ ಅಗತ್ಯವಿಲ್ಲ,'' ಎಂದು ಪ್ರಸನ್ನ ಸ್ಪಷ್ಟಪಡಿಸಿದರು.

'ವಿಕ ಎಜುಕೇಷನ್ ಫೇರ್'ಗೆ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ಚಾಲನೆ ನೀಡಿದರು. ವಿಜಯ ಕರ್ನಾಟಕ ಸಂಪಾದಕ ಸುದರ್ಶನ ಚನ್ನಂಗಿಹಳ್ಳಿ, ವಿಕ ಮತ್ತು ಬೆಂಗಳೂರು ಮಿರರ್ ಸಿಇಒ ದೀಪಕ್ ಸಲುಜ, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿವಿ ಕುಲಪತಿ ಪ್ರೊ.ಬಿ.ರಮೇಶ್, 'ಪ್ರೇಮದ ಊರಲಿ' ಚಿತ್ರದ ನಾಯಕಿ ರಮಿಕಾ ಶಿವು ಹಾಗೂ ನಾಯಕ ಶ್ರೀರಾಮ್ ಉಪಸ್ಥಿತರಿದ್ದರು.

ಕೋಟಾಗೂ ಕೆಇಎಗೂ ನೇರ ಸಂಬಂಧವಿಲ್ಲ

ಸರಕಾರದ ಆದೇಶದ ಪ್ರಕಾರ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಕೋಟಾದಲ್ಲಿ ಯಾರು ಅರ್ಹರಿದ್ದಾರೆ ಎಂಬುದನ್ನು ಪ್ರಕಟಿಸಿದ್ದೇವೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೂ ವಿವಿಧ ಇಲಾಖೆಗಳು ಮಾಡುವ ನಿಯಮಗಳಿಗೂ ನೇರ ಸಂಬಂಧ ಇರಲ್ಲ, ಕ್ರೀಡಾ ಕೋಟಾದಲ್ಲಿ ಆಯ್ಕೆ ಬಯಸುವ ಅಭ್ಯರ್ಥಿಗಳು ಕಳೆದ ಎರಡು ವರ್ಷಗಳಲ್ಲಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿರಬೇಕೆಂಬ ನಿಯಮವಿದೆ. ಕಳೆದ ವರ್ಷ 3,000 ವಿದ್ಯಾರ್ಥಿಗಳು ಇದರಡಿ ಅರ್ಜಿ ಸಲ್ಲಿಸಿದ್ದರು. ಕೆಲವರು ಗ್ರಾಮ ಪಂಚಾಯಿತಿ ಮಟ್ಟದ ಕ್ರೀಡೆಗಳ ಪ್ರಮಾಣಪತ್ರ ಸಲ್ಲಿಸಿ, ಈ ಕೋಟಾದಡಿ ಸೀಟು ಕ್ಲೇಮ್ ಮಾಡಿದ್ದರು. ಕ್ರೀಡಾ ಇಲಾಖೆಗೆ ಈ ಎಲ್ಲ ಪ್ರಮಾಣಪತ್ರಗಳನ್ನು ಸಲ್ಲಿಸಿದಾಗ ಕೇವಲ 25 ಜನರು ಅರ್ಹರಾದರು. ಅವರಿಗಷ್ಟೆ ಸೀಟು ಹಂಚಿಕೆ ಮಾಡಲಾಯಿತು'' ಎಂದರು.

ಮಧ್ಯವರ್ತಿಗಳಿಂದ ದೂರವಿರಿ

''ಎಂಜಿನಿಯರಿಂಗ್, ವೈದ್ಯಕೀಯ ಸೀಟು ಹಂಚಿಕೆಯ ಬಹುತೇಕ ಹೊಣೆಯನ್ನು ಕೆಇಎ ನಿರ್ವಹಿಸಲಿದೆ. ಮೆರಿಟ್ ಆಧಾರದಲ್ಲೇ ಅರ್ಹರಿಗೆ ಸೀಟು ಹಂಚಿಕೆಯಾಗಲಿದೆ. ಹೀಗಾಗಿ, ಸೀಟು ಕೊಡಿಸುತ್ತೇವೆಂಬ ಭರವಸೆ ನೀಡುವ ಮಧ್ಯವರ್ತಿಗಳಿಂದ ದೂರವಿರಬೇಕು,'' ಎಂದು ಎಚ್.ಪ್ರಸನ್ನ ಹೇಳಿದರು.

15ರಂದು ವಿಕ ನೇರ ಫೋನ್ ಇನ್



ವಿಕ ಫೋನ್‌ಇನ್

ಸಿಇಟಿ ಫಲಿತಾಂಶ ಪ್ರಕಟವಾದರೂ ಇನ್ನೂ ನೀಟ್ ನಡೆದಿಲ್ಲ. ಹೀಗಾಗಿ, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕೋರ್ಸ್‌ಗಳಿಗೆ ಪ್ರತ್ಯೇಕ ಕೌನ್ಸೆಲಿಂಗ್ ನಡೆಸಲು ಕೆಇಎ ನಿರ್ಧರಿಸಿದೆ. ಹಾಗಾದರೆ ಸೀಟು ಹಂಚಿಕೆ ಪ್ರಕ್ರಿಯೆ ಹೇಗೆ? ಎಷ್ಟು ಹಂತಗಳಲ್ಲಿ ಕೆಇಎ ಸೀಟು ಹಂಚಿಕೆಗೆ ಕೌನ್ಸೆಲಿಂಗ್ ನಡೆಸಲಿದೆ. ಎಂಜಿನಿಯರಿಂಗ್, ವೈದ್ಯಕೀಯ ಕೋರ್ಸ್‌ಗಳ ಶುಲ್ಕ, ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿನ ಗೊಂದಲಗಳ ಬಗ್ಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಮಾಹಿತಿ ಹಂಚಿಕೊಳ್ಳಲಿದ್ದಾರೆ.ಇದೇ ಜೂನ್ 15ರಂದು (ಸೋಮವಾರ) ಮಧ್ಯಾಹ್ನ 3ರಿಂದ 4 ಗಂಟೆವರೆಗೆ ನಡೆಯಲಿರುವ ವಿಕ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಅವರು ವಿದ್ಯಾರ್ಥಿಗಳು ಹಾಗೂ ಪೋಷಕರ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ.

ದೂರವಾಣಿ ಸಂಖ್ಯೆ: 080 40877665

ಸೈಬರ್ ಸೆಕ್ಯೂರಿಟಿಯಲ್ಲಿ ಎಐ



2016ರ ಆಗಸ್ಟ್ 4ರಂದು ಮೊತ್ತ ಮೊದಲ ಬಾರಿಗೆ ಸ್ವಯಂಚಾಲಿತ ಸೈಬರ್ ಸೆಕ್ಯೂರಿಟಿಯು ಸಾಧ್ಯ ಎಂಬುದನ್ನು ಜಗತ್ತು ಡಿಎಆರ್‌ಪಿಎ (DARPA) ಆಯೋಜಿಸಿದ ಸೈಬರ್ ಗ್ರ್ಯಾಂಡ್ ಚಾಲೆಂಜ್‌ನಲ್ಲಿ ಕಂಡುಕೊಂಡಿತ್ತು. ಸೈಬರ್ ದಾಳಿಯಾದಾಗ ಆ ಕಂಗಾಲಿನ ಸಮಯದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್‌ಗಳು ಸೇರಿ ಲಕ್ಷಾಂತರ ಸಾಲುಗಳ ಕೋಡ್‌ಗಳಲ್ಲಿರುವ ದೋಷಗಳನ್ನು ಹುಡುಕಿ, ಸೈಬರ್ ದಾಳಿಕೋರರ ಮನಸ್ಥಿತಿಯನ್ನು ಅರ್ಥ ಮಾಡಿಕೊಂಡು, ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರುವುದು ಅಷ್ಟು ಸುಲಭದ ಮಾತಲ್ಲ. ಅದಕ್ಕಾಗಿ ಕೃತಕ ಬುದ್ಧಿಮತ್ತೆಯ ನೆರವು ಬೇಕೇ ಬೇಕು. ಎಐ ಇದ್ದರೂ ಪ್ರತಿವರ್ಷ ಸುಮಾರು 500 ಶತಕೋಟಿ ಡಾಲರ್‌ಗಳಷ್ಟು ಹಣ ಸೈಬರ್ ಭದ್ರತೆಗೆ ವ್ಯಯವಾಗುತ್ತದೆ. ಸೈಬರ್ ಸೆಕ್ಯೂರಿಟಿ ಹೆಚ್ಚಿಸಲು ಎಷ್ಟೇ ಪ್ರಬಲವಾದ ಎಐ ಬಂದರೂ ರಷ್ಯಾ, ಚೀನಾ, ಇರಾನ್ ಹಾಗೂ ಉತ್ತರ ಕೊರಿಯಾದ ಹ್ಯಾಕರ್‌ಗಳು ಒಂದು ಹೆಜ್ಜೆ ಮುಂದೆಯೇ ಇರುತ್ತಾರೆ. ಇತ್ತೀಚೆಗೆ ಅಭಿವೃದ್ಧಿಗೊಂಡ ಜೆನ್-ಎಐ ಆಧಾರಿತ ಎಐ ಮಾದರಿಗಳು ಸೈಬರ್ ಸೆಕ್ಯೂರಿಟಿ ಹೆಚ್ಚಿಸಲು ಸಹಾಯಕಾರಿಯಾಗಿವೆ. ಫೈರ್‌ವಾಲ್ ಭೇದಿಸುವ ಮೊದಲೇ ಅವು ಸೈಬರ್ ದಾಳಿಕೋರರು ಹಾವಿನ ಹೆಜ್ಜೆಯನ್ನು ಪತ್ತೆ ಮಾಡಿ ತಕ್ಕನಾದ ಸುರಕ್ಷತೆಯ ಬಲೆಯನ್ನು ಬೀಸಬಲ್ಲವು!

ಸ್ಕ್ಯಾನ್ ಮಾಡಿ ಎಐ ಕುರಿತು ಪ್ರಶ್ನೆ ಕೇಳಿ

■ **ವಿಕ್ರಂ ಜೋಶಿ**
ಎಐ ವಿಶ್ಲೇಷಕರು

ವೈಕುಂಠ ಸಮಾರಾಧನೆ

ಬಿ.ಟಿ ರಮೇಶ್ (1953–2026)
ಇಂಜಿನಿಯರ್ ಇನ್ ಚೀಫ್ ಬಿಬಿಎಂಪಿ (ನಿ)
ಇವರು ದಿನಾಂಕ 03.06.2026 ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ತತ್ಸಂಬಂಧವಾಗಿ
ನುಡಿ ನಮನ ಮತ್ತು ವೈಕುಂಠ ಸಮಾರಾಧನೆಯನ್ನು ನೆರವೇರಿಸಲಾಗುವುದು
ದಿನಾಂಕ : 13.06.2026 ಶನಿವಾರ ಸಮಯ : ಮಧ್ಯಾಹ್ನ 12 ಗಂಟೆಗೆ
ಸ್ಥಳ: ಶ್ರೀ ರಾಜಹನ್ಸ್ ಕನ್ವೆನ್ಷನ್ ಹಾಲ್
#10, ಪ್ರಮುಖ್ ಸ್ವಾಮಿ ಮಹಾರಾಜ್ ರಸ್ತೆ, ಅಗ್ನಿಶಾಮಕ ಠಾಣೆಯ ಪಕ್ಕದಲ್ಲಿ,
ವೆಸ್ಟ್ ಆಫ್ ಕಾರ್ಡ್ ರೋಡ್, ರಾಜಾಜಿನಗರ, ಬೆಂಗಳೂರು-560010.
ತಾವು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ
ಇಂತಿ ದುಃಖತಪ್ತ : ಕುಟುಂಬ ವರ್ಗದವರು

ಭೂಮಿ ಉಳುಮೆಯ ಯಂತ್ರೋಪಕರಣ ಬಾಡಿಗೆ ದುಬಾರಿ

ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ಇಂಧನ ಬೆಲೆ ಹೆಚ್ಚಳ | ಮುಂಗಾರು ಬಿತ್ತನೆಗೆ ರಸಗೊಬ್ಬರ ಕೊರತೆ | ದಿಕ್ಕೆಟ್ಟ ರೈತರು

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ಮುಂಗಾರು ಚುರುಕುಗೊಂಡಿದೆ. ಇದರ ಬೆನ್ನಲ್ಲೇ ರೈತರಿಗೆ ರಸಗೊಬ್ಬರದ ಕೊರತೆ ಒಂದೆಡೆಯಾದರೆ, ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಿಂದಾಗಿ ಟ್ರ್ಯಾಕ್ಟರ್‌ನಂತಹ ಉಳುಮೆ ಯಂತ್ರಗಳ ಬಾಡಿಗೆಯೂ ದುಬಾರಿಯಾಗಿದ್ದು ರೈತರು ಕಂಗಾಲಾಗಿದ್ದಾರೆ.

ರಾಜ್ಯದಲ್ಲಿ 38 ಸಾವಿರ ಮೆಟ್ರಿಕ್ ಟನ್ ರಸಗೊಬ್ಬರದ ಕೊರತೆ ಇದೆ. 14 ಸಾವಿರ ಟನ್ ಯೂರಿಯಾ ಕೊರತೆಯಿದ್ದು, ಮಧ್ಯಪ್ರಾಚ್ಯ ಯುದ್ಧದ ಕಾರಣದಿಂದ ಪೂರೈಕೆ ತಡವಾಗಿದೆ ಎಂದು ಸ್ವತಃ ಮಾಜಿ ಸಚಿವ ಎನ್. ಚಲುವರಾಯಸ್ವಾಮಿ ಅವರೇ ಹೇಳಿದ್ದರು. ಜತೆಗೆ, ಪೆಟ್ರೋಲ್, ಡೀಸೆಲ್ ದರ ದುಬಾರಿಯಾದ ಹಿನ್ನೆಲೆಯಲ್ಲಿ ಉಳುಮೆಗೆ ಬಳಸುವ ಟ್ರ್ಯಾಕ್ಟರ್‌ಗಳ ಬಾಡಿಗೆಯೂ ದುಬಾರಿಯಾಗಿದೆ. ಗಂಟೆಗೆ 900-1000 ರೂ. ದರ ಇದ್ದದ್ದು ಈಗ ಏಕಾಏಕಿ 1200-1300 ರೂ. ತಲುಪಿದೆ. ಜತೆಗೆ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕೃಷಿ ಇಲಾಖೆಗೆ ಸಚಿವರೂ ಇಲ್ಲದಿರುವುದರಿಂದ ಅಧಿಕಾರಿಗಳ ಮೇಲೆ ದೊಡ್ಡ ಜವಾಬ್ದಾರಿ ಬಿದ್ದಿದೆ.

ರಾಜ್ಯಕ್ಕೆ ಪೂರ್ವ ಮುಂಗಾರು ಹಾಗೂ ಮುಂಗಾರು ಹಂಗಾಮಿನಲ್ಲಿ (ಜೂನ್‌ನಿಂದ ಸೆಪ್ಟೆಂಬರ್ ಅಂತ್ಯದವರೆಗೆ) ಒಟ್ಟಾರೆ 30.05 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರದ ಅಗತ್ಯವಿದ್ದು, ಕೇಂದ್ರ ಸರಕಾರವು ರಾಜ್ಯಕ್ಕೆ ಏಪ್ರಿಲ್‌ನಲ್ಲಿ 4.06 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಹಂಚಿಕೆ ಮಾಡಿದೆ. ಇದೂ ಸೇರಿದಂತೆ ರಾಜ್ಯದಲ್ಲಿ ಸದ್ಯ 14.35 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನಿದೆ ಎಂದು ಹೇಳಲಾಗುತ್ತಿತ್ತು. ಆದರೆ, ಈಗ ರಸಗೊಬ್ಬರದ ಕೊರತೆ ಆದರಲ್ಲೂ ಹೊಲಗಳಿಗೆ ಡಿಎಪಿ ಬಳಸಲಾಗುತ್ತಿತ್ತು. ಅದರ ಕೊರತೆ ಹಿನ್ನೆಲೆಯಲ್ಲಿ ಕಾಂಪ್ಲೆಕ್ಸ್ ಹಾಕುವ ಆಲೋಚನೆಯಲ್ಲಿರುವ ರೈತರಿಗೆ ಅದೂ ಕೂಡ ಶಾಕ್ ನೀಡಿದೆ. 2000 ರೂ.ಗೆ ಸಿಗುತ್ತಿದ್ದುದು ಈಗ 50 ಕೆ.ಜಿ ಮೂಟೆಗೆ 2,300-2,500 ರೂ.ವರೆಗೆ ಏರಿಕೆಯಾಗಿದೆ.

ಮಧ್ಯಪ್ರಾಚ್ಯ ಯುದ್ಧವು ಕಚ್ಚಾ ವಸ್ತುಗಳ ಸರಬರಾಜು ಸರಪಳಿಯನ್ನೇ ತುಂಡರಿಸಿದ್ದು, ರಸಗೊಬ್ಬರ ಪೂರೈಕೆ ಮೇಲೂ ಯುದ್ಧದ ಕಾರ್ಮೋಡ ಕವಿದಿದೆ. ಮಧ್ಯಪ್ರಾಚ್ಯ ಪ್ರದೇಶದ ಅಸ್ಥಿರತೆಯಿಂದಾಗಿ ದೇಶದಲ್ಲಿ ರಸಗೊಬ್ಬರ ಉತ್ಪಾದನೆಗೆ ಕಚ್ಚಾ ತೈಲ, ನೈಸರ್ಗಿಕ ಅನಿಲ, ನಾಫ್ತಾ ಸೇರಿದಂತೆ ಕಚ್ಚಾ ವಸ್ತುಗಳ ಕೊರತೆ ಎದುರಾಗಿದೆ. ಮತ್ತೊಂದೆಡೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅನಿಲ ಹಾಗೂ ಕಚ್ಚಾ ತೈಲದ ಬೆಲೆ ಏರಿಕೆಯಾಗಿರುವ ಪರಿಣಾಮ ರಸಗೊಬ್ಬರದ ಉತ್ಪಾದನಾ ವೆಚ್ಚ ಹೆಚ್ಚಳವಾಗಿ ಸಾಕಷ್ಟು ರಸಗೊಬ್ಬರ ಕಾರ್ಖಾನೆಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ, ಇದರಿಂದ ದೇಶದಲ್ಲಿ ರಸಗೊಬ್ಬರ ಉತ್ಪಾದನೆಯು ಶೇ.24.6ರಷ್ಟು ಕುಸಿದಿದ್ದು, ಕೊರತೆ ಉಂಟಾಗಿದೆ.

ಗಾಯದ ಮೇಲೆ ಬಾಡಿಗೆ ಬರೆ: ದಶಕದ ಹಿಂದೆ ಎತ್ತುಗಳ ಮೂಲಕ ರೈತರು ಕೃಷಿ ಮಾಡುತ್ತಿದ್ದರು. ಆದರೆ, ಇತ್ತೀಚಿನ ದಿನಗಳಲ್ಲಿ ರೈತರು ಎತ್ತುಗಳನ್ನು ಸಾಕುವುದನ್ನು ಕೈ ಬಿಟ್ಟಿರುವುದರಿಂದ ಉಳುಮೆ ಕಾರ್ಯಕ್ಕೆ ಟ್ರ್ಯಾಕ್ಟರ್‌ಗಳನ್ನೇ ಅವಲಂಬಿಸಬೇಕಾಗಿದೆ. ಹೀಗಾಗಿ, ಪೂರ್ವ ಮುಂಗಾರು ಆರಂಭವಾದ ಕೂಡಲೇ ಟ್ರ್ಯಾಕ್ಟರ್‌ಗಳಿಗೆ ಬೇಡಿಕೆ ಉಂಟಾಗುತ್ತದೆ. ಅದೇ ರೀತಿ ಈ ವರ್ಷವೂ ಆಗಿದೆ. ಕಳೆದ ವರ್ಷ ಟ್ರ್ಯಾಕ್ಟರ್ ಮೂಲಕ ಒಂದು ಎಕರೆ ಭೂಮಿ ಉಳುಮೆ ಮಾಡಲು ಗಂಟೆಗೆ 900ರಿಂದ 1,000 ರೂ. ಬಾಡಿಗೆಯಿತ್ತು. ಆದರೆ, ಈ ಬಾರಿ ಡೀಸೆಲ್ ದರ ಏರಿಕೆಯಾಗಿರುವುದರಿಂದ 1,200-1,300 ರೂ.ವರೆಗೆ ಏರಿಕೆಯಾಗಿದೆ. ಜತೆಗೆ, ರಸಗೊಬ್ಬರಗಳ ಬೆಲೆಯೂ ಹೆಚ್ಚಾಗಿದ್ದು, ಗಾಯದ ಮೇಲೆ ಬರೆ ಎಳೆದಂತಾಗಿದೆ ಎನ್ನುತ್ತಾರೆ ಕೋಲಾರ ಜಿಲ್ಲೆ ಶಿಡ್ಲಘಟ್ಟ ತಾಲೂಕಿನ ನಾಗಮಂಗಲ ಗ್ರಾಮದ ರೈತ ಮುನಿಯಪ್ಪ.

ಮಧ್ಯಪ್ರಾಚ್ಯ ಯುದ್ಧದ ಹಿನ್ನೆಲೆಯಲ್ಲಿ ರಸಗೊಬ್ಬರ ಉತ್ಪಾದನೆಯು ಕಚ್ಚಾ ಪದಾರ್ಥಗಳ ಮೇಲೆ ಪರಿಣಾಮ ಬೀರಿದ ಹಿನ್ನೆಲೆಯಲ್ಲಿ ಈ ಬಾರಿ ಡಿಎಪಿ ಕೊರತೆಯಾಗಿದೆ. ಆದರೆ, ಯೂರಿಯಾ ಕೊರತೆಯಿಲ್ಲ, ಆದರೂ, ಡಿಎಪಿಗೆ ಪರ್ಯಾಯವಾಗಿ ಕಾಂಪ್ಲೆಕ್ಸ್ ಮತ್ತು ನ್ಯಾನೊ ಡಿಎಪಿ ಬಳಸಲು ರೈತರಿಗೆ ಸೂಚನೆ ನೀಡಲಾಗಿದೆ. ಉಳಿದಂತೆ ಬಿತ್ತನೆ ಬೀಜ, ಇತರೆ ರಸಗೊಬ್ಬರಗಳು ಅಗತ್ಯ ಪ್ರಮಾಣದಲ್ಲಿವೆ.

-ಡಾ. ಜಿ.ಟಿ. ಪುತ್ರ, ನಿರ್ದೇಶಕ, ಕೃಷಿ ಇಲಾಖೆ

ರಸಗೊಬ್ಬರದ ವಿವರ

ಮಾದರಿ	ಬೇಡಿಕೆ (ಲಕ್ಷ ಮೆ.ಟನ್)	ದಾಸ್ತಾನು (ಲಕ್ಷ ಮೆ.ಟನ್)
ಡಿಎಪಿ	4	2.02
ಎಂಒಪಿ	2.12	92 ಸಾವಿರ
ಕಾಂಪ್ಲೆಕ್ಸ್	11.88	7.14
ಯೂರಿಯಾ	11.10	3.80
ಎಸ್‌ಎಸ್‌ಪಿ	95 ಸಾವಿರ	46 ಸಾವಿರ

(ಪ್ರತಿ ತಿಂಗಳು ಕೇಂದ್ರ ಸರಕಾರ ರಾಜ್ಯದ ಬೇಡಿಕೆಗೆ ಅನುಗುಣವಾಗಿ ಬಿಡುಗಡೆ ಮಾಡುತ್ತದೆ. ಹೀಗಾಗಿ, ದಾಸ್ತಾನು ಪ್ರಮಾಣದಲ್ಲಿ ಏರುಪೇರಾಗುತ್ತದೆ)

TIMES interact
Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

ಉದ್ಯೋಗ RECRUITMENT

SITUATION VACANT

ADMINISTRATION

EXECUTIVES

REQUIRED MARKETING EXECUTIVES (Female / Male) with 2Wheeler & Good Communication Skills Fresher & Experienced
SALARY+INCENTIVE WORK Location Peenya, Dodaballapura White, field & Hosur Call: 9342851347 Mail: bskblore@gmail.com

ಪಾರ್ಟ್ ಟೈಮ್ನಲ್ಲಿ 2ನೇ ಆದಾಯ ಬಯಸುವ ನಿವೃತ್ತರು ಮಹಿಳೆಯರು ನಿರುದ್ಯೋಗಿಗಳು ಪ್ರತಿದಿನ ನಿಮ್ಮ ಬಿಡುವಿನ ವೇಳೆಯಲ್ಲಿ ಹಣ ಸಂಪಾದಿಸುವ ಅವಕಾಶ. 9743309498

WE are Hiring For Banking Collection DRA Team Leader, Tele caller's & Field Executives Salary Upto 20K to 40K+ Incentives:- 9035617826/ 96115 67790

MARKETING, ADVERTISING & SALES

SALES

TELE-CALLING from home 150calls per day 250+ Incentive weekly payment.2)Door to door Business Cards distribution 4 to 8PM salry 9,000 +Bus pass. Babusapalya 99666 34511

WANTED: VAN SLAESMAN SALARY: 15000 - 25000. HARD WORKER AND GOOD COMMUNICATION NEEDED. CONTACT: 7339222015

OTHER VACANCIES

GENERAL

ತಕ್ಷಣ ಬೇಕಾಗಿದ್ದಾರೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಹೊರ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸಲು ಎಸ್ಟೇಟ್ ಆಫೀಸರ್- ಬಿ.ಇ. ಸಿವಿಲ್ ಪದವಿ, ಟ್ಯಾಲಿ ಆಪರೇಟರ್- ಬಿ.ಕಾಮ್ ಟ್ಯಾಲಿ ಪ್ರೈಮ್, ಸಹಾಯಕ ಮಾರಾಟ ವ್ಯವಸ್ಥಾಪಕರು - ಬಿ.ಕಾಮ್ ಟ್ಯಾಲಿ ಪ್ರೈಮ್, ಚಾಲಕರು ಎಸ್.ಎಸ್.ಎಲ್.ಸಿ. ತಲಾ 01 ಹುದ್ದೆ, ಸೆಕ್ಯೂರಿಟಿ ಗಾರ್ಡ್-ಏಳನೇ ತರಗತಿ 02 ಹುದ್ದೆ, ಅನುಭವ ಹೊಂದಿರುವ ಆಸಕ್ತರು ಸಂಪರ್ಕಿಸಿ: 91645 99888 / 97395 79888

ತಕ್ಷಣ ಬೇಕಾಗಿದ್ದಾರೆ: ಬಿ.ಕಾಂ/ ಬಿಬಿಎಂ (ಫೈನಾನ್ಸ್)/ ಬಿಇ(ಸಿಎಸ್‌ಇ. ಎಸ್/ಇ.ಇ)/ಎಂ.ಸಿ/ಎ/ಬಿ. ಸಿ.ಎ/ಬಿ.ಎಸ್ಸಿ (ಸಿಎಸ್)/ಡಿಗ್ರಿ ಇನ್ ಪಬ್ಲಿಕ್ ಹೆಲ್ತ್/ ಎಂ.ಕಾಂ/ಎಂ.ಬಿ.ಎ/ ಎಂಎಸ್ ಸಿ(ಮ್ಯಾಥ್/ಸ್ಟ್ಯಾಟಿಸ್ಟಿಕ್ಸ್)/ ಎಂ.ಎಫ್.ಎ ವಿತ್ ಟ್ಯಾಲಿ/ ಯಾವುದೇ ಡಿಗ್ರಿ ವಿದ್ಯಾರ್ಹತೆ ಹೊಂದಿರುವ 3 ವರ್ಷ ಅನುಭವ ವುಳ್ಳ ಎಸ್‌ಸಿ/ಎಸ್‌ಟಿ/ಜಿಎಂ ಅಭ್ಯರ್ಥಿಗಳು ಹೊರಗುತ್ತಿಗೆ ಆಧಾರದ ಮೇಲೆ ಸರ್ಕಾರಿ ಇಲಾಖೆ ಗಳಲ್ಲಿ ಕಾರ್ಯ ನಿರ್ವಹಿಸಲು ತಕ್ಷಣ ಬೇಕಾಗಿ ರುತ್ತಾರೆ. ವೇತನ (20,000 ರಿಂದ 50,000)* ಹಾಗೂ ಇಪಿಎಫ್ ಸೌಲಭ್ಯ ಇರುತ್ತದೆ. ಕೆಎಸ್‌ಎಫ್-9 ಕಾರ್ಪೋರೇಟ್ ಸರ್ವೀಸ್ ಪ್ರೈವೇಟ್ ಲಿಮಿಟೆಡ್. ಎಂ ಆರ್ ಮ್ಯಾನ್ಷನ್, ನಂ:26, 34/4, ಜ್ಞಾನ ಜ್ಯೋತಿ ನಗರ, ಮಲ್ಲತ್ತಹಳ್ಳಿ ಬಸ್ ನಿಲ್ದಾಣ, ರಿಂಗ್ ರೋಡ್, ಹೆಚ್.ಪಿ.ಪೆಟ್ರೋಲ್ ಬಂಕ್ ಹತ್ತಿರ, ಬೆಂಗಳೂರು- 560056. ಮೊಬೈಲ್ ನಂ: 8710930383, 7090798557/ ಫೋನ್ ನಂ:- 080231 83399 /23185599 ಇ-ಮೇಲ್:- cv.ksf9@gmail.com

ಕೆಲಸ ಖಾಲಿ ಇದೆ: ಕರ್ನಾಟಕದಾದ್ಯಂತ ಎಂಎನ್‌ಸಿ ಕಂಪನಿಗಳಾದ ಟಿವಿಎಸ್, ಬ್ರಿಟಾನಿಯಾ ಡೈರಿಗಳಿಗೆ ಹಾಗೂ ಆಫೀಸ್‌ಗಳಿಗೆ 7ನೇ, 10ನೇ, 12ನೇ ತರಗತಿ, ಐಟಿಐ, ಎನಿ ಡಿಗ್ರಿಯವರಿಗೆ ಬಂದ ದಿನವೇ ನೇರ ಆಯ್ಕೆ (ಮಾರ್ಕೆಟಿಂಗ್ ಅಲ್ಲ). ವಸತಿಯೂಟವಿರುತ್ತದೆ. ಸಂಬಳ: ರೂ. 15,000 - 46,000/- ಸಂಪರ್ಕಿಸಿ: 77608 35029

ಪ್ರೈವೇಟ್ ಲಿಮಿಟೆಡ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು 10th & PUC ಪಾಸ್ ಆಗಿರುವ 30 ವರ್ಷದೊಳಗಿನ ಯುವಕರು ಬೇಕಾಗಿದ್ದಾರೆ ರಾಜಾಜಿನಗರ ಸುತ್ತಮುತ್ತ ಇರುವವರಿಗೆ ಆದ್ಯತೆ ಮೊ: 9902891620 / 9845579620

START your Business with Zero Investment. Team Leader Position. Looking for a rewarding career opportunity? Benefits: Unlimited Incentive with PF & ESI. Flexible working hours. Special invitation for Retired, Housewife & Insurance Agents. More details call : 8073117939.

ಮಂಗಳೂರಿನ ಹೆಸರಾಂತ Agro Food Productಗಳಿಗೆ ಕರ್ನಾಟಕದಾದ್ಯಂತ ಡೀಲರ್ Appoint ಮಾಡಲು ಸೇಲ್ಸ್ ಆಫೀಸರ್ ಬೇಕಾಗಿದ್ದಾರೆ. 9880564474

RETIRED PERSONS

WANTED Men, Women - Office work, Full /Part Time, Age 25 to 65, SSLC, PUC, Degree. Earn Monthly Rs. 1 Lakh +, Free Europe Trip. Ct:9980670027

REQD Financial Consultants. Retd Govt officials/VRS/ Tax Consultants/ CA/CS/Auditors/ Bankers/Housewives/ Business Owners: 7204169733

SERVICES

HOTEL INDUSTRY

ಬೆಂಗಳೂರು ಪೀಣ್ಯ ಜಾಲಹಳ್ಳಿ ಕ್ರಾಸ್ನಲ್ಲಿರುವ ಫ್ಯಾಕ್ಟರಿ ಕ್ಯಾಂಟೀನ್ Supervisor cum Manager, ತರಕಾರಿ ಹೆಚ್ಚುವವರು , ಹೆಲ್ಪರ್ ಬೇಕಾಗಿದ್ದಾರೆ. ಊಟ, ವಸತಿ ಸೌಲಭ್ಯವಿದೆ ಸಂಪರ್ಕಿಸಿ 9591810814

ಬೆಂಗಳೂರು ದಾಬಸ್ -ಪೇಟೆಯಲ್ಲಿರುವ ಕ್ಯಾಂಟೀನ್ ಒಂದಕ್ಕೆ ದಕ್ಷಿಣ ಭಾರತ ಶೈಲಿ ಅಡುಗೆಯವರು, Counter boys, Helpers ಬೇಕಾಗಿದ್ದಾರೆ. ಊಟ ವಸತಿ ಉಚಿತ. ಸಂಪರ್ಕಿಸಿ 9591810812

TECHNICAL

ENGINEERS

CIVIL Engineer, 5+ years Experience, Office in Jakkur, Site North B'lore, Computer Knowledge Must. 9343771149 info@behlconstruction.com

JOB WANTED

HIRING NOW Cashier (Basic Computer Knowledge) Sales Man. Salary 20,000 – 35,000 Jayanagar Chickpet Contact: 9448121073

ಪ್ರವಾಸ TRAVEL

PACKAGE TOURS

14.6.2026 1 ದಿನ ಕೊಟ್ಟಿಯೂರು ಮಹದೇವ. 19.6.2026, 2 ದಿನ ಕೊಟ್ಟಿಯೂರು, ಮೃದಂಗ ಶೈಲೇಶ್ವರಿ, ಪರಸ್ಸಿನಿಕಡವು ಮುತ್ತಪ್ಪ, ಶ್ರೀ ರಾಜ ರಾಜೇಶ್ವರ ಇತ್ಯಾದಿ. 94814 33157.

TOURS & TRAVELS

9 ದಿನಗಳ ಅಸ್ಸಾಂ ಮೇಘಾಲಯ ಅರುಣಾಚಲ್ ಪ್ರದೇಶ್ ಪ್ರವಾಸ 1/7 8 ದಿನ ಗುಜರಾತ್ ಪ್ರವಾಸ 5/8/26 9 ದಿನಗಳ ಅಯೋಧ್ಯ ನೇಪಾಳ ಮುಕ್ತಿನಾಥ ಪ್ರವಾಸ 4/8, 13 ದಿನ ಚಾರ್ಧಾಮ್ ಪ್ರವಾಸ 26/8/2026, 9 ದಿನಗಳ ರಾಜಸ್ಥಾನ ಪ್ರವಾಸ 17/9, 7 ದಿನಗಳ ಕಾಶಿ ಪ್ರವಾಸ 16/8/26. ಸುವರ್ಣ ಯಾತ್ರ 6360146483 / 9008381022

27/06/2026 ರಿಂದ ನೇಪಾಳ ಮುಕ್ತಿನಾಥ್ ಕಠ್ಮಾಂಡು ಅಯೋಧ್ಯ ಕಾಶಿ ಪ್ರಯಾಗ್ ರಾಜ್ ವಿಮಾನದಲ್ಲಿ ಎಲ್ಲಾ ಸೇರಿ ರೂ 50000/- ಸಂಪರ್ಕಿಸಿ ಶ್ರೀ ರಾಮ್ ಟೂರ್ಸ್ 9606600383

ವ್ಯಾಪಾರ BUSINESS

FOR SALE

KEN VIDY'LAYA SCHOOL UNIFORMS - BULK / LOT SALE available in all sizes for wholesale, lot sale, and bulk purchase only.7996369995 .

INCOME TAX CONSULTANT

WE-UPDATE-BOOKS to file Retuns for Registrar of Companies before 15th July 2026 to save maximum Late fees . Contact : 88611 06220

personal

CHANGE OF NAME

I, Harine Sonasalamuthu D/o Sonasalamuthu Kuppusamy R/o D001, Amara Court Yard Apartments, Munekolala Main Road, Marathahalli, Bangalore North, Karnataka - 560037 have changed my name from Harine Sonasalamuthu Kuppusamy to Harine Sonasalamuthu vide Affidavit No IN-KA86355998909729Y dated 11-06-2026 before notary S.Subashini, Bengaluru for all purposes.

I, MYTHILI RETHI, Residing at No. 34, 6th Cross, Bharathi Layout, S G Palya, Bangalore – 560029, have changed my name to MYTHILI ARULNANDHI, vide affidavit dated 05/06/2026, sworn before notary Venkataraju H G, Bangalore.

I, Khushboo residing at No 45/A, 2nd Main, 5th Cross, Bapujinagar, Bangalore 560026 have changed my Name from Kushboo R to Khushboo vide affidavit dated 06-06-2026 Sworn before H.S Sakalesh Aradhya notary public.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು

I, SATISH PARAMESHWARIAH S/o PARAMESHWARAIAH, resident of NO. 31,1st Main Road,C Cross, Manuvana, Vijayanagar, BENGALURU - 560040, have changed my name to SATISH PARAMESHWARAIAH vide affidavit dated: 11/6/2026 Before Notary M.K.Devaki Bangalore.

I, SHAMSHUDDIN MOHAMMED MUNAVAR SHAIKH resident of #552, M.G Road opp. Mini Vidahan Soudha, Karwar, Uttara Kannada, Karnataka, PIN Code: 581301 have changed my name to SHAMSHUDDIN MOHAMED MUNAVAR vide affidavit dated: 11/6/2026 Befotre Notary K.V.Mani Bangalore.

I (David Veda Prasad) S/O (Samuel V) R/O at(No 102, 1st floor, Chariziva Moonstone Apartment gopal Reddy layout dodda Banaswadi Bangalore 43) shall henceforth be known as (David Veda Prasad S) affidavit no (IN-KA86292818969188Y) sworn before notary (YR CHANDRASEKAR) dated (11TH JUNE 2026).

I, Mamta Gupta, R/o B2-41145, Sobha Dream Acres, Bengaluru- 560087, declare that KM Mamata Devi (As per Educational Certificates) & Mamta Gupta (As per Aadhaar) are one and the same person. Henceforth, my correct name shall be Mamta Gupta. Vide affidavit dtd 10-06-26 sworn before notary A.M Rajasekar

I, HIMANI PUROHIT, Residing at No. 122, NN 67, Nisarga Nandana Lyt, Harapanahalli, Jigani, Anekal Taluk, Bengaluru -560083, have changed my name to HIMANI RAJ PUROHIT, vide affidavit dated 11/05/2026, sworn before notary Venkataraju H G, Bangalore.

I, KANAKA RAJU BEERAPPA, Residing at No.112, A Sector, Amruthnagar, Bangalore - 560092, have changed my name to KANAKA RAJU, vide affidavit dated 10/06/2026 sworn before notary Venkataraju H G, Bangalore.

I Vani W/o Pranesh Upashi, #210, VM Serenity,Horamavu, Bangalore have changed my name from Vani Vishwanath Shringeri to Vani Pranesh Upashi vide affidavit dated 03-10-2017.

I Lalitha Nagaraju W/O, R.nagaraju R/o N0-32,11th Cross,nanjappa Layout,vidyaranyapura,bengaluru-560097 have changed my name to Lalitha.

I, 6494953X, Hav, Vidyadhar Dhaka of 1 ATC changed my son's name Monu Dhaka to Mitansh Dhaka, for all purpose.

TIMES TRIBUTE
PAYING HOMAGE TO THE DEPARTED SOUL
ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ/ಇಮೇಲ್/ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ/ ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ನರಸಿಂಹ ಕುಲಕರ್ಣಿ–99160 79232
narasinha.kulkarni@timesofindia.com

I, Harini Kulkarni, R/o D714 Sterling Brookeside, Brookfield, Bangalore. Changed my name as Harini V Kulkarni.

I, MOHAMMAD KAIF residing at # 42 AT street Hosur Main Road Anjenaya Temple Bommanahalli Bangalore-560068 have changed my name to MOHAMMED KAIF vide affidavit dated 11/06/2026 sworn before notary, Leela Bangalore

I, GANESHA RAO V, Residing at No.78/79, Shri Sai Kunj Sri, Chowdeshwari Layout, Kalkere, Bannerghatta Road, Bangalore – 560083, have changed my name to GANESH RAO V, vide affidavit dated 11/06/2026 sworn before notary Venkataraju H G, Bangalore.

I, PARNIKA GEORGE, D/o Vijaya George, R/o, JP Nagar VIII Phase, Bengaluru have changed my name from PARNIKA to PARNIKA GEORGE for all future purposes.

I, THARUN J, residing at No. 985, 10th Cross, SBM Colony, Girinagara, Bangalore 560050, have changed my name as J TARUN, vide affidavit dated 10/06/2026 sworn before Notary Mamata N K, Bangalore.

I, Deva Sagayam S/o Maria Dass Asir Vatham R/o No 93, Near Kala Service Station, Doddabommasandra, Bengaluru - 560097 have changed my name to A Deva Sagayam for all purposes

INAYATH R/o 17 K No 26/8 2nd Main 1st Cross Yellukunte Mangammanapalya B'lore-560068 have changed my name to Inayath Ali Khan.

I, Abhay Anand Vatsa, residing at MD-30, HAL Township, Vimanapura, Bangalore-560017, have changed my name to Ubhay Anand Vatsa vide affidavit dated 10-06-2026 sworn before Notary N. Kanchivaradaraju, Bangalore.

I, MAHANTGOUDA S PATIL, Residing at No. 85, Bharathi Enclave, Gaddige Road, Maratikyathanahalli, Mysuru - 570026 have changed my name to MAHANTESH S PATIL, vIde affidavit dated 25/05/2026, sworn before notary Venkataraju H G, Bangalore.

I, Satish Kumar S/o Arjun Jha, resident of B-202, NCC Aster Park,Yelahanka, Bangalore do hereby declare that I have changed my Minor Son's name from Kumar Madhav to Madhav Jha and henceforth he shall be known as Madhav Jha in all purpose.

I, 6495033M, Hav (CHEFCOM), Jamadar Shrirang Bala Krishna of 1 ATC changed my son's name Parth Shrirang Jamadar to Jamdar Parth Shrirang, for all purpose.

I, Priyadarshini Kumar R/o #113,1st Floor, Vaasthv Hill View-3 Bangarappa Main Road Rajarajeshwarinagar B'lore-560098 have changed my name to Priyasarshini Kumar Reddy.

14875788F NK/MT Pravind Kumar ASC centre north my mother name service records Sheela Devi to Reeta, Dt: 11.06.2026, for all purpose.

14850483W HAV/CLK (SD) Sarath Babu P K ASC centre south my father name service records A Mohanan to Mohanan, for all purpose.

14850483W HAV/CLK (SD) Sarath Babu P K ASC centre south my mother name service records Nalini PK to Nalini, Dt: 11.06.2026, for all purpose.

I, 14829611P, Hav/MT, P Karthikeyan of 1 ATC my mother changed name A Muthu to Muthu Pandi, for all purpose.

I, Sangita W/o 6498693P, Hav (CHEFCOM), Ajay Kumar of 1 ATC changed my name Sangita to Sangita Devi, for all Purpose.

14850504F HAV Amarjeet Sharma ASC centre south my mother name service records Sarita Sharma to Sarita Devi, Dt: 11.06.2026, for all purpose.

I, 6499204L, Sep, Moturi Shiva of 1 ATC my mother changed name Kanaka Maha Lakshmi to Moturi Kanaka Mahalakshmi, for all purpose.

14828651K HAV/MT Nitesh Ranjan Singh ASC centre south my mother name service records Prabha Devi to Prabha Singh, for all purpose.

I, NITIN C TOTIGER, Residing at No.36/A/28, N H 50 Service Road, Iikal Rural, Bagalkot – 587125, have changed my name to NITIN TOTIGER, vide affidavit dated 11/06/2026, sworn before notary Venkataraju H G, Bangalore.

I, VEENA D KAMATH, Residing at No. 85, Bharathi Enclave, Gaddige Road, Maratikyathanahalli, Mysuru - 570026, have changed my name to SANJANA M PATIL, vIde affidavit dated 25/05/2026, sworn before notary Venkataraju H G, Bangalore.

I, Saravana Sundari Kandasamy Krishnan, W/O; Shunmuga Krishnan Senthil Arumugam, R/O: A-306, Creative Residency, 24th Main, Sector 2, HSR Layout, BLR - 560102. Have changed my name as Saravana Sundari Kandaswamy.

I, AKANKSHA, Residing at No. 85, Bharathi Enclave, Gaddige Road, Maratikyathanahalli, Mysuru – 560026, have changed my name to AKANKSHA M PATIL, vIde affidavit dated 22/05/2026, sworn before notary Venkataraju H G, Bangalore.

I, 14852661M, Hav, Bhawani Singh of 1 ATC my mother changed name Kelash Bai to Kailash Bai Pavar, for all purpose.

I, 6495051P, Hav, Sunil Kumar of 1 ATC my mother changed name Smt Krishna Devi to Krishna, for all purpose.

14850504F HAV Amarjeet Sharma ASC centre south my father name service records Vijay Sharma to Vijay Kumar, Dt: 11.06.2026, for all purpose.

I, Mohammed Abdul Moeed R/O No 72 Central Street Nerlsandar Viveknagar Bangalore 560047 Have Chnaged My Name to Abdul Moeed for All Purposes.

I, Basha S/o Syed Saheb R/o No 30, Dharmaraj Koil Street, Kodandarama Nagar, Shivaji nagar, Bengaluru - 560001. Have Changed My Name to Sheikh Basha for All Purposes.

I Mainuddin Makabul Mulla Alias Mainuddin M Mulla S/o Makabullall R/o No.- 146, Police Head Qtrs, Belgaum, Belgaum Shivaji Nagar, Karnataka - 590016, have changed my name to Mainu Mulla

I, SHANTHA SHIVANAND VIJAPUR, Residing at No.212/D, 2nd B Main, 2nd E Cross, 1st Phase, Girinagar BSK 3rd Stage, Bangalore – 560085, have changed my name to H R SHANTHA KUMARI, vide affidavit dated 06/06/2026, sworn before notary Venkataraju H G, Bangalore.

I, RAJ KUMAR SHANTAPPA EARNEST S/o SHANTAPPA EARNEST, resident of No. 692, 11th Cross, M C Layout, Vijayanagar, Bengaluru - 560040, have changed my name to RAJKUMAR EARNEST SHANTAPPA vide affidavit dated: 10/6/2026 Before Notary Deepa.M Bangalore.

LOST & FOUND

MISPLACED Indian Passport of Sunil Kumar Bhimrao, Ppt No: H4926192 (Valid: 11-May-2009 to 10-May-2019). Misplaced around Bengaluru. Finder please contact: 9380026614

tender & notices

PUBLIC NOTICE

PUBLIC NOTICE
Fortius Global Consulting hereby notifies all participants and concerned persons that the proposed "Execution Trader Program" has not been operationally commenced, as none of the candidates were found to meet the standards, discipline, eligibility criteria, and professional requirements expected by its partner firm, Fortius Resources Private Limited, for engagement under the said initiative.
Accordingly, the said program stands discontinued, including the operational and training facility established for the aforesaid purpose at ETV Bellandur. Amounts received towards training/program participation shall be refunded in a phased manner, subject to verification of records and applicable internal processes.
All concerned are requested to treat this notice as formal intimation for information and record purposes.
Sd/-
Management
#48, Bhive Prime,
Church Street, Ashoknagar,
Bangalore – 560001
Email:support@thefloor.co.in

ಎಚ್ಚರಿಕೆ ನೋಟೀಸು
ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು /ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

Pragati Path@ 12 Varsh

Vishwas ke, Vikas ke, Jan-kalyan ke

ಪ್ರಗತಿಯ ಹೊಸ ಅಧ್ಯಾಯ

ಭಾರತದ ಅಭಿವೃದ್ಧಿ ದೃಷ್ಟಿಕೋನದಲ್ಲಿ ಉತ್ತರ ಪ್ರದೇಶ

ಕಳೆದ ಹಲವು ವರ್ಷಗಳಿಂದ, ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನಾಯಕತ್ವದಡಿ ಭಾರತ ಸರ್ಕಾರದ ನೇತೃತ್ವದಲ್ಲಿ ವಿವಿಧ ಪ್ರಮುಖ ಕಾರ್ಯಕ್ರಮಗಳು ಮತ್ತು ಅಭಿವೃದ್ಧಿ ಉಪಕ್ರಮಗಳ ಮೂಲಕ ಉತ್ತರ ಪ್ರದೇಶವು ಗಮನಾರ್ಹ ಪರಿವರ್ತನೆ ಕಂಡಿದೆ. ಸಮಗ್ರ ಬೆಳವಣಿಗೆ, ಸುಧಾರಿತ ಮೂಲಸೌಕರ್ಯ ಮತ್ತು ವರ್ಧಿತ ಜನ ಕಲ್ಯಾಣದ ಮೇಲೆ ಕೇಂದ್ರೀಕರಿಸಿರುವ ಈ ಪ್ರಯತ್ನಗಳು ಸಾರ್ವಜನಿಕ ಜೀವನದ ಬಹುತೇಕ ಎಲ್ಲಾ ಅಂಶಗಳನ್ನು ತಲುಪಿವೆ. ಕೃಷಿ ಸಮೃದ್ಧಿಯ ಬಲವರ್ಧನೆ ಮತ್ತು ಆರೋಗ್ಯ ಸೇವೆಗಳ ಲಭ್ಯತೆ ವಿಸ್ತರಣೆಯಿಂದ ಹಿಡಿದು ವಸತಿ, ನೈರ್ಮಲ್ಯ, ಸಂಪರ್ಕ ಮತ್ತು ಆರ್ಥಿಕ ಸೇರ್ಪಡೆಯ ಸುಧಾರಣೆವರೆಗೆ, ಈ ಉಪಕ್ರಮಗಳು ರಾಜ್ಯಾದ್ಯಂತ ಲಕ್ಷಾಂತರ ಜನರಿಗೆ ಸ್ಪಷ್ಟವಾದ ಪ್ರಯೋಜನಗಳನ್ನು ಕಲ್ಪಿಸಿವೆ. ಮೂಲಸೌಕರ್ಯ, ಕೈಗಾರಿಕೆ, ಡಿಜಿಟಲ್ ಆಡಳಿತ ಮತ್ತು ಸಾಮಾಜಿಕ ಕಲ್ಯಾಣದಲ್ಲಿನ ಗಮನಾರ್ಹ ಹೂಡಿಕೆಗಳು ಆರ್ಥಿಕ ಬೆಳವಣಿಗೆಯನ್ನು ಮತ್ತಷ್ಟು ವೇಗಗೊಳಿಸಿವೆ ಹಾಗೂ ಸಮುದಾಯಗಳು ಮತ್ತು ವ್ಯವಹಾರಗಳಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಿವೆ. ಹಲವು ಪ್ರಮುಖ ಯೋಜನೆಗಳು, ನೀತಿಗಳು ಮತ್ತು ಸಾಧನೆಗಳು ಉತ್ತರ ಪ್ರದೇಶದ ಅಭಿವೃದ್ಧಿ ಪಯಣ ಮತ್ತು ರಾಷ್ಟ್ರದ ಕ್ರಿಯಾತ್ಮಕ ಬೆಳವಣಿಗೆಯ ಎಂಜಿನ್ ಆಗಿ ಹೊರಹೊಮ್ಮಲು ಕೊಡುಗೆ ನೀಡಿವೆ.

PICS: DIPR, UP GOVT

ವಸತಿ, ಆಹಾರ ಭದ್ರತೆ & ಸಾಮಾಜಿಕ ಕಲ್ಯಾಣ

ಪ್ರಧಾನಮಂತ್ರಿ ಆವಾಸ್ ಯೋಜನೆ (PMAY)
- 62 ಲಕ್ಷಕ್ಕೂ ಅಧಿಕ ಕುಟುಂಬಗಳಿಗೆ ಶಾಶ್ವತ ಮನೆಗಳನ್ನು ಹಂಚಿಕೆ ಮಾಡಲಾಗಿದ್ದು, ಇದರಲ್ಲಿ ಹೆಚ್ಚಿನವು ಮಹಿಳೆಯರ ಹೆಸರಿನಲ್ಲಿ ನೀಡಲಾಗಿದೆ.

ಉಚಿತ ಪಡಿತರ ವಿತರಣಾ ಕಾರ್ಯಕ್ರಮ
- ಪ್ರತಿ ತಿಂಗಳು 3.63 ಕೋಟಿಗೂ ಅಧಿಕ ಫಲಾನುಭವಿಗಳು ಉಚಿತ ಪಡಿತರ ಸ್ವೀಕರಿಸುತ್ತಿದ್ದಾರೆ.

ಆಯುಷ್ಮಾನ್ ಭಾರತ್
- 5.76 ಕೋಟಿಗೂ ಅಧಿಕ ಆಯುಷ್ಮಾನ್ ಕಾರ್ಡ್‌ಗಳನ್ನು ವಿತರಿಸಲಾಗಿದ್ದು, ಇದು 9 ಕೋಟಿಗೂ ಅಧಿಕ ಜನರಿಗೆ ನಗದು ರಹಿತ ಆರೋಗ್ಯ ಸೇವೆಯನ್ನು ಒದಗಿಸುತ್ತಿದೆ.

ಪಿಎಂ ಸ್ವನಿಧಿ
- 15.31 ಲಕ್ಷಕ್ಕೂ ಅಧಿಕ ಬೀದಿಬದಿ ವ್ಯಾಪಾರಿಗಳಿಗೆ ಆರ್ಥಿಕ ಸಹಾಯವನ್ನು ವಿಸ್ತರಿಸಲಾಗಿದೆ.

ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆ
- 60 ಲಕ್ಷ ತಾಯಂದಿರಿಗೆ ಪ್ರಯೋಜನಗಳನ್ನು ವಿಸ್ತರಿಸಲಾಗಿದೆ.

ಉದ್ಯೋಗ, ಉದ್ಯಮಶೀಲತೆ ಮತ್ತು ಎಂಎಸ್‌ಎಂಇ

ಪ್ರಧಾನಮಂತ್ರಿ ಮುದ್ರಾ ಯೋಜನೆ
- ರೂ.58,111.79 ಕೋಟಿ ಮೊತ್ತದ ಆರ್ಥಿಕ ನೆರವು ನೀಡಲಾಗಿದೆ.

ಪ್ರಧಾನಮಂತ್ರಿ ಉದ್ಯೋಗ ಸೃಷ್ಟಿ ಕಾರ್ಯಕ್ರಮ (PMEGP)
- 32,936 ಫಲಾನುಭವಿಗಳಿಗೆ ಸಹಾಯ ಒದಗಿಸಲಾಗಿದೆ.
- ರೂ.1,105.49 ಕೋಟಿ ನೆರವು ನೀಡಲಾಗಿದೆ.
- 2,63,488 ವ್ಯಕ್ತಿಗಳಿಗೆ ಉದ್ಯೋಗ ಸೃಷ್ಟಿಸಲಾಗಿದೆ.

ಎಂಎಸ್‌ಎಂಇ ಹಬ್
- 96 ಲಕ್ಷಕ್ಕೂ ಅಧಿಕ ಎಂಎಸ್‌ಎಂಇ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, 4,51,775 ಉದ್ಯೋಗ ಅವಕಾಶಗಳನ್ನು ಸೃಷ್ಟಿಸಿವೆ.

ಒಂದು ಜಿಲ್ಲೆ ಒಂದು ಉತ್ಪನ್ನ
- ಈ ಯೋಜನೆಯಡಿ ರೂ.90,364 ಲಕ್ಷ ಮೌಲ್ಯದ ಮಾರ್ಜಿನ್ ಹಣದ ಸಹಾಯವನ್ನು ವಿತರಿಸಲಾಗಿದೆ, ಇದು 3,26,473 ಉದ್ಯೋಗಾವಕಾಶಗಳ ಸೃಷ್ಟಿಗೆ ಕಾರಣವಾಗಿದೆ.

ಕೃಷಿ ಮತ್ತು ರೈತರ ಕಲ್ಯಾಣ

ಕಿಸಾನ್ ಕ್ರೆಡಿಟ್ ಕಾರ್ಡ್ (KCC)
- 492.46 ಲಕ್ಷ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ವಿತರಿಸಲಾಗಿದೆ.

ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ (PMFBY)
- 79.51 ಲಕ್ಷ ರೈತರಿಗೆ ರೂ.6,283.92 ಕೋಟಿ ಪರಿಹಾರ ಒದಗಿಸಲಾಗಿದೆ

ಕಬ್ಬು ವಲಯದ ಅಭಿವೃದ್ಧಿ
- ಕಬ್ಬಿನ ಬೆಲೆ ಪಾವತಿಗಾಗಿ ಕಬ್ಬು ಬೆಳೆಗಾರರಿಗೆ ರೂ.3.12 ಲಕ್ಷ ಕೋಟಿಗೂ ಅಧಿಕ ಹಣ ಬಿಡುಗಡೆ ಮಾಡಲಾಗಿದೆ. 1.48 ಲಕ್ಷಕ್ಕೂ ಹೆಚ್ಚಿನ ಮಹಿಳಾ ಕಬ್ಬು ಬೆಳೆಗಾರರು ನೋಂದಾಯಿಸಲ್ಪಟ್ಟಿದ್ದಾರೆ.
- ಕಬ್ಬು, ಸಕ್ಕರೆ, ಎಥೆನಾಲ್ ಮತ್ತು ಸ್ಯಾನಿಟೈಸರ್ ಉತ್ಪಾದನೆಯಲ್ಲಿ ಸತತ ನಾಲ್ಕನೇ ಬಾರಿಗೆ ಭಾರತದಲ್ಲೇ ಪ್ರಥಮ ಸ್ಥಾನ ಪಡೆದಿದೆ.

ಭಾರತದ ಆಹಾರಧಾನ್ಯ ಉತ್ಪಾದನೆಗೆ ಕೊಡುಗೆ
- ದೇಶದ ಒಟ್ಟು ಆಹಾರಧಾನ್ಯ ಉತ್ಪಾದನೆಯಲ್ಲಿ ಉತ್ತರ ಪ್ರದೇಶ ಶೇ.21ರಷ್ಟು ಕೊಡುಗೆ ನೀಡುತ್ತಿದೆ.
- ಆಹಾರಧಾನ್ಯ ಉತ್ಪಾದನೆಯು ಶೇ.32ರಷ್ಟು ಹೆಚ್ಚಾಗಿದ್ದು, 557.46 ಲಕ್ಷ ಟನ್‌ಗಳಿಂದ (2016-17) 737.40 ಲಕ್ಷ ಟನ್‌ಗಳಿಗೆ (2024-25) ಏರಿಕೆಯಾಗಿದೆ.

ರಸ್ತೆಗಳು, ಎಕ್ಸ್‌ಪ್ರೆಸ್‌ವೇಗಳು ಮತ್ತು ಸಂಪರ್ಕ

ಪ್ರಮುಖ ಎಕ್ಸ್‌ಪ್ರೆಸ್‌ವೇಗಳ ಅಭಿವೃದ್ಧಿ
- ಪೂರ್ವಾಂಚಲ್ ಎಕ್ಸ್‌ಪ್ರೆಸ್‌ವೇ-341 ಕಿ.ಮೀ.
- ಬುಂದೇಲ್‌ಖಂಡ್ ಎಕ್ಸ್‌ಪ್ರೆಸ್‌ವೇ-296 ಕಿ.ಮೀ.
- ಆಗ್ರಾ-ಲಕ್ನೋ ಎಕ್ಸ್‌ಪ್ರೆಸ್‌ವೇ-302 ಕಿ.ಮೀ.
- ಗಂಗಾ ಎಕ್ಸ್‌ಪ್ರೆಸ್‌ವೇ-594 ಕಿ.ಮೀ.
- ಗೋರಖ್‌ಪುರ ಲಿಂಕ್ ಎಕ್ಸ್‌ಪ್ರೆಸ್‌ವೇ-91 ಕಿ.ಮೀ.

ಮೆಟ್ರೋ
- ಲಕ್ನೋ, ಕಾನ್ಪುರ, ಆಗ್ರಾ, ಮೀರತ್, ಗಾಜಿಯಾಬಾದ್, ಗ್ರೇಟರ್ ನೋಯ್ಡಾ ಮತ್ತು ನೋಯ್ಡಾಗಳಲ್ಲಿ ಮೆಟ್ರೋ ರೈಲು ಯೋಜನೆಗಳನ್ನು ವಿಸ್ತರಿಸಲಾಗಿದೆ.

ಭಾರತದಲ್ಲಿ ಅತಿ ಹೆಚ್ಚು ವಿಮಾನ ನಿಲ್ದಾಣಗಳನ್ನು ಹೊಂದಿರುವ ರಾಜ್ಯ
- ರಾಜ್ಯವು 5 ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳು ಮತ್ತು 12 ದೇಶಿ ವಿಮಾನ ನಿಲ್ದಾಣಗಳು ಸೇರಿದಂತೆ 17 ವಿಮಾನ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿವೆ.

ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸರ್ಕಾರ

ಪೊಲೀಸ್ ಆಧುನೀಕರಣ
- 2,21,199 ಪೊಲೀಸ್ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆ.

ಮಹಿಳಾ ಸುರಕ್ಷತೆ
- ಮಹಿಳಾ ಪೊಲೀಸ್ ನೇಮಕಾತಿಯನ್ನು ವಿಸ್ತರಿಸಲಾಗಿದೆ ಮತ್ತು ಸುರಕ್ಷತಾ ಉಪಕ್ರಮಗಳನ್ನು ಸಮರ್ಪಿಸಲಾಗಿದೆ.

ಯುಪಿ-112 ತುರ್ತು ಸ್ಪಂದನೆ
- ಸ್ಪಂದನೆಯ ಸರಾಸರಿ ಸಮಯ ಒಂದು ಗಂಟೆಯಿಂದ ಸುಮಾರು 6 ನಿಮಿಷ 41 ಸೆಕೆಂಡುಗಳಿಗೆ ಇಳಿಸಲಾಗಿದೆ.

ಸೈಬರ್ ಭದ್ರತೆ
- ಸೈಬರ್ ಅಪರಾಧ ಪೊಲೀಸ್ ಠಾಣೆಗಳು ಮತ್ತು ಡಿಜಿಟಲ್ ಪೊಲೀಸಿಂಗ್ ಮೂಲಸೌಕರ್ಯಗಳನ್ನು ವಿಸ್ತರಿಸಲಾಗಿದೆ.

ಅಪರಾಧ ಕಡಿತ
- 2016ಕ್ಕೆ ಹೋಲಿಸಿದರೆ ಪ್ರಮುಖ ಅಪರಾಧಗಳಲ್ಲಿ ಗಮನಾರ್ಹವಾಗಿ ಇಳಿದಿದೆ:

ಇವುಗಳು ಸೇರಿವೆ:
- ಡಕಾಯಿತಿ-90% • ದರೋಡೆ-85% • ಅಪಹರಣ-62%
- ಕೊಲೆ-47% • ಮಹಿಳೆಯರ ವಿರುದ್ಧದ ಅಪರಾಧಗಳು (ವರದಕ್ಷಿಣೆ ಪ್ರಕರಣಗಳು-19%, ಅತ್ಯಾಚಾರ-53%)

ಶಿಕ್ಷಣ, ಯುವ & ಕೌಶಲ್ಯಾಭಿವೃದ್ಧಿ

ಡಿಜಿಟಲ್ ಸಬಲೀಕರಣ
- 49.86 ಲಕ್ಷಕ್ಕೂ ಅಧಿಕ ಟ್ಯಾಬ್ಲೆಟ್‌ಗಳು ಮತ್ತು ಸ್ಮಾರ್ಟ್‌ಫೋನ್‌ಗಳ ವಿತರಣೆ.

ನೇಮಕಾತಿ
- ಯುಪಿಪಿಎಸ್‌ಸಿ: 47,377 ನೇಮಕಾತಿಗಳು.
- ಯುಪಿಎಸ್‌ಎಸ್‌ಸಿ: 53,011 ನೇಮಕಾತಿಗಳು.

ಕೌಶಲ್ಯಾಭಿವೃದ್ಧಿ
- ಯುವಜನತೆಗೆ ತರಬೇತಿ, ಉದ್ಯೋಗ ಮತ್ತು ಉದ್ಯಮಶೀಲತಾ ಕಾರ್ಯಕ್ರಮಗಳ ವಿಸ್ತರಣೆ.

READER ENGAGEMENT INITIATIVE

2026–27ನೇ ಶೈಕ್ಷಣಿಕ ವರ್ಷದಿಂದಲೇ ಜಾರಿ | ಡಿಎಸ್‌ಇಆರ್‌ಟಿಯಿಂದ 1 ಲಕ್ಷ ಶಿಕ್ಷಕರಿಗೆ ತರಬೇತಿ

ಶಾಲೆಗಳಲ್ಲಿ ಮೌಲ್ಯ ಶಿಕ್ಷಣ ಬೋಧನೆ

- 1ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಮೌಲ್ಯ ಶಿಕ್ಷಣ ಬೋಧನೆ
- ಸಮಗ್ರ ಪ್ರಗತಿ ಪತ್ರದ ಮೂಲಕ ವಿದ್ಯಾರ್ಥಿಗಳ ಕಲಿಕೆ ಮೇಲೆ ನಿಗಾ
- 234 ಚಟುವಟಿಕೆಗಳ ಮೂಲಕ ಮಕ್ಕಳಿಗೆ ಮೌಲ್ಯ ಶಿಕ್ಷಣ ಬೋಧನೆ
- ದ್ವಿಭಾಷೆಯಲ್ಲಿ ಮೌಲ್ಯ ಶಿಕ್ಷಣದ ಪಠ್ಯಪುಸ್ತಕಗಳು ತಯಾರಿ

■ **ಶಾಂತಮೂರ್ತಿ** ಬೆಂಗಳೂರು
shantha.a@timesofindia.com

ವಿದ್ಯಾರ್ಥಿಗಳಲ್ಲಿ ನೈತಿಕತೆ, ಮಾನವೀಯ ಮೌಲ್ಯ, ಸಾಮಾಜಿಕ ಜವಾಬ್ದಾರಿ ಬೆಳೆಸುವ ಉದ್ದೇಶದಿಂದ 2026–27ನೇ ಸಾಲಿನಿಂದ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಮೌಲ್ಯ ಶಿಕ್ಷಣ ತರಗತಿಗಳನ್ನು ಆರಂಭಿಸಲಾಗಿದೆ. ಇದೇ ಮೊದಲ ಬಾರಿಗೆ 1ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಮೌಲ್ಯ ಶಿಕ್ಷಣ ಪಠ್ಯಪುಸ್ತಕಗಳ ಮೂಲಕ ಮಾರ್ಗದರ್ಶನ ನೀಡಲು ಶಿಕ್ಷಕರು ಸಜ್ಜಾಗಿದ್ದು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಶಿಕ್ಷಕರನ್ನು ಸಜ್ಜುಗೊಳಿಸಲು ಮುಂದಾಗಿದೆ.

ಮಕ್ಕಳಿಗೆ ಮೌಲ್ಯ ಶಿಕ್ಷಣ ಬೋಧಿಸಲು ತರಗತಿವಾರು ಮೌಲ್ಯ ಶಿಕ್ಷಣ ವಿದ್ಯಾರ್ಥಿ ಚಟುವಟಿಕಾ ಪುಸ್ತಕಗಳನ್ನು ರೂಪಿಸಲಾಗಿದ್ದು, 10 ಪ್ರಮುಖ ಮೌಲ್ಯಗಳು ಹಾಗೂ ಸಂಬಂಧಿತ ಉಪಮೌಲ್ಯಗಳನ್ನು ಪಠ್ಯದಲ್ಲಿ ಸೇರಿಸಲಾಗಿದೆ. 2025–26ನೇ ಸಾಲಿನಲ್ಲೇ ರಾಜ್ಯದ 1ಲಕ್ಷ ಶಿಕ್ಷಕರಿಗೆ ಮೌಲ್ಯ ಶಿಕ್ಷಣ ಬೋಧನೆ ಕುರಿತು ಒಂದು ದಿನದ ತರಬೇತಿ ನೀಡಲಾಗಿದೆ. ಈಗ ರಾಜ್ಯದ ಎಲ್ಲಾ ಶಿಕ್ಷಕರಿಗೆ ತರಬೇತಿ ನೀಡುವ ಜತೆಗೆ, ಶಿಕ್ಷಕರ ಸಂಪನ್ಮೂಲ ಕೈಪಿಡಿ ಸಿದ್ಧಪಡಿಸಿ ಮೌಲ್ಯ ಶಿಕ್ಷಣದ ಪರಿಣಾಮಕಾರಿ ಜಾರಿಗೆ ಇಲಾಖೆ ಸಜ್ಜಾಗಿದೆ. ಶಾಲಾ ವೇಳಾಪಟ್ಟಿಯಲ್ಲಿ ಪ್ರತಿ ತರಗತಿಗೆ ಒಂದು ಅವಧಿ ನಿಗದಿ ಪಡಿಸಲಾಗಿದ್ದು, ವಾರದಲ್ಲಿ ಒಂದು ದಿನ ಮೌಲ್ಯ ಶಿಕ್ಷಣ ಕಡ್ಡಾಯಗೊಳಿಸುವಂತೆ ಸೂಚನೆ ನೀಡಲಾಗಿದೆ.

> ರಾಜ್ಯದ ಎಲ್ಲ ಶಾಲೆಗಳಲ್ಲಿ ಮೌಲ್ಯ ಶಿಕ್ಷಣ ಜಾರಿಗೆ ಕ್ರಮ ವಹಿಸಲಾಗುತ್ತಿದೆ. 2025–26ನೇ ಸಾಲಿನಲ್ಲಿ 1 ಲಕ್ಷ ಶಿಕ್ಷಕರಿಗೆ ಮೌಲ್ಯ ಶಿಕ್ಷಣ ಬೋಧನೆ ಬಗ್ಗೆ ತರಬೇತಿ ನೀಡಲಾಗಿದ್ದು, ಪ್ರಸ್ತುತ ರಾಜ್ಯದ ಎಲ್ಲಾ ಶಿಕ್ಷಕರಿಗೆ ತರಬೇತಿ ನೀಡುವ ಬಗ್ಗೆ ಯೋಜನೆ ಸಿದ್ಧಪಡಿಸಲಾಗುತ್ತಿದೆ.
>
> **–ಅನಿತಾ ವಿ. ನಜಾರೆ** ನಿರ್ದೇಶಕ, ಡಿಎಸ್‌ಇಆರ್‌ಟಿ

ಶಾಲೆಗಳಲ್ಲಿ ಮಕ್ಕಳಿಗೆ ಪಠ್ಯದ ಜತೆಗೆ ಮೌಲ್ಯ ಶಿಕ್ಷಣಕ್ಕೂ ಪ್ರಾಮುಖ್ಯತೆ ನೀಡುವ ಉದ್ದೇಶದಿಂದ ಶಿಕ್ಷಣ ಇಲಾಖೆ 1ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಮೌಲ್ಯ ಶಿಕ್ಷಣ ಬೋಧಿಸಲು ಕ್ರಮ ಕೈಗೊಂಡಿದೆ. ಚಟುವಟಿಕೆ ಆಧಾರಿತ ಪಠ್ಯಗಳ ಜತೆಗೆ, ಅಗತ್ಯವಿರುವ ಕಡೆಗಳಲ್ಲಿ ಶಿಕ್ಷಕರು ತಾವು ಬೋಧಿಸುವ ಪಠ್ಯ ವಿಷಯಗಳ ಜತೆಗೆ ಮೌಲ್ಯ ಶಿಕ್ಷಣದ ವಿಷಯಗಳನ್ನು ಸಮ್ಮಿಳಿತಗೊಳಿಸಿ ಬೋಧಿಸಲು ಕೂಡ ಅನುಮತಿ ನೀಡಲಾಗಿದೆ. ಇದರಿಂದ ಬೇರೆ ಬೇರೆ ವಿಷಯಗಳ ಬೋಧನೆಯ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಮೌಲ್ಯಗಳ ಬಗ್ಗೆ ಅರಿವು ಮೂಡಿಸಲು ಸಹಕಾರಿಯಾಗಲಿದೆ.

234 ಚಟುವಟಿಕೆ

ಗೌರವ, ಪ್ರಾಮಾಣಿಕತೆ, ಸಮಗ್ರತೆ, ಭಾವನಾತ್ಮಕ ಬುದ್ಧಿವಂತಿಕೆ, ಅನುಭೂತಿ–ಸಹಾನುಭೂತಿ, ವೈವಿಧ್ಯತೆ, ಸಮಾನತೆ, ಲಿಂಗ ಸಮಾನತೆ, ವೈಜ್ಞಾನಿಕ ಮನೋಧರ್ಮ, ಸೃಜನಶೀಲ ಕಲ್ಪನೆ, ವಿಮರ್ಶಾತ್ಮಕ ಚಿಂತನೆ, ಸುಸ್ಥಿರ ಜೀವನ ಮತ್ತು ಪರಿಸರ ಜಾಗೃತಿ, ನಾಗರಿಕ ಜವಾಬ್ದಾರಿ, ಸುರಕ್ಷತೆ ಸೇರಿದಂತೆ 10 ಪ್ರಮುಖ ಮೌಲ್ಯಗಳು ಹಾಗೂ 234 ಚಟುವಟಿಕೆಗಳನ್ನು ಮೌಲ್ಯ ಶಿಕ್ಷಣ ಪಠ್ಯಪುಸ್ತಕದಲ್ಲಿ ಅಳವಡಿಕೆ ಮಾಡಲಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯು ಜೀವನ ಕೌಶಲಗಳಾದ ಸ್ವಯಂ ಅರಿವು, ಅನುಭೂತಿ, ಸಮಸ್ಯೆ ಪರಿಹಾರ ಸೇರಿದಂತೆ ಹಲವು ವಿಷಯಗಳನ್ನು ಮೌಲ್ಯ ಶಿಕ್ಷಣದಲ್ಲಿ ಅಳವಡಿಕೆ ಮಾಡಿಕೊಳ್ಳಲಾಗಿದೆ. ಇದರಿಂದ ಮಕ್ಕಳ ಮಾನಸಿಕ ಭಾವನೆಗಳ ಮೇಲೆ ಉಂಟಾಗುವ ಪರಿಣಾಮಗಳನ್ನು ಗಮನಿಸುವ ಜತೆಗೆ, ವಿದ್ಯಾರ್ಥಿಗಳಿಗೆ ಶಿಸ್ತು, ಸಂಯಮ, ಜೀವನ ಪಾಠಗಳನ್ನು ಕಲಿಸಲು ಪೂರಕವಾಗುವಂತೆ ಚಟುವಟಿಕೆಗಳನ್ನು ರೂಪಿಸಲಾಗಿದೆ.

ಸಮಗ್ರ ಪ್ರಗತಿ ಪತ್ರದ ಮೂಲಕ ನಿಗಾ

ಮೌಲ್ಯ ಶಿಕ್ಷಣ ಬೋಧನೆ ಬಳಿಕ ವಿದ್ಯಾರ್ಥಿಗಳು ಮೌಲ್ಯಗಳನ್ನು ಅಳವಡಿಸಿಕೊಳ್ಳುತ್ತಿರುವ ಬಗ್ಗೆ ಹಾಗೂ ವಿದ್ಯಾರ್ಥಿಗಳ ವರ್ತನೆಯಲ್ಲಿನ ಬದಲಾವಣೆಗಳ ಮೇಲೆ ನಿಗಾ ಇಡಲು ಶಿಕ್ಷಕರಿಗೆ ಸೂಚಿಸಲಾಗಿದೆ. ಈ ಬಗ್ಗೆ ವಿದ್ಯಾರ್ಥಿಗಳ ಆಸಕ್ತಿ, ತರಗತಿ ಬಳಿಕ ಆಗುವ ಬದಲಾವಣೆಗಳ ಮೇಲೆ ನಿರಂತರವಾಗಿ ಗಮನಹರಿಸಬೇಕು. ವಿದ್ಯಾರ್ಥಿಗಳ ಸಮಗ್ರ ಪ್ರಗತಿ ಪತ್ರದಲ್ಲಿ ದಾಖಲಿಸಬೇಕು ಎಂದು ಶಿಕ್ಷಕರಿಗೆ ಸೂಚನೆ ನೀಡಲಾಗಿದೆ.

ಆರ್‌ಟಿಐ ಅಡಿ ಅಧಿಕಾರಿ ಆಸ್ತಿ ವಿವರ ಬಹಿರಂಗ ಸಾಧ್ಯವಿಲ್ಲ

ಬೆಂಗಳೂರು: ಒಬ್ಬ ವ್ಯಕ್ತಿಯು ಸರಕಾರಿ ಅಧಿಕಾರಿಯಾಗಿದ್ದ ಮಾತ್ರಕ್ಕೆ ಆತನ ವೈಯಕ್ತಿಕ ಆಸ್ತಿ ಮತ್ತು ಜವಾಬ್ದಾರಿಗಳ ವಿವರಗಳನ್ನು ಮಾಹಿತಿ ಹಕ್ಕು ಕಾಯಿದೆ (ಆರ್‌ಟಿಐ)ಯಡಿ ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದು ಹೈಕೋರ್ಟ್ ಆದೇಶ ನೀಡಿದೆ.

ಅಲ್ಲದೆ, ಆರೋಪಗಳು ಎಷ್ಟೇ ಗಂಭೀರವಾಗಿದ್ದರೂ ವ್ಯಕ್ತಿಯ ವೈಯಕ್ತಿಕ ಮಾಹಿತಿಯನ್ನು ಸಾರ್ವಜನಿಕ ಮಾಹಿತಿಯಾಗಿ ಪರಿವರ್ತಿಸಲು ಸಾಧ್ಯವಿಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಸರಕಾರಿ ನೌಕರನ ಖಾಸಗಿ ಮಾಹಿತಿ ಒದಗಿಸಲು ನಿರಾಕರಿಸಿದ್ದ ಮಾಹಿತಿ ಆಯೋಗದ ಆದೇಶ ಪ್ರಶ್ನಿಸಿ ಬೆಂಗಳೂರಿನ ಎಸ್.ಸಾವಿತ್ರಮ್ಮ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ಪೀಠ, ಈ ಆದೇಶ ನೀಡಿದೆ. ''ಸಾರ್ವಜನಿಕ ಹಿತಾಸಕ್ತಿ ಇಲ್ಲದ ವೈಯಕ್ತಿಕ ಮಾಹಿತಿಗಳನ್ನು ಆರ್‌ಟಿಐ ಕಾಯಿದೆಯ ಸೆಕ್ಷನ್ 8(1)(ಜೆ) ಅಡಿ ವಿನಾಯಿತಿ ನೀಡಲಾಗಿದ್ದು, ಅಂತಹ ಮಾಹಿತಿ ಒದಗಿಸುವಂತೆ ಒತ್ತಾಯಿಸುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ,'' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟು ಅರ್ಜಿ ವಜಾಗೊಳಿಸಿದೆ.

''ಒಬ್ಬ ವ್ಯಕ್ತಿ ಸರಕಾರಿ ನೌಕರನಾದ ತಕ್ಷಣ ಆತನ ಪ್ರತಿಯೊಂದು ವೈಯಕ್ತಿಕ ಮಾಹಿತಿಯೂ ಸಾರ್ವಜನಿಕ ಆಸ್ತಿಯಾಗುವುದಿಲ್ಲ. ಅವರ ಉದ್ಯೋಗದ ಕಾರಣಕ್ಕೆ ಸಂಸತ್ತು ನೀಡಿದ ಗೌಪ್ಯತೆಯ ಹಕ್ಕಿನ ರಕ್ಷಣೆ ಕಸಿದುಕೊಳ್ಳಲು ಸಾಧ್ಯವಿಲ್ಲ. ಅರ್ಜಿದಾರರು ಮತ್ತು ಸದರಿ ಅಧಿಕಾರಿ ನಡುವೆ ಇರುವುದು ಖಾಸಗಿ ಜಮೀನು ವಿವಾದ. ಅರ್ಜಿದಾರರ ವೈಯಕ್ತಿಕ ಕಾನೂನು ಹೋರಾಟಕ್ಕೆ ಪೂರಕವಾಗುವ ಉದ್ದೇಶ ಬೃಹತ್ ಸಾರ್ವಜನಿಕ ಹಿತಾಸಕ್ತಿ ವ್ಯಾಪ್ತಿಗೆ ಬರುವುದಿಲ್ಲ. ಕೇವಲ ಒಬ್ಬ ವ್ಯಕ್ತಿಯ ಮೇಲೆ ಗಂಭೀರ ಆರೋಪಗಳನ್ನು ಮಾಡಿದ ತಕ್ಷಣ ಅವರ ವೈಯಕ್ತಿಕ ದಾಖಲೆಗಳನ್ನು ಆರ್‌ಟಿಐ ಮೂಲಕ ಪಡೆಯಲು ಅವಕಾಶ ನೀಡಿದರೆ, ಕಾಯಿದೆಯ ಮೂಲ ಉದ್ದೇಶವೇ ಬುಡಮೇಲಾಗಲಿದೆ. ಅಲ್ಲದೆ, ಈ ರೀತಿಯ ಮಾಹಿತಿ ನೀಡಲು ಭ್ರಷ್ಟಾಚಾರ ಬಯಲಿಗೆಳೆಯುವ ಅಥವಾ ಸಾರ್ವಜನಿಕ ಹಣದ ದುರುಪಯೋಗ ಸಾಬೀತುಪಡಿಸುವ ಬಲವಾದ ಸಾಕ್ಷ್ಯಗಳಿರಬೇಕು. ಈ ಪ್ರಕರಣದಲ್ಲಿ ಅಂತಹ ಸಂದರ್ಭಗಳಿಲ್ಲ. ಆದ್ದರಿಂದ ಅರ್ಜಿದಾರರು ಸಿವಿಲ್ ಇಲ್ಲವೇ ಕ್ರಿಮಿನಲ್ ಪ್ರಕ್ರಿಯೆ ಮೂಲಕ ಪರಿಹಾರ ಕಂಡುಕೊಳ್ಳಬಹುದಾಗಿದೆ,'' ಎಂದು ತಿಳಿಸಿದೆ.

ಪ್ರಕರಣದ ಹಿನ್ನೆಲೆ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ 1990ರಿಂದ 2002ರ ಅವಧಿಯಲ್ಲಿ ಕೇಂದ್ರ ಕಚೇರಿಯ ಡೆಪ್ಯುಟಿ ಕಂಟ್ರೋಲರ್ ಆಗಿ ಸೇವೆ ಸಲ್ಲಿಸುತ್ತಿದ್ದ ಎಸ್.ಪಿ.ಜಯಪಾಲ್ ಮತ್ತು ಅರ್ಜಿದಾರರ ನಡುವೆ ಆಸ್ತಿಗೆ ಸಂಬಂಧಿಸಿದ ವಂಚನೆ ವ್ಯಾಜ್ಯವಿತ್ತು. ಆ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಬಾಕಿ ಇದೆ. ಆ ಹಿನ್ನೆಲೆಯಲ್ಲಿ ಜಯಪಾಲ್‌ಗೆ ಸಂಬಂಧಿಸಿದಂತೆ 1997ರಿಂದ 2005ರವರೆಗಿನ ಆಸ್ತಿ ಮತ್ತು ಹೊಣೆಗಾರಿಕೆಗಳ ವಿವರಗಳನ್ನು ನೀಡುವಂತೆ ಸಾವಿತ್ರಮ್ಮ ಕೆಎಸ್‌ಆರ್‌ಟಿಸಿ ಮಾಹಿತಿ ಅಧಿಕಾರಿಗೆ ಅರ್ಜಿ ಸಲ್ಲಿಸಿದ್ದರು.

ಅರ್ಜಿಗೆ ಹಿಂಬರಹ ನೀಡಿದ್ದ ಕೆಎಸ್ ಆರ್‌ಟಿಸಿ ಮಾಹಿತಿ ಅಧಿಕಾರಿ, ''ಜಯಪಾಲ್‌ರ ಆಸ್ತಿಯ ವಿವರ ವೈಯಕ್ತಿಕವಾಗಿದೆ. ಅಲ್ಲದೆ, ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿಲ್ಲ. ಆದ ಕಾರಣ ಮಾಹಿತಿ ನೀಡಲು ಸಾಧ್ಯವಿಲ್ಲ'' ಎಂದು ತಿಳಿಸಿದ್ದರು. ಆ ಕ್ರಮವನ್ನು ಕರ್ನಾಟಕ ಮಾಹಿತಿ ಆಯೋಗ ಎತ್ತಿಹಿಡಿದಿತ್ತು. ಅದನ್ನು ಪ್ರಶ್ನಿಸಿ ಸಾವಿತ್ರಮ್ಮ ಹೈಕೋರ್ಟ್‌ನ ಮೊರೆ ಹೋಗಿದ್ದರು.

2026ನೇ ಸಾಲಿನ ಕರಾವಳಿ ಮಹಿಳಾ ಕಥಾ ಸ್ಪರ್ಧೆ

ಬೆಂಗಳೂರು: ಕುಂದಾಪುರದ 'ಸುರ ಗಂಗಾ ಕಲಾ–ಸಾಹಿತ್ಯ ಮಹಿಳಾ ವೇದಿಕೆ' ಯು 2026ನೇ ಸಾಲಿನ 'ಕರಾವಳಿ ಮಹಿಳಾ ಕಥಾಸ್ಪರ್ಧೆ' ಹಮ್ಮಿಕೊಂಡಿದೆ. ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಕಾಸರಗೋಡು ಜಿಲ್ಲೆಯ ಮಹಿಳೆಯರಿಗಾಗಿ ಈ ವಿಶೇಷ ಸ್ಪರ್ಧೆ ಆಯೋಜಿಸಲಾಗಿದ್ದು, ಈ ಜಿಲ್ಲೆಗಳಲ್ಲಿ ಜನಿಸಿ ಪ್ರಸ್ತುತ ಬೇರೆಡೆ ನೆಲೆಸಿರುವ ಹಾಗೂ ಬೇರೆಡೆ ಜನಿಸಿ ಪ್ರಸ್ತುತ ಈ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಮಹಿಳೆಯರೂ ಸಹ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ.

ಸ್ಪರ್ಧೆಗೆ ಕಳುಹಿಸುವ ಕಥೆಯು ಸ್ವತಂತ್ರ ಕೃತಿಯಾಗಿದ್ದು, ಎಲ್ಲಿಯೂ ಪ್ರಕಟವಾಗಿರಬಾರದು ಹಾಗೂ 1000 ಪದಗಳ ಮಿತಿಯೊಳಗಿರಬೇಕು. ಕಥಾ ವಸ್ತುವು ಮಹಿಳಾಪರ ಚಿಂತನೆ ಒಳಗೊಂಡಿದ್ದು, ನುಡಿ, ಬರಹ ಅಥವಾ ತುಂಗ ತಂತ್ರಾಂಶದಲ್ಲಿ ಟೈಪ್ ಮಾಡಿ, ಆಧಾರ್ ಕಾರ್ಡ್ ಪ್ರತಿಯೊಂದಿಗೆ ಜುಲೈ 7ರ ಸಂಜೆ ಒಳಗೆ suragangaksmv@gmail.com ಇ–ಮೇಲ್‌ಗೆ ಕಳುಹಿಸುವಂತೆ ಸುರಗಂಗಾ ವೇದಿಕೆ ತಿಳಿಸಿದೆ. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ ಬಹುಮಾನವಾಗಿ 4,000, ದ್ವಿತೀಯ 3,000 ಹಾಗೂ ತೃತೀಯ 2,000 ನಗದು ಪ್ರಶಸ್ತಿ ನೀಡಲಾಗುವುದು.

9, 10ನೇ ತರಗತಿಗೂ ಆರ್‌ಟಿಇ ಸೌಲಭ್ಯಕ್ಕೆ ತಡೆ

ಶಿಕ್ಷಣ ಇಲಾಖೆ ಸುತ್ತೋಲೆಗೆ ತಡೆ ನೀಡಿದ ಹೈಕೋರ್ಟ್

■ **ವಿಕ ಸುದ್ದಿಲೋಕ** ಬೆಂಗಳೂರು

ಕಡ್ಡಾಯ ಶಿಕ್ಷಣ ಹಕ್ಕು (ಆರ್‌ಟಿಇ) ಕಾಯಿದೆಯಡಿ 2025–26ನೇ ಶೈಕ್ಷಣಿಕ ವರ್ಷಗಳಲ್ಲಿ ಎಂಟನೇ ತರಗತಿಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 9 ಮತ್ತು 10ನೇ ತರಗತಿವರೆಗೂ ಅದೇ ಶಾಲೆಯಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ಅನುಮತಿ ನೀಡಿ ಶಿಕ್ಷಣ ಇಲಾಖೆ ಹೊರಡಿಸಿದ್ದ ಸುತ್ತೋಲೆಗೆ ಹೈಕೋರ್ಟ್ ಗುರುವಾರ ಮಧ್ಯಂತರ ತಡೆ ನೀಡಿದೆ.

ಸರಕಾರ 2026ರ ಮೇ 21ರಂದು ಹೊರಡಿಸಿದ್ದ ಸುತ್ತೋಲೆ ಪ್ರಶ್ನಿಸಿ ಖಾಸಗಿ ಅನುದಾನರಹಿತ ಇಂಗ್ಲಿಷ್ ಮಾಧ್ಯಮ ಶಾಲೆಗಳ ಪ್ರತಿನಿಧಿ ಸಂಸ್ಥೆಯಾಗಿರುವ ಕರ್ನಾಟಕದ ಖಾಸಗಿ ಶಾಲೆಗಳ ಸಂಘ ಸೇರಿ ವಿವಿಧ ಶಿಕ್ಷಣ ಸಂಸ್ಥೆಗಳ ಒಕ್ಕೂಟ (ಕ್ಯಾಮ್ಸ್) ಸಲ್ಲಿಸಿದ್ದ ಅರ್ಜಿಯು ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ಏಕಸದಸ್ಯ ಪೀಠದ ಮುಂದೆ ಗುರುವಾರ ವಿಚಾರಣೆಗೆ ಬಂದಿತ್ತು.

ಕೆಲ ಕಾಲ ಅರ್ಜಿ ಪರಿಶೀಲಿಸಿದ ನ್ಯಾಯಪೀಠ, ''ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿರುವ ವಿಷಯ ಪರಿಶೀಲನೆಗೊಳಪಡಬೇಕಾದ ಅವಶ್ಯಕತೆಯಿದ್ದು, ಅಂತಿಮವಾಗಿ ಅರ್ಜಿ ಇತ್ಯರ್ಥವಾಗುವವರೆಗೆ ಸುತ್ತೋಲೆಯ ಜಾರಿಗೆ ತಡೆ ನೀಡಬೇಕೆಂಬ ಅರ್ಜಿದಾರರ ಮಧ್ಯಂತರ ಮನವಿಯನ್ನು ಪರಿಗಣಿಸಲಾಗುತ್ತಿದ್ದು, ಮುಂದಿನ ವಿಚಾರಣೆವರೆಗೆ ಸುತ್ತೋಲೆಗೆ ತಡೆ ನೀಡಲಾಗಿದೆ,'' ಎಂದು ಆದೇಶಿಸಿತು. ಅಲ್ಲದೆ, ಅರ್ಜಿ ಸಂಬಂಧ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ, ಶಾಲಾ ಶಿಕ್ಷಣ ಇಲಾಖೆ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆಯನ್ನು ಜು.3ಕ್ಕೆ ಮುಂದೂಡಿತು.

ಅರ್ಜಿದಾರರ ಪರ ವಕೀಲರು, ''2026ರ ಮೇ 21ರಂದು ಸಾರ್ವಜನಿಕ ಶಿಕ್ಷಣ ಇಲಾಖೆ ಹೊರಡಿಸಿರುವ ಸುತ್ತೋಲೆಯ ಪ್ರಕಾರ 2025–26ನೇ ಶೈಕ್ಷಣಿಕ ವರ್ಷದಲ್ಲಿ 8ನೇ ತರಗತಿ ಪೂರ್ಣಗೊಳಿಸಿರುವ ಎಸ್ಸಿ ಮತ್ತು ಎಸ್ಟಿ ವರ್ಗದ ವಿದ್ಯಾರ್ಥಿಗಳು ಆರ್‌ಇಟಿ ಕಾಯಿದೆ ಕಲಂ 12(1)(ಸಿ) ಅಡಿ ಅದೇ ಶಾಲೆಯಲ್ಲಿ 9,10ನೇ ತರಗತಿ ಮುಂದುವರಿಸಬಹುದು ಎಂದು ಹೇಳಲಾಗಿದೆ. ಈ ಸುತ್ತೋಲೆ ಶಿಕ್ಷಣ ಹಕ್ಕು ಕಾಯಿದೆ 2009 ಹಾಗೂ ಕರ್ನಾಟಕ ಶಿಕ್ಷಣ ಹಕ್ಕು ನಿಯಮಗಳು–2012ಕ್ಕೆ ತದ್ವಿರುದ್ಧವಾಗಿವೆ,'' ಎಂದರು.

''ಅಲ್ಲದೆ, ಆರ್‌ಟಿಇ ಕಾಯಿದೆಯ ಈ ವಿಧಿಯು 9 ಮತ್ತು 10ನೇ ತರಗತಿಗೆ ಅನ್ವಯಿಸುವುದಿಲ್ಲ. ಸುತ್ತೋಲೆ ಮೂಲಕ ಅದರ ವ್ಯಾಪ್ತಿಯನ್ನು ಅನಧಿಕೃತವಾಗಿ ವಿಸ್ತರಿಸಲಾಗಿದೆ. ಆರ್‌ಇಟಿ ಕಾಯಿದೆ 6ರಿಂದ 14 ವರ್ಷದ ಮಕ್ಕಳಿಗೆ ಮಾತ್ರ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ನೀಡುತ್ತದೆ. ಸುತ್ತೋಲೆ ಮೂಲಕ 9,10ನೇ ತರಗತಿಗೆ ಈ ಸೌಲಭ್ಯ ವಿಸ್ತರಿಸುವ ಅಧಿಕಾರ ಸರಕಾರಕ್ಕಿಲ್ಲ,'' ಎಂದು ವಿವರಿಸಲಾಗಿದೆ.

ವೈದ್ಯಕೀಯ ಕೋರ್ಸ್‌ಗಳಿಗೆ ಇಲ್ಲ ಶುಲ್ಕ ಏರಿಕೆ ಹೊರೆ

ಬೆಂಗಳೂರು: ನೀಟ್ ಮರು ಪರೀಕ್ಷೆಯಿಂದ ಕಂಗಾಲಾಗಿದ್ದ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಸಿಹಿ ಸುದ್ದಿ ನೀಡಿವೆ. ಈ ಬಾರಿ ವೈದ್ಯಕೀಯ ಕೋರ್ಸ್‌ಗಳ ಶುಲ್ಕ ಹೆಚ್ಚಳಕ್ಕೆ ಸರಕಾರದ ಮುಂದೆ ಯಾವುದೇ ಪ್ರಸ್ತಾವನೆ ಸಲ್ಲಿಕೆಯಾಗದ ಹಿನ್ನೆಲೆಯಲ್ಲಿ ಪೋಷಕರು ನಿಟ್ಟುಸಿರು ಬಿಡುವಂತಾಗಿದೆ. ಅಗತ್ಯ ವಸ್ತುಗಳ ಬೆಲೆಯೇರಿಕೆ, ನೀಟ್ ಮರುಪರೀಕ್ಷೆ ಯಿಂದ ಕಂಗೆಟ್ಟಿದ್ದ ಪೋಷಕರಿಗೆ ಹೊರೆ ನೀಡದಿರಲು ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಮುಂದಾಗಿವೆ.

2026–27ನೇ ಸಾಲಿನಲ್ಲಿ ವೈದ್ಯಕೀಯ ಕೋರ್ಸ್‌ಗಳ ಪ್ರವೇಶ ಶುಲ್ಕ ಹೆಚ್ಚಳಕ್ಕೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಕೆ ಮಾಡುವುದಿಲ್ಲ ಎಂದು ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಪ್ರತಿಷ್ಠಾನ ನಿರ್ಧರಿಸಿದೆ. ಕಳೆದ ವರ್ಷ ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಪ್ರತಿಷ್ಠಾನ, ಕರ್ನಾಟಕ ಧಾರ್ಮಿಕ ಹಾಗೂ ಭಾಷಾ ಅಲ್ಪಸಂಖ್ಯಾತರ ವೃತ್ತಿಪರ ಕಾಲೇಜುಗಳ ಅಸೋಸಿಯೇಷನ್ ಸೇರಿದಂತೆ ವಿವಿಧ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಸಂಘಟನೆಗಳು ಸರಕಾರಿ ಹಾಗೂ ಖಾಸಗಿ ಸೀಟುಗಳಿಗೆ ಶೇ.10 ರಿಂದ 15ರಷ್ಟು ಶುಲ್ಕ ಹೆಚ್ಚಳಕ್ಕೆ ಪ್ರಸ್ತಾವನೆ ಸಲ್ಲಿಸಿದ್ದವು. ಈ ವೇಳೆ ಪ್ರಸ್ತಾವನೆಯನ್ನು ತಿರಸ್ಕರಿಸಿದ್ದ ಸರಕಾರ 2024–25ರಲ್ಲಿದ್ದ ಮಾದರಿಯಲ್ಲೇ ಶುಲ್ಕ ನಿಗದಿಗೆ ಸೂಚಿಸಿತ್ತು. ಜತೆಗೆ, ಮ್ಯಾನೇಜ್‌ಮೆಂಟ್, ಎನ್‌ಆರ್‌ಐ ಕೋಟಾದಲ್ಲೂ ಶುಲ್ಕ ಹೆಚ್ಚಳಕ್ಕೆ ಅನುಮತಿ ನಿರಾಕರಿಸಿತ್ತು.

ಸರಕಾರದ ನಡೆಗೆ ಖಾಸಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಅಸಮಾಧಾನ ವ್ಯಕ್ತವಾದ ಬಳಿಕ, 45 ಲಕ್ಷ ರೂ. ದಾಟದಂತೆ ಮಿತಿ ಹೇರಲಾಗಿತ್ತು. ಇದರ ಪರಿಣಾಮವಾಗಿ ಕಳೆದ ವರ್ಷ ಮ್ಯಾನೇಜ್‌ಮೆಂಟ್ ಹಾಗೂ ಎನ್ ಆರ್‌ಐ ಕೋಟಾದ ವೈದ್ಯಕೀಯ ಸೀಟುಗಳ ಶುಲ್ಕ ಕನಿಷ್ಠ 1 ಲಕ್ಷ ರೂ.ನಿಂದ ಗರಿಷ್ಠ 5 ಲಕ್ಷ ರೂ.ವರೆಗೆ ಏರಿಕೆ ಕಂಡಿತ್ತು.

> ಈವರೆಗೆ ಯಾವುದೇ ಖಾಸಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಶುಲ್ಕ ಏರಿಕೆ ಬಗ್ಗೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿಲ್ಲ. ಒಂದು ವೇಳೆ ಪ್ರಸ್ತಾವನೆ ಸಲ್ಲಿಸಿದರೂ ತಿರಸ್ಕರಿಸಲಾಗುತ್ತದೆ. ಈ ವರ್ಷದಿಂದ ಸರಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಶೇ.15ರಷ್ಟು ಸೀಟುಗಳನ್ನು ಎನ್‌ಆರ್‌ಐ ಕೋಟಾಗೆ ಮೀಸಲಿಡುವ ಚಿಂತನೆಯಿದೆ. ಸಚಿವ ಸಂಪುಟದಲ್ಲಿ ಈ ಬಗ್ಗೆ ಚರ್ಚಿಸಿ ಬಳಿಕ ಜಾರಿಗೊಳಿಸಲಾಗುವುದು.
>
> **–ಡಾ.ಶರಣಪ್ರಕಾಶ ಆರ್.ಪಾಟೀಲ್** ವೈದ್ಯಕೀಯ ಶಿಕ್ಷಣ ಸಚಿವ

ಕೆ.ಶಶಿಕಿರಣ್ ಶೆಟ್ಟಿ ಮುಂದುವರಿಕೆ

ಬೆಂಗಳೂರು: ಕರ್ನಾಟಕ ಹೈಕೋರ್ಟ್‌ನ ಅಡ್ವೊಕೇಟ್ ಜನರಲ್ ಆಗಿ ಕೆ. ಶಶಿಕಿರಣ ಶೆಟ್ಟಿ ಅವರನ್ನು ಮುಂದುವರಿಸಿ ಸರಕಾರ ಆದೇಶ ಹೊರಡಿಸಿದೆ. ಶಶಿಕಿರಣ ಶೆಟ್ಟಿ ಅವರು 2023ರಲ್ಲಿ ಅಸ್ತಿತ್ವಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಕರ್ನಾಟಕ ಹೈಕೋರ್ಟ್‌ನ 23ನೇ ಅಡ್ವೊಕೇಟ್ ಜನರಲ್ ಆಗಿ ನೇಮಕಗೊಂಡಿದ್ದರು. ಹಿರಿಯ ವಕೀಲರಾಗಿರುವ ಶಶಿಕಿರಣ್ ಶೆಟ್ಟಿ ಅವರು ಹಲವು ಮಹತ್ವದ ಪ್ರಕರಣಗಳಲ್ಲಿ ಸರಕಾರವನ್ನು ಮುನ್ನಡೆಸಿದ್ದಾರೆ.

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಕಾರ್ಯದರ್ಶಿಗಳ ಕಾರ್ಯಾಲಯ, ಚಾಮುಂಡಿಬೆಟ್ಟ, ಮೈಸೂರು–570010
ದೂರವಾಣಿ ಸಂಖ್ಯೆ : 0821–2590027, ಇ–ಮೇಲ್: eochamunditemple@gmail.com

ಪತ್ರ ಸಂಖ್ಯೆ:ಶ್ರೀಚಾಕ್ಷೇಅಪ್ರಾ(5)ಸಿಆರ್: /2026–27 ದಿನಾಂಕ: 10.06.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ call-3
ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ (ದ್ವಿಲಕೋಟೆ)

ಮೈಸೂರು ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಕಛೇರಿಯಿಂದ ಸೂಚಿತ ಅವಧಿಗೆ ಈ ಕೆಳಕಂಡ ವಿವಿಧ ಬಾಬ್ತುಗಳಿಗೆ ಮರು ಟೆಂಡರ್ ಕರೆಯಲಾಗಿದೆ. ಆಸಕ್ತರು ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ (https://kppp.karnataka.gov.in) ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ದಾಖಲೆಯಲ್ಲಿ ತಿಳಿಸಿರುವಂತೆ (Technical qualification criteria)ದ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಈ ಕೆಳಕಂಡಂತೆ ನಿಗದಿಪಡಿಸಿದ ಇ.ಎಂ.ಡಿ.ಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರು ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು, ಇ.ಎಂ.ಡಿ.ಯು ಟೆಂಡರಿನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 45 ದಿನಗಳ ನಂತರದ ವರೆಗೆ ಮಾನ್ಯತೆ ಇರತಕ್ಕದ್ದು, ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಕ್ರ. ಸಂ	ಟೆಂಡರ್ ಹೆಸರು	ಅಂದಾಜು ಮೊತ್ತ (ರೂ.)	ಇಎಂಡಿ ಮೊತ್ತ (ರೂ.ಗಳಲ್ಲಿ)
1	ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳಿಗೆ ನಿತ್ಯ ಅನ್ನದಾಸೋಹ, ಹಾಗೂ ದೇವಸ್ಥಾನದ ದಿನ ನಿತ್ಯದ ಬಳಕೆಗೆ ಅಗತ್ಯವಾಗಿ ಬೇಕಾದ ದಿನಸಿ ಸಾಮಾಗ್ರಿಗಳ ಸರಬರಾಜು. (12 ತಿಂಗಳ ಅವಧಿಗೆ)	1,49,63,064	3,00,000
2	ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳಿಗೆ ಲಾಡು ಪ್ರಸಾದ ತಯಾರಿಕೆಗೆ ಆಗತ್ಯವಾಗಿ ಬೇಕಾದ ದಿನಸಿ ಸಾಮಾಗ್ರಿಗಳ ಸರಬರಾಜು. (12 ತಿಂಗಳ ಅವಧಿಗೆ)	3,99,27,300	8,00,000

ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ

ಕ್ರ.ಸಂ	ವಿವರ	ದಿನಾಂಕಗಳು	ಸಮಯ
1	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವುದು	ದಿ: 10.06.2026	ರ ಬೆಳಿಗ್ಗೆ 11.59 ಗಂಟೆ ನಂತರ
2	ಪ್ರೀಬಿಡ್ಡಿಂಗ್ ಕಾರ್ಯದರ್ಶಿಗಳ ಕಛೇರಿ	ದಿ: 15.06.2026	ಮಧ್ಯಾಹ್ನ 12 ಗಂಟೆಗೆ
3	ಟೆಂಡರ್‌ಗೆ ಸಂಬಂಧಿಸಿದ ವಿಚಾರಣೆಗೆ	ದಿ: 15.06.2026	ಸಂಜೆ 5 ಗಂಟೆಯವರೆಗೆ
4	ಟೆಂಡರ್ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ	ದಿ: 18.06.2026	ರ ಸಂಜೆ 5.00 ಗಂಟೆ ವರೆಗೆ
5	ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ	ದಿ: 19.06.2026	ರ ಸಂಜೆ 5.01 ಗಂಟೆ ನಂತರ
6	ಹಣಕಾಸಿನ ಟೆಂಡರ್‌ನ್ನು ತೆರೆಯುವ ದಿನಾಂಕ	ದಿ: 22.06.2026	ರ ಬೆಳಿಗ್ಗೆ 11.00 ಗಂಟೆ ನಂತರ

ಸಹಿ/– ಕಾರ್ಯದರ್ಶಿ
ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಚಾಮುಂಡಿಬೆಟ್ಟ

ವಾಸಾಸಂಇ/ಮೈಸೂರು/306/ಶಿರಡಿ ಸಾಯಿ/2026–27

ಕರ್ನಾಟಕ ಸರ್ಕಾರ
ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ ರಾಯಚೂರು ಜಿಲ್ಲೆ

"ಡಾ.ಬಿ.ಆರ್.ಅಂಬೇಡ್ಕರ್ & ಡಾ.ಬಾಬು ಜಗಜೀವನ ರಾಮ್ ಸಮುದಾಯ ಭವನ" ರಂಗಮಂದಿರ
ಹಿಂದುಗಡೆ ರಾಯಚೂರು–584101 ಇ–ಮೇಲ್ ವಿಳಾಸ: dsworchr315@gmail.com & ddswdraichur@gmail.com ದೂರವಾಣಿ ಸಂ: 08532 231091

ಸಂ:ಉನಿ/ಸಕಇರಾ/ಸಿಬ್ಬಂದಿ/ಡಿ–ಗ್ರೂಪ್/ಇ–ಟೆಂಡರ್/ಸಿಆರ್–1/2026–27 ದಿನಾಂಕ:10–06–2026

:: ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ Call-2 ::

ವಿಷಯ:–2026–27 ನೇ ಸಾಲಿಗೆ ರಾಯಚೂರು ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಕಛೇರಿ/ಸಂಸ್ಥೆಗಳಲ್ಲಿ ಖಾಲಿ ಇರುವ ಗ್ರೂಪ್–ಸಿ ಮತ್ತು ಗ್ರೂಪ್–ಡಿ ನೌಕರರನ್ನು ಹೊರಸಂಪನ್ಮೂಲ ಸಂಸ್ಥೆಯಿಂದ ಪಡೆಯಲು ಇ–ಟೆಂಡರ್ ಮೂಲಕ ಆಹ್ವಾನಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2026–27ನೇ ಸಾಲಿಗೆ ರಾಯಚೂರು ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಕಚೇರಿಗಳಲ್ಲಿ ಖಾಲಿ ಇರುವ ಗ್ರೂಪ್–ಸಿ ಕಂಪ್ಯೂಟರ್ ಆಪರೇಟರ್‌ಗಳು/ವಾಹನಾ ಚಾಲಕರು ಮತ್ತು ಗ್ರೂಪ್–ಡಿ ಸಿಬ್ಬಂದಿಯವರು ಹಾಗೂ ಇಲಾಖೆಯ ಅಧೀನದಲ್ಲಿ ಬರುವ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ, ವಸತಿ ಶಾಲೆಗಳಲ್ಲಿ ಖಾಲಿ ಇರುವ ಅಡುಗೆಯವರು, ಅಡುಗೆ ಸಹಾಯಕರು ಮತ್ತು ರಾತ್ರಿ ಕಾವಲುಗಾರರ ಹುದ್ದೆಗಳನ್ನು ತುಂಬಲು ಹೊರ ಸಂಪನ್ಮೂಲ ಸಂಸ್ಥೆಯಿಂದ ಸಿಬ್ಬಂದಿಗಳನ್ನು ಹೊರಸಂಪನ್ಮೂಲ ಏಜೆನ್ಸಿಯಿಂದ 2026–27ನೇ ಸಾಲಿಗೆ ಸೇವೆ ಪಡೆಯಲು ಕರ್ನಾಟಕ ಪಾರದರ್ಶಕ (KTPP) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಇವರಿಂದ ನೋಂದಾಯಿಸಿದ ಅರ್ಹ ಹಾಗೂ ಅಂಗೀಕೃತ ಏಜೆನ್ಸಿಗಳು ಇ–ಟೆಂಡರ್ ನಲ್ಲಿ ಭಾಗವಹಿಸಬಹುದು. ಇ–ಟೆಂಡರ್ ಪ್ರಕ್ರಿಯೆ ವಿವರ ಈ ಕೆಳಗಿನಂತಿದೆ.

1) **ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ:** ಸಂ:ಉನಿ/ಸಕಇರಾ/ಸಿಬ್ಬಂದಿ/ಡಿ–ಗ್ರೂಪ್/ಇ–ಟೆಂಡರ್/ಸಿಆರ್–1/2026–27 ದಿನಾಂಕ:10–06–2026 2) **ಟೆಂಡರ್‌ಗಿಟ್ಟ ಅಂದಾಜು ಮೊತ್ತ:** ರೂ.9,48,51,372/–ಗಳು 3) **ಇಎಂಡಿ ಮೊತ್ತ:** ರೂ.14,22,771/– 4) **e-portal ಮೂಲಕ ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಪ್ರಾರಂಭ ಮತ್ತು ಅಂತಿಮ ದಿನಾಂಕ ಮತ್ತು ಸಮಯ ಪ್ರಾರಂಭ:** 10–06–2026 ರಿಂದ ದಿ: 25–06–2026 ರವರೆಗೆ ಸಂಜೆ 5.30 ಗಂಟೆಯೊಳಗೆ. 5) **ಪೂರ್ವಬಾವಿ ಸಭೆ ದಿನಾಂಕ, ಸಮಯ & ಸ್ಥಳ:** 16–06–2026 ಬೆಳಿಗ್ಗೆ 11–00 ಗಂಟೆ ಉಪನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ ರಾಯಚೂರು (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) 6) **e-portal ನ ತಾಂತ್ರಿಕ ಲಕೋಟೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ:**29–06–2026 ಬೆಳಿಗ್ಗೆ 11–00 ಗಂಟೆ (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) 7) **ತಾಂತ್ರಿಕ ಲಕೋಟೆ ದಾಖಲಾತಿ ಪರಿಶೀಲನೆ ದಿನಾಂಕ ಮತ್ತು ಸ್ಥಳ:** 04–07–2026 ಬೆಳಿಗ್ಗೆ 11–00 ಗಂಟೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ರಾಯಚೂರು (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) **8) e-portal ನ ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ:** 07–07–2026 ರ ಬೆಳಿಗ್ಗೆ 11–00 ಗಂಟೆ (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) 9) **ಹೆಚ್ಚಿನ ಮಾಹಿತಿಗಳಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ:** ಉಪನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ ರಾಯಚೂರು– 08532–231091 ಇ–ಮೇಲ್ dsworchr315@gmail.com & ddswdraichur @gmail.com

ಸಹಿ/– ಉಪನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ ರಾಯಚೂರು

DIP/RCR/118KSMCA/120/2026-27

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೀದರ.

ನಂ: ಇಇ/ಎಂಐಡಿ/ಬೀದರ/ತಾ.ಶಾ–2/ಟೆಂಡರ್/2026–27/1335 ದಿನಾಂಕ: 10–6–2026

ಕೆಪಿಪಿ–ಪ್ರೋಕ್ಯೂರಮೆಂಟ, ಟೆಂಡರ್ ಪ್ರಕಟಣೆ(ಕರೆ–2 & 3)

1) ಕಾಮಗಾರಿಗಳ ವಿವರ. KPP-Portalನಲ್ಲಿ ನಮೂದಿಸಿದಂತೆ. 2) ಕಾಮಗಾರಿಗಳ ಅಂದಾಜು ಮೊತ್ತ.KPP - Portalನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ.KPP-Portalನಲ್ಲಿ ನಮೂದಿಸಿದಂತೆ, 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ. KPP -Portalನಲ್ಲಿ ನಮೂದಿಸಿದಂತೆ, 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ. KPP-Portalನಲ್ಲಿ ನಮೂದಿಸಿದಂತೆ. 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ:ಕೆ.ಡಬ್ಲೂ–3 ಮಾತ್ರ:**17–06–2026 ರಂದು 17.00 ಗಂಟೆವರೆಗೆ,** 7) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲೂ–3 ಮಾತ್ರ:**19–06–2026 ರಂದು 16.00 ಗಂಟೆ ವರೆಗೆ,** 8) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ –3 ಮಾತ್ರ:**22–06–2026 ರಂದು 11.00 ಗಂಟೆಗೆ** ಸಾಧ್ಯವಾದಲ್ಲಿ, 9) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ –3 ಮಾತ್ರ:**24–06–2026 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ,** 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ.ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ: 08482 232080, 11) ಅಂತರ್ಜಾಲ ತಾಣದ ವಿಳಾಸ. : KPP portal https:// kppp.karnataka.gov.in

ಸಹಿ/– ಕಾರ್ಯ ನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೀದರ.

ವಾ.ಸಾ.ಸಂ.ಇ/ಬೀದರ/56/ಕೆ.ಎಸ್.ಎಂ.ಸಿ.&ಎ/2026–27

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ವಿಶೇಷ ವಿಭಾಗ,
ಅಮೃತಹಳ್ಳಿ ಮುಖ್ಯ ರಸ್ತೆ, ಬ್ಯಾಟರಾಯನಪುರ, ಬೆಂಗಳೂರು–560 092.

ಸಂಖ್ಯೆ: ಬೆಂಉನಪಾ/ಕಾಪಾಅ/ವಿವಿ/ಟೆಂಡರ್/07/2026–27 ದಿನಾಂಕ: 11–06–2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ವೆಬ್‌ಸೈಟ್: https://kppp.karnataka.gov.in

ಕಾರ್ಯಪಾಲಕ ಅಭಿಯಂತರರು, ವಿಶೇಷ ವಿಭಾಗ, ಬೆಂಉನಪಾ/ಬೆಂಗಳೂರು ನಗರ ಪಾಲಿಕೆಯ ಯಾವುದೇ ಇತರ ಪರವಾನಗಿ ಪಡೆದ/ನೋಂದಾಯಿತ ಅರ್ಹ ಜಾಹೀರಾತುದಾರರಿಂದ, ಗ್ರೇಟರ್ ಬೆಂಗಳೂರು ಪ್ರದೇಶ (ಜಾಹೀರಾತು) ನಿಯಮಗಳು 2025ರ ಪ್ರಕಾರ 2-ವಲಯಗಳಲ್ಲಿ ವಾಣಿಜ್ಯ ಜಾಹೀರಾತು ಹಕ್ಕುಗಳ ನಿಯೋಜನೆಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಬಿಡ್‌ಗಳನ್ನು ಆಹ್ವಾನಿಸುತ್ತಾರೆ.
ಎಲ್ಲಾ ಆಸಕ್ತ ಬಿಡ್ದರ್‌ಗಳು ತಮ್ಮ ಬಿಡ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (https://kppp.karnataka.gov.in) ಮೂಲಕ ಎಲೆಕ್ಟ್ರಾನಿಕ್ ರೂಪದಲ್ಲಿ ಸಲ್ಲಿಸಬೇಕು.
ಟೆಂಡರ್ ವೇಳಾಪಟ್ಟಿಯನ್ನು ಕೆಳಗೆ ಉಲ್ಲೇಖಿಸಲಾಗಿದೆ:

1.	ಟೆಂಡರ್ ಪ್ರಕಟಣೆ ಸಂಖ್ಯೆ.:	BNCC/EE/SD/TEND/07/2026-27
2.	ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ ವೆಬ್‌ಸೈಟ್ http://kppp.karnataka.gov.in ನಿಂದ ಬಿಡ್ ದಾಖಲೆಯನ್ನು ಡೌನ್‌ಲೋಡ್ ಮಾಡುವ ಪ್ರಾರಂಭ ದಿನಾಂಕ	15/06/2026 ರಿಂದ ಮಧ್ಯಾಹ್ನ 3:00 ಗಂಟೆಗೆ
3.	ಪೂರ್ವ ಬಿಡ್ ಸಭೆಯ ದಿನಾಂಕ ಮತ್ತು ಸ್ಥಳ:	22–06–2026 ರಂದು ಮಧ್ಯಾಹ್ನ 3.00 ಗಂಟೆಗೆ ಹೆಚ್ಚುವರಿ ಆಯುಕ್ತರ ಕಚೇರಿ (ಕಂದಾಯ) ಬೆಂಗಳೂರು ಉತ್ತರ ನಗರ ಪಾಲಿಕೆ (ಬಿಎನ್‌ಸಿಸಿ) ಅಮೃತಹಳ್ಳಿ, ಮುಖ್ಯ ರಸ್ತೆ, ಬ್ಯಾಟರಾಯನಪುರ, ಬೆಂಗಳೂರು 560 092.
4.	ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ : ಯಾವುದಾದರೂ ಇದ್ದರೆ	22/06/2026ರ ಮಧ್ಯಾಹ್ನ 3:00 ಗಂಟೆಗೆ
5.	ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ ವೇದಿಕೆಯಲ್ಲಿ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ :	03/07/2026ರ ಸಂಜೆ 4:00 ಗಂಟೆಯವರೆಗೆ
6.	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: ತಾಂತ್ರಿಕ ಬಿಡ್ ಮತ್ತು ತಾಂತ್ರಿಕ ಮೌಲ್ಯಮಾಪನ	04/07/2026ರ ಸಂಜೆ 4:30 ಗಂಟೆಗೆ
7.	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: ತಾಂತ್ರಿಕವಾಗಿ ಅರ್ಹತೆ ಪಡೆದ ಬಿಡ್ದರ್‌ಗಳ ಆರ್ಥಿಕ ಬಿಡ್‌ಗಳು (ಸಾಧ್ಯವಾದರೆ)	ತಾಂತ್ರಿಕ ಮೌಲ್ಯಮಾಪನದ ತಕ್ಷಣ
8.	ವಿವರಗಳಿಗಾಗಿ ವ್ಯಕ್ತಿಯನ್ನು ಸಂಪರ್ಕಿಸಿ	ಉಪ ಆಯುಕ್ತರು (ಕಂದಾಯ), ಮೊಬೈಲ್: 88674 88804 ARO (Advt) ವಲಯ–1 98452 08509 ARO (Advt) ವಲಯ–2 96633 66263 ಇ ಮೇಲ್: dcyel.bbmp@gmail.com
9.	ಟೆಂಡರ್ ತೆರೆಯುವ ಸ್ಥಳ ಮತ್ತು ಸಂಪರ್ಕಿಸ ಬೇಕಾದ ವಿಳಾಸ	ಹೆಚ್ಚುವರಿ ಆಯುಕ್ತರ ಕಚೇರಿ (ಕಂದಾಯ) ಬೆಂಗಳೂರು ಉತ್ತರ ನಗರ ಪಾಲಿಕೆ (ಬಿಎನ್‌ಸಿಸಿ) ಅಮೃತಹಳ್ಳಿ, ಮುಖ್ಯ ರಸ್ತೆ, ಬ್ಯಾಟರಾಯನಪುರ, ಬೆಂಗಳೂರು – 560 092
10.	ಇಎಂಡಿ ಮೊತ್ತ	ಪ್ರತಿ ವಲಯವಾರು ಬಿಡ್‌ಗೆ ರೂ. 20 ಲಕ್ಷಗಳು (ಇದರಲ್ಲಿ ರೂ. 16 ಲಕ್ಷ ಬ್ಯಾಂಕ್ ಗ್ಯಾರಂಟಿಯಾಗಿ ಮತ್ತು ಉಳಿದ ರೂ. 4 ಲಕ್ಷಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಾವತಿಸಬೇಕು)

ಗಮನಿಸಿ: ಪೂರ್ಣಗೊಂಡ ಟೆಂಡರ್ ಅನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವ್ಯವಸ್ಥೆಯ ಮೂಲಕ ಈ ಟೆಂಡರ್‌ನಲ್ಲಿ ವಿವರಿಸಿದ ರೀತಿಯಲ್ಲಿ ಮಾತ್ರ ನಿಗದಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯದ ಮೊದಲು ಅಪ್‌ಲೋಡ್ ಮಾಡಬೇಕು.

ಸಹಿ/– ಕಾರ್ಯಪಾಲಕ ಅಭಿಯಂತರರು, ವಿಶೇಷ ವಿಭಾಗ, ಬೆಂಉನಪಾ.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು–560064
Website: www.rwf.indianrailways.gov.in

ಇ–ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಂ/ಒಟಿ/ಎಂಎಂಎಸ್/2026–27/23 ದಿನಾಂಕ : 05.06.2026

ಇ–ಟೆಂಡರ್: ಭಾರತದ ರಾಷ್ಟ್ರಪತಿಗಳ ಪರವಾಗಿ, ಪ್ರಧಾನ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್ ಭಾರತೀಯ ರೈಲ್ವೆ ಇ–ಪೋರ್ಟಲ್ http://www.ireps.gov.in (ವರ್ಕ್ಸ್) ನಲ್ಲಿ ಈ ಕೆಳಗಿನ ಕೆಲಸಕ್ಕಾಗಿ ಗುತ್ತಿಗೆದಾರರಿಂದ ಎಲೆಕ್ಟ್ರಾನಿಕ್ ಟೆಂಡರ್ ಆಹ್ವಾನಿಸುತ್ತಾರೆ.
ಟೆಂಡರ್ ನಂ : ಆರ್‌ಡಬ್ಲ್ಯೂಎಫ್/ಎಂ/ಒಟಿ/ಎಂಎಂಎಸ್/**2026–27/23 ದಿನಾಂಕ : 05.06.2026. ಕೆಲಸದ ಹೆಸರು:** ಸ್ಟೀಲ್ ಮೆಲ್ಟಿಂಗ್ ಶಾಪ್, ಮೌಲ್ಡಿಂಗ್ ರೂಮ್ ಮತ್ತು ವೀಲ್ ಫೈನಲ್ ಪ್ರೊಸೆಸಿಂಗ್ ಶಾಪ್‌ನ ಡಸ್ಟ್ ಕಲೆಕ್ಟರ್‌ಗಳ 2026–2027ನೇ ಸಾಲಿನ (ಗುಂಪು–2) ವಾರ್ಷಿಕ ಶಟ್‌ಡೌನ್ ನಿರ್ವಹಣೆ ಮತ್ತು ಇತರೆ ಕೆಲಸಗಳು. **ಅಂದಾಜು ವೆಚ್ಚ: ರೂ.25,49,877/–,** ಮುಂಗಡ ಹಣ ಠೇವಣಿ: ರೂ.51,000/–. **ಟೆಂಡರ್‌ನ ಕೊನೆಯ ದಿನಾಂಕ & ಸಮಯ: 27.06.2026 ರಂದು 10.30 ಕ್ಕೆ.**

ಇ–ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಂ/ಒಟಿ/ಎಂಎಂಎಸ್/2026–27/29 ದಿನಾಂಕ : 09.06.2026
ಕ್ರಸಂ.1. ಟೆಂಡರ್ ನಂ: ಆರ್‌ಡಬ್ಲ್ಯೂಎಫ್/ಎಂ/ಒಟಿ/ಎಂಎಂಎಸ್/2026–27/29 ದಿನಾಂಕ : 09.06.2026 **ಕೆಲಸದ ಹೆಸರು:** ಸ್ಟೀಲ್ ಮೆಲ್ಟಿಂಗ್ ಶಾಪ್ ಇಒಟಿ ಕ್ರೇನ್‌ಗಳು ಮತ್ತು ಇಎಫ್ ಸಂಬಂಧಿಸಿದ 2026ರ ವಾರ್ಷಿಕ ಶಟ್‌ಡೌನ್ ನಿರ್ವಹಣಾ ಕೆಲಸಗಳು (ಗುಂಪು–1), **ಅಂದಾಜು ವೆಚ್ಚ: ರೂ.44,10,999/–, ಮುಂಗಡ ಹಣ ಠೇವಣಿ:** ರೂ.88,200/–. **ಟೆಂಡರ್‌ನ ಕೊನೆಯ ದಿನಾಂಕ & ಸಮಯ: 01.07.2026 ರಂದು 10.30 ಕ್ಕೆ.**
ಉಪ ಸಿಎಂಇ/ಮೆಲ್ಟಿಂಗ್

ಇ–ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಂ/ಒಟಿ/ಡಬ್ಲ್ಯೂಎಫ್‌ಪಿಎಸ್/2026–27/24 ದಿನಾಂಕ : 05.06.2026
ಕ್ರಸಂ.1. ಟೆಂಡರ್ ನಂ: ಆರ್‌ಡಬ್ಲ್ಯೂಎಫ್/ಎಂ/ಒಟಿ/ಡಬ್ಲ್ಯೂಎಫ್‌ಪಿಎಸ್/2026–27/24 ದಿನಾಂಕ : 05.06.2026. **ಕೆಲಸದ ಹೆಸರು:** 2026–27ನೇ ಸಾಲಿನ ವೀಲ್ ಶಾಪ್ ಉಪಕರಣಗಳ ವಾರ್ಷಿಕ ನಿರ್ವಹಣಾ ಶಟ್‌ಡೌನ್ ಕೆಲಸಗಳು (ಡಬ್ಲ್ಯೂಎಫ್‌ಪಿಎಸ್ ನಿರ್ವಹಣೆ) ಗುಂಪು–8. **ಅಂದಾಜು ವೆಚ್ಚ ರೂ.38,39,608/–, ಮುಂಗಡ ಹಣ ಠೇವಣಿ:** ರೂ.76,800/–. **ಟೆಂಡರ್‌ನ ಕೊನೆಯ ದಿನಾಂಕ & ಸಮಯ: 27.06.2026 ರಂದು 10.30 ಕ್ಕೆ.**

ಇ–ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಂ/ಒಟಿ/ಡಬ್ಲ್ಯೂಎಫ್‌ಪಿಎಸ್/2026–27/25 ದಿನಾಂಕ : 09.06.2026
ಕ್ರಸಂ.1. ಟೆಂಡರ್ ನಂ: ಆರ್‌ಡಬ್ಲ್ಯೂಎಫ್/ಎಂ/ಒಟಿ/ಡಬ್ಲ್ಯೂಎಫ್‌ಪಿಎಸ್/2026–27/25 ದಿನಾಂಕ : 09.06.2026. **ಕೆಲಸದ ಹೆಸರು:** 2026–27 (ಡಬ್ಲ್ಯೂಎಫ್‌ಪಿಎಸ್)–ವೀಲ್ ಶಾಪ್ ಉಪಕರಣಗಳು ಗ್ರೂಪ್–9–ಕ್ಲೀನಿಂಗ್ ಮೆಷಿನ್ – 1&2, ಪೀನಿಂಗ್ ಮೆಷಿನ್ 1&2 ಮತ್ತು ಡಬ್ಲ್ಯೂಎಫ್‌ಪಿಎಸ್ ಕನ್ವೇಯರ್‌ಗಳ ವಾರ್ಷಿಕ ನಿರ್ವಹಣಾ ಶಟ್‌ಡೌನ್. **ಅಂದಾಜು ವೆಚ್ಚ ರೂ.47,31,973/,** ಮುಂಗಡ ಹಣ ಠೇವಣಿ: ರೂ.94,600/–. **ಟೆಂಡರ್‌ನ ಕೊನೆಯ ದಿನಾಂಕ & ಸಮಯ: 01.07.2026 ರಂದು 10.30 ಕ್ಕೆ.**

ಇ–ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಂ/ಒಟಿ/ಎಂಎಂಆರ್/2026–27/28 ದಿನಾಂಕ : 09.06.2026
ಕ್ರಸಂ.1. ಟೆಂಡರ್ ನಂ: ಆರ್‌ಡಬ್ಲ್ಯೂಎಫ್/ಎಂ/ಒಟಿ/ಎಂಎಂಆರ್/2026–27/28 ದಿನಾಂಕ : 09.06.2026. **ಕೆಲಸದ ಹೆಸರು:** ವೀಲ್ ಶಾಪ್ ವಾರ್ಷಿಕ ಶಟ್‌ಡೌನ್ 2026, ಕೆಲಸ ಸಂಖ್ಯೆ–7 (ಎಂಎಂಆರ್). **ಅಂದಾಜು ವೆಚ್ಚ ರೂ.23,49,019/–,** ಮುಂಗಡ ಹಣ ಠೇವಣಿ: ರೂ.47,000/–. **ಟೆಂಡರ್‌ನ ಕೊನೆಯ ದಿನಾಂಕ & ಸಮಯ: 01.07.2026 ರಂದು 10.30 ಕ್ಕೆ.**
ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸುವ ಅವಧಿ: **12 ತಿಂಗಳುಗಳು.**
ಈ ಟೆಂಡರ್ ಸೂಚನೆಯನ್ನು ವೆಬ್‌ಸೈಟ್ **www.rwf.indianrailways.gov.in** ನಲ್ಲಿ ವೀಕ್ಷಿಸಬಹುದು.
ಉಪ ಸಿಎಂಇ/ಡಬ್ಲ್ಯೂ ॥

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ. CAO/CN/BNC/183/2026
ದಿನಾಂಕ: 15.05.2026 ಗೆ ತಿದ್ದುಪಡಿ
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
ನೈಋತ್ಯ ರೈಲ್ವೆ ನಿರ್ಮಾಣ ಕಚೇರಿ, ಬೆಂಗಳೂರಿನಲ್ಲಿ ಐಪಿಎಂಎಸ್ ಸಾಫ್ಟ್‌ವೇರ್‌ನ ವಾರ್ಷಿಕ ನಿರ್ವಹಣೆ. **(ಟೆಂಡರು ಉಲ್ಲೇಖ ಸಂಖ್ಯೆ: BNC-IPMS-AMC-2026)**	**ರೂ. 37,80,000/-**

ಕೊನೆಯ ದಿನಾಂಕ	
ಪ್ರಸ್ತುತ	ಪರಿಷ್ಕೃತ
09.06.2026 (15:00 ಗಂಟೆಯವರೆಗೆ)	**16.06.2026 (15:00 ಗಂಟೆಯವರೆಗೆ)**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ
ಬೆಂಗಳೂರು ಕಂಟೋನ್ಮೆಂಟ್
PUB/203/AAF/PRB/SWR/2026-27
ಸುಲಭ ಟಿಕೆಟ್ ಬುಕಿಂಗ್, **PNR** ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR | SWRRLY | SWRAILWAYHQ | sw_railways

ಕರ್ನಾಟಕ ಸರಕಾರ
ಕರ್ನಾಟಕ ಅರಣ್ಯ ಇಲಾಖೆ
ಕಾರವಾರ ವಿಭಾಗ, ಕಾರವಾರ

ಕಾರವಾರ ವಿಭಾಗ, ಕಾರವಾರ ಇವರ ಹಟ್ಟಿಕೇರಿ ಡಿಪೋದಲ್ಲಿ ಮರದ ಇ–ಟೆಂಡರ್ ಹಾಗೂ ಹರಾಜಿನ ವಿವರವಾದ ಪ್ರಕಟಣೆ ಸಂಖ್ಯೆ ಎ6/ಡಿಪೋ/ಇ–ಹರಾಜು/ಜುಲೈ–2026/ಸಿಆರ–02/2026–27 ದಿನಾಂಕ: 06–06–2026. ಸಾರ್ವಜನಿಕರ ಸಾಮಾನ್ಯ ಮಾಹಿತಿಗಾಗಿ ಈ ಮೂಲಕ ಪ್ರಕಟಪಡಿಸುವುದೇನೆಂದರೆ, ಕಾರವಾರ ವಿಭಾಗ, ಕಾರವಾರ ಇವರ ಹಟ್ಟಿಕೇರಿ ಸರ್ಕಾರಿ ಟಿಂಬರ್ ಡಿಪೋದಲ್ಲಿ ದಾಸ್ತಾನು ಮಾಡಿರುವ ಮತ್ತು ಲಾಟು ಮಾಡಿರುವ ಸಾಗವಾನಿ, ಸಿಸಂ ಮತ್ತು ಜಂಗ್ಲಿ ಮರಗಳ ಅರಣ್ಯ ಉತ್ಪನ್ನಗಳನ್ನು ದಿನಾಂಕ: 06–07–2026 ರಿಂದ 08–07–2026 ರವರೆಗೆ (I, II, III, IV ಸೆಷನ್‌ಗಳಿಗೆ) ಬೆಳಿಗ್ಗೆ 10.00 ಗಂಟೆಯಿಂದ ಪ್ರಾರಂಭವಾಗಿ ಎಲ್ಲಾ ಲಾಟುಗಳಿಗೆ ಬಿಡ್ಡಿಂಗ್ ಪೂರ್ಣವಾಗುವವರೆಗೆ ಪ್ರತಿ ದಿನಕ್ಕೆ ನಾಲ್ಕು ಸೆಷನ್‌ಗಳಲ್ಲಿ ಬಹಿರಂಗ ಇ–ಟೆಂಡರ್ ಹಾಗೂ ಹರಾಜಿನ ಮೂಲಕ ಮಾರಾಟ ಮಾಡಲಾಗುವುದು. ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರವಾರ ವಿಭಾಗ, ಕಾರವಾರ ಇವರು ಮಾರಾಟ ನಡೆಸುವ ಅಧಿಕಾರಿಯಾಗಿರುವರು.
ಯಾವುದೇ ಸ್ಪಷ್ಟನೆಗಳಿಗಾಗಿ ನೀವು ಇವರನ್ನು ಸಂಪರ್ಕಿಸಬಹುದು:
ಸರ್ಕಾರಿ ಟಿಂಬರ್ ಡಿಪೋ, ಹಟ್ಟಿಕೇರಿ:
gtdhattikeri@gmail.com. ದೂರವಾಣಿ: 08388–248796
ವಲಯ ಅರಣ್ಯಾಧಿಕಾರಿ, ಅಂಕೋಲಾ:
rangeforestankola@gmail.com ದೂರವಾಣಿ 08388–230342
ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರವಾರ ವಿಭಾಗ, ಕಾರವಾರ
karwardcf@gmail.com ದೂರವಾಣಿ: 08382–226365

ಸಹಿ/– (ಅಂಥೋನಿ. ಎಸ್. ಮರಿಯಪ್ಪ, ಭಾ.ಅ.ಸೇ)
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕಾರವಾರ ವಿಭಾಗ, ಕಾರವಾರ

DIPR/KWR/KSMCA/197/26-27
dt. 09.06.2026

ಸೆಬಿ

ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ಎನ್ನುವುದು 'ಸೆಬಿ'ಯ ಪೂರ್ಣರೂಪ. ಇದು ಭಾರತದ ಬಂಡವಾಳ ಮತ್ತು ಸರಕು ಮಾರುಕಟ್ಟೆಗಳನ್ನು ನಿಯಂತ್ರಿಸುವ ಅಧಿಕೃತ ಸಂಸ್ಥೆಯಾಗಿದೆ. ಕೇಂದ್ರ ವಿತ್ತ ಸಚಿವಾಲಯದ ಅಡಿ ಈ ಸ್ವಾಯತ್ತ ಸಂಸ್ಥೆ ಕಾರ್ಯನಿರ್ವಹಿಸುತ್ತದೆ.

ವಿಕ ಜಾಣ ತಾಣ

ಇದು ಆರಂಭದಲ್ಲಿ 1988ರಲ್ಲಿ ಆಡಳಿತಾತ್ಮಕ ಸಂಸ್ಥೆಯಾಗಿ ರೂಪುಗೊಂಡಿತು. ನಂತರ, 1992ರ ಸೆಬಿ ಕಾಯಿದೆಯ ಮೂಲಕ ಇದಕ್ಕೆ ಸಂಪೂರ್ಣ ಸ್ವಾಯತ್ತ ಮತ್ತು ಶಾಸನಬದ್ಧ ಅಧಿಕಾರವನ್ನು ನೀಡಲಾಯಿತು. ಹಗರಣಗಳು ಮತ್ತು ಮಾರುಕಟ್ಟೆಯ ಅಕ್ರಮಗಳನ್ನು ತಡೆದು, ವೇಗವಾಗಿ ಬೆಳೆಯುತ್ತಿರುವ ಷೇರು ಮಾರುಕಟ್ಟೆಯಲ್ಲಿ ಪಾರದರ್ಶಕತೆ ಮತ್ತು ಶಿಸ್ತು ತರಲು ಭಾರತ ಸರಕಾರ ಸೆಬಿಯನ್ನು ಸ್ಥಾಪಿಸಿತು. ಸೆಬಿ ಮಾರುಕಟ್ಟೆಯ ಕಾವಲುಗಾರನಾಗಿ ಪ್ರಮುಖ ಪಾತ್ರ ವಹಿಸುತ್ತದೆ. ಇದು ನಿಯಮಗಳನ್ನು ಜಾರಿಗೊಳಿಸಿ ವ್ಯಾಪಾರ ನ್ಯಾಯಯುತವಾಗಿ ನಡೆಯುವುದನ್ನು ಖಾತರಿ ಪಡಿಸುತ್ತದೆ ಮತ್ತು ವಂಚನೆಗಳನ್ನು ತಡೆಯುತ್ತದೆ. ಕಂಪನಿಗಳು ಮತ್ತು ಮಧ್ಯವರ್ತಿಗಳನ್ನು ಹೊಣೆಗಾರರನ್ನಾಗಿ ಮಾಡುವ ಮೂಲಕ, ಸೆಬಿ ಸಾಮಾನ್ಯ ಹೂಡಿಕೆದಾರರ ಹಿತಾಸಕ್ತಿಯನ್ನು ರಕ್ಷಿಸುತ್ತದೆ.

ಮುಖ್ಯಮಂತ್ರಿಗಳೇ ಎನ್‌ಆರ್‌ಐಗಳ ಅಹವಾಲು ಆಲಿಸಿ | ಕೇರಳ ವ್ಯವಸ್ಥೆ ಮಾದರಿಯಾಗಲಿ

ನೋರ್ಕಾದಂತೆ ರಾಜ್ಯಕ್ಕೆ ಎನ್‌ಆರ್‌ಕೆ!

■ **ವಿಜಯ್ ಕೋಟ್ಯಾನ್** ಮಂಗಳೂರು

vijaya.poojary@timesofindia.com

ರಾಜ್ಯದ ಅಭಿವೃದ್ಧಿಗೆ ಅನಿವಾಸಿ ಭಾರತೀಯರ (ಎನ್‌ಆರ್‌ಐ) ಕೊಡುಗೆ ಅಪಾರವಾಗಿದ್ದು, ಆದರೆ ಎನ್‌ಆರ್‌ಐಗಳ ಬೇಡಿಕೆಯನ್ನು ಈಡೇರಿಸುವಲ್ಲಿ ರಾಜ್ಯ ಸರಕಾರ ನಿರೀಕ್ಷಿತ ಹೆಜ್ಜೆ ಇಟ್ಟಿಲ್ಲ. ಅದರಲ್ಲೂ ಮುಖ್ಯವಾಗಿ ಕೇರಳ ಮಾದರಿಯ ನೋರ್ಕಾ ಕಾರ್ಡ್‌ನಂತೆ ರಾಜ್ಯದಲ್ಲೂ ಎನ್‌ಆರ್‌ಕೆ ಕಾರ್ಡ್ ಬೇಡಿಕೆಗೆ ದಶಕಗಳೇ ಸಂದಿವೆ.

ಕೇರಳದಲ್ಲಿ ನೋರ್ಕಾ ಕಾರ್ಡ್ ಪಡೆದುಕೊಂಡವರಿಗೆ ಅಪಘಾತ ವಿಮೆ, ಸಾಲ ಯೋಜನೆಗಳು, ಸರಕಾರದ ನಾನಾ ಸವಲತ್ತುಗಳು ದೊರೆಯುತ್ತಿವೆ. 18 ವರ್ಷದಿಂದ 70ವರ್ಷವರೆಗಿನ ಎಲ್ಲ ಅನಿವಾಸಿ ಭಾರತೀಯರು ಈ ಕಾರ್ಡ್ ಪಡೆಯಬಹುದಾಗಿದ್ದು, ಕಾರ್ಡ್‌ಗೆ 3 ವರ್ಷ ಮಾನ್ಯತೆಯಿದೆ. ಒಂದು ನೋರ್ಕಾ ಕಾರ್ಡ್‌ಗೆ ಸರಕಾರ 400 ರೂ. ಕಂತು ಪಡೆದುಕೊಳ್ಳುತ್ತದೆ.

2017ರಲ್ಲಿ ಕರ್ನಾಟಕ ಎನ್‌ಆರ್‌ಐ ಫೋರಂನ ಉಪಾಧ್ಯಕ್ಷೆಯಾಗಿದ್ದ ಡಾ.ಆರತಿಕೃಷ್ಣ ಕುವೈತ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ಅನಿವಾಸಿ ಕನ್ನಡಿಗರೆಲ್ಲರಿಗೂ ಕೇರಳದ ನೋರ್ಕಾ ಮಾದರಿಯ ಎನ್‌ಆರ್‌ಕೆ ಕಾರ್ಡ್ ಸೌಲಭ್ಯ ಆರಂಭಿಸುವ ಭರವಸೆ ನೀಡಿದ್ದರು.

2023ರಲ್ಲಿ ಡಿ.ಕೆ.ಶಿವಕುಮಾರ್ ಉಪ ಮುಖ್ಯಮಂತ್ರಿಯಾಗಿದ್ದಾಗ ಅನಿವಾಸಿ ಭಾರತೀಯರಿಗೆ ಎನ್‌ಆರ್‌ಕೆ ಕಾರ್ಡ್‌ನ ಉಚಿತ ವಿಮೆ ನೀಡುವುದಾಗಿ ಘೋಷಣೆ ಮಾಡಿದ್ದರು. ಈಗ ಶಿವಕುಮಾರ್ ಮುಖ್ಯಮಂತ್ರಿಯಾಗಿದ್ದು, ಎನ್‌ಆರ್‌ಐಗಳಲ್ಲಿ ಹೊಸ ಆಶಾವಾದ ಮೂಡಿದೆ.

ಕೇರಳ ಮಾದರಿಯಾಗಲಿ: ಕೇರಳದಲ್ಲಿ ನೋರ್ಕಾ ಕಾರ್ಡ್ ಹೊಂದಿದವರಿಗೆ ಪ್ರವಾಸಿ ರಕ್ಷಾ ಇನ್ಶೂರೆನ್ಸ್, ಪ್ರವಾಸಿ ಪೆನ್ಶನ್ ಸೌಲಭ್ಯವನ್ನು ನೀಡಲಾಗಿದೆ. ಈ ಇನ್ಶೂರೆನ್ಸ್ ಯಾವುದೇ ತುರ್ತು ಚಿಕಿತ್ಸೆಗೆ ಅನುಕೂಲವಾಗಿದೆ. ಯಾವುದೇ ದೇಶದಲ್ಲಿ ತುರ್ತು ಪರಿಸ್ಥಿತಿ ಅಥವಾ ಯಾವುದೇ ಪ್ರಾಕೃತಿಕ ತೊಂದರೆ ಉಂಟಾದರೆ ಕೂಡಲೇ ಅವರು ಉದ್ಯೋಗ ಮಾಡುವ ಪ್ರದೇಶದ ಬಗ್ಗೆ ತಿಳಿದು ಆ ದೇಶದಿಂದ ಅವರನ್ನು ರಕ್ಷಿಸುವ ಕಾರ್ಯಕ್ಕೆ ಇದು ಅನುಕೂಲವಾಗಲಿದೆ.

ಎನ್‌ಆರ್‌ಐಗಳು 5 ವರ್ಷ ನಿಗದಿತ ಮೊತ್ತ ಪಾವತಿ ಮಾಡಿದರೆ 60 ವರ್ಷದ ನಂತರ ಅವರು ನಿವೃತ್ತಿಯಾದರೆ ಅವರಿಗೆ ನಿವೃತ್ತಿ ವೇತನ ನೀಡುವ ಸೌಲಭ್ಯವೂ ಇದೆ. ಇದೇ ಮಾದರಿ ಕರ್ನಾಟಕದಲ್ಲೂ ಎನ್‌ಆರ್‌ಕೆ ಕಾರ್ಡ್ ಮಾಡಲು ಚಿಂತನೆ ನಡೆದಿದೆ.

ಸಚಿವಾಲಯ ಮಾತ್ರ ಬೇಡಿಕೆಯಲ್ಲ: ರಾಜ್ಯದಲ್ಲಿ ಅನಿವಾಸಿ ಕನ್ನಡಿಗರ ಸಚಿವಾಲಯ ಸ್ಥಾಪನೆ ಮಾಡುವುದಾಗಿ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಣೆ ಮಾಡಿರುವುದು ಸ್ವಾಗತಾರ್ಹವಾದರೂ, ಸರಕಾರದ ಮುಂದೆ ಎನ್‌ಆರ್‌ಐಗಳ ಬೇಡಿಕೆಯ ಪಟ್ಟಿಯೇ ಇದ್ದು, ಅದನ್ನು ಅನುಷ್ಠಾನ ಮಾಡಬೇಕಿದೆ.

ಮುಖ್ಯವಾಗಿ ಅನಿವಾಸಿ ಕನ್ನಡಿಗರಿಗಾಗಿ ಪ್ರತ್ಯೇಕ, ಸಕ್ರಿಯ ಮತ್ತು ಉತ್ತರದಾಯಿತ್ವ ಹೊಂದಿರುವ ಶಾಶ್ವತ ವ್ಯವಸ್ಥೆ ಬೇಕು. ಕರ್ನಾಟಕದ ಎನ್‌ಆರ್‌ಐ ನೀತಿ ರಚನೆ ಹಾಗೂ ಅದರ ಕಾರ್ಯಚಟುವಟಿಕೆಗಳ ಪಾರದರ್ಶಕ ಮಾಹಿತಿ, ಜಿಲ್ಲಾವಾರು ಸಂಯೋಜಕರು, ಕಲ್ಯಾಣ ಸಮಿತಿ ಸದಸ್ಯರು ಹಾಗೂ ತುರ್ತು ಸಂಪರ್ಕ ಸಂಖ್ಯೆಗಳ ಸಾರ್ವಜನಿಕ ಪಟ್ಟಿ ತಯಾರಿಸಬೇಕು. ಪ್ರತಿ ದೇಶದಿಂದ ಕನಿಷ್ಠ ಒಬ್ಬ ಅಥವಾ ಇಬ್ಬರು ನೈಜ ಅನಿವಾಸಿ ಪ್ರತಿನಿಧಿಗಳನ್ನು ಕೋರ್ ಸಮಿತಿಯಲ್ಲಿ ಸೇರಿಸಬೇಕು, ಪ್ರತಿನಿಧಿಗಳ ಆಯ್ಕೆಯಲ್ಲಿ ತಳಮಟ್ಟದ ಸಮಸ್ಯೆಗಳನ್ನು ಅರ್ಥಮಾಡಿಕೊಂಡಿರುವ ಸಾಮಾಜಿಕ ಕಾರ್ಯಕರ್ತರು, ಸ್ವಯಂಸೇವಕರು ಮತ್ತು ಸಮುದಾಯ ಸೇವೆಯಲ್ಲಿ ತೊಡಗಿರುವ ವ್ಯಕ್ತಿಗಳಿಗೆ ಅವಕಾಶ ನೀಡಬೇಕು, ಆಯ್ಕೆಯಾದ ಪ್ರತಿನಿಧಿಗಳಿಗೆ ಭಾರತೀಯ ರಾಯಭಾರ ಕಚೇರಿ, ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹಾಗೂ ಕರ್ನಾಟಕ ಸರ್ಕಾರದ ಸಂಬಂಧಿತ ಇಲಾಖೆಗಳೊಂದಿಗೆ ನೇರ ಸಂವಹನ ನಡೆಸುವ ಅಧಿಕೃತ ವ್ಯವಸ್ಥೆ ಕಲ್ಪಿಸಬೇಕು ಎಂಬ ಬೇಡಿಕೆಯನ್ನಿರಿಸಲಾಗಿದೆ.

> ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಂದಿನ ಸಚಿವ ಸಂಪುಟ ವಿಸ್ತರಣೆ ವೇಳೆ ಎನ್‌ಆರ್‌ಐ ಸಚಿವಾಲಯ ರಚನೆ ಕುರಿತು ಅಂತಿಮ ನಿರ್ಧಾರ ಪ್ರಕಟಿಸಲಿದ್ದಾರೆ. ಕೇರಳ ನೋರ್ಕಾ ಮಾದರಿಯಲ್ಲೇ ರಾಜ್ಯದಲ್ಲೂ ಎನ್‌ಆರ್‌ಕೆ ಕಾರ್ಡ್ ಪ್ರಸ್ತಾಪ ಸರಕಾರದ ಮುಂದಿದ್ದು, ಸಚಿವಾಲಯ ಆರಂಭವಾದ ಮೇಲೆ ಈ ಬೇಡಿಕೆಗೂ ಮಾನ್ಯತೆ ಸಿಗಲಿದೆ.
>
> **-ಡಾ.ಆರತಿಕೃಷ್ಣ** ಉಪಾಧ್ಯಕ್ಷೆ, ಎನ್‌ಆರ್‌ಐ ಫೋರಂ

ವಚನಾನಂದ ಶ್ರೀ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಕೆ

ದಾವಣಗೆರೆ: ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ವಚನಾನಂದ ಸ್ವಾಮೀಜಿ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣ ಸಂಬಂಧ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಸಾಕ್ಷ್ಯಗಳು, ಸಂತ್ರಸ್ತ ಬಾಲಕ, ಆತನ ಸಹಪಾಠಿಗಳು ಸೇರಿ ಹಲವರ ಹೇಳಿಕೆ ಒಳಗೊಂಡಿರುವ 100ಕ್ಕೂ ಹೆಚ್ಚು ಪುಟಗಳ ದೋಷಾರೋಪ ಪಟ್ಟಿಯನ್ನು ಜೂನ್ 6ರಂದು ಜಿಲ್ಲಾ ವಿಶೇಷ ಪೋಕ್ಸೊ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ವಸತಿ ನಿಲಯದ ಬಾಲಕರನ್ನು ದುರ್ಬಳಕೆ ಮಾಡಿಕೊಂಡು ದೌರ್ಜನ್ಯ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯೂಸಿ) ಸಿದ್ಧಪಡಿಸಿದ ವರದಿಯೂ ಪಟ್ಟಿಯಲ್ಲಿದೆ.

ಆದೇಶ ಕಾಯ್ದಿರಿಸಿದ ಕೋರ್ಟ್: ವಚನಾನಂದ ಸ್ವಾಮೀಜಿ ಅವರಿಗೆ ಪೋಕ್ಸೊ ಪ್ರಕರಣದಲ್ಲಿ ನೀಡಿರುವ ನಿರೀಕ್ಷಣಾ ಜಾಮೀನು ರದ್ದುಗೊಳಿಸುವಂತೆ ಕೋರಿ ಹರಿಹರ ಗ್ರಾಮಾಂತರ ಪೊಲೀಸರು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಜಿಲ್ಲಾ ವಿಶೇಷ ಪೋಕ್ಸೊ ನ್ಯಾಯಾಲಯ, ಆದೇಶವನ್ನು ಜೂನ್ 18ಕ್ಕೆ ಕಾಯ್ದಿರಿಸಿದೆ.

ಇಷ್ಟವಿಲ್ಲದ ಕೋರ್ಸ್, ಹಾಸ್ಟೆಲ್ ಸೇರಿಸಿದ್ದಕ್ಕೆ ಕೊಲೆ!

ಕೊಪ್ಪಳ: ಗಂಗಾವತಿ ತಾಲೂಕಿನ ಹೊಸ ಅಯೋಧ್ಯೆ ಗ್ರಾಮದಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾದ 17 ವರ್ಷದ ಬಾಲಕ, ತನ್ನ ತಂದೆ ಹಾಗೂ ಅಕ್ಕನನ್ನು ಕೊಲೆ ಮಾಡಿದ ಪ್ರಕರಣ ತಿರುವು ಪಡೆದಿದೆ. ಪಿಯುಸಿಯಲ್ಲಿ ತನಗೆ ಬೇಡವಾದ ಕೋರ್ಸ್ ಹಾಗೂ ಹಾಸ್ಟೆಲ್‌ಗೆ ಒತ್ತಾಯಪೂರ್ವಕವಾಗಿ ಸೇರಿಸಿದ್ದರಿಂದ ತಂದೆ ಹಾಗೂ ಅಕ್ಕನನ್ನು ಬಾಲಕ ಕೊಲೆ ಮಾಡಿರುವುದು ಪೊಲೀಸರ ಪ್ರಾಥಮಿಕ ವಿಚಾರಣೆ ವೇಳೆ ಬಯಲಾಗಿದೆ.

ಮೊಬೈಲ್‌ನಲ್ಲಿ ಆನ್‌ಲೈನ್ ಗೇಮ್ ಆಡದಂತೆ ಬುದ್ಧಿವಾದ ಹೇಳಿದ್ದಕ್ಕೆ ಈ ಕೊಲೆ ನಡೆದಿದೆ ಎಂದೇ ಈ ಮುಂಚೆ ತಿಳಿಯಲಾಗಿತ್ತು. ಬಾಲಕ ಜೂನ್ 6ರ ರಾತ್ರಿ ಮನೆಯಲ್ಲಿ ತಂದೆ ವೆಂಕಟನಾಯ್ಡು, ಸಹೋದರಿ ಪ್ರಗತಿ ಅವರನ್ನು ಚಾಕುವಿನಿಂದ ಇರಿದು ಬಾಲಕ ಕೊಲೆಮಾಡಿದ್ದ. ಘಟನೆಯಲ್ಲಿ ಗಾಯಗೊಂಡಿದ್ದ ತಾಯಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಆರೋಪಿ ಬಾಲಕ ಎಸ್ಸೆಸ್ಸೆಲ್ಸಿಯಲ್ಲಿ ಶೇ.92 ಅಂಕ ಪಡೆದಿದ್ದ. ಜೀವಶಾಸ್ತ್ರ ವಿಷಯದಲ್ಲಿ ಹೆಚ್ಚಿನ ಆಸಕ್ತಿ ಇದ್ದುದ್ದರಿಂದ ಪಿಯುಸಿಯಲ್ಲಿ ವಿಜ್ಞಾನ ವಿಭಾಗ ಆಯ್ದುಕೊಳ್ಳಲು ಬಯಸಿದ್ದ. ಆದರೆ, ಪಾಲಕರು ಕಂಪ್ಯೂಟರ್ ಸೈನ್ಸ್ ತೆಗೆದುಕೊಳ್ಳುವಂತೆ ಒತ್ತಾಯದಿಂದ ಸೇರಿಸಿದ್ದರು. ಮನೆಯಿಂದಲೇ ಕಾಲೇಜಿಗೆ ಹೋಗಿ ಕಲಿಯಬೇಕೆಂಬ ಅಭಿಲಾಷೆಯಿದ್ದರೂ ಒತ್ತಾಯ ಪೂರ್ವಕವಾಗಿ ಹಾಸ್ಟೆಲ್‌ಗೆ ಸೇರಿಸಿದ್ದರು. ಇದರಿಂದ ಬಾಲಕ ಆಕ್ರೋಶಗೊಂಡಿದ್ದ. ಕೆಲವು ತಿಂಗಳ ಹಿಂದೆ ಹಾಸ್ಟೆಲ್ ತ್ಯಜಿಸಿ ಮನೆಗೆ ಬಂದಿದ್ದ. ಕಾಲೇಜಿಗೆ ತೆರಳುವಂತೆ ಬಾಲಕ ಹಾಗೂ ಪಾಲಕರ ನಡುವೆ ಆಗಾಗ್ಗೆ ಜಗಳ ನಡೆಯುತಿತ್ತು ಎನ್ನಲಾಗಿದೆ.

ಹೊರಟ್ಟಿ, ರವಿ ಶೆಟ್ಟಿಗೆ ಕಯ್ಯಾರ ಪ್ರಶಸ್ತಿ

ಕಾಸರಗೋಡು (ಕೇರಳ): ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್.ಹೊರಟ್ಟಿ ಮತ್ತು ಎಟಿಎಸ್ ಕತಾರ್ ಆಡಳಿತ ನಿರ್ದೇಶಕ ಡಾ.ಮೂಡಂಬೈಲು ರವಿ ಶೆಟ್ಟಿ ಅವರು ಕಯ್ಯಾರ ಪ್ರಶಸ್ತಿಗೆ ಆಯ್ಕೆ ಆಗಿದ್ದಾರೆ



ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕಾಸರಗೋಡು ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ, ಕಲ್ಲೂರ ಪ್ರತಿಷ್ಠಾನ ಮಂಗಳೂರು ಸಹಯೋಗದಲ್ಲಿ ಜೂನ್ 21ರಂದು ಕಯ್ಯಾರು ಕಾಮಿಲ್ ಕೊಕ್ಕೆಚಾಲು ಶಾಲಾ ವಠಾರದಲ್ಲಿ ನಡೆಯುವ ಡಾ.ಕಯ್ಯಾರ ಕಿಂಞಣ್ಣ ರೈ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ. ಇದೇ ವೇಳೆ ಸಾಮಾಜಿಕ ಕಾರ್ಯಕರ್ತ ದೀಪಕ್ ವಿ.ಕೆ., ಜಾನಪದ ಕಲಾವಿದ ಸೋಮಯ್ಯ ಅಶ್ವತ್ಥಕಟ್ಟೆ, ಪ್ರಗತಿಪರ ಕೃಷಿಕ ರಾಮಣ್ಣ ಅತ್ತಾರ್, ನಾಟಿ ವೈದ್ಯ ಮೊಹಮ್ಮದ್ ಪರಂಬಳ ಅವರನ್ನು ಸನ್ಮಾನಿಸಲಾಗುತ್ತದೆ.

ಕೊಡಗಿನ ಕಲಾವಿದೆಗೆ ರಾಷ್ಟ್ರೀಯ ಪುರಸ್ಕಾರ

ಮಡಿಕೇರಿ: ಕೊಡಗಿನ ಕಲಾವಿದೆ ಮುಕ್ಕಾಟಿರ ಶಿಲ್ಪಾ ನಂಜಪ್ಪ ಅವರು 2024ನೇ ಸಾಲಿನ ಪ್ರತಿಷ್ಠಿತ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರಕ್ಕೆ ಆಯ್ಕೆಯಾಗಿದ್ದಾರೆ.

ಕೇಂದ್ರ ಸಂಸ್ಕೃತಿ ಸಚಿವಾಲಯದ ಸಂಗೀತ ನಾಟಕ ಅಕಾಡೆಮಿಯಿಂದ 40 ವರ್ಷ ವಯೋಮಿತಿಯೊಳಗಿನ ಯುವ ಕಲಾವಿದರಿಗೆ ಕಲೆ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿ ನೀಡಲಾಗುವ ದೇಶದ ಪ್ರಮುಖ ಗೌರವಗಳಲ್ಲಿ ಈ ಪ್ರಶಸ್ತಿಯೂ ಒಂದು. ಭರತನಾಟ್ಯ ಕ್ಷೇತ್ರದಲ್ಲಿ ಶಿಲ್ಪಾ ನಂಜಪ್ಪ ಅವರು ಸಲ್ಲಿಸಿರುವ ವಿಶಿಷ್ಟ ಕೊಡುಗೆಯನ್ನು ಪರಿಗಣಿಸಿ 25 ಸಾವಿರ ರೂ. ನಗದು ಬಹುಮಾನ ಒಳಗೊಂಡ ಪ್ರಶಸ್ತಿಗೆ ಅವರನ್ನು ಆಯ್ಕೆ ಮಾಡಲಾಗಿದೆ. ಶೀಘ್ರದಲ್ಲೇ ಹೊಸದಿಲ್ಲಿಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರದಾನ ಮಾಡಲಾಗುತ್ತದೆ.

ರೌಡಿಶೀಟರ್ ಹತ್ಯೆ ಪ್ರಕರಣ: 10 ಆರೋಪಿಗಳ ಬಂಧನ

ಹಾಸನ: ನಗರದ ನ್ಯಾಯಾಲಯ ಮುಂಭಾಗ ನಡೆದಿದ್ದ ಬೆಂಗಳೂರಿನ ರೌಡಿಶೀಟರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹತ್ತು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಇವರಲ್ಲಿ ಐವರು ಆರೋಪಿಗಳು ಠಾಣೆಯಲ್ಲಿ ಶರಣಾದ ನಂತರ ಬಂಧಿಸಲಾಗಿದೆ.

ಆಕಾಶ್, ವಿಕಾಸ್, ಸಾಯಿನಾಥ್, ಆದಿತ್ಯ, ಜಯಂತ್, ಪುನೀತ್ ಕುಮಾರ್, ರಾಕೇಶ್, ಶಶಿಧರ್, ಭರತ್, ಯಲ್ಲಾಲಿಂಗಾ ಬಂಧಿತರು. ಬೆಂಗಳೂರಿನಿಂದ ಗಡೀಪಾರಾಗಿದ್ದ ಮಂಜೇಶ್ ಕುಮಾರ್ (42) ಎಂಬಾತನನ್ನು ಜೂನ್ 8ರ ಮುಂಜಾನೆ ನಗರದ ನ್ಯಾಯಾಲಯ ಮುಂಭಾಗ ಹತ್ಯೆ ಮಾಡಿ ಆರೋಪಿಗಳು ಪರಾರಿಯಾಗಿದ್ದರು.

ಸಾಯಿನಾಥ್, ಪುನೀತ್, ಲಿಂಗರಾಜು, ಶಶಿಧರ್, ಭರತ್, ''ನಾವು ನಿರಪರಾಧಿಗಳು, ಕೊಲೆ ಪ್ರಕರಣಕ್ಕೂ ನಮಗೂ ಸಂಬಂಧವಿಲ್ಲ, ಪೊಲೀಸರು ನಮ್ಮ ಬೆನ್ನುಬಿದ್ದಿರುವ ವಿಷಯ ತಿಳಿದು ನಾವೇ ಬಂದು ಶರಣಾಗುತ್ತಿದ್ದೇವೆ,'' ಎಂದು ವಿಡಿಯೊ ಮಾಡಿದ್ದರು. ''ನಮಗೇನಾದರೂ ತೊಂದರೆ ಆದರೆ ಡಿವೈಎಸ್‌ಪಿ ಕಾರಣ,'' ಎಂದು ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದರು. ಬಳಿಕ ನಗರದ ಪೊಲೀಸ್ ಠಾಣೆಗೆ ಹಾಜರಾಗಿ ಡಿವೈಎಸ್‌ಪಿ ಗಂಗಾಧರಪ್ಪ ಎದುರು ಶರಣಾದರು.

ಹಿನ್ನೆಲೆ: ಕೊಲೆಯಾದ ರೌಡಿಶೀಟರ್‌ನನ್ನು ಬೆಂಗಳೂರಿನ ತಲಘಟ್ಟಪುರ ಠಾಣೆ ಪೊಲೀಸರು ಮೇ 13ರಂದು ಚಿಕ್ಕಮಗಳೂರಿಗೆ ಗಡೀಪಾರು ಮಾಡಿದ್ದರು. ಜೂನ್ 7ರಂದು ಚಿಕ್ಕಮಗಳೂರು ಠಾಣೆಗೆ ತೆರಳಿ ಸಹಿ ಮಾಡಿದ್ದ ರೌಡಿಶೀಟರ್‌ನನ್ನು ಹಿಂಬಾಲಿಸಿದ ಆರೋಪಿಗಳು, ಹಾಸನದ ನ್ಯಾಯಾಲಯ ಮುಂಭಾಗದ ರಸ್ತೆಯಲ್ಲಿ ಮುಂಜಾನೆ ದಾಳಿ ಮಾಡಿ ಕೊಲೆ ಮಾಡಿದ್ದರು.

26 ವರ್ಷದ ಬಳಿಕ ಹುಟ್ಟೂರಿಗೆ ಬಂದ ಯುವಕ

ಬೆಳ್ತಂಗಡಿ (ದ.ಕ.): ಧರ್ಮಸ್ಥಳದಿಂದ 26 ವರ್ಷಗಳ ಹಿಂದೆ ಕಾಣೆಯಾಗಿದ್ದ ಬಾಲಕನೊಬ್ಬ ಮತ್ತೆ ಹುಟ್ಟೂರಿಗೆ ಆಗಮಿಸಿ ತಾಯಿ ಮಡಿಲು ಸೇರಿದ್ದಾನೆ.

ಧರ್ಮಸ್ಥಳದ ಕುಂಞ ಮತ್ತು ಅಕ್ಕು ದಂಪತಿಯ ಪ್ರಥಮ ಪುತ್ರ ಸತೀಶ್, 12 ವರ್ಷದ ಬಾಲಕನಿದ್ದಾಗ, 2000ನೇ ಇಸವಿಯಲ್ಲಿ ಧರ್ಮಸ್ಥಳ ಲಕ್ಷದೀಪೋತ್ಸವದ ಸಂದರ್ಭದಲ್ಲಿ ಬಂದಿದ್ದ ಸರ್ಕಸ್ ಕಂಪನಿಯೊಂದಿಗೆ ಹೋದಾತ ಮರಳಿ ಮನೆ ಸೇರಿರಲಿಲ್ಲ. ಮನೆಯವರು ಸಾಕಷ್ಟು ವಿಚಾರಿಸಿದರೂ ಪ್ರಯೋಜನ ಆಗಲಿಲ್ಲ, ತಾಯಿ ಅಕ್ಕು ದೈವ- ದೇವರಿಗೆ ಹರಕೆ ಹೊತ್ತು ಮಗನಿಗಾಗಿ ಚಾತಕಪಕ್ಷಿಯಂತೆ ಕಾಯುತ್ತಿದ್ದರು.

ಸರ್ಕಸ್ ಕಂಪನಿ ಜತೆ ಸೇರಿ ಊರು ಬಿಟ್ಟ ಸತೀಶ್, ಮಹಾರಾಷ್ಟ್ರದಲ್ಲಿ ಮದುವೆ ಹಾಲ್ ಡೆಕೋರೇಶನ್, ಚಾಲಕ, ಹೋಟೆಲ್‌ಗಳಲ್ಲಿ ಕೆಲಸ ಮಾಡಿಕೊಂಡಿದ್ದ.

ಹೊಸ ಜೀವನ ಆರಂಭಿಸಿದ ಸತೀಶ್, ತಾಲೀಮಾ ಎನ್ನುವ ಯುವತಿ ಜತೆ ವಿವಾಹವಾಗಿ ಸಲೀಂ ಅಬ್ದುಲ್ ಅನ್ಸಾರಿಯಾದ. ಮಹಾರಾಷ್ಟ್ರದಲ್ಲಿ ಬಾಡಿಗೆ ಮನೆಯಲ್ಲಿ ಪುತ್ರಿ ಖುಷಿ (14) ಹಾಗೂ ಪುತ್ರ ಆರ್ಯುಂ (9) ಜತೆಗೆ ಜೀವನ ಕಟ್ಟಿಕೊಂಡ.

ಸತೀಶ್‌ಗೆ ಬಾಲ್ಯದ ಅಸ್ಪಷ್ಟ ನೆನಪುಗಳು ಇದ್ದವು. ಇತ್ತೀಚೆಗೆ ಗೆಳೆಯರೊಂದಿಗೆ ಧರ್ಮಸ್ಥಳಕ್ಕೆ ಬಂದ ಸತೀಶ್ ದೇವರ ದರ್ಶನ ಪಡೆದು ದೇವಸ್ಥಾನದ ಎದುರಿನ ರಸ್ತೆಯಲ್ಲಿ ನಡೆದಾಡುವಾಗ ಹಳೆ ನೆನಪುಗಳು ಮರುಕಳಿಸಿದವು. ಈ ನೆನಪನ್ನೇ ಮನನ ಮಾಡುತ್ತಾ, ಅಂಗಡಿಯೊಂದಕ್ಕೆ ಹೋಗಿ ''ನಾನು ಇದೇ ಊರಿನವನು. 26 ವರ್ಷದ ಹಿಂದೆ ಊರು ಬಿಟ್ಟು ಹೋಗಿದ್ದೆ,'' ಎಂದು ಹೇಳಿಕೊಂಡ ತನ್ನ ತಂದೆ- ತಾಯಿಯ ಹೆಸರು ಹೇಳಿದ. ಅಂಗಡಿ ಮಾಲೀಕ ಯತೀಶ್, ಮಗನಿಗಾಗಿ ಹಂಬಲಿಸುತ್ತಿದ್ದ ಕುಟುಂಬದವರಿಗೆ ಮಾಹಿತಿ ತಲುಪಿಸಿದರು. ಓಡೋಡಿ ಬಂದ ತಾಯಿ, 26 ವರ್ಷಗಳ ಬಳಿಕ ಬಂದ ಮಗನನ್ನು ಬಿಗಿದಪ್ಪಿ ಆನಂದಭಾಷ್ಪ ಸುರಿಸಿದರು.

> ಹುಟ್ಟೂರು ತ್ಯಜಿಸಿದರೂ ನನ್ನ ಕುಟುಂಬದವರ ಚಹರೆ, ಒಡನಾಟ ನೆನಪಿತ್ತು. ಧರ್ಮಸ್ಥಳಕ್ಕೆ ಬಂದಾಗ ಬಾಲ್ಯದ ದಿನಗಳು ನೆನಪಾಗಿ ಅಂಗಡಿಯೊಂದರಲ್ಲಿ ವಿಚಾರಿಸಿದಾಗ ತಾಯಿ ಮತ್ತು ಕುಟುಂಬದವರು ಮತ್ತೆ ಸಿಕ್ಕಿದರು. ಆಗಾಗ ಬಂದು ಹೋಗಿ ತಾಯಿಯನ್ನು ಭೇಟಿ ಮಾಡುತ್ತೇನೆ. ನನ್ನ ಕುಟುಂಬವನ್ನು ಕರೆ ತರುತ್ತೇನೆ.
>
> **-ಸತೀಶ್** (ಸಲೀಂ ಅಬ್ದುಲ್ ಅನ್ಸಾರಿ)

ಕುದುರೆಮುಖ ಚಾರಣ ನೋಂದಣಿ ತಾತ್ಕಾಲಿಕ ಸ್ಥಗಿತ

ಕಳಸ (ಚಿಕ್ಕಮಗಳೂರು): ಕುದುರೆಮುಖ ಹಾಗೂ ನೇತ್ರಾವತಿ ಪೀಕ್ ಚಾರಣವನ್ನು ಅರಣ್ಯ ಇಲಾಖೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ.

3 ತಿಂಗಳು ಬಂದ್ ಆಗಿದ್ದ ಚಾರಣ ಜೂ.1ರಿಂದಷ್ಟೇ ಸಾರ್ವಜನಿಕರಿಗೆ ಮುಕ್ತವಾಗಿತ್ತು. 'ಅರಣ್ಯ ವಿಹಾರ' ವೆಬ್‌ಸೈಟ್ ಮೂಲಕ ಆನ್‌ಲೈನ್ ಬುಕ್ಕಿಂಗ್ ಮೇ 22ರಂದು ಓಪನ್ ಆದ 47 ಸೆಕೆಂಡ್‌ಗಳಲ್ಲಿ ದಿನದ ಕೋಟಾ 300 ಟಿಕೆಟ್‌ಗಳು ಮಾರಾಟ ಆಗಿದ್ದವು. ಇದರ ಹಿಂದೆ ವೆಬ್‌ಸೈಟ್ ಹ್ಯಾಕರ್‌ಗಳು ಹಾಗೂ ಕೆಲವು ಖಾಸಗಿ ಟ್ರೆಕ್ಕಿಂಗ್ ಏಜೆನ್ಸಿಗಳ ಕೈವಾಡವಿರುವುದು ತಿಳಿದುಬಂದಿತ್ತು. ಈ ವ್ಯವಸ್ಥಿತ ಅಕ್ರಮದ ಕುರಿತು 'ವಿಜಯ ಕರ್ನಾಟಕ' ಜೂನ್ 1ರಂದು ವಿಶೇಷ ವರದಿ ಪ್ರಕಟಿಸಿತ್ತು.

ಆಗುಂಬೆ ಘಾಟಿಯಲ್ಲಿ 15ರಿಂದ ಭಾರಿ ವಾಹನಗಳ ಸಂಚಾರ ನಿಷೇಧ

ಶಿವಮೊಗ್ಗ: ಆಗುಂಬೆ ಘಾಟಿಯಲ್ಲಿ (ರಾಷ್ಟ್ರೀಯ ಹೆದ್ದಾರಿ 169ಎ) ಭಾರಿ ವಾಹನಗಳ ಸಂಚಾರವನ್ನು ಜೂನ್ 15ರಿಂದ ಮಳೆಗಾಲ ಮುಗಿಯುವವರೆಗೂ ನಿಷೇಧಿಸಲಾಗಿದೆ.

ಶಿವಮೊಗ್ಗದಿಂದ ಹೊಸನಗರ-ಮಾಸ್ತಿಕಟ್ಟೆ ಮಾರ್ಗವಾಗಿ ಕುಂದಾಪುರ ಮತ್ತು ಉಡುಪಿಗೆ ಸಂಪರ್ಕ ಕಲ್ಪಿಸುವ ಹುಲಿಕಲ್ ಘಾಟಿಯಲ್ಲಿ ಭೂಕುಸಿತ ಸಂಭವಿಸಿದ ನಂತರ ತಾತ್ಕಾಲಿಕ ರಕ್ಷಣಾತ್ಮಕ ಕಾಮಗಾರಿ ಪೂರ್ಣಗೊಳ್ಳದಿರುವುದರಿಂದ ರಾಷ್ಟ್ರೀಯ ಹೆದ್ದಾರಿ 169ಎ ತೀರ್ಥಹಳ್ಳಿ-ಮಲ್ಪೆ-ಉಡುಪಿ ರಸ್ತೆಯ ಆಗುಂಬೆ ಘಾಟಿಯಲ್ಲಿ ಭಾರಿ ವಾಹನಗಳ ಹೆಚ್ಚಿನ ಓಡಾಟವಿತ್ತು. ಮಳೆಗಾಲದಲ್ಲೂ ಇದು ಮುಂದುವರಿದಲ್ಲಿ ಭೂಕುಸಿತ, ಅಪಘಾತ ಮತ್ತು ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುವ ಸಂಭವ ಇದೆ. ಘಾಟಿ ಸುರಕ್ಷತೆ ಮತ್ತು ನಾಗರಿಕರ ಹಿತದೃಷ್ಟಿಯಿಂದ ಭಾರಿ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ. ಭಾರಿ ವಾಹನಗಳು ತೀರ್ಥಹಳ್ಳಿ-ನಾಗೋಡಿ-ಕೊಲ್ಲೂರು-ಕುಂದಾಪುರ-ಉಡುಪಿ ಅಥವಾ ತೀರ್ಥಹಳ್ಳಿ-ಶೃಂಗೇರಿ-ಬಜಗೋಳಿ-ಉಡುಪಿ ಮಾರ್ಗವಾಗಿ ಸಂಚರಿಸಬಹುದು ಎಂದು ಜಿಲ್ಲಾಧಿಕಾರಿ ಅವರ ಆದೇಶ ತಿಳಿಸಿದೆ.

ರಸಗೊಬ್ಬರ ದಂಧೆ, ಒಬ್ಬನ ಬಂಧನ

ವಿಟ್ಲ (ದ.ಕ.): ರೈತರಿಗೆ ಕೇಂದ್ರ ಸರಕಾರವು ರಿಯಾಯಿತಿ ದರದಲ್ಲಿ ನೀಡುವ ಯೂರಿಯಾ ರಸಗೊಬ್ಬರವನ್ನು ಅಕ್ರಮವಾಗಿ ಶೇಖರಿಸಿ, ಚೀಲಗಳನ್ನು ಬದಲಾಯಿಸಿ ಬೇರೆಡೆಗೆ ಹೆಚ್ಚಿನ ಬೆಲೆಗೆ ಸಾಗಾಟ ಮಾಡುತ್ತಿದ್ದ ಜಾಲವನ್ನು ವಿಟ್ಲ ಠಾಣೆ ಪೊಲೀಸರ ತಂಡ ಬೇಧಿಸಿದೆ. ಒಬ್ಬ ಆರೋಪಿಯನ್ನು ಬಂಧಿಸಲಾಗಿದ್ದು, ಲಕ್ಷಾಂತರ ರೂಪಾಯಿ ಮೌಲ್ಯದ ರಸಗೊಬ್ಬರ ವಶಪಡಿಸಿಕೊಳ್ಳಲಾಗಿದೆ.

ಮೊಹಮ್ಮದ್ ಅಶ್ರಫ್ (40) ಬಂಧಿತ ಆರೋಪಿ. ಈತ ತನ್ನ ಕೊಳ್ನಾಡು ಗ್ರಾಮದ ಮನೆಯಲ್ಲೇ ರಸಗೊಬ್ಬರವನ್ನು ಸಂಗ್ರಹಿಸಿ ಈ ದಂಧೆ ನಡೆಸುತ್ತಿದ್ದ ಎನ್ನಲಾಗಿದೆ. ಅಕ್ರಮವಾಗಿ ಶೇಖರಿಸಿಡಲಾಗಿದ್ದ ತಲಾ 50 ಕೆ.ಜಿ ತೂಕದ 342 ಚೀಲ ರಸಗೊಬ್ಬರ ಪತ್ತೆಯಾಗಿದೆ. ತುಮಕೂರು ಮತ್ತು ಹಾಸನ ಭಾಗಗಳಿಂದ ತಲಾ 300 ರೂ.ನಂತೆ ಖರೀದಿಸಿ ಲಾರಿಯಲ್ಲಿ ತಂದಿದ್ದ 300 ಚೀಲ ರಸಗೊಬ್ಬರ (ಒಟ್ಟು 642 ಚೀಲ) ಹಾಗೂ ಸಾಗಾಟಕ್ಕೆ ಬಳಸುತ್ತಿದ್ದ ಲಾರಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನಿಧನ

ವೀರಗಾಸೆ ಮಹಾದೇವಪ್ಪ

ನಾಗಮಂಗಲ (ಮಂಡ್ಯ): ವೀರಗಾಸೆ ಕಲಾವಿದ ಮಹಾದೇವಪ್ಪ(64) ಅವರು ಪಟ್ಟಣದಲ್ಲಿ ಗುರುವಾರ ನಿಧನರಾದರು.



ಜಾನಪದ ಕಲಾಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ ಮಹಾದೇವಪ್ಪ, ವೀರಗಾಸೆ ಕುಣಿತದಲ್ಲಿ ನಾಡಿನಾದ್ಯಂತ ಹೆಸರು ಗಳಿಸಿದ್ದರು. ಅನಾರೋಗ್ಯ ನಿಮಿತ್ತ ಕೆಲ ದಿನಗಳಿಂದ ಹಾಸಿಗೆ ಹಿಡಿದಿದ್ದರು.

ಅವರಿಗೆ ಪತ್ನಿ ಸುಮಿತ್ರಾ ಹಾಗೂ ಮೂರು ಮಕ್ಕಳು ಇದ್ದಾರೆ. ಅಂತ್ಯಕ್ರಿಯೆ ಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ವಿಭಾಗ ಬಾಗಲಕೋಟೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಹಳೆ ಲೋಕೋಪಯೋಗಿ ಕಟ್ಟಡ, ಬಾಗಲಕೋಟೆ-587101. ದೂರವಾಣಿ ಸಂಖ್ಯೆ: 08354-220288,

Email: eekuwsdbbgk@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ 2.0 ಪೋರ್ಟಲ್ ಮೂಲಕ ಮಾತ್ರ)

1) ಸಂಖ್ಯೆ: ಕಜಮ/ಕಾಅ-ಬಾ/ತಾಂ.ಸ/ಸ.ಅ-1/ ವಿ.ಬಾ, ಉಪ ವಿ-ಬಾ.ಜ.ಹು/ 2026-27/314 ದಿನಾಂಕ: 04.06.2026

2026-27ನೇ ಸಾಲಿನ ಮಂಡಳಿಯ ಆಯವ್ಯಯದಡಿಯಲ್ಲಿ, ಬಾಗಲಕೋಟೆ ವಿಭಾಗ ಕಚೇರಿ, ಬಾಗಲಕೋಟೆ, ಜಮಖಂಡಿ ಮತ್ತು ಹುನಗುಂದ ಉಪ-ವಿಭಾಗಗಳಿಗೆ ಪಧವೀಧರ ಅಭಿಯಂತರ, ಗಣಕಯಂತ್ರ ದತ್ತಾಂಶಗಳ ನಿರ್ವಾಹಕ, ಕ್ಲರ್ಕ್/ಶುಶಿಕ್ಷಿತ ಸಹಾಯಕ, ವಾಹನ ಚಾಲಕ ಮತ್ತು ಕಾವಲುಗಾರ ಹುದ್ದೆಯ ಮಾನವ ಸಂಪನ್ಮೂಲದ ಸೇವೆಯನ್ನು ಎಂಟು (8) ತಿಂಗಳ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಕಾಮಗಾರಿ ಟೆಂಡರ್ ಮೊತ್ತ **ರೂ. 35,81,803/-, ಬಿಡ್ ಭದ್ರತಾ ಮೊತ್ತ ರೂ. 89,600/-.**

2) ಸಂಖ್ಯೆ: ಕಜಮ/ಕಾಅ-ಬಾ/ತಾಂ.ಸ/ಸ.ಅ-1/ಹು.ಇ.ಕು/ನಿ & ದು /2026-27/ 315 ದಿನಾಂಕ: 04.06.2026

2026-27ನೇ ಸಾಲಿನ, ಹುನಗುಂದ, ಇಲಕಲ್ಲ ಮತ್ತು ಕುಷ್ಟಗಿ ಪಟ್ಟಣಗಳಿಗೆ ಆಲಮಟ್ಟಿ ಜಲಾಶಯ ಮೂಲದಿಂದ ಸಗಟು ನೀರು ಸರಬರಾಜು ಮಾಡುವ ಯೋಜನೆಯ ನಿರ್ವಹಣೆ ಮತ್ತು ದುರಸ್ಥಿ ಅಡಿಯಲ್ಲಿ ಉಪ-ವಿಭಾಗ ಕಚೇರಿ ಕೆಲಸಗಳಿಗೆ ಪದವೀಧರ ಅಭಿಯಂತರ, ಕ್ಲರ್ಕ/ಶುಶಿಕ್ಷಿತ ಸಹಾಯಕ, ಗಣಕಯಂತ್ರ ದತ್ತಾಂಶಗಳ ನಿರ್ವಾಹಕ, ಜವಾನ ಮತ್ತು ಕಾವಲುಗಾರ ಹಾಗೂ ಆಲಮಟ್ಟಿ ಜಾಕ್‌ವೆಲ್‌ನಲ್ಲಿರುವ ಪಂಪ್‌ಗಳ ನಿರ್ವಹಣೆಗಾಗಿ ಪಂಪ್ ಆಪ್‌ರೇಟರ್ ಮತ್ತು ಕಚ್ಚಾ ನೀರು ಏರು ಕೊಳವೆ ಮಾರ್ಗ ನಿರ್ವಹಣೆಗಾಗಿ ಲೈನಮನ್ ಹುದ್ದೆಗಳ ಮಾನವ ಸಂಪನ್ಮೂಲದ ಸೇವೆಯನ್ನು ಎಂಟು (8) ತಿಂಗಳ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಕಾಮಗಾರಿ ಟೆಂಡರ್ ಮೊತ್ತ **ರೂ. 20,99,242/-, ಬಿಡ್ ಭದ್ರತಾ ಮೊತ್ತ ರೂ. 52,500/-.**

3) ಸಂಖ್ಯೆ: ಕಜಮ/ಕಾಅ-ಬಾ/ತಾಂ.ಸ/ಸ.ಅ-1/ಹು.ಇ.ಕು/ನಿ & ದು /2026-27/ 316 ದಿನಾಂಕ: 04.06.2026

2026-27ನೇ ಸಾಲಿನ, ಹುನಗುಂದ, ಇಲಕಲ್ಲ ಮತ್ತು ಕುಷ್ಟಗಿ ಪಟ್ಟಣಗಳಿಗೆ ಆಲಮಟ್ಟಿ ಜಲಾಶಯ ಮೂಲದಿಂದ ಸಗಟು ನೀರು ಸರಬರಾಜು ಮಾಡುವ ಯೋಜನೆಯ ನಿರ್ವಹಣೆ ಮತ್ತು ದುರಸ್ಥಿ ಅಡಿಯಲ್ಲಿ ಹುನಗುಂದ ಪಟ್ಟಣದಲ್ಲಿರುವ 25.25 ಎಂ.ಎಲ್.ಡಿ ಸಾಮರ್ಥ್ಯದ ಜಲಶುದ್ಧೀಕರಣ ಘಟಕದಲ್ಲಿ ಪಂಪ್‌ಗಳ ನಿರ್ವಹಣೆಗಾಗಿ ಪಂಪ್ ಆಪರೇಟರ್ ಮತ್ತು ವಾಲ್ವ್‌ಮೇನ ಹಾಗೂ ಇಲಕಲ್ ಪಟ್ಟಣದ ಐ.ಬಿ ಟ್ಯಾಂಕ್‌ನ ಪಂಪ್‌ಹೌಸ್‌ದಲ್ಲಿರುವ ಪಂಪುಗಳ ನಿರ್ವಹಣೆಗಾಗಿ ಪಂಪ್ ಆಪರೇಟರ್, ಜಲಶುದ್ಧೀಕರಣ ಘಟಕದಿಂದ ದರ್ಗಾ ಪಂಪ್‌ಹೌಸವರೆಗೂ ಶುದ್ಧ ನೀರು ಏರು ಕೊಳವೆ ಮಾರ್ಗ ನಿರ್ವಹಣೆಗಾಗಿ ಲೈನಮನ್ & ಜಲಶುದ್ಧೀಕರಣ ಘಟಕದಲ್ಲಿ ಪ್ರಯೋಗಾಲಯ ತಂತ್ರಜ್ಞ ಹುದ್ದೆಗಳ ಮಾನವ ಸಂಪನ್ಮೂಲದ ಸೇವೆಯನ್ನು ಎಂಟು (8) ತಿಂಗಳ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಕಾಮಗಾರಿ ಟೆಂಡರ್ ಮೊತ್ತ **ರೂ. 16,69,668/-, ಬಿಡ್ ಭದ್ರತಾ ಮೊತ್ತ ರೂ. 41,800/-.**

4) ಸಂಖ್ಯೆ: ಕಜಮ/ಕಾಅ-ಬಾ/ತಾಂ.ಸ/ಸ.ಅ-1/ಹು.ಇ.ಕು/ನಿ & ದು /2026-27/ 317 ದಿನಾಂಕ: 04.06.2026

2026-27ನೇ ಸಾಲಿನ, ಹುನಗುಂದ, ಇಲಕಲ್ಲ ಮತ್ತು ಕುಷ್ಟಗಿ ಪಟ್ಟಣಗಳಿಗೆ ಆಲಮಟ್ಟಿ ಜಲಾಶಯ ಮೂಲದಿಂದ ಸಗಟು ನೀರು ಸರಬರಾಜು ಮಾಡುವ ಯೋಜನೆಯ ನಿರ್ವಹಣೆ ಮತ್ತು ದುರಸ್ಥಿ ಅಡಿಯಲ್ಲಿ ಹುನಗುಂದ ಪಟ್ಟಣದಲ್ಲಿರುವ 9.08 ಎಂ.ಎಲ್.ಡಿ ಸಾಮರ್ಥ್ಯದ ಜಲಶುದ್ಧೀಕರಣ ಘಟಕದಲ್ಲಿ ಪಂಪ್‌ಗಳ ನಿರ್ವಹಣೆಗಾಗಿ ಪಂಪ್ ಆಪರೇಟರ್ ಮತ್ತು ವಾಲ್ವ್‌ಮೇನ ಹಾಗೂ ದರ್ಗಾ ಪಂಪ್‌ಹೌಸ್‌ದಿಂದ ಕುಷ್ಟಗಿ ಪಂಪ್‌ಹೌಸವರೆಗೂ ಶುದ್ಧ ನೀರು ಏರು ಕೊಳವೆ ಮಾರ್ಗ ನಿರ್ವಹಣೆಗಾಗಿ ಲೈನಮನ್ ಹುದ್ದೆಗಳ ಮಾನವ ಸಂಪನ್ಮೂಲದ ಸೇವೆಯನ್ನು ಎಂಟು (8) ತಿಂಗಳ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಕಾಮಗಾರಿ ಟೆಂಡರ **ಮೊತ್ತ ರೂ. 19,31,745/-, ಬಿಡ್ ಭದ್ರತಾ ಮೊತ್ತ ರೂ. 48,300/-.**

ಬಿಡ್ ದಾಸ್ತಾವೇಜಿನ ಬೆಲೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿರುವಂತೆ. ಹೆಚ್ಚಿನ ಮಾಹಿತಿಗಳನ್ನು ಕಚೇರಿ ವೇಳೆಯಲ್ಲಿ ಅಥವಾ ಈ ವೆಬ್‌ಸೈಟ್ https://www.kppp.karnataka.gov.in/ ಮೂಲಕ ಪಡೆಯಬಹುದು. ಬಿಡ್ ಸಲ್ಲಿಸಲು ಕೊನೆಯ **ದಿನಾಂಕ: 23.06.2026 ರಂದು 16.30 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 25.06.2026 ರಂದು 11.00 ಗಂಟೆಯ** ನಂತರ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಅರ್ಹತೆ ಹೊಂದಿರುವ ಟೆಂಡರ್‌ದಾರರಿಗೆ ತಿಳಿಸಲಾಗುವುದು.

ಸಹಿ/-
ಕಾರ್ಯಪಾಲಕ ಅಭಿಯಂತರು, ಕ.ನ.ನೀಸ. ಮತ್ತು ಒ.ಚ. ಮಂಡಳಿ, ವಿಭಾಗ, ಬಾಗಲಕೋಟೆ,

ವಾ.ಸಾ.ಇ./ಬಾಗಲಕೋಟೆ/87/2026-27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ

ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳ ಕಚೇರಿ

ಉತ್ತರ ಕನ್ನಡ, ಕಾರವಾರ - 581301. ಫೋನ್ ನಂ. : 08382-222452

Email : dhoukannada@gmail.com

ಸಂಖ್ಯೆ:ಜಿ.ಆ.ಕು.ಕ./ನೇಮಕಾತಿ/DLO/KABHI/06/2026/17 ದಿನಾಂಕ : 11-06-2026

ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಅಧಿಸೂಚನೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ಉತ್ತರ ಕನ್ನಡ ಇಲ್ಲಿ ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ (KaBHI) ಕಾರ್ಯಕ್ರಮದ ಅಡಿಯಲ್ಲಿ ನರರೋಗ ತಜ್ಞರು / ಫಿಜಿಸಿಯನ್/ ಎಮ್.ಬಿ.ಬಿ.ಎಸ್. ವೈದ್ಯರು -1. ಸ್ಪೀಚ್ ಥೆರಪಿಸ್ಟ್ - 01, ಒಟ್ಟು -02 ಹುದ್ದೆಗಳು ಖಾಲಿ ಇದ್ದು, ರೋಲ್ ಔಟ್ ಮಾದರಿಯಲ್ಲಿ (Roll Out) ಪ್ರತಿ ಗುರುವಾರ ನೇರ ಸಂದರ್ಶನವಿರುತ್ತದೆ. ಆಸಕ್ತರು ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಕಛೇರಿಯ ವೇಳೆಯಲ್ಲಿ ಸಂದರ್ಶನಕ್ಕೆ ಹಾಜರಾಗಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳ ಕಛೇರಿ ಉ.ಕ. ಕಾರವಾರಕ್ಕೆ ಭೇಟಿ ನೀಡಬಹುದಾಗಿದೆ.

* ಈ ಪ್ರಕಟಣೆಯು ದಿನಾಂಕ : 31-03-2027ರ ವರೆಗೆ ಅನ್ವಯಿಸುತ್ತದೆ.
* ಷರತ್ತುಗಳು ಅನ್ವಯಿಸುತ್ತವೆ.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳು, ಉತ್ತರ ಕನ್ನಡ, ಕಾರವಾರ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬ್ಯಾಡಗಿ

ಕಚೇರಿ ದೂ.ಸಂ.: 08375-228443, E-mail: apmcbyadgi@gmail.com

ಕ್ರ.ಸಂ:ಕೃಮಾಇ/ಕೃಉಮಾಸ(ಬ್ಯಾ)/ಅಭಿಕೆ/ವಾಕ್ರಿಯೋ/185/2026-27 ದಿ: 08-06-2026

ಸಂಕ್ಷಿಪ್ತ ಈ-ಟೆಂಡರ್ ಪ್ರಕಟಣೆ

ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 2025-26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳಿಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ದರಗಳನ್ನು ಲೋಕೋಪಯೋಗಿ ಇಲಾಖೆಯಿಂದ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ Standard Tendering Document ರನ್ವಯ https://kppp.karnataka.gov.in ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ.

ಕ್ರ. ಸಂ.	ಇಂಡೆಂಟ್ ನಂ	ಟೆಂಡರ್ ಮೊತ್ತ ರೂ.
1	APMC/2026-27/OW/WORK_INDENT958	2,79,70,915-00
2	APMC/2026-27/OW/WORK_INDENT955	1,24,14,985-00
3	APMC/2026-27/OW/WORK_INDENT954	91,81,759-00

ಬಿಡ್ ಪೂರ್ವಭಾವಿ ಸಭೆ ಮತ್ತು ಟೆಂಡರ್ ತಕರಾರು ಸಮಜಾಯಿಷಿ ನೀಡುವ **ದಿನಾಂಕ: 24-06-2026 ಪೂರ್ವಾಹ್ನ 11-00 ಗಂಟೆಗೆ,** ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ಅಂತಿಮ **ದಿನಾಂಕ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ದಿ: 15-07-2026 ಅಪರಾಹ್ನ 5-00 ಗಂಟೆವರೆಗೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 17-07-2026 ಪೂರ್ವಾಹ್ನ 11-00 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ (ಸಾಧ್ಯವಾದಲ್ಲಿ): 21-07-2026 ಪೂರ್ವಾಹ್ನ 11-00 ಗಂಟೆಗೆ,** ಜಿ.ಎಸ್.ಟಿ ಮೊತ್ತವನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು. ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳನ್ನು ಅಥವಾ ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ ಕಾರ್ಯಾಲಯದ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಅಥವಾ https://kppp.karnataka.gov.in ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. ಟೆಂಡರನ್ನು ಯಾವುದೇ ಕಾರಣ ನೀಡದೇ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ\- (ಡಾ. ಆದರ್ಶ ಡಿ. ಬಿ.) ಕಾರ್ಯದರ್ಶಿ, ಕೃಉಮಾಸ, ಬ್ಯಾಡಗಿ

ಸಹಿ\- (ಎಸ್.ಬಿ ನ್ಯಾಮಗೌಡ) ಆಡಳಿತಾಧಿಕಾರಿಗಳು, ಕೃಉಮಾಸ, ಬ್ಯಾಡಗಿ

ವಾ.ಸಾ.ಇ./ಹಾವೇರಿ/153/2026-27/ದೇಶಪಾಂಡೆಪಬ್ಲಿಸಿಟಿ

ನೈಋತ್ಯ ರೈಲ್ವೆ

ಓಪನ್ ಟೆಂಡರು ಸೂಚನೆ ಸಂ.: BE-29-2026-27-OT-03 (ಇ-ಟೆಂಡರಿಂಗ್ ಮೂಲಕ)

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ	ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ
BE-29-2026-27-OT-03	**1) ಬೆಂಗಳೂರು-ತುಮಕೂರು -ಸಂಪಿಗೆ ರೋಡ್ ವಿಭಾಗ:** ಕಿಮೀ. 85/700-800 ರಲ್ಲಿ ಎಲ್‌ಸಿ ನಂ. 50 ನಲ್ಲಿ ಪ್ರಸ್ತಾವನೆಯಂತೆ ಆರ್‌ಓಬಿ ಯ ನಿರ್ಮಾಣ - 42 ಮೀ. ಕಾಂಪೋಸಿಟ್ ಗಿರ್ಡರ್. **2)** ಸಹಾಯಕ ವಿಭಾಗೀಯ ಇಂಜಿನಿಯರ್/ಯಶವಂತಪುರ ಉಪವಿಭಾಗದಲ್ಲಿ ಮಲ್ಲಸಂದ್ರ ಮತ್ತು ಗುಬ್ಬಿ ನಿಲ್ದಾಣಗಳ ನಡುವೆ ಕಿಮೀ. 81/500-600 ರಲ್ಲಿ ಎಲ್‌ಸಿ ಗೇಟ್ ಸಂ. 48 ರಲ್ಲಿ ಪ್ರಸ್ತಾವನೆಯಂತೆ ಆರ್‌ಯುಬಿಯ ನಿರ್ಮಾಣ. **3) ಬೆಂಗಳೂರು-ತುಮಕೂರು: ಸಂಪಿಗೆ ರೋಡ್ ವಿಭಾಗ:** ಕಿಮೀ. 73/000-100 ರ ಹಳೆಯ ಎಲ್‌ಸಿ ನಂ. 43 ರಲ್ಲಿ ರೋಲಿಂಗ್/ಲಾಂಚಿಂಗ್ ವಿಧಾನದಿಂದ 1 x 5 x 2.25 ಗಾತ್ರದ ಆರ್‌ಸಿಸಿ ಬಾಕ್ಸ್ ಮೂಲಕ ಪ್ರಸ್ತಾವಿತ ಸೀಮಿತ ಎತ್ತರದ ಸಬ್‌ವೇಯ (ಕಿಮೀ. 73/000-100 ರಲ್ಲಿ ಭೀಮಸಂದ್ರ ಬಳಿ, ಆರ್‌ಯುಬಿ ನಂ. 297ಬಿ ರಲ್ಲಿ) ನಿರ್ಮಾಣ. **4) ಯಶವಂತಪುರ-ಸಂಪಿಗೆ ರೋಡ್ ವಿಭಾಗ:** ಹಳೆಯ ಶೆಟ್ಟಿಹಳ್ಳಿ ಗೇಟ್, ಕಿಮೀ. 67/700-800 ನಲ್ಲಿ, 1 x 4 x 2.25 ಗಾತ್ರದ ಆರ್‌ಸಿಸಿ ಬಾಕ್ಸ್ ಮೂಲಕ ರೋಲಿಂಗ್/ಲಾಂಚಿಂಗ್ ವಿಧಾನದಿಂದ ಪ್ರಸ್ತಾವಿತ ಸಬ್‌ವೇಯ (ಸೇತುವೆ ಸಂ. 308-ಡಿ) ನಿರ್ಮಾಣ. **5)** ಗೌರಿಬಿದನೂರು ರೈಲ್ವೆ ನಿಲ್ದಾಣದ ಪಿಎಫ್-1 & ಪಿಎಫ್-2 & 3 ರಲ್ಲಿ ಲಿಫ್ಟ್‌ಗಳನ್ನು ಒದಗಿಸುವುದು. **6)** ಕೆಂಗೇರಿ ರೈಲು ನಿಲ್ದಾಣದ ಪಿಎಫ್-1 & ಪಿಎಫ್-2&3 ನಲ್ಲಿ ಎರಡು ಎಸ್ಕಲೇಟರ್‌ಗಳನ್ನು, (ಕೆಳಗಿನ ದಿಕ್ಕಿನಲ್ಲಿ) ಒದಗಿಸುವುದು. **7) ಜೋಲಾರಪೇಟೆ-ಬೆಂಗಳೂರು ವಿಭಾಗ:** ವಿವಿಧ ಸ್ಥಳಗಳಲ್ಲಿ ಜಾನುವಾರುಗಳು, ಪಾದಚಾರಿಗಳು ಮತ್ತು ಸಣ್ಣ ವಾಹನಗಳು ರೈಲ್ವೆ ಜೋಡಣೆಯನ್ನು ದಾಟಲು ಅನುಕೂಲವಾಗುವಂತೆ 1 x 5 ಮೀ. x 2.65 ಮೀ. ಗಾತ್ರದ ಆರ್‌ಸಿಸಿ ಬಾಕ್ಸ್ ಮೂಲಕ (ಬ್ಯಾರೆಲ್ ಉದ್ದ = 18.36 ಮೀ) ಪಾದಚಾರಿಗಳ ಸಬ್‌ವೇ ಯ ನಿರ್ಮಾಣ. **8) ಬೆಂಗಳೂರು-ಸಂಪಿಗೆ ರೋಡ್ ವಿಭಾಗ:** ವಿವಿಧ ಸ್ಥಳಗಳಲ್ಲಿ ಜಾನುವಾರುಗಳು, ಪಾದಚಾರಿಗಳು ಮತ್ತು ಸಣ್ಣ ವಾಹನಗಳು ರೈಲ್ವೆ ಜೋಡಣೆಯನ್ನು ದಾಟಲು ಅನುಕೂಲವಾಗುವಂತೆ 1 x 5 ಮೀ x 2.65 ಮೀ ಗಾತ್ರದ ಆರ್‌ಸಿಸಿ ಬಾಕ್ಸ್ (ಬ್ಯಾರೆಲ್ ಉದ್ದ = 18.36 ಮೀ) ರೋಲಿಂಗ್/ಲಾಂಚಿಂಗ್ ವಿಧಾನದ ಮೂಲಕ ಪ್ರಸ್ತಾವಿತ ಪಾದಚಾರಿ ಸಬ್‌ವೇಗಳು (ಒಟ್ಟು 11 ಸಂಖ್ಯೆಗಳು). **9) ಯಶವಂತಪುರ-ಯಲಹಂಕ ವಿಭಾಗ:** ಸಹಾಯಕ ವಿಭಾಗೀಯ ಇಂಜಿನಿಯರ್/ಯಶವಂತಪುರ ಉಪ-ವಿಭಾಗದಲ್ಲಿ ಎನ್‌ಟಿಐ ಲೇಔಟ್ ಬಳಿಯ ಕಿ.ಮೀ 13/200-300 ರಲ್ಲಿ ಸಹಕಾರ ನಗರದಲ್ಲಿ ರೋಲಿಂಗ್/ಲಾಂಚಿಂಗ್ ವಿಧಾನದ ಮೂಲಕ 1 x 4 x 2.25 ಗಾತ್ರದ ಆರ್‌ಸಿಸಿ ಬಾಕ್ಸ್ ಉಪಯೋಗಿಸಿ ಪ್ರಸ್ತಾವಿತ ಪಾದಚಾರಿ ರೈಲು ಸುರಂಗಮಾರ್ಗ. **10)** ಬೆಂಗಳೂರು ವಿಭಾಗದ ಮೇಲೆ ರನ್ನಿಂಗ್ ರೂಮ್‌ಗಳು ಮತ್ತು ಸಿಬ್ಬಂದಿ ವಿಶ್ರಾಂತಿ ಕೊಠಡಿಗಳಲ್ಲಿ ಡಿಜಿ ಸೆಟ್‌ಗಳನ್ನು ಒದಗಿಸುವುದು. **11)** ಕಿಮೀ. 42/750 - 43/350 ರಲ್ಲಿ ಟಿಎಸ್‌ಎ ಬಳಿ ಸುರಂಗದಲ್ಲಿ (600 ಮೀ ಉದ್ದ) ಬೆಳಕಿನ ಸುಧಾರಣೆ - ವಿದ್ಯುತ್ ವ್ಯವಸ್ಥೆ **12) ಬೆಂಗಳೂರು-ಸಂಪಿಗೆ ರೋಡ್ ವಿಭಾಗ:** ನಿಡವಂದ ನಿಲ್ದಾಣದಲ್ಲಿ ರಸ್ತೆ-1ಎ ಮೆಟ್ಟಿಲು ಮತ್ತು ಲಿಫ್ಟ್‌ನೊಂದಿಗೆ ಹೊಂದಿಕೊಳ್ಳುವಂತೆ ಪ್ರಸ್ತಾವನೆಯಂತೆ ಎಫ್‌ಒಬಿಯ ವಿಸ್ತರಣೆ. **13)** ಬೆಂಗಳೂರು ವಿಭಾಗದಲ್ಲಿ 30 ಸ್ಥಳಗಳಲ್ಲಿ ಹೂಡಿಕೆ ದರ್ಜೆಯ ಇಂಧನ ಲೆಕ್ಕಪರಿಶೋಧನೆ (ಐಜಿಇಎ) ಶಿಫಾರಸುಗಳ ಅನುಷ್ಠಾನ.	ರೂ. 1,52,42,705.54	24.06.2026, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ. ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರ್ರಿ

PUB/197/AAF/PRB/SWR/2026-27

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಸಾಮಾನ್ಯ/ಬೆಂಗಳೂರು

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ

(ಸ್ವಾಯತ್ತ ಸಂಸ್ಥೆ)

ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಳಗಾವಿ - 590001. ಇ-ಮೇಲ್: belgaum.bims@gmail.com

ಸಂಖ್ಯೆ: ಬಿಮ್ಸ್/ಸಿಬ್ಬಂದಿ(1)/79/2026-27 ದಿನಾಂಕ: 11-06-2026

ಅಧಿಸೂಚನೆ

Applications are invited in the prescribed form from the eligible candidates for filling up of the following Posts for Super Speciality Hospital BIMS Belagavi. The last date of application is **29-06-2026 before 5.00 PM** and Interview date will be notified later on.

Sl. No.	Designation	Department	Vacant Post	Classification	Pay Scale	Age Limit
1	Professor (03)	1. Neurosurgery	1	SC (O) - 01 ST (O) - 01 GM (O) - 01	144200-218200	GM - 42 Years + 5 years age relaxation OBC - 45 Years + 5 years age relaxation SC & ST - 47 Years + 5 years age relaxation
		2. Urology	1			
		3. Surgical Gastroenterology	1			
2	Associate Professor (07)	1. Neurology	1	SC (O) - 01 ST (O) - 01 GM (O) - 01 GM (W) - 01 GM (R) - 01 Cat-1 (O) - 01 2A (O) - 01	131400-217100	GM - 39 Years + 5 years age relaxation OBC - 42 Years + 5 years age relaxation SC & ST - 44 Years + 5 years age relaxation
		2. Cardiology	1			
		3. Urology	1			
		4. Nephrology	1			
		5. Surgical Gastroenterology	1			
		6. Medical Gastroenterology	1			
		7. Plastic Surgery	1			
3	Assistant Professor (11)	1. Neurology	1	SC (O) - 01 SC (W) - 01 GM (O) - 01 GM (W) - 02 GM (R) - 01 GM (PH) - 01 ST (O) - 01 Cat-1 (O) - 01 2A (O) - 01 2B (O) - 01	79800-211500	GM - 35 Years + 5 years age relaxation OBC - 38 Years + 5 years age relaxation SC & ST - 40 Years + 5 years age relaxation
		2. Neurosurgery	1			
		3. Cardiology	1			
		4. Urology	1			
		5. Nephrology	1			
		6. Surgical Gastroenterology	1			
		7. Medical Gastroenterology	1			
		8. Plastic Surgery	1			
		9. Anaesthesiology	2			
		10. Endocrinology	1			

Note: 1) The application minimum Qualification, Experience & Instructions may be downloaded from the institute Website: **www.bimsbelgaum.karnataka.gov.in**

2) Above 5 years age relaxation is as per Government Order No. ಸಿಆಸುಇ 262 ಸೇನೆನಿ 2025 ದಿನಾಂಕ: 29-01-2026

ಸಹಿ/- ನಿರ್ದೇಶಕರು
ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ.

ವಾಸಾಸಂಇ/ಬೆಳಗಾವಿ/416/ಅಡ್ವರ್ಟೋರ್/2026-27

ಲಾಲ್ ಚೌಕ್‌ಗೆ ಸ್ಮಾರ್ಟ್ ಮರುಹುಟ್ಟು

ಭಯದ ನೆರಳಿನಲ್ಲಿದ್ದ ಶ್ರೀನಗರದಲ್ಲಿ ಈಗ ಲವಲವಿಕೆಯ ವಾತಾವರಣ

■ **ಅನಿಲ್‌ಕುಮಾರ್ ಬಿ.ಎನ್.** ಶ್ರೀನಗರ
anil.kumar2@timesofindia.com

ಕಾಶ್ಮೀರದಲ್ಲಿ ವಿಕ ಪ್ರತಿನಿಧಿ

ಶ್ರೀನಗರದ ಗಲ್ಲಿಗಳಲ್ಲಿ, ಅಲ್ಲಿನ ಮುಖ್ಯ ರಸ್ತೆಗಳಲ್ಲಿ, ದಾಲ್ ಸರೋವರದ ಇಕ್ಕೆಲಗಳಲ್ಲಿ ಅಡ್ಡಾಡಿ, ಇಂದು ಕಳೆಗಟ್ಟಿರುವ ಲವಲವಿಕೆಯನ್ನು ನೋಡಿದವರಿಗೆ, ಇತಿಹಾಸದ ಪುಟಗಳಲ್ಲಿ ಕಂಡ ಆ ಶ್ರೀನಗರ ಇದೇನಾ ಎಂಬ ಸೋಜಿಗ ಮೂಡದೆ ಇರಲಾರದು. ಅದರಲ್ಲೂ ನಗರದ ಹೃದಯ ಭಾಗದಲ್ಲಿರುವ ಐಕಾನಿಕ್ ಲಾಲ್ ಚೌಕ್ ಬಡಾವಣೆ, 4-5 ವರ್ಷಗಳ ಹಿಂದೆ ಅಲ್ಲಿಗೆ ಬಂದಿದ್ದವರಿಗೂ ಗುರುತು ಸಿಗದಂತೆ ಬದಲಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಹೊಸತರಲ್ಲಿ (ಮೇ 1948) ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರು ಕಾಶ್ಮೀರದ ಹೃದಯ ಭಾಗವಾದ ಶ್ರೀನಗರದ ಲಾಲ್ ಚೌಕ್‌ನಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿದ್ದರು. ಆಗಿನ ಕಾಶ್ಮೀರ ಪ್ರಾಂತ್ಯದ ಪ್ರಧಾನಿ ಶೇಖ್ ಅಬ್ದುಲ್ಲಾ ಅವರೊಂದಿಗೆ ನಿಂತು ನೆಹರು ನೀಡಿದ ಐತಿಹಾಸಿಕ ಭಾಷಣ, ಲಾಲ್ ಚೌಕ್ ಅನ್ನು ಕೇವಲ ಒಂದು ವಾಣಿಜ್ಯ ಕೇಂದ್ರವನ್ನಾಗಿ ಮಾತ್ರವಲ್ಲದೆ, ಕಾಶ್ಮೀರದ ರಾಜಕೀಯ ನಾಡಿಮಿಡಿತದ ಪ್ರಮುಖ ಕೇಂದ್ರವನ್ನಾಗಿಯೂ ರೂಪಿಸಿತು. ಲಾಲ್ ಚೌಕ್ ಅಂದಿನಿಂದ ದಶಕಗಳ ಕಾಲ ಕಾಶ್ಮೀರದ ರಾಜಕೀಯ ಏರಿಳಿತಗಳಿಗೆ, ಭರವಸೆಗಳಿಗೆ ಹಾಗೂ ಸಂಘರ್ಷಗಳಿಗೆ ಮೂಕಸಾಕ್ಷಿಯಾಗಿದೆ.

ನೆಹರೂ ಅವರ ಆ ಐತಿಹಾಸಿಕ ಭೇಟಿಯ ಕ್ಷಣಗಳ ನಂತರದ ದಶಕಗಳಲ್ಲಿ ಲಾಲ್ ಚೌಕ್ ಕಂಡಿದ್ದು ಕೇವಲ ರಾಜಕೀಯ ಸಭೆಗಳನ್ನಲ್ಲ, ಬದಲಾಗಿ ರಕ್ತಪಾತ ಮತ್ತು ಸಂಘರ್ಷಗಳನ್ನು. 1990ರ ದಶಕದಲ್ಲಿ ಕಾಶ್ಮೀರದಲ್ಲಿ ಉಗ್ರವಾದ ತಾರಕಕ್ಕೇರಿದಾಗ, ಇಲ್ಲಿನ ಐತಿಹಾಸಿಕ ಗಡಿಯಾರ ಗೋಪುರ (ಘಂಟಾ ಘರ್) ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳು ಸಂಪೂರ್ಣವಾಗಿ ಸೇನೆಯ ವಶವಾದವು. ಸದಾ ಜನಜಂಗುಳಿಯಿಂದ ಕೂಡಿರುತ್ತಿದ್ದ ರಸ್ತೆಗಳಲ್ಲಿ ಮಿಲಿಟರಿ ಬೂಟುಗಾಲಿನ ಸದ್ದು ಮಾತ್ರ ಕೇಳಿಸುತ್ತಿತ್ತು. ಲಾಲ್ ಚೌಕ್‌ನ ಗಡಿಯಾರ ಗೋಪುರದ ಅಡಿಭಾಗವೇ ಭದ್ರತಾ ಪಡೆಗಳ ಬಂಕರ್‌ಆಗಿ ಮಾರ್ಪಟ್ಟಿತ್ತು.

ಎಡೆಬಿಡದ ಕರ್ಫ್ಯೂಗಳು, ಪ್ರತ್ಯೇಕತಾವಾದಿಗಳ ಪ್ರತಿಭಟನೆಗಳು, ಕಲ್ಲು ತೂರಾಟಗಳು ಮತ್ತು ನಿರಂತರ ಆತಂಕದ ವಾತಾವರಣ ಶ್ರೀನಗರದ ದೈನಂದಿನ ಬದುಕನ್ನು ಕಸಿದುಕೊಂಡಿತ್ತು. ಅಂದು ಲಾಲ್ ಚೌಕ್ ಎಂದರೆ ಒಂದು ರೀತಿಯ ಭಯದ ವಾತಾವರಣ, ಮುಳ್ಳುತಂತಿಯ ಬೇಲಿಗಳು ಮತ್ತು ಬಂದೂಕುಗಳ ನೆರಳು ಮಾತ್ರವೇ ಆಗಿತ್ತು. ದಶಕಗಳ ಕಾಲ ಈ ಪ್ರದೇಶವು ಪ್ರತಿಭಟನೆಗಳ, ಬಂದ್ ಕರೆಯ ಪ್ರಮುಖ ವೇದಿಕೆಯಾಗಿ ತನ್ನ ಮೂಲ ಸ್ವರೂಪವನ್ನೇ ಕಳೆದುಕೊಂಡಿತ್ತು.

'ಸ್ಮಾರ್ಟ್' ಸ್ಪರ್ಶ

ಆದರೆ ಈಗ ಲಾಲ್ ಚೌಕ್ 'ಸ್ಮಾರ್ಟ್' ಆಗಿದೆ. 'ಸ್ಮಾರ್ಟ್ ಸಿಟಿ' ಯೋಜನೆಯಡಿ ಶ್ರೀನಗರ ಮತ್ತು ಲಾಲ್ ಚೌಕ್ ಸಂಪೂರ್ಣವಾಗಿ ಹೊಸ ರೂಪವನ್ನು ಪಡೆದುಕೊಂಡಿವೆ. ಇತ್ತೀಚೆಗಷ್ಟೇ ನವೀಕರಣಗೊಂಡಿರುವ ಐತಿಹಾಸಿಕ 'ಘಂಟಾ ಘರ್' ಇಂದು ಯುರೋಪಿನ ಯಾವುದೇ ಪ್ರತಿಷ್ಠಿತ ನಗರದ ವೃತ್ತಗಳನ್ನು ನೆನಪಿಸುತ್ತದೆ. ಸುಸಜ್ಜಿತವಾದ ಪಾದಚಾರಿ ಮಾರ್ಗಗಳು, ವೈಟ್ ಟಾಪಿಂಗ್ ಮಾಡಲಾದ ರಸ್ತೆಗಳು, ಆಕರ್ಷಕ ದೀಪಾಲಂಕಾರಗಳು, ಮತ್ತು ಅಲ್ಲಲ್ಲಿ ತೆರೆದ ಜಾಗದಲ್ಲಿ ಕೂರಲು ಬೆಂಚುಗಳು, ಈ ಪ್ರದೇಶದ ಚಿತ್ರಣವನ್ನೇ ಬದಲಾಯಿಸಿವೆ. ಒಮ್ಮೆ ಮುಳ್ಳುತಂತಿಯ ಬೇಲಿಗಳಿದ್ದ ಜಾಗದಲ್ಲಿ ಇಂದು ಅಂಗಡಿ ಮುಂಗಟ್ಟುಗಳಿವೆ..ಪೆಟ್ಟಿಗೆ ಅಂಗಡಿಗಳ ಜಾಗದಲ್ಲಿ ಬ್ರಾಂಡೆಡ್ ಮಳಿಗೆಗಳು ತಲೆ ಎತ್ತಿವೆ. ಇಡೀ ಪ್ರದೇಶ ಒಂದು ಆಧುನಿಕತೆಯ ಸ್ಪರ್ಶವನ್ನು ಪಡೆದಿದೆ.

ಹಿಂದೆ ಸಂಜೆಯಾಗುತ್ತಿದ್ದಂತೆ ಬಿಕೋ ಎನ್ನುತ್ತಿದ್ದ ಲಾಲ್ ಚೌಕ್ ರಸ್ತೆಗಳು, ಇಂದು ತಡರಾತ್ರಿಯವರೆಗೂ ಪ್ರವಾಸಿಗರು ಮತ್ತು ವ್ಯಾಪಾರಿಗಳಿಂದ ಗಿಜಿಗಿಡುತ್ತಿವೆ. ಕಾಶ್ಮೀರದ ಪ್ರಸಿದ್ಧ ಕರಕುಶಲ ವಸ್ತುಗಳು, ಪಶ್ಮಿನಾ ಶಾಲುಗಳು, ಮರದ ಕೆತ್ತನೆಯ ವಸ್ತುಗಳು ಮತ್ತು ಕೇಸರಿ ಮಾರಾಟ ಮಳಿಗೆಗಳು ಗ್ರಾಹಕರನ್ನು ಸೆಳೆಯುತ್ತಿವೆ. ಲಾಲ್ ಚೌಕ್ ಗೆ ಅನತಿ ದೂರದಲ್ಲೇ ಇರುವ ಫ್ಲೈ ಓವರ್ ಆಧುನಿಕ ಮೂಲ ಸೌಕರ್ಯಕ್ಕೆ ಕನ್ನಡಿ ಹಿಡಿಯುವಂತಿದೆ.

ಇಲ್ಲಿನ ಹೊಸ ತಲೆಮಾರಿನ ಕೆಫೆಗಳು ಮತ್ತು ರೆಸ್ಟೋರೆಂಟ್‌ಗಳು ಯುವಜನತೆ ಹಾಗೂ ಪ್ರವಾಸಿಗರ ನೆಚ್ಚಿನ ತಾಣವಾಗಿವೆ. ಲಾಲ್ ಚೌಕ್‌ನ ಬೀದಿಗಳಲ್ಲಿ ಈಗ ಪ್ರತಿಭಟನೆಯ ಘೋಷಣೆಗಳ ಬದಲು, ದೇಶ-ವಿದೇಶಗಳ ಪ್ರವಾಸಿಗರ ಸೆಲ್ಫಿ ಕ್ಲಿಕ್ಕಿಸುವ ಸಂಭ್ರಮ ಮನೆಮಾಡಿದೆ. ಸ್ಥಳೀಯರ ವ್ಯಾಪಾರ-ವಹಿವಾಟುಗಳು ಗರಿಗೆದರಿವೆ, ಕಾಶ್ಮೀರದ ಆರ್ಥಿಕತೆಗೆ ಹೊಸ ಚೈತನ್ಯ ಬಂದಿದೆ. ಒಂದು ಕಾಲದಲ್ಲಿ ಸೇನಾ ಬಂಕರ್‌ಗಳು ಮತ್ತು ರಾಜಕೀಯ ಸಂಘರ್ಷಗಳ ಕೇಂದ್ರವಾಗಿದ್ದ ಲಾಲ್ ಚೌಕ್, ಇಂದು ಹೊಸ ಕಾಶ್ಮೀರದ ಸಂಕೇತವಾಗಿ ಬದಲಾಗಿದೆ.

ಮಧ್ಯಪ್ರದೇಶದ ಮೂರೂ ರಾಜ್ಯಸಭಾ ಸ್ಥಾನ ಬಿಜೆಪಿ ಪಾಲು

ನಾಮಪತ್ರ ತಿರಸ್ಕರಿಸಿದ ಚುನಾವಣಾ ಅಧಿಕಾರಿ ಕ್ರಮವನ್ನು ಕೋರ್ಟ್‌ನಲ್ಲಿ ಪ್ರಶ್ನೆ ಮಾಡಲಾಗಿದೆ. ಆದರೂ, ಬಿಜೆಪಿ ಅಭ್ಯರ್ಥಿಗಳ ಗೆಲುವು ಘೋಷಣೆ ಮಾಡಿರುವುದು ಪ್ರಜಾಪ್ರಭುತ್ವಕ್ಕೆ ಮಾಡಿದ ಅವಮಾನ.
- ಕಮಲ್‌ನಾಥ್ ಮಧ್ಯಪ್ರದೇಶ ಮಾಜಿ ಸಿಎಂ

ಭೋಪಾಲ್: ಕಾಂಗ್ರೆಸ್ ಅಭ್ಯರ್ಥಿ ಮೀನಾಕ್ಷಿ ನಟರಾಜನ್ ನಾಮಪತ್ರ ತಿರಸ್ಕಾರವಾದ ಹಿನ್ನೆಲೆಯಲ್ಲಿ ಮಧ್ಯಪ್ರದೇಶದ ಮೂರೂ ರಾಜ್ಯಸಭಾ ಸ್ಥಾನಗಳು ಬಿಜೆಪಿ ಪಾಲಾಗಿವೆ.

ನಾಮಪತ್ರ ತಿರಸ್ಕರಿಸಿದ ಚುನಾವಣಾ ಅಧಿಕಾರಿ ಕ್ರಮದ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಕಾಂಗ್ರೆಸ್ ಕಾನೂನು ಹೋರಾಟ ನಡೆಸಿರುವ ನಡುವೆಯೇ, ಬಿಜೆಪಿಯ ಮೂವರು ಅಭ್ಯರ್ಥಿಗಳ ಆಯ್ಕೆಯನ್ನು ಘೋಷಣೆ ಮಾಡಲಾಗಿದೆ. ಬಿಜೆಪಿಯ ರಜನೀಶ್ ಅಗರ್ವಾಲ್, ತರುಣ್ ಛುಗ್, ಮಹೇಶ್ ಕೇವತ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿಯಾಗಿದ್ದ ವಿಧಾನಸಭೆ ಕಾರ್ಯದರ್ಶಿ ಪ್ರಕಟಿಸಿದ್ದಾರೆ.

ವಿಧಾನಸಭೆ ಸಂಖ್ಯಾಬಲದ ಪ್ರಕಾರ ಬಿಜೆಪಿ ಎರಡು, ಕಾಂಗ್ರೆಸ್ ಒಂದು ಸ್ಥಾನ ಗೆಲ್ಲುವುದಕ್ಕೆ ಅವಕಾಶವಿತ್ತು. ಮೀನಾಕ್ಷಿ ನಟರಾಜನ್ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿತ್ತು. ಇಬ್ಬರು ಅಭ್ಯರ್ಥಿಗಳ ಗೆಲುವಿಗೆ ಅಗತ್ಯವಿದ್ದ ಮತಗಳಿಗಿಂತ ಹೆಚ್ಚುವರಿ ಮತ ಹೊಂದಿದ್ದ ಬಿಜೆಪಿ ಮೂರನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿತು. ನಾಮಪತ್ರ ಪರಿಶೀಲನೆ ವೇಳೆ ಮೀನಾಕ್ಷಿ ನಟರಾಜನ್ ಅವರು ಚುನಾವಣಾ ಅಫಿಡವಿಟ್‌ನಲ್ಲಿ ಸುಳ್ಳು ಮಾಹಿತಿ ನೀಡಿದ್ದು, ತೆಲಂಗಾಣದಲ್ಲಿ ತಮ್ಮ ವಿರುದ್ಧ ದಾಖಲಾದ ಕೇಸ್ ವಿಷಯ ಮುಚ್ಚಿಟ್ಟಿದ್ದಾರೆ ಎಂದು ಬಿಜೆಪಿ ದೂರು ನೀಡಿತು. ದೂರು ಪರಿಶೀಲಿಸಿದ ಚುನಾವಣಾ ಅಧಿಕಾರಿಗಳು, ಮೀನಾಕ್ಷಿ ನಟರಾಜನ್ ನಾಮಪತ್ರ ಕ್ರಮಬದ್ಧವಾಗಿಲ್ಲವೆಂದು ತಿರಸ್ಕರಿಸಿದರು. ಚುನಾವಣಾ ಅಧಿಕಾರಿಗಳ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್, ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ನೀಡಿತು. ಬಳಿಕ ಸುಪ್ರೀಂ ಕೋರ್ಟ್‌ನಲ್ಲಿ ದೂರು ದಾಖಲಿಸಿತು.

ಇಂದು 'ಸುಪ್ರೀಂ' ವಿಚಾರಣೆ

ಮೀನಾಕ್ಷಿ ನಟರಾಜನ್ ನಾಮಪತ್ರ ತಿರಸ್ಕರಿಸಿದ ಕ್ರಮ ಪ್ರಶ್ನಿಸಿ ಕಾಂಗ್ರೆಸ್ ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ (ಜೂನ್ 12) ನಡೆಸಲಿದೆ. ಗುರುವಾರ ನ್ಯಾ.ಪಿ.ಕೆ. ಮಿಶ್ರಾ ಹಾಗೂ ನ್ಯಾ.ಎಸ್.ಚಂದೂರ್ಕರ್ ಪೀಠದ ಮುಂದೆ ವಿಷಯ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ತುರ್ತು ವಿಚಾರಣೆಗೆ ಮನವಿ ಮಾಡಿದರು. ಪ್ರಕರಣದ ವಿಚಾರಣೆಯನ್ನು ಶುಕ್ರವಾರಕ್ಕೆ ಪಟ್ಟಿಮಾಡುವಂತೆ ಪೀಠ ನಿರ್ದೇಶನ ನೀಡಿತು.

ಕೋಯಿಕ್ಕೋಡ್ ವ್ಯಕ್ತಿಗೆ ನಿಫಾ ಸೋಂಕು ದೃಢ

ಕಾಸರಗೋಡು: ಕೇರಳದ ಕೋಯಿಕ್ಕೋಡ್ ರಾಮನಾಟುಕ್ಕರ ಮೂಲದ ವ್ಯಕ್ತಿಗೆ ನಿಫಾ ಸೋಂಕು ದೃಢಪಟ್ಟಿದೆ. ಆಸ್ಪತ್ರೆಗೆ ದಾಖಲಾದ ರೋಗಿಯ ರಕ್ತದ ಮಾದರಿಯನ್ನು ಪುಣೆ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿಗೆ ಕಳುಹಿಸಲಾಗಿತ್ತು. ರಾಮನಾಟುಕ್ಕರ ಮುನ್ಸಿಪಲ್ ಕಾರ್ಪೊರೇಷನ್‌ನ ಫಾರೂಕ್ ಕಾಲೇಜು ಬಳಿ ವಾಸವಾಗಿರುವ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ನಿಫಾ ದೃಢಪಟ್ಟ ಹಿನ್ನೆಲೆಯಲ್ಲಿ ಆರೋಗ್ಯಾಧಿಕಾರಿಗಳ ತಂಡ ಸಭೆ ನಡೆಸಿದೆ. 50 ಕುಟುಂಬಗಳ ಕ್ಲಸ್ಟರ್‌ಗಳನ್ನು ರಚಿಸಲಾಗಿದೆ. ತಂಡವು ಪ್ರತಿ ಮನೆಗೂ ಭೇಟಿ ನೀಡಿ ತಪಾಸಣೆ ನಡೆಸಿ ರೋಗ ಲಕ್ಷಣಗಳನ್ನು ಹೊಂದಿರುವವರ ವರದಿಯನ್ನು ಸಿದ್ಧಪಡಿಸುತ್ತಿದೆ.

ರೋಗಿಯೊಂದಿಗೆ ನಿಕಟ ಸಂಪರ್ಕ ಹೊಂದಿದ್ದ 13 ಮಂದಿಯನ್ನು ಮನೆಯೊಂದರಲ್ಲಿ ಕ್ವಾರಂಟೈನ್ ಮಾಡಲಾಗಿದೆ. ಪ್ರಸ್ತುತ 77 ಮಂದಿ ಸಂಪರ್ಕಿತರ ಪಟ್ಟಿ ಸಿದ್ಧಪಡಿಸಲಾಗಿದೆ. 14 ಕುಟುಂಬ ಸದಸ್ಯರು ಮತ್ತು 58 ಆರೋಗ್ಯ ಕಾರ್ಯಕರ್ತರು ಸಂಪರ್ಕಿತರ ಪಟ್ಟಿಯಲ್ಲಿದ್ದಾರೆ. ಉಳಿದ ಯಾರಿಗೂ ರೋಗ ಲಕ್ಷಣಗಳಿಲ್ಲ, ಅಲ್ಲದೆ ರೋಗಿಯ ಮಾರ್ಗ ನಕ್ಷೆ ಬಿಡುಗಡೆ ಮಾಡಲು ಆರೋಗ್ಯ ಇಲಾಖೆ ಸಿದ್ಧತೆ ನಡೆಸಿದೆ. ಮಾರ್ಗಸೂಚಿ ಸಿದ್ಧಪಡಿಸಲಾಗಿದೆ ಎಂದು ಆರೋಗ್ಯ ಸಚಿವ ಕೆ.ಮುರಳೀಧರನ್ ತಿಳಿಸಿದ್ದಾರೆ.

ಮೊದಲ ವಿಶ್ವಯುದ್ಧದ ಅವಧಿಯನ್ನೇ ಮೀರಿಸಿದ ರಷ್ಯಾ-ಉಕ್ರೇನ್ ಸಂಘರ್ಷ

1,569 ದಿನಗಳಿಂದ ರಷ್ಯಾ-ಉಕ್ರೇನ್ ನಡುವೆ ಸಮರ

ಮಾಸ್ಕೊ: ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧವು ದಿನದಿಂದ ದಿನಕ್ಕೆ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದ್ದು, ರಷ್ಯಾ ಸೇನೆಯು ಉಕ್ರೇನ್ ಮೇಲೆ ದಾಳಿ ಆರಂಭಿಸಿ ಬರೋಬ್ಬರಿ 1,569 ದಿನಗಳು ಕಳೆದಿವೆ. ಅಂದರೆ ನಾಲ್ಕು ವರ್ಷ ಮೂರು ತಿಂಗಳಿಗಿಂತಲೂ ಅಧಿಕ ಸಮಯದಿಂದ ಈ ರಕ್ತಪಾತ ನಿರಂತರವಾಗಿ ಸಾಗಿದ್ದು, ಇದು ಅಧಿಕೃತವಾಗಿ ಮೊದಲ ವಿಶ್ವಯುದ್ಧದ ಒಟ್ಟು ಅವಧಿಗಿಂತಲೂ ದೀರ್ಘಕಾಲ ನಡೆದ ಸಂಘರ್ಷವಾಗಿದೆ.

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ 2022ರ ಫೆಬ್ರವರಿಯಲ್ಲಿ ತಮ್ಮ ಸೈನಿಕರಿಗೆ ಉಕ್ರೇನ್ ಗಡಿಯೊಳಗೆ ನುಗ್ಗಲು ಆದೇಶಿಸಿದಾಗ, ಕೆಲವೇ ದಿನಗಳಲ್ಲಿ ಉಕ್ರೇನ್ ರಾಜಧಾನಿ 'ಕೀವ್' ನಗರವನ್ನು ವಶಪಡಿಸಿಕೊಂಡು ಕ್ಷಿಪ್ರ ವಿಜಯ ಸಾಧಿಸುವ ದೊಡ್ಡ ನಿರೀಕ್ಷೆಯಲ್ಲಿದ್ದರು. ಆದರೆ ರಷ್ಯಾ ಪಡೆಗಳ ಆಕ್ರಮಣವನ್ನು ಸಮರ್ಥವಾಗಿ ಎದುರಿಸಿದ ಉಕ್ರೇನ್ ಸೈನಿಕರು ಪ್ರಬಲ ಪ್ರತಿರೋಧ ಒಡ್ಡಿದರು. ಆರಂಭದಲ್ಲಿ ಈ ಯುದ್ಧ ಎರಡು ಅಥವಾ ಮೂರು ವರ್ಷ ನಡೆದು ಆಮೇಲೆ ರಾಜತಾಂತ್ರಿಕ ಮಾತುಕತೆಗಳ ಮೂಲಕ ಮುಕ್ತಾಯವಾಗಬಹುದು ಎಂದು ರಷ್ಯಾ ಹಾಗೂ ಉಕ್ರೇನ್ ಮಿಲಿಟರಿಯ ಉನ್ನತ ಅಧಿಕಾರಿಗಳು ಭಾವಿಸಿದ್ದರು. ಆದರೆ ಸದ್ಯಕ್ಕೆ ಶಾಂತಿ ಮಾತುಕತೆಗಳು ಸಂಪೂರ್ಣ ಸ್ಥಗಿತಗೊಂಡಿದ್ದು, ಇನ್ನೂ ಒಂದು ವರ್ಷಕ್ಕಿಂತ ಮುಂಚೆ ಯುದ್ಧ ಕೊನೆಗೊಳ್ಳುವ ಯಾವುದೇ ಲಕ್ಷಣಗಳಿಲ್ಲ ಎಂದು ರಕ್ಷಣಾ ತಜ್ಞರು ವಿಶ್ಲೇಷಿಸಿದ್ದಾರೆ. ಒಂದು ವೇಳೆ ಈ ಯುದ್ಧ ಹೀಗೆಯೇ ಮುಂದುವರಿದರೆ, ಆರು ವರ್ಷಗಳ ಕಾಲ ನಡೆದಿದ್ದ ಎರಡನೇ ವಿಶ್ವಯುದ್ಧದ ಅವಧಿಯನ್ನೂ ಇದು ಮೀರಿಸಲಿದೆ. ಇನ್ನು ಕೆಲವು ಉಕ್ರೇನಿಯನ್ನರ ಪ್ರಕಾರ, ಈ ಯುದ್ಧ 2022ರಲ್ಲಿ ಅಲ್ಲ, ಬದಲಿಗೆ 2014ರಲ್ಲಿ ರಷ್ಯಾ ಸೇನೆಯು 'ಕ್ರಿಮಿಯಾ' ಪ್ರದೇಶವನ್ನು ವಶಪಡಿಸಿಕೊಂಡಾಗಲೇ ಆರಂಭವಾಗಿತ್ತು.

ಜರ್ಮನ್ ಪಡೆಗಳು 1914ರಲ್ಲಿ ಪ್ಯಾರಿಸ್ ಮೇಲೆ ಆಕ್ರಮಣ ನಡೆಸಿ ವಿಫಲವಾಗಿ ದೀರ್ಘ ಯುದ್ಧಕ್ಕೆ ನಾಂದಿ ಹಾಡಿದಂತೆ, 2022ರಲ್ಲಿ ರಷ್ಯಾ ಸೇನೆಯು ಕೀವ್ ನಗರವನ್ನು ವಶಕ್ಕೆ ಪಡೆಯುವ ವಿಷಯದಲ್ಲಿ ಅದೇ ತಪ್ಪು ಮಾಡಿತು. ಮೊದಲ ವಿಶ್ವಯುದ್ಧದ ಅವಧಿಯಲ್ಲಿ ಶತ್ರುಗಳ ಫಿರಂಗಿ ದಾಳಿಯಿಂದ ತಪ್ಪಿಸಿಕೊಳ್ಳಲು ಸೈನಿಕರು ಕಂದಕಗಳನ್ನು ತೋಡಿ ಮಣ್ಣಿನಲ್ಲಿ ಹೂತುಕೊಳ್ಳುತ್ತಿದ್ದರು. ಇಂದು ಕೂಡ ಎದುರಾಳಿಗಳ ಭೀಕರ ಶಸ್ತ್ರಾಸ್ತ್ರ ಹಾಗೂ ಡ್ರೋನ್ ದಾಳಿಯಿಂದ ಬದುಕಲು ಸೈನಿಕರು ಅದೇ ಭೂಗತ ಕಂದಕ (ಬಂಕರ್)ಗಳನ್ನು ಆಶ್ರಯಿಸಿದ್ದಾರೆ.

ಅಹಮದಾಬಾದ್ ವಿಮಾನ ದುರಂತಕ್ಕೆ ಒಂದು ವರ್ಷ

ಉತ್ತರಕ್ಕಾಗಿ ಕಾಯುತ್ತಿರುವ ಸಂತ್ರಸ್ತರ ಕುಟುಂಬಗಳು



ಸೂರತ್: 260 ಜನರನ್ನು ಬಲಿ ಪಡೆದ ಅಹಮದಾಬಾದ್ ವಿಮಾನ ದುರಂತಕ್ಕೆ ಒಂದು ವರ್ಷ ಕಳೆದಿದೆ. ಆದರೂ ತನ್ನವರನ್ನು ಕಳೆದುಕೊಂಡ ಕುಟುಂಬಗಳು ದುರಂತಕ್ಕೆ ನಿಖರ ಕಾರಣಗಳನ್ನು ಎದುರು ನೋಡುತ್ತಿವೆ.

ಕಳೆದ ವರ್ಷ ಜೂನ್ 12 ರಂದು ಲಂಡನ್‌ನ ಗ್ಯಾಟ್ವಿಕ್‌ಗೆ ಟೇಕ್‌ಆಫ್ ಆದ ಏರ್‌ಇಂಡಿಯಾ ವಿಮಾನ ಎಐ-171 ಸ್ವಲ್ಪ ಹೊತ್ತಲ್ಲೇ ಅಹಮದಾಬಾದ್‌ನ ವೈದ್ಯಕೀಯ ಹಾಸ್ಟೆಲ್ ಸಂಕೀರ್ಣಕ್ಕೆ ಅಪ್ಪಳಿಸಿತ್ತು. ವಿಮಾನ ದುರಂತದ ಅಂತಿಮ ತನಿಖಾ ವರದಿ ಬಿಡುಗಡೆಯು ಒಂದು ವರ್ಷದ ಗಡುವನ್ನು ಮೀರಲಿದೆ. ಅಪಘಾತಕ್ಕೀಡಾದ ವಿಮಾನದ ಎಂಜಿನ್‌ಗಳ ಪೂರ್ಣ ಪ್ರಮಾಣದ ತಾಂತ್ರಿಕ ಪರೀಕ್ಷೆ ಇನ್ನೂ ಬಾಕಿ ಇರುವುದರಿಂದ ದುರಂತದ ವರದಿ ಇನ್ನೂ ವಿಳಂಬವಾಗುವ ಸಾಧ್ಯತೆಯಿದೆ ಎಂದು ವರದಿಯಾಗಿದೆ. ಅಂತಾರಾಷ್ಟ್ರೀಯ ವಿಮಾನಯಾನ ನಿಯಮಗಳ ಪ್ರಕಾರ, ಅಪಘಾತ ನಡೆದ ಒಂದು ವರ್ಷದೊಳಗೆ ಅಂದರೆ ಜೂನ್ 11ರ ಒಳಗೆ ಅಂತಿಮ ವರದಿ ಬರಬೇಕಿತ್ತು. ಆದರೆ ತಾಂತ್ರಿಕ ಸಂಕೀರ್ಣತೆಗಳಿಂದಾಗಿ ಈ ಗಡುವಿನ ಒಳಗೆ ವರದಿ ಬಿಡುಗಡೆಯಾಗಿಲ್ಲ. ವಿಮಾನ ಅಪಘಾತ ತನಿಖಾ ಬ್ಯೂರೋ (ಎಎಐಬಿ) ಈ ವಾರ ತನಿಖೆ ವಿಳಂಬಕ್ಕೆ ಕಾರಣಗಳ ಕುರಿತು ಪ್ರಗತಿ ವರದಿಯನ್ನು ಬಿಡುಗಡೆ ಮಾಡುವ ಸಾಧ್ಯತೆಯಿದೆ.

ಪ್ರಾಥಮಿಕ ವರದಿ ಪ್ರಕಾರ ಎಂಜಿನ್‌ನಿಂದ ಪೂರಕ ಬಲವಿಲ್ಲದೆ ನಿಯಂತ್ರಣ ಕಳೆದುಕೊಂಡ ವಿಮಾನ ಕೇವಲ 32 ಸೆಕೆಂಡುಗಳ ಕಾಲ ಗಾಳಿಯಲ್ಲಿದ್ದು, ನೇರವಾಗಿ ವೈದ್ಯಕೀಯ ಕಾಲೇಜು ಹಾಸ್ಟೆಲ್ ಕಟ್ಟಡಕ್ಕೆ ಡಿಕ್ಕಿ ಹೊಡೆದಿತ್ತು. ಅಂದರೆ ವಿಮಾನ ರನ್‌ವೇಯಿಂದ ಗಾಳಿಯಲ್ಲಿ ಮೇಲಕ್ಕೆದ್ದ ಕೇವಲ 32 ಸೆಕೆಂಡು ಆಗುವಷ್ಟರಲ್ಲಿ ಈ ಅಪಘಾತ ನಡೆದಿತ್ತು. ಮೊದಲ ವರದಿಯಲ್ಲಿ ವಿಮಾನದ ಬ್ಲಾಕ್ ಬಾಕ್ಸ್‌ನಲ್ಲಿದ್ದ ಆಡಿಯೊ ಸಂಭಾಷಣೆಯ ಅತ್ಯಂತ ಗಂಭೀರವಾದ ಭಾಗವನ್ನು ಉಲ್ಲೇಖಿಸಲಾಗಿತ್ತು. ಎಂಜಿನ್ ಬಂದ್ ಆದ ತಕ್ಷಣ ಓರ್ವ ಪೈಲಟ್, ''ನೀನು ಸ್ವಿಚ್ ಯಾಕೆ ಕಟ್-ಆಫ್ ಮಾಡಿದೆ?,'' ಎಂದು ಕೇಳಿದರೆ ಮತ್ತೊಬ್ಬ ಪೈಲಟ್, ''ನಾನು ಮಾಡಿಲ್ಲ, ನಾನು ಯಾವುದನ್ನೂ ಮುಟ್ಟಿಲ್ಲ!,'' ಎಂದು ಹೇಳುವುದು ಕೇಳಿಬಂದಿತ್ತು. ಇಬ್ಬರೂ ಪೈಲಟ್‌ಗಳು ಅನುಭವಿಗಳಾಗಿದ್ದರಿಂದ ಅವರು ಪ್ರಜ್ಞಾಪೂರ್ವಕವಾಗಿ ಈ ತಪ್ಪು ಮಾಡಲು ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗಿತ್ತು. ಆದರೆ ಸ್ವಿಚ್‌ಗಳು ಆಫ್ ಆಗಿದ್ದು ಹೇಗೆ ಎಂಬುದು ಒಗಟ್ಟಾಗಿಯೇ ಉಳಿದಿದೆ.

ಮಕ್ಕಳ ಸಿನಿಮಾ ಅಂಬರ ಗುಡ್ಡ

ಹೊಸ ತಂಡವೊಂದು ಮಕ್ಕಳ ಸಿನಿಮಾ 'ಅಂಬರ ಗುಡ್ಡ' ಮೂಲಕ ಸಿನಿ ಪ್ರೇಕ್ಷಕರ ಮುಂದೆ ಬರಲು ಸಜ್ಜಾಗಿದೆ.

ಮಕ್ಕಳ ಸಾಹಸದ ಕಥೆಯನ್ನು ಸಿನಿಮಾ ಮೂಲಕ ಕಟ್ಟಿಕೊಟ್ಟಿದ್ದಾರೆ ನಿರ್ದೇಶಕ ವಿಷ್ಣು ತೇಜ. ಅಂಬರ ಗುಡ್ಡಕ್ಕೆ ಪ್ರವಾಸಕ್ಕೆಂದು ಹೋಗುವ ಮಕ್ಕಳು ಏನೆಲ್ಲಾ ಸವಾಲುಗಳನ್ನು ಎದುರಿಸುತ್ತಾರೆ ಎನ್ನುವುದೇ ಕಥೆ.

ನಿರ್ದೇಶಕ ವಿಷ್ಣು ತೇಜ ಮಾತನಾಡಿ, 'ಶೂಟಿಂಗ್ ಸಮಯದಲ್ಲಿ ಸಾಕಷ್ಟು ಸವಾಲುಗಳು ಎದುರಾಗಿದ್ದವು. ಹಲವು ಮಕ್ಕಳನ್ನು ಸೇರಿಸಿ ಚಿತ್ರೀಕರಣ ಮಾಡಿದ್ದು ವಿಶೇಷ ಅನುಭವ' ಎಂದಿದ್ದಾರೆ. ಈ ಸಿನಿಮಾವನ್ನು ಕೊಲ್ಲೂರು ಮೂಕಾಂಬಿಕೆ ಫಾರೆಸ್ಟ್, ಕುಂದಾಪುರ, ಶಿವಮೊಗ್ಗ, ಕೊಡಚಾದ್ರಿ, ಗೋಕರ್ಣದಲ್ಲಿ ಚಿತ್ರೀಕರಣ ಮಾಡಲಾಗಿದೆ. ಆಕಾಶ್ ಪರ್ವ ಸಂಗೀತ, ದೀಪಕ್ ಕುಮಾರ್ ಛಾಯಾಗ್ರಹಣವಿದೆ. ತನಿಷಾ ಗೌಡ, ಖುಷಿ ಗೌಡ, ಗೀತಾ, ಚಂದ್ರು, ಗಣೇಶ್ ಸೇರಿದಂತೆ ಅನೇಕ ಮಕ್ಕಳು ನಟಿಸಿದ್ದಾರೆ. ■

ಧರ್ಮದ ರಕ್ಷಣೆಯ ಕ್ಷೇತ್ರಪಾಲ

ಕರ್ನಾಟಕ ಕರಾವಳಿಯ ಸೊಗಡು, ಆಚಾರ, ವಿಚಾರಗಳ ಸುತ್ತ ಈಗಾಗಲೇ ಹಲವು ಸಿನಿಮಾಗಳು ಬಂದಿವೆ. ಈಗ ಅಂಥದ್ದೇ ಸೊಗಡಿನ 'ಕ್ಷೇತ್ರಪಾಲ' ಚಿತ್ರದ ಮೊದಲ ಹಂತದ ಶೂಟಿಂಗ್ ಪೂರ್ಣಗೊಂಡಿದೆ. ಕರಾವಳಿಯ ಪ್ರತೀತಿಯಂತೆ ಪ್ರತಿ ಕ್ಷೇತ್ರದಲ್ಲೂ ಆ ಕ್ಷೇತ್ರದ ರಕ್ಷಣೆಗೆ ಕ್ಷೇತ್ರಪಾಲನಾಗಿ ದೈವವೊಂದು ಇರುತ್ತದೆ. ಅದು ಆಯಾ ಕ್ಷೇತ್ರದಲ್ಲಿ ನ್ಯಾಯ, ನೀತಿ, ಧರ್ಮವನ್ನು ಪಾಲನೆ, ಪೋಷಣೆ ಮಾಡುತ್ತದೆ ಎಂಬುದು ಅಲ್ಲಿಯವರ ನಂಬಿಕೆ. ಈ ರೀತಿ ಧಾರ್ಮಿಕ ಹಿನ್ನೆಲೆಯಲ್ಲಿ ಊರನ್ನು ರಕ್ಷಣೆ ಮಾಡುವ ವ್ಯಕ್ತಿಯೊಬ್ಬನ ಕಥೆ ಈ ಸಿನಿಮಾದಲ್ಲಿ ಇರಲಿದೆ. ಈ ಚಿತ್ರಕ್ಕೆ ಜಗದೀಶ್ ಮಂಜಣ್ಣ ಆ್ಯಕ್ಷನ್ ಕಟ್ ಹೇಳುತ್ತಿದ್ದು, ರಾಘವ ಪೂಜಾರಿ ಹೀರೊ ಆಗಿದ್ದಾರೆ. ಬಲರಾಜ್ ವಾಡಿ, ಗೋಪಾಲಕೃಷ್ಣ ದೇಶಪಾಂಡೆ, ಸುಚೇಂದ್ರ ಪ್ರಸಾದ್, ಅದ್ವಿಕಾ ಶೆಟ್ಟಿ, ರಾಘು ರಾಮನಕೊಪ್ಪ, ಗೌತಮಿ ಗೌಡ, ನಮಿತಾ ಕಿರಣ್ ಮೊದಲಾದವರು ಇದರ ತಾರಾಬಳಗದಲ್ಲಿದ್ದಾರೆ. ನವೀನ್ ಸುವರ್ಣ ಛಾಯಾಗ್ರಹಣ, ಗಿರೀಶ್ ಕುಮಾರ್ ಸಂಕಲನ, ಯತೀಶ್ ರಾಜ್ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ. ಇದೇ ಜುಲೈ ಅಂತ್ಯದಿಂದ 'ಕ್ಷೇತ್ರಪಾಲ' ಸಿನಿಮಾದ ಎರಡನೇ ಹಂತದ ಶೂಟಿಂಗ್ ಸುಮಾರು 40 ದಿನಗಳ ಕಾಲ ನಡೆಯಲಿದೆ. ■

ರಾಘವ ಪೂಜಾರಿ

ಗೀಕ್‌ಗೆ ಅಶ್ವಿನಿ ಪುನೀತ್ ಸಾಥ್

ಟೈಟಲ್‌ನಿಂದಲೇ ಕುತೂಹಲ ಮೂಡಿಸಿದ್ದ 'ಗೀಕ್' ಚಿತ್ರದ ಪೋಸ್ಟರ್ ಬಿಡುಗಡೆಯಾಗಿದೆ. ಅಶ್ವಿನಿ ಪುನೀತ್ ರಾಜ್‌ಕುಮಾರ್ ಚಿತ್ರದ ಪೋಸ್ಟರ್ ರಿಲೀಸ್ ಮಾಡಿ ತಂಡಕ್ಕೆ ಶುಭ ಹಾರೈಸಿದ್ದಾರೆ.

ಮೊಬೈಲ್ ಸಂಬಂಧಿತ ಆ್ಯಪ್‌ಗಳು ಹಾಗೂ ಡೇಟಾ ದುರುಪಯೋಗದ ಕುರಿತ ಕಥಾಹಂದರ ಹೊಂದಿರುವ ಸಿನಿಮಾ ಇದು. ಇದಕ್ಕೆ ಸಸ್ಪೆನ್ಸ್, ಥ್ರಿಲ್ಲರ್ ಅಂಶವನ್ನು ಸೇರಿಸಲಾಗಿದೆ. ಬೆಂಗಳೂರಿನ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಪ್ರವೀಣ್ ತೇಜ್, ಚೈತ್ರಾ ಆಚಾರ್, ಕಿರಣ್ ಶ್ರೀನಿವಾಸ್, ವಿರಾನಿಕಾ ಶೆಟ್ಟಿ ಪ್ರಮುಖ ಭೂಮಿಕೆಯಲ್ಲಿರುವ ಈ ಚಿತ್ರಕ್ಕೆ ಯುವ ನಿರ್ದೇಶಕ ಡಿ. ಹರಿ ಪ್ರಕಾಶ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಕೀರ್ತನ್ ಪೂಜಾರಿ ಛಾಯಾಗ್ರಹಣ, ಜೋ ಕೋಸ್ಟಾ ಸಂಗೀತ ಸಂಯೋಜನೆ, ಶಶಾಂಕ್ ನಾರಾಯಣ್ ಸಂಕಲನವಿದೆ. ■

ಥ್ರಿಲ್ಲರ್ ಮಂಜು ಡೆಡ್ಲಿ ಕಿಲ್ಲರ್

ಹಲವು ವರ್ಷಗಳ ನಂತರ ಸಾಹಸ ನಿರ್ದೇಶಕ ಥ್ರಿಲ್ಲರ್ ಮಂಜು ಆ್ಯಕ್ಷನ್ ಕಟ್ ಹೇಳಿರುವ ಚಿತ್ರ 'ಡೆಡ್ಲಿ ಕಿಲ್ಲರ್'. ಆ್ಯಕ್ಷನ್, ಸಸ್ಪೆನ್ಸ್ ಜತೆ ಹಾರರ್ ಹಿನ್ನೆಲೆಯನ್ನು ಹೊಂದಿರುವ ಈ ಚಿತ್ರದಲ್ಲಿ ಅಭಯ್ ವೀರ್ ನಾಯಕ ಹಾಗೂ ನಿವೀಕ್ಷಾ ನಾಯಕಿ.

ನಿರ್ದೇಶಕ ಥ್ರಿಲ್ಲರ್ ಮಂಜು ಮಾತನಾಡಿ, 'ಇದರಲ್ಲಿ ಚಿತ್ರಕಥೆ ವೇಗವಾಗಿ ಸಾಗುತ್ತದೆ. ಆರು ಗ್ಯಾಂಗ್‌ಸ್ಟರ್‌ಗಳು ಕಾಡಿನಲ್ಲಿ ತಪ್ಪಿಸಿಕೊಳ್ಳುತ್ತಾರೆ. ಅವರನ್ನು ನಾಯಕ ಹೇಗೆ ಹಿಡಿಯುತ್ತಾನೆ ಎನ್ನುವುದೇ ಈ ಚಿತ್ರದ ಒನ್ ಲೈನ್' ಎಂದು ಹೇಳಿದ್ದಾರೆ.

ನಾಯಕ ಅಭಯ್ ವೀರ್ ಮಾತನಾಡಿ, 'ವಿಭಿನ್ನ ಆ್ಯಕ್ಷನ್ ನಮ್ಮ ಚಿತ್ರದಲ್ಲಿದೆ. ಥ್ರಿಲ್ಲರ್ ಮಂಜು ಎಲ್ಲ ಸ್ಟಂಟ್ಸ್ ಕಂಪೋಸ್ ಮಾಡಿದ್ದಾರೆ. ನಾನು ಇಡೀ ಸಿನಿಮಾ ಒಂದೇ ಕಾಸ್ಟ್ಯೂಮ್‌ನಲ್ಲಿ ಇರುತ್ತೇನೆ ಎಂಬುದು ವಿಶೇಷ' ಎಂದಿದ್ದಾರೆ.

ಈ ಚಿತ್ರಕ್ಕೆ ವಿನು ಮನಸು ಸಂಗೀತ ಸಂಯೋಜನೆ ಮಾಡಿದ್ದಾರೆ. ಮಲ್ಲಿಕಾರ್ಜುನ್ ಛಾಯಾಗ್ರಹಣ, ದೀಪು ಸಂಕಲನ ಈ ಚಿತ್ರಕ್ಕಿದೆ. ■

ನಿವೀಕ್ಷಾ, ಅಭಯ್ ವೀರ್

ಮಾತಿಲ್ಲದ ಚಿತ್ರ ಕನ್ನಡದ್ದಾಗಿದ್ದು ಹೀಗೆ

ಲವಲVK cine ಸ್ವಾರಸ್ಯ

ಕನ್ನಡದ ಕ್ಲಾಸಿಕ್ ಚಿತ್ರಗಳ ಪೈಕಿ ಸಿಂಗೀತಂ ಶ್ರೀನಿವಾಸ ರಾವ್ ನಿರ್ದೇಶನದ ಮತ್ತು ಕಮಲ್ ಹಾಸನ್ ಅಭಿನಯದ 'ಪುಷ್ಪಕ ವಿಮಾನ' ಚಿತ್ರವೂ ಕೂಡ ಒಂದು. ಇದು ಕನ್ನಡ ಚಿತ್ರ ಹೇಗೆ ಆಗುವುದಕ್ಕೆ ಸಾಧ್ಯ ಎಂಬ ಪ್ರಶ್ನೆ ಸಹಜವಾಗಿಯೇ ಬರಬಹುದು. ಏಕೆಂದರೆ, ಇದರಲ್ಲಿ ಯಾವುದೇ ಭಾಷೆ ಅಥವಾ ಸಂಭಾಷಣೆ ಇಲ್ಲ, ಆದರೆ ಬೆಂಗಳೂರಿನಲ್ಲಿ ಬಹುತೇಕ ಚಿತ್ರೀಕರಣ ಮಾಡಲಾಗಿತ್ತು. ಅಂಕಲ್ ಲೋಕನಾಥ್, ಮಂದೀಪ್ ರಾಯ್ ಸೇರಿದಂತೆ ಕನ್ನಡದ ಹಲವು ಜನಪ್ರಿಯ ಕಲಾವಿದರು ನಟಿಸಿದ್ದು, ಕನ್ನಡದ ಶೃಂಗಾರ್ ನಾಗರಾಜ್ ನಿರ್ಮಿಸಿದ್ದು, ಬಿ.ಸಿ. ಗೌರಿಶಂಕರ್ ಸೇರಿದಂತೆ ಹಲವು ತಂತ್ರಜ್ಞರು ಈ ಚಿತ್ರಕ್ಕೆ ಕೆಲಸ ಮಾಡಿದ್ದರಿಂದ ಕನ್ನಡದ ಚಿತ್ರ ಎಂದು ಪರಿಗಣಿಸಬಹುದು. ಆದರೂ ಚಿತ್ರದಲ್ಲಿ ಯಾವುದೇ ಭಾಷೆ, ಮಾತು ಇಲ್ಲವಾದ್ದರಿಂದ, ಇದನ್ನು ಕನ್ನಡದ ಚಿತ್ರ ಎಂದು ಪರಿಗಣಿಸುವುದಕ್ಕೆ ಹೇಗೆ ಸಾಧ್ಯ ಎಂಬ ಪ್ರಶ್ನೆ ಬಿಡುಗಡೆಯ ಸಂದರ್ಭದಲ್ಲಿ ಸಹಜವಾಗಿಯೇ ಬಂದಿತ್ತಂತೆ. ಚಿತ್ರತಂಡದವರು ಚಿತ್ರವನ್ನು ಸೆನ್ಸಾರ್ ಮಂಡಳಿಗೆ ಸಲ್ಲಿಸಿದಾಗ, ಮಂಡಳಿಯವರು ಇದು ಯಾವ ಭಾಷೆಯ ಚಿತ್ರ ಎಂದು ಕೇಳಿದರಂತೆ. ಭಾಷೆ ಇಲ್ಲದೆ ಸೆನ್ಸಾರ್ ಪ್ರಮಾಣ ಪತ್ರ ಕೊಡುವುದಕ್ಕೆ ಸಾಧ್ಯವಿಲ್ಲ ಎಂದರಂತೆ. ಸದಭಿರುಚಿಯ ಕನ್ನಡ ಭಾಷೆಯ ಚಿತ್ರಗಳಿಗೆ ಸರಕಾರ ಸಬ್ಸಿಡಿ ಕೊಡುವ ವಿಷಯ ಗೊತ್ತಿರಬಹುದು. ಚಿತ್ರದ ಬಹುತೇಕ ಚಿತ್ರೀಕರಣ ಮಾಡಿದ್ದು ಬೆಂಗಳೂರಿನಲ್ಲಾದ್ದರಿಂದ, ಚಿತ್ರತಂಡದವರು ಇದು ಕನ್ನಡದ ಚಿತ್ರ ಎಂದು ಹೇಳಿದರಂತೆ. ಅದಕ್ಕೆ ಪೂರಕವಾಗಿ ಚಿತ್ರಕ್ಕೆ ಕನ್ನಡ ಚಿತ್ರ ಎಂಬ ಪ್ರಮಾಣ ಪತ್ರ ಸಿಕ್ಕಿತಂತೆ. ಹೀಗೆ ಮಾತಿಲ್ಲದ ಚಿತ್ರವೊಂದು ಕನ್ನಡ ಚಿತ್ರವಾಯಿತು. ರಾಜ್ಯ ಸರಕಾರದಿಂದ ಸಬ್ಸಿಡಿಯ ಜೊತೆಗೆ ಪ್ರಶಸ್ತಿಗಳು ಸಿಕ್ಕವು. ಹಾಗಂತ ಈ ಚಿತ್ರವು ಬರೀ ಕನ್ನಡಕ್ಕೆ ಮಾತ್ರ ಸೀಮಿತವಾಗಲಿಲ್ಲ, ಮಾತಿಲ್ಲವಾದ್ದರಿಂದ ಚಿತ್ರದ ಹೆಸರು ಬದಲಾಯಿಸಿ, ಬೇರೆ ರಾಜ್ಯಗಳಲ್ಲೂ ಬಿಡುಗಡೆ ಮಾಡಲಾಯಿತು. ■

-ಲಕ್ಷ್ಮೀಪತಿ

ವಿಜಯಬಂಧ - 7974



ಎಡದಿಂದ ಬಲಕ್ಕೆ

2 ಪರಿಪಕ್ವತೆಯ ಅರ್ಥದ ರಾಕ್ಷಸನ ವೈರಿಯಾದ ಇಂದ್ರ 5
6 ಅಂತಕನ ದೂತರು ಕುಣಿಯುವ ಬಗೆ ಇದು 2
8 ಸಾಗರದಲ್ಲಿ ತುಂಬಿದ ಸತ್ವ 2
9 ಗ್ರಂಥ ಪತ್ರಿಕೆಯನ್ನು ಓದುವವನು 3
10 ಹರಣಗೊಳಿಸಿದ ಪ್ರಕರಣ ಇದು 4
12 ಅರಸಿಗೆ ಕತ ಕೇಳುವ ವಿಲಾಸಪ್ರಿಯತೆ 4
15 ನೌಕರ ಅಂದಿನ ದಿನ ಕಂಡ ಸೂರ್ಯ 4
18 ಬೆರಣಿ ತಟ್ಟುವುದನ್ನು ಕಂಡು ಅಚ್ಚರಿಗೊಳ್ಳು 4
20 ಮಾವು ತುಂಬಿದ ಗ್ರಾಮ ಬೆಂಗಳೂರು ಲಾಲಬಾಗಿನ ಬಳಿಯಿದೆ 3
21 ಇಲಿಯನ್ನು ಕಂಡು ಧ್ವನಿ ಮಾಡು 2
22 ಮಾರಿ ಪುಳಕಗೊಂಡಾಗ ಬಂದ ಶತ್ರು 2
24 ಹೊಸದಾಗಿ ವಿಧಿಸಿದ ದಂಡದಂತಹ ಶಿಕ್ಷೆ 5

ಮೇಲಿನಿಂದ ಕೆಳಕ್ಕೆ

1 ಪೆಟ್ಟು ಬಿದ್ದಾಗ ದೇಹದ ಭಾಗ ಬಾತುಕೊಂಡ ಬಗೆ 2
3 ಕಡಿಯುವ ಕ್ರಿಯೆಗೆ ದಿವಾನ ಹಾಕಿದ ನಿಯಂತ್ರಣ 4
4 ವ್ಯತ್ಯಾಸವಿಲ್ಲದ ಸರಿಯಾದ ತೆರಿಗೆ 4
5 ಕೃಷ್ಣನ ಮೂಲಕ ಅವನ ನಗರಕ್ಕೆ ಹೋಗುವ ಬಾಗಿಲು 2
7 ತರಗತಿ ಬಿಟ್ಟು ಹೋಗಿ ಕಂಡ ಶಕ್ತಿ ಉತ್ಸವ 3
8 ಸಾರ್ಥವಾಹಕರು ಬಂದದ್ದು ಯಥಾರ್ಥವಾಯಿತು 3
10 ಹದಿನಾರನೆ ವಯಸ್ಸಿನಲ್ಲಿ ಕಂಡ ಅರಿಶಿನದ ಬಣ್ಣ 3
11 ನರಕದಲ್ಲೂ ಕಂಡ ಮಡಿವಾಳ 3
13 ಸೀತೆ ಮತ್ತು ತಾರ ಕುಳಿತು ನುಡಿಸಿದ ವಾದ್ಯ 3
14 ಪಕ್ಕದ ಆಂಧ್ರ, ತೆಲಂಗಾಣದ ಭಾಷೆ 3
16 ಕಲಿಯುಗದಲ್ಲಿ ಅಸಲಿ ಎನ್ನುವುದೇ ಇಲ್ಲ 3
17 ಲಕ್ಷ್ಮಿಯ ಪತಿಯಾದ ಮಹಾವಿಷ್ಣು 4
18 ಬಾನಲ್ಲಿ ತುಂಬಿಕೊಂಡ ರಜತ ಲೋಹದಂತಹ ಮೇಘ 4
19 ನಗಾರಿ ಶಬ್ದ ಕೇಳಿದಾಗ ಆವರಿಸಿದ ಬರಿ ಹೆದರಿಕೆ 3
21 ಹಿಡಿದರೆ ಬಿಡದ ಜೀವಿ 2
23 ತಂಪು ಮಾಡಿದಾಗ ಚೂರು ಸಿಕ್ಕಿತಷ್ಟೆ 2

ವಿಜಯಬಂಧ | 7973

ಎಡದಿಂದ ಬಲಕ್ಕೆ: 1.ಪ್ರತಾಪ 3.ತಂಬೂರ 5.ನವ 6.ರಿಕಾಪು 7.ಸಾಂಗ 8.ಚರಣ 9.ದಿಗ್ಗಜ 10.ಮಾನ 11.ಯವನ 13.ನರ 15.ವನ 17.ಹಜಾರ 19.ಕಂಸ 20.ರಮಣ 21.ವಿನೋದ 22.ಲಂಬ 23.ವಂಚಕ 24.ಮೂಸೆ 25.ಲಿಖಿತ 26.ರಸಾಲ.

ಮೇಲಿನಿಂದ ಕೆಳಕ್ಕೆ: 1.ಪ್ರವಚನ 2.ಪರಿಣಯ 3.ತಂಪುದಿನ 4.ರಸಾಂಜನ 10.ಮಾಧವ 12.ವನಜಾ 14.ರಭಸ 16.ನರಬಲಿ 17.ಹಣವಂತ 18.ರವಿಕರ 19.ಕಂದಮೂಲ.

ಅ.ನಾ. ಪ್ರಹ್ಲಾದರಾವ್

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ.
ದೂ: 9513747474

ತುಲಾ, ಮಕರ- ಈ ರಾಶಿಯವರಿಗೆ ಪಂಚ ಗ್ರಹ ಮಹಾಯೋಗ

ಮೇಷ
ಆರೋಗ್ಯದಲ್ಲಾಗುವ ಬದಲಾವಣೆಗೆ ಆಹಾರವೇ ಮುಖ್ಯ ಕಾರಣ. ಕೆಲಸಕ್ಕೆ ಸೋಮಾರಿತನ ಅಥವಾ ಸಮಯದ ಅಭಾವದಂತಹ ಸಮಸ್ಯೆ ಎದುರಾಗುತ್ತದೆ. ಮನೆಯ ಜವಾಬ್ದಾರಿಗಳ ಕಡೆ ಗಮನವಿರಲಿ.
ಶುಭ ಸಂಖ್ಯೆ : 4, **ಅದೃಷ್ಟ ಬಣ್ಣ:** ಪಾಚಿ ಹಸಿರು
(**ನಾಮಾಕ್ಷರ:** ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ
ಹೊಸ ಅವಕಾಶಗಳಿಗೆ ಸರಿಯಾದ ಹಾದಿ ಇದೆ. ಒಂದೆಡೆ ಹಣದ ಉಳಿತಾಯಕ್ಕೆ ಯತ್ನಿಸುತ್ತಿದ್ದರೆ, ಮತ್ತೊಂದೆಡೆ ಖರ್ಚು ಹೆಚ್ಚಲಿದೆ. ಮಾತುಗಳ ಮೇಲೆ ಹಿಡಿತವಿರಲಿ.
ಶುಭ ಸಂಖ್ಯೆ : 8 **ಅದೃಷ್ಟ ಬಣ್ಣ:** ಖಾಕಿ
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ
ಗುರಿ ಸಾಧನೆಯತ್ತ ಆಸಕ್ತಿಯಿಂದ ಮುನ್ನಡೆಯುವಿರಿ. ಕೆಲಸ-ಕಾರ್ಯಗಳಿಗೆ ಅಡ್ಡಿ ಇರುವುದಿಲ್ಲ. ಹಿರಿಯರ ಆರೋಗ್ಯಕ್ಕಾಗಿ ಹಣ ವ್ಯಯ ಉಂಟಾಗಬಹುದು.
ಶುಭ ಸಂಖ್ಯೆ : 2, **ಅದೃಷ್ಟ ಬಣ್ಣ:** ನೀಲಿ
(ಕ, ಕಿ, ಕು, ಘ, ಙ, ಛ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರ, ಪುನರ್ವಸು 1, 2, 3

ಕಟಕ
ವೈದ್ಯರ ಸಲಹೆಯಂತೆ ಧ್ಯಾನ ಮತ್ತು ಯೋಗದ ಅಭ್ಯಾಸ ಮಾಡಿಕೊಳ್ಳಿ. ಸೌಜನ್ಯವು ಹುದ್ದೆಗೆ ಮೆರುಗು ತರುವುದು. ಕೃಷಿ ಕಾರ್ಯಗಳಿಂದ ಆದಾಯವಿರುವುದು. ಸಿನಿಮಾ ರಂಗದವರಿಗೆ ಅವಕಾಶ ಲಭಿಸುತ್ತದೆ.
ಶುಭ ಸಂಖ್ಯೆ : 9, **ಅದೃಷ್ಟ ಬಣ್ಣ:** ಕೆಂಪು
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ
ಪ್ರಸ್ತುತ ಕೆಲಸದಲ್ಲಿ ಮುಂದುವರಿಯುವುದು ಒಳ್ಳೆಯದು. ಧನ ಮತ್ತು ಗೌರವಗಳೆರಡೂ ಸಂಪಾದನೆಯಾಗಲಿವೆ. ಏಳಿಗೆಯು ಹತ್ತಾರು ಶತ್ರುಗಳನ್ನು ಹುಟ್ಟುಹಾಕಲಿದೆ.
ಶುಭ ಸಂಖ್ಯೆ : 7, **ಅದೃಷ್ಟ ಬಣ್ಣ:** ಹಳದಿ
(ಮ, ಮಿ, ಮು, ಮೊ, ಮೆ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ
ಸೃಜನಶೀಲತೆಯಿಂದ ಕಾರ್ಯನಿರ್ವಹಿಸಿ ಹೆಸರು ಗಳಿಸುವಿರಿ. ಅಭಿವೃದ್ಧಿಗೆ ಸ್ನೇಹಿತರ ಬಳಗವು ಕಾರಣವಾಗುತ್ತದೆ. ರಾಜಕೀಯ ವ್ಯಕ್ತಿಗಳಿಗೆ ಬಿರುಸಿನ ಓಡಾಟ ಅನಿವಾರ್ಯವಾಗುವುದು.
ಶುಭ ಸಂಖ್ಯೆ : 1, **ಅದೃಷ್ಟ ಬಣ್ಣ:** ಕಪ್ಪು
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ
ಧ್ಯಾನ ಮತ್ತು ಯೋಗದ ಕಡೆಗೆ ಗಮನ ಹರಿಸಿ. ಆರೋಗ್ಯದ ಲವಲವಿಕೆಗೆ ಬಹಳ ಸಹಾಯವಾಗಲಿದೆ. ಹೆಂಡತಿಗೆ ಹೊಸ ಉದ್ಯೋಗ ದೊರೆತು ಸಂತೋಷವಾಗುವುದು. ಅವಿವಾಹಿತರಿಗೆ ವಿವಾಹ ಯೋಗ ಇದೆ.
ಶುಭ ಸಂಖ್ಯೆ : 3, **ಅದೃಷ್ಟ ಬಣ್ಣ:** ಹಸಿರು
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ
ಸಂಸ್ಥೆಯ ಜವಾಬ್ದಾರಿ ನೋಡುವಂಥ ಸಿಬ್ಬಂದಿಗೆ ಕೆಲಸದಲ್ಲಿ ಸ್ವಲ್ಪ ಬಿಡುವು ಸಿಗಲಿದೆ. ಮನೆಯಲ್ಲಿ ಮತ್ತು ವೃತ್ತಿಪರ ಕೆಲಸದಲ್ಲಿ ನಿರ್ಧಾರವನ್ನು ಎಲ್ಲರ ಮನ ಮುಟ್ಟುವಂತೆ ಸ್ಪಷ್ಟ ಮಾತುಗಳಲ್ಲಿ ತಿಳಿಯಪಡಿಸಿ.
ಶುಭ ಸಂಖ್ಯೆ : 5, **ಅದೃಷ್ಟ ಬಣ್ಣ:** ಆಕಾಶ ನೀಲಿ
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು
ಕುಟುಂಬ ಅಭಿವೃದ್ಧಿಗೆ ಉತ್ತಮ ಯೋಚನೆಗಳು ಬರಲಿವೆ. ಸ್ನೇಹಿತರ ಒಡನಾಟದಿಂದ ಭವಿಷ್ಯ ಹಾಳಾಗುತ್ತಿರುವುದರ ಅರಿವಾಗುವುದು. ಧಾರ್ಮಿಕ ವಿಚಾರಗಳಲ್ಲಿ ಶ್ರದ್ಧೆ ಮೂಡಲಿದೆ.
ಶುಭ ಸಂಖ್ಯೆ 2, **ಅದೃಷ್ಟ ಬಣ್ಣ:** ಕೇಸರಿ
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ಮಕರ
ಕೆಲಸವೊಂದನ್ನು ನಿಮ್ಮ ಸ್ನೇಹಿತರೊಬ್ಬರು ನಿಮಗೊಪ್ಪಿಸಲಿದ್ದಾರೆ, ಒಪ್ಪಿಕೊಳ್ಳಿ, ಸಾಕಷ್ಟು ಆದಾಯ ಮತ್ತು ಹೆಸರನ್ನು ತರಲಿದೆ. ಎಂಜಿನಿಯರಿಂಗ್ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ವಿಶೇಷ ಸಾಧನೆ ತೋರಲಿದ್ದಾರೆ.
ಶುಭ ಸಂಖ್ಯೆ : 6, **ಅದೃಷ್ಟ ಬಣ್ಣ:** ಗುಲಾಬಿ
(ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ
ಗ್ರಹ ಸ್ಥಿತಿಯು ತಂದೆ-ಮಕ್ಕಳಲ್ಲಿ ಅನ್ಯೋನ್ಯತೆ ಕಡಿಮೆ ಮಾಡುವ ಲಕ್ಷಣ ಹೊಂದಿರುವುದರಿಂದ ಜಾಗ್ರತರಾಗಿರಿ. ಮನೆಯಲ್ಲಿ ಆಕರ್ಷಣೆಗೋಸ್ಕರ ದುಂದು ವೆಚ್ಚ ಮಾಡುವುದು ಸರಿಯಲ್ಲ.
ಶುಭ ಸಂಖ್ಯೆ : 4, **ಅದೃಷ್ಟ ಬಣ್ಣ:** ಬಿಳಿ
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ
ಛಾಯಾಗ್ರಾಹಕರಿಗೆ ಸಮಾರಂಭವೊಂದರಲ್ಲಿ ಪಾಲ್ಗೊಳ್ಳುವ ಅವಕಾಶ ಲಭಿಸುವುದು. ಪೋಷಕರಲ್ಲಿ ವೈವಾಹಿಕ ವಿಷಯಗಳ ಬಗ್ಗೆ ಮಾತುಕತೆ ನಡೆಸಿ ತೀರ್ಮಾನಕ್ಕೆ ಬನ್ನಿ. ಶುಭಕ್ಕಾಗಿ ಮಹಾಗಣಪತಿಯನ್ನು ಆರಾಧಿಸಿ.
ಶುಭ ಸಂಖ್ಯೆ 7, **ಅದೃಷ್ಟ ಬಣ್ಣ:** ಕಿತ್ತಳೆ
(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ಇರಾನ್ ಮೇಲಿನ ದಾಳಿ ಕೈ ಬಿಟ್ಟ ಟ್ರಂಪ್

ದಾಳಿ ನಡೆಸುವುದಾಗಿ ಹೇಳಿದ ಕೆಲವೇ ಗಂಟೆಗಳಲ್ಲಿ ಉಲ್ಟಾ | ಶಾಂತಿ ಮಂತ್ರ ಪಠಣೆ

ವಾಷಿಂಗ್ಟನ್: ಶಾಂತಿ ಒಪ್ಪಂದಕ್ಕೆ ನಿರಾಸಕ್ತಿ ತೋರಿಸುತ್ತಿರುವ ಇರಾನ್ ವಿರುದ್ಧ ಬೃಹತ್ ದಾಳಿ ನಡೆಸುವುದಾಗಿ ಘೋಷಿಸಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೆಲವೇ ಗಂಟೆಗಳಲ್ಲಿ ಉಲ್ಟಾ ಹೊಡೆದಿದ್ದಾರೆ.

''ಅಪಾಚೆ ಹೆಲಿಕಾಪ್ಟರ್ ಧ್ವಂಸ, ಶಾಂತಿ ಒಪ್ಪಂದಕ್ಕೆ ಮುಂದಾಗದ ಇರಾನ್ ವಿರುದ್ಧ (ಭಾರತೀಯ ಕಾಲಮಾನ ಪ್ರಕಾರ ಶುಕ್ರವಾರ ಬೆಳಗ್ಗೆ) ಬೃಹತ್ ದಾಳಿ ನಡೆಸಲಾಗುವುದು. ವೆನಿಜುವೆಲಾ ಮಾದರಿಯಲ್ಲಿ ಇರಾನ್ ತೈಲಾಗಾರಗಳು, ತೈಲ ನಿಕ್ಷೇಪಗಳನ್ನು ವಶಪಡಿಸಿಕೊಳ್ಳಲಾಗುವುದು,'' ಎಂದು ಟ್ರಂಪ್ ಗುಡುಗಿದ್ದರು. ಸಾಮಾಜಿಕ ಜಾಲತಾಣ ಟ್ರುತ್‌ನಲ್ಲಿ ಗುರುವಾರ ಪೋಸ್ಟ್ ಮಾಡಿರುವ ಟ್ರಂಪ್, ''ಅಮೆರಿಕ ರಕ್ಷಣಾ ಪಡೆಗಳು ಇರಾನ್ ಮೇಲೆ ಬಲವಾದ ಪ್ರಹಾರ ನಡೆಸಲಿವೆ. ನೌಕಾಪಡೆ, ವಾಯುಪಡೆ, ರಡಾರ್ ವ್ಯವಸ್ಥೆ, ವಾಯು ರಕ್ಷಣಾ ವ್ಯವಸ್ಥೆ ಸೇರಿದಂತೆ ಇಡೀ ಇರಾನಿಯನ್ ರಕ್ಷಣಾ ವ್ಯವಸ್ಥೆಯನ್ನು ಧ್ವಂಸಗೊಳಿಸಲಿವೆ. ಇರಾನ್ ಪೂರ್ಣ ನಾಮಾವಶೇಷವಾಗಲಿದೆ,'' ಎಂದು ಹೇಳಿದ್ದಾರೆ. ''ಇರಾನ್ ಮೇಲೆ ಪೂರ್ಣ ಹಿಡಿತ ಸಾಧಿಸುವ ಸನಿಹದಲ್ಲಿದ್ದೇವೆ. ಖಾರ್ಗ್ ದ್ವೀಪ ಸೇರಿದಂತೆ ತೈಲ ಮೂಲಸೌಲಭ್ಯ ವ್ಯವಸ್ಥೆ ಸೇರಿ ತೈಲ ಹಾಗೂ ಅನಿಲ ಮಾರುಕಟ್ಟೆಯನ್ನು ಸಂಪೂರ್ಣವಾಗಿ ವಶಕ್ಕೆ ತೆಗೆದುಕೊಳ್ಳುತ್ತೇವೆ. ವೆನಿಜುವೆಲಾ ಮಾದರಿಯಲ್ಲೇ ಪೂರ್ಣ ನಿಯಂತ್ರಣ ಸಾಧಿಸುತ್ತೇವೆ,'' ಎಂದು ಟ್ರಂಪ್ ಹೇಳಿಕೊಂಡಿದ್ದರು.

ಯುದ್ಧವಿಲ್ಲ, ಶಾಂತಿ ಎಂದು ಯೂ ಟರ್ನ್

ಇರಾನ್ ವಿರುದ್ಧ ಸೇನಾ ಕಾರ್ಯಾಚರಣೆ ವಿಚಾರದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೆ ಉಲ್ಟಾ ಹೊಡೆದಿದ್ದಾರೆ. ರಾತ್ರಿಯೇ ಇರಾನ್ ಮೇಲೆ ದಾಳಿ ನಡೆಸುವುದಾಗಿ ಘೋಷಣೆ ಮಾಡಿದ ಮೂರು ಗಂಟೆಗಳಲ್ಲಿ ಯೂ ಟರ್ನ್ ತೆಗೆದುಕೊಂಡಿರುವ ಟ್ರಂಪ್, ''ಸಂಧಾನ ಮಾತುಕತೆಯಲ್ಲಿ ಪ್ರಗತಿ ಕಂಡು ಬಂದಿದೆ. ಇರಾನಿಯನ್ ಉನ್ನತ ನಿಯೋಗದ ಜತೆಗಿನ ಮಾತುಕತೆ ನಿರ್ಣಾಯಕ ಹಂತಕ್ಕೆ ಬಂದಿದೆ. ಮೂರು ತಿಂಗಳ ಸಂಘರ್ಷ ಕೊನೆಗೊಳ್ಳುವ ಲಕ್ಷಣಗಳಿವೆ. ಸಂಧಾನ ಒಪ್ಪಂದ ವಿಚಾರದ ಸುಗಮ ಹಿನ್ನೆಲೆಯಲ್ಲಿ ಉದ್ದೇಶಿತ ದಾಳಿಯನ್ನು ರದ್ದುಗೊಳಿಸಲಾಗಿದೆ,'' ಎಂದು ಹೇಳಿದ್ದಾರೆ. ಈ ಹಿಂದೆಯೂ ಎರಡು ಬಾರಿ ದಾಳಿ ನಡೆಸುವುದಾಗಿ ಹೇಳಿದ ಕೆಲವೇ ಗಂಟೆಗಳಲ್ಲಿ ಉಲ್ಟಾ ಹೊಡೆದಿದ್ದ ಟ್ರಂಪ್, ಕದನ ವಿರಾಮ ಒಪ್ಪಂದ ಜಾರಿಗೊಳಿಸಿದ್ದರು.

ಮುರಿದು ಬಿದ್ದ ಕದನ ವಿರಾಮ?

ಅಪಾಚೆ ಹೆಲಿಕಾಪ್ಟರ್ ಪತನದ ಬಳಿಕ ಇರಾನ್-ಅಮೆರಿಕ ನಡುವೆ ಮತ್ತೆ ಸಂಘರ್ಷ ಭುಗಿಲೆದ್ದಿದೆ. ಇರಾನ್‌ನ ಬಂದರು, ನಾಗರಿಕ ಮೂಲಸೌಲಭ್ಯ ಕೇಂದ್ರಗಳು, ಮಿಲಿಟರಿ ತಾಣಗಳ ಮೇಲೆ ಅಮೆರಿಕ ಪಡೆಗಳು ವೈಮಾನಿಕ ದಾಳಿ ನಡೆಸಿವೆ. ಪ್ರತೀಕಾರವಾಗಿ ಕುವೈತ್, ಬಹರೇನ್, ಜೋರ್ಡಾನ್‌ನಲ್ಲಿರುವ ಅಮೆರಿಕ ವಾಯು ಹಾಗೂ ನೌಕಾ ನೆಲೆಗಳ ಮೇಲೆ ಇರಾನ್ ದಾಳಿ ನಡೆಸಿದೆ. ಸ್ವಯಂ ರಕ್ಷಣೆ ಹೆಸರಿನಲ್ಲಿ ಇರಾನ್ ರಾಜಧಾನಿ ಟೆಹರಾನ್, ಬಂದರು ನಗರ ಬಂದರ್ ಅಬ್ಬಾಸ್, ಕರಾವಳಿ ತೀರದ ಕೆಶ್ಮ್ ದ್ವೀಪ, ಕಿಶ್, ಮಿನಾಬ್, ಇಸ್ಫಹಾನ್ ಪ್ರಾಂತ್ಯಗಳ ಮೇಲೆ ಅಮೆರಿಕದ ಸೆಂಟ್ರಲ್ ಕಮಾಂಡ್ ಮೇಲೆ ಪ್ರಬಲ ವೈಮಾನಿಕ ದಾಳಿ ನಡೆಸಿದೆ. ಪ್ರತಿಯಾಗಿ ಬಹರೇನ್, ಕುವೈತ್‌ನಲ್ಲಿರುವ ಅಮೆರಿಕ ಮಿಲಿಟರಿ ನೆಲೆಗಳು, ನೌಕಾ ನೆಲೆಗಳು, ಶೇಖ್ ಇಸಾ ವಾಯು ನೆಲೆ ಸೇರಿ 18 ಸ್ಥಳಗಳ ಮೇಲೆ ದಾಳಿ ನಡೆಸಿರುವುದಾಗಿ ಇರಾನಿಯನ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಹೇಳಿಕೊಂಡಿದೆ.

ಮೂರು ದಿನಗಳಲ್ಲಿ ಮೂರು ದಾಳಿ

ಈ ನಡುವೆ ಕಳೆದ ಮೂರು ದಿನಗಳಿಂದ ಸಂಘರ್ಷ ಪೀಡಿತ ಹರ್ಮುಜ್ ಜಲಸಂಧಿ ಬಳಿ ಭಾರತದ ಮೂರನೇ ಹಡಗಿನ ಮೇಲೆ ದಾಳಿ ನಡೆದಿದೆ. ಗುರುವಾರ ಒಮನ್ ಕರಾವಳಿ ತೀರದಲ್ಲಿ 20 ಸಿಬ್ಬಂದಿಯನ್ನು ಹೊಂದಿದ್ದ ಎಂಟಿ ಜಲವೀರ್ ಹಡಗು ಅಮೆರಿಕ ದಾಳಿಗೆ ತುತ್ತಾಗಿದೆ.

ನೌಕಾ ದಿಗ್ಬಂಧನ ಉಲ್ಲಂಘಿಸಿದ ಹಿನ್ನೆಲೆಯಲ್ಲಿ ದಾಳಿ ಮಾಡಲಾಗಿದೆ. ಒಮನ್ ಕರಾವಳಿ ಮೂಲಕ ಇರಾನ್ ತೈಲ ಸಾಗಿಸಲೆತ್ನಿಸಿದ ಹಡಗಿನ ಮೇಲೆ ದಾಳಿ ನಡೆಸಲಾಗಿದೆ ಎಂದು ಅಮೆರಿಕ ಹೇಳಿಕೊಂಡಿದೆ. ಸೋಮವಾರ ಎಂಟಿ ಮ್ಯಾರಿವಾಕ್ಸ್ ಹಡಗು ದಾಳಿಗೆ ತುತ್ತಾಗಿದ್ದರೆ, ಮೂವರು ನಾವಿಕರ ಸಾವಿಗೆ ಕಾರಣವಾದ ಎಂಟಿ ಸೆಟ್ಟೆಬೆಲ್ಲೋ ಹಡಗಿನ ಮೇಲೆ ಮಂಗಳವಾರ ದಾಳಿ ನಡೆದಿತ್ತು.

ದಾಳಿ ಖಂಡಿಸಿದ ಭಾರತ: ವಾಣಿಜ್ಯ ಹಡಗುಗಳ ಮೇಲಿನ ದಾಳಿ ಖಂಡಿಸಿದ ಭಾರತ, ಹೊಸದಿಲ್ಲಿಯ ಅಮೆರಿಕ ರಾಯಭಾರ ಕಚೇರಿಯಲ್ಲಿ ಪ್ರತಿಭಟನೆ ದಾಖಲಿಸಿದೆ.

ಸಾಗರ ಮಾರ್ಗದಲ್ಲಿ ಭದ್ರತೆ ಹೆಚ್ಚಿಸುವಂತೆ ವಿಶ್ವಸಂಸ್ಥೆಯಲ್ಲಿ ಅಹವಾಲು ಮಂಡಿಸಿದೆ.

''ಪಶ್ಚಿಮ ಏಷ್ಯಾ ಬಿಕ್ಕಟ್ಟಿಗೆ ರಾಜತಾಂತ್ರಿಕ ಪರಿಹಾರ ಕಂಡುಕೊಳ್ಳಬೇಕು. ಅಂತಾರಾಷ್ಟ್ರೀಯ ಜಲಮಾರ್ಗದಲ್ಲಿ ಹಡಗುಗಳ ಮೇಲೆ ಪದೇಪದೆ ನಡೆಯುತ್ತಿರುವ ದಾಳಿ ಕಳವಳಕಾರಿಯಾಗಿದೆ. ಕೂಡಲೇ ವಾಣಿಜ್ಯ ಹಡಗುಗಳ ಮೇಲಿನ ದಾಳಿ ಕೊನೆಗೊಳಿಸಬೇಕು,'' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಆಗ್ರಹಿಸಿದೆ.

ಈ ನಡುವೆ ಸಮುದ್ರ ಮಾರ್ಗದಲ್ಲಿ ಹಡಗುಗಳ ಮೇಲಿನ ದಾಳಿ ತಡೆಯಲು ಭದ್ರತೆ ಹೆಚ್ಚಿಸಬೇಕು ಎಂದು ವಿಶ್ವಸಂಸ್ಥೆಯಲ್ಲಿ ಭಾರತ ಬಲವಾಗಿ ಪ್ರತಿಪಾದಿಸಿದೆ. ಭದ್ರತಾ ಮಂಡಳಿಯಲ್ಲಿ ''ಅಂತಾರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಕಾಪಾಡುವಿಕೆ'' ಕುರಿತ ಚರ್ಚೆಯಲ್ಲಿ ಮಾತನಾಡಿದ ವಿಶ್ವಸಂಸ್ಥೆಯ ಭಾರತದ ಕಾಯಂ ಪ್ರತಿನಿಧಿ ಪರ್ವತನೇನಿ ಹರೀಶ್, ''ವ್ಯಾಪಾರ ಹಡಗುಗಳು ಹಾಗೂ ಸಮುದ್ರ ಸಂಚಾರ ಮಾರ್ಗಗಳ ಮೇಲಿನ ದಾಳಿಯನ್ನು ಭಾರತ ಖಂಡಿಸುತ್ತದೆ. ದಾಳಿಯ ಪರಿಣಾಮ ಹಲವು ಭಾರತೀಯರು ಮೃತಪಟ್ಟಿದ್ದಾರೆ,'' ಎಂದು ಮಾಹಿತಿ ಹಂಚಿಕೊಂಡರು.

ಪಾಕಿಸ್ತಾನ ಸೇನೆಯಿಂದ ಮತ್ತೊಂದು ಹತ್ಯಾಕಾಂಡ

- ಮೃತರ ಸಂಖ್ಯೆ 53ಕ್ಕೆ ಏರಿಕೆ
- ಪಿಒಕೆಯಲ್ಲಿ ಪ್ರತಿಭಟನಾಕಾರರ ಮೇಲೆ ಗುಂಡಿನ ದಾಳಿ
- 16 ಮಂದಿ ನಾಗರಿಕರು ಬಲಿ, ಮೃತರ ಸಂಖ್ಯೆ 53ಕ್ಕೆ ಹೆಚ್ಚಳ
- ಪಾಕ್ ಸೇನೆ ವಿರುದ್ಧ ಭುಗಿಲೆದ್ದ ಜನರ ಆಕ್ರೋಶ
- ಅನೇಕ ಕಡೆ ಸ್ವಯಂಪ್ರೇರಿತವಾಗಿ ಮಾರುಕಟ್ಟೆ ಬಂದ್

ಇಸ್ಲಾಮಾಬಾದ್: ಪಾಕಿಸ್ತಾನ ಸೇನೆಯು ಪಾಕ್ ಆಕ್ರಮಿತ ಕಾಶ್ಮೀರದಲ್ಲಿ (ಪಿಒಕೆ) ರಾಜಕೀಯ ಹಕ್ಕುಗಳಿಗಾಗಿ ಹೋರಾಡುತ್ತಿದ್ದ ಪ್ರತಿಭಟನಾಕಾರರ ಹತ್ಯಾಕಾಂಡ ನಡೆಸಿದೆ. ರಾವಲ್‌ಕೋಟ್‌ನ ಈದ್ಗಾ ಮೈದಾನದಲ್ಲಿ ಜಮಾಯಿಸಿದ್ದ ಸಾವಿರಾರು ಜನ ಶಾಂತಿಯುತ ಹೋರಾಟ ನಡೆಸುತ್ತಿದ್ದರೂ, ಪ್ರತಿಭಟನಾಕಾರರ ಮೇಲೆ ಪಾಕ್ ಸೇನೆ ಯಾವುದೇ ಮುನ್ನೆಚ್ಚರಿಕೆ ನೀಡದೆ ಏಕಾಏಕಿ ಗುಂಡಿನ ಮಳೆಗರೆದಿದೆ. ಗುಂಡಿನ ದಾಳಿಯಲ್ಲಿ ಕನಿಷ್ಠ 16 ನಾಗರಿಕರು ಸ್ಥಳದಲ್ಲೇ ಮೃತಪಟ್ಟಿದ್ದು, 37ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಇದರೊಂದಿಗೆ ಕಳೆದ ಕೆಲವು ದಿನಗಳಿಂದ ಪಿಒಕೆಯಲ್ಲಿ ನಡೆಯುತ್ತಿರುವ ಈ ಹತ್ಯಾಕಾಂಡದಲ್ಲಿ ಬಲಿಯಾದ ನಾಗರಿಕರ ಒಟ್ಟು ಸಂಖ್ಯೆ 53ಕ್ಕೆ ಏರಿಕೆಯಾಗಿದೆ .

ರಾವಲ್‌ಕೋಟ್‌ನ ಈದ್ಗಾ ಮೈದಾನದಲ್ಲಿ 60 ರಿಂದ 70 ಸಾವಿರದಷ್ಟು ಜನರು ಒಟ್ಟಿಗೆ ಸೇರಿದ್ದರು. ಕೈಗೆಟುಕುವ ದರದಲ್ಲಿ ಹಿಟ್ಟು, ಅಕ್ಕಿ, ವಿದ್ಯುತ್ ಹಾಗೂ ಮೂಲಭೂತ ಹಕ್ಕುಗಳನ್ನು ನೀಡಬೇಕೆಂದು ಮಹಿಳೆಯರು, ಯುವಕರು ಮತ್ತು ವೃದ್ಧರು ಅಲ್ಲಿ ಶಾಂತಿಯುತವಾಗಿ ಧರಣಿ ನಡೆಸುತ್ತಿದ್ದರು. ಇದ್ದಕ್ಕಿದ್ದಂತೆ ನುಗ್ಗಿದ ಪಾಕಿಸ್ತಾನಿ ಸೇನಾ ಪಡೆಗಳು ಪ್ರತಿಭಟನಾಕಾರರ ಮೇಲೆ ಗುಂಡಿನ ಮಳೆ ಸುರಿಸಿವೆ. ಪ್ರಾಣಭಯದಿಂದ ಜನರು ದಿಕ್ಕಾಪಾಲಾಗಿ ಓಡಲಾರಂಭಿಸಿದರು. ಸದ್ಯ ರಾವಲಾಕೋಟ್‌ನ ರಸ್ತೆಗಳು, ಮೈದಾನಗಳು ರಕ್ತಸಿಕ್ತವಾಗಿದ್ದು, ಆಸ್ಪತ್ರೆಗಳು ಗಾಯಾಳುಗಳಿಂದ ತುಂಬಿಹೋಗಿವೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ನಾವು ಬೇಕೋ, ಸೋದರಳಿಯ ಬೇಕೋ?

ಮಮತಾಗೆ ಹಿರಿಯ ನಾಯಕರ ಸವಾಲು | ನಿಲ್ಲದ ಟಿಎಂಸಿ ಬಂಡಾಯ ಬೇಗುದಿ | ಮತ್ತೊಬ್ಬ ರಾಜ್ಯಸಭಾ ಸದಸ್ಯ ರಾಜೀನಾಮೆ

ಹೊಸದಿಲ್ಲಿ: ತೃಣಮೂಲ ಕಾಂಗ್ರೆಸ್ ಪಕ್ಷದ ಆಂತರಿಕ ಬೇಗುದಿ ಸದ್ಯಕ್ಕೆ ಬಗೆಹರಿಯುವಂತೆ ಕಾಣಿಸುತ್ತಿಲ್ಲ. ದಿನಕ್ಕೊಬ್ಬ ಸಂಸದರು ರಾಜೀನಾಮೆ ನೀಡಿ ಹೊರ ಹೋಗುತ್ತಿದ್ದು, ಪಕ್ಷ ಇಬ್ಭಾಗದ ಸನಿಹಕ್ಕೆ ಬಂದಿದೆ. ನಾವು ಬೇಕೋ ಅಥವಾ ಸೋದರಳಿಯ ಅಭಿಷೇಕ್ ಬೇಕೋ ಎಂಬುದನ್ನು ನೀವೇ ತೀರ್ಮಾನಿಸಿ ಎಂದು ಆಪ್ತರು ಮಮತಾ ಬ್ಯಾನರ್ಜಿಗೆ ಸವಾಲು ಹಾಕಿದ್ದಾರೆ.

ಹಲವರ ಬಂಡಾಯದ ನಡುವೆಯೂ ಮಮತಾ ಬ್ಯಾನರ್ಜಿ ಜತೆಯೇ ಗುರುತಿಸಿಕೊಂಡಿದ್ದ ಪರಮಾಪ್ತ ನಾಯಕ ಕಲ್ಯಾಣ್ ಬ್ಯಾನರ್ಜಿ ಸಹ ಗುರುವಾರ ಪಕ್ಷದ ನಾಯಕತ್ವದ ವಿರುದ್ಧ ತಿರುಗಿ ಬಿದ್ದಿದ್ದಾರೆ. ''ಪಕ್ಷದಲ್ಲಿ ತಲೆದೋರಿರುವ ಬಿಕ್ಕಟ್ಟಿಗೆ ಅಭಿಷೇಕ್ ಬ್ಯಾನರ್ಜಿ ಕಾರಣವಾಗಿದ್ದಾರೆ. ಅವರೇ ವಿಧಾನಸಭೆ ಚುನಾವಣೆಯಲ್ಲಿ ಟಿಎಂಸಿ ಸೋಲಿನ ರೂವಾರಿಯಾಗಿದ್ದಾರೆ. ಇಂತಹ ದುರಹಂಕಾರಿ ವ್ಯಕ್ತಿಯನ್ನು ಪಕ್ಷದಲ್ಲಿ ಇಟ್ಟುಕೊಂಡಲ್ಲಿ ನಿಷ್ಠಾವಂತ ನಾಯಕರು, ಕಾರ್ಯಕರ್ತರು ಪಕ್ಷದಲ್ಲಿ ಉಳಿಯುವುದಿಲ್ಲ. ನಿಮಗೆ ಅಭಿಷೇಕ್ ಬೇಕೋ, ಪಕ್ಷದ ನಿಷ್ಠಾವಂತರಾದ ನಾವು ಬೇಕೋ ಎಂಬುದನ್ನು ನೀವೇ ನಿರ್ಧರಿಸಿ,'' ಎಂದು ಕಲ್ಯಾಣ್ ಬ್ಯಾನರ್ಜಿ ಅವರಿಗೆ ಬಹಿರಂಗವಾಗಿಯೇ ಮಮತಾ ಬ್ಯಾನರ್ಜಿ ಅವರಿಗೆ ಆಯ್ಕೆಯ ಪ್ರಸ್ತಾಪ ಮುಂದಿಟ್ಟಿದ್ದಾರೆ.



''ಪಕ್ಷದಲ್ಲಿ ಬಂಡಾಯದ ಬೆಳವಣಿಗೆಗೆ ಅಭಿಷೇಕ್ ಬ್ಯಾನರ್ಜಿಯೇ ನೇರ ಕಾರಣ. ಹಲವು ವರ್ಷಗಳಿಂದ ಪಕ್ಷಕ್ಕೆ ದುಡಿದವರು ಅವಮಾನ ಸಹಿಸುವುದಿಲ್ಲ. ನೀವು ಅಭಿಷೇಕ್ ಬ್ಯಾನರ್ಜಿಯನ್ನು ಅವಲಂಬಿಸುವುದಾದರೆ ನಮ್ಮನ್ನು ಬಿಟ್ಟು ಬಿಡಿ. ನಿಮ್ಮ ಸೋದರ ಸಂಬಂಧಿಯನ್ನು ಬಿಟ್ಟು ಬರುವುದಾದರೆ ನಿಮ್ಮೊಂದಿಗೆ ನಾವು ನಿಲ್ಲುತ್ತೇವೆ,'' ಎಂದು ಕಲ್ಯಾಣ್ ಬ್ಯಾನರ್ಜಿ ಗುಡುಗಿದ್ದಾರೆ.

ಮೂರು ದಿನ ಮೂವರು ರಾಜೀನಾಮೆ: ಕಳೆದ ನಾಲ್ಕು ದಿನಗಳ ಅಂತರದಲ್ಲಿ ಟಿಎಂಸಿಯ ಮೂವರು ರಾಜ್ಯಸಭಾ ಸದಸ್ಯರು ರಾಜೀನಾಮೆ ನೀಡಿದ್ದಾರೆ. ಅಭಿಷೇಕ್ ಬ್ಯಾನರ್ಜಿಯ ಹಸ್ತಕ್ಷೇಪ, ಐ-ಪ್ಯಾಕ್ ಸಂಸ್ಥೆಯ ಭ್ರಷ್ಟಾಚಾರ ವಿಚಾರ ಪ್ರಸ್ತಾಪಿಸಿ ಪಕ್ಷದಿಂದ ದೂರವಾಗಿದ್ದಾರೆ. ಸುಖೇಂದ್ರ ಶೇಖರ್ ರಾಯ್, ಸುಶ್ಮಿತಾ ದೇವ್ ಬಳಿಕ ಮತ್ತೊಬ್ಬ ರಾಜ್ಯಸಭಾ ಸದಸ್ಯ ಪ್ರಕಾಶ್ ಚಿಕ್ ಬರಾಯಿಕ್ ಅವರು ಗುರುವಾರ ರಾಜೀನಾಮೆ ನೀಡಿದರು. ರಾಜ್ಯಸಭೆ ಸಭಾಪತಿ ಸಿ.ಪಿ.ರಾಧಾಕೃಷ್ಣನ್ ಭೇಟಿಯಾಗಿ ರಾಜೀನಾಮೆ ಪತ್ರ ಸಲ್ಲಿಸಿದರು. ರಾಜ್ಯಸಭೆಯಲ್ಲಿ ಟಿಎಂಸಿ ಸಂಸದರ ಸಂಖ್ಯೆ ಈಗ 13 ರಿಂದ 10ಕ್ಕೆ ಕುಸಿದಿದೆ.

ದೀದಿಯ ಕೈಬಿಡಲ್ಲ: ಶತ್ರುಘ್ನ ಸಿನ್ಹಾ

''ಕಷ್ಟದ ಸಮಯದಲ್ಲಿ ಕೈಹಿಡಿದು ಕಾಪಾಡಿದ ಮಮತಾ ಬ್ಯಾನರ್ಜಿ ಅವರಿಂದ ದೂರವಾಗುವ ಮಾತೇ ಇಲ್ಲ, ಇದು ನನ್ನ ಪಕ್ಷ ಹಾಗೂ ತತ್ವನಿಷ್ಠೆ,'' ಎಂದು ಟಿಎಂಸಿ ಸಂಸದ ಶತ್ರುಘ್ನ ಸಿನ್ಹಾ ಹೇಳಿದ್ದಾರೆ. ''ಕೆಲವು ಸಂಸದರು ಬಲವಂತ, ಆಮಿಷ, ಭಯದಿಂದ ಟಿಎಂಸಿ ತೊರೆದಿರಬಹುದು. ಆದರೆ, ನಾನು ಪಟನಾದಲ್ಲಿ ಸೋತಿದ್ದಾಗ ಸಂಕಷ್ಟದ ಸಮಯದಲ್ಲಿ ನನ್ನ ಜತೆ ನಿಂತಿದ್ದ ಮಮತಾ ಅವರನ್ನು ಕೈಬಿಡುವುದಿಲ್ಲ, ಬಂಡಾಯ ಗುಂಪಿನ ಜತೆ ಗುರುತಿಸಿಕೊಳ್ಳುವುದಿಲ್ಲ,'' ಎಂದು ಸಿನ್ಹಾ ಸ್ಪಷ್ಟಪಡಿಸಿದ್ದಾರೆ.

ಬಂಡಾಯದ ಕಿಡಿ: ಮಮತಾ ಬ್ಯಾನರ್ಜಿ ಸೋದರ ಸಂಬಂಧಿ ಅಭಿಷೇಕ್ ಬ್ಯಾನರ್ಜಿ ಪಕ್ಷದ ಮೇಲೆ ಹಿಡಿತ ಸಾಧಿಸಿದ ಬಳಿಕ ಬಂಡಾಯದ ಬಿರುಗಾಳಿ ಬೀಸಿದೆ. ಪಕ್ಷದಲ್ಲಿ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಸಂಸದರು, ಶಾಸಕರು ಬಂಡಾಯದ ಬಾವುಟ ಹಾರಿಸಿದ್ದಾರೆ. ವಿಧಾನಸಭೆ ಚುನಾವಣೆ ಫಲಿತಾಂಶದ ಬಳಿಕ ಆರಂಭವಾದ ಬಿಕ್ಕಟ್ಟು, ಬಂಡಾಯದ ಕಿಡಿಯಾಗಿ ಟಿಸಿಲೊಡೆಯಿತು. ವಿಧಾನಸಭೆ ಪ್ರತಿಪಕ್ಷ ನಾಯಕನ ಆಯ್ಕೆ ವಿಷಯವಾಗಿ ಮೊದಲು ಶಾಸಕರು ಬಂಡಾಯವೆದ್ದರು. ರಿತಬ್ರತಾ ಬ್ಯಾನರ್ಜಿ ನೇತೃತ್ವದಲ್ಲಿ ಒಗ್ಗೂಡಿದ 58 ಶಾಸಕರು, ತಮ್ಮದೇ ನೈಜ ಟಿಎಂಸಿ ಎಂದು ಘೋಷಿಸಿದರು. ಶಾಸಕರ ದಂಗೆ ಬಳಿಕ ಅಭಿಷೇಕ್ ಬ್ಯಾನರ್ಜಿ ವಿರುದ್ಧ ಸಂಸದರು ಬಂಡಾಯದ ಕಹಳೆ ಮೊಳಗಿಸಿದರು. ಲೋಕಸಭೆಯಲ್ಲಿ ಪ್ರತ್ಯೇಕ ಬಣ ರೂಪಿಸಿಕೊಂಡ 19 ಸಂಸದರು, ಎನ್‌ಡಿಎಗೆ ಬೆಂಬಲ ನೀಡುವುದಾಗಿ ಹೇಳಿದರು.

'ಕೈ' ಜತೆಗೆ ವಿಲೀನದ ಮಾತೇ ಇಲ್ಲ: ''ಟಿಎಂಸಿ ಹಾಗೂ ಕಾಂಗ್ರೆಸ್ ವಿಲೀನದ ಮಾತುಕತೆಯೇ ನಡೆದಿಲ್ಲ, ಅಂತಹ ಯಾವುದೇ ಪ್ರಸ್ತಾಪಗಳು ಚರ್ಚೆಗೆ ಬಂದಿಲ್ಲ,'' ಎಂದು ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಸ್ಪಷ್ಟಪಡಿಸಿದ್ದಾರೆ. ಹೊಸದಿಲ್ಲಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ವೇಣುಗೋಪಾಲ್, ''ಮಮತಾ ಬ್ಯಾನರ್ಜಿ ಹಾಗೂ ಅಭಿಷೇಕ್ ಬ್ಯಾನರ್ಜಿ ಇತ್ತೀಚೆಗೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ ರಾಜಕೀಯ ವಿದ್ಯಮಾನಗಳ ಕುರಿತು ಚರ್ಚಿಸಿದ್ದಾರೆ. ಐಎನ್‌ಡಿಐಎ ಮೈತ್ರಿಯನ್ನು ಬಲಪಡಿಸುವುದು, ಬಿಜೆಪಿಯ ರಾಜಕೀಯ ಪ್ರಾಬಲ್ಯ ತಡೆಯಲು ಒಗ್ಗೂಡಿ ಹೋರಾಟ ನಡೆಸುವ ಕುರಿತು ಮಾತುಕತೆ ನಡೆಸಿದ್ದಾರೆ. ಎರಡು ಪಕ್ಷಗಳ ವಿಲೀನದ ಮಾತು ಸತ್ಯಕ್ಕೆ ದೂರವಾದುದು,'' ಎಂದು ಹೇಳಿದರು.

ಇ-ಮೇಲ್‌ನಲ್ಲಿ ಅವಾಚ್ಯ ನಿಂದನೆ ಭಾರತೀಯ ವ್ಯಕ್ತಿ ವಿರುದ್ಧ ಕೇಸ್!

ಸಿಂಗಾಪುರ: ಸಾರ್ವಜನಿಕ ನೌಕರರು ಹಾಗೂ ಜನಪ್ರತಿನಿಧಿಗಳ ವಿರುದ್ಧ ಡಿಜಿಟಲ್ ಮೀಡಿಯಾದಲ್ಲಿ ಅವಾಚ್ಯ ಶಬ್ದಗಳನ್ನು ಬಳಸಿ ನಿಂದಿಸುವುದನ್ನು ಹಗುರವಾಗಿ ಪರಿಗಣಿಸಲಾಗುವುದಿಲ್ಲ ಎಂಬ ಖಡಕ್ ಸಂದೇಶವನ್ನು ಸಿಂಗಾಪುರ ನ್ಯಾಯಾಲಯ ನೀಡಿದೆ. ಸಂಸದರೊಬ್ಬರ ವಿರುದ್ಧ ಇ-ಮೇಲ್ ಮೂಲಕ ನಿಂದನಾತ್ಮಕ ಪದಗಳನ್ನು ಬಳಸಿ ಆರೋಪ ಮಾಡಿದ ಹಿನ್ನೆಲೆಯಲ್ಲಿ, 72 ವರ್ಷದ ಭಾರತೀಯ ಮೂಲದ ವ್ಯಕ್ತಿಯೊಬ್ಬರ ವಿರುದ್ಧ ಗುರುವಾರ ಅಲ್ಲಿನ ನ್ಯಾಯಾಲಯವು ಗಂಭೀರ ಪ್ರಕರಣ ದಾಖಲಿಸಿದೆ.

ಸಿಂಗಾಪುರ ಪೌರತ್ವ ಹೊಂದಿರುವ ಮಾಣಿಕಂ ಮನೋಹರ್ (72) ಎಂಬುವವರೇ ಈ ಪ್ರಕರಣದ ಆರೋಪಿ. ಇವರು ಅಲ್ಲಿನ 'ಮಾರ್ಸಿಲಿಂಗ್-ಯೂ ಟೀ ಟೌನ್ ಕೌನ್ಸಿಲ್'ಗೆ ಹತ್ತಾರು ಇ-ಮೇಲ್‌ಗಳನ್ನು ಕಳುಹಿಸಿದ್ದರು. ಈ ಇ-ಮೇಲ್‌ಗಳಲ್ಲಿ ಚೀನಾ ಮೂಲದ ಸಿಂಗಾಪುರ ಸಂಸದೆ ಹ್ಯಾನಿ ಸೋಹ್ ಅವರ ವಿರುದ್ಧ ಗಂಭೀರ ಸ್ವರೂಪದ ಅಕ್ರಮ ನಡವಳಿಕೆಯ ಆರೋಪಗಳನ್ನು ಮಾಡಲಾಗಿತ್ತು. ಅಷ್ಟೇ ಅಲ್ಲದೆ, ಅತ್ಯಂತ ಕೆಟ್ಟ ಪದಗಳನ್ನು ಬಳಸಿ ಅವರನ್ನು ವೈಯಕ್ತಿಕವಾಗಿ ನಿಂದಿಸಲಾಗಿತ್ತು ಎಂದು ತನಿಖಾ ವರದಿಗಳು ತಿಳಿಸಿವೆ. ಆರೋಪಿ ಮಾಣಿಕಂ ಮನೋಹರ್ ಕೇವಲ ಒಂದು ಬಾರಿ ಈ ತಪ್ಪು ಮಾಡಿಲ್ಲ, ಬದಲಿಗೆ, 2025ರ ಆಗಸ್ಟ್ 19ರಿಂದ ಅಕ್ಟೋಬರ್ 6ರ ನಡುವಿನ ಸುಮಾರು ಎರಡು ತಿಂಗಳ ಅವಧಿಯಲ್ಲಿ ಸರಣಿ ಇ-ಮೇಲ್‌ಗಳನ್ನು ಕಳುಹಿಸುವ ಮೂಲಕ ಸಂಸದೆಯನ್ನು ಗುರಿಯಾಗಿಸಿಕೊಂಡು ನಿಂದನೆ ಮುಂದುವರಿಸಿದ್ದರು.

ಡಿಜಿಟಲ್ ಬೈಗುಳಕ್ಕೆ ಸಿಂಗಾಪುರದಲ್ಲಿ ಬಿಗಿ ಪೆನಾಲ್ಟಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ
ಹಾಸನ ವಿಭಾಗ, ಬಿ.ಎಂ.ರಸ್ತೆ, ಹಾಸನ – 573201.

ಸಂ: ಕರಾಸ:ವಿಕ:ಹಾವಿ:ಸಂಚಾರ:ವಾಣಿಜ್ಯ:744:2026–27 ದಿನಾಂಕ: 04.06.2026

ಇ–ಟೆಂಡರ್ ಪ್ರಕಟಣೆ ಸಂಖ್ಯೆ: 03/2026–27

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಹಾಸನ ವಿಭಾಗ ವ್ಯಾಪ್ತಿಗೆ ಬರುವ ಹಾಸನ ಪ್ರಾದೇಶಿಕ ತರಬೇತಿ ಕೇಂದ್ರ ಇಲ್ಲಿ ಬರುವ ಶಿಬಿರಾರ್ಥಿಗಳಿಗೆ ಸಸ್ಯಹಾರ ತಿಂಡಿ ಮತ್ತು ಊಟವನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸಲು ಆಸಕ್ತದಾರರನ್ನು ಆಹ್ವಾನಿಸಿ ಉಲ್ಲೇಖಿತ ಪತ್ರದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಪ್ರಕಟಣೆ ಸಂಖ್ಯೆ: 03/2026–27 ರಲ್ಲಿ ಪ್ರಕಟಣೆ ಹೊರಡಿಸಿದ್ದು, ಟೆಂಡರ್ ಸಂಖ್ಯೆ: KSRTC/2026-27/SE3216 ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಆನ್‌ಲೈನ್ ಮೂಲಕ ದಿನಾಂಕ: 22.06.2026 ರಂದು 17.00 ಗಂಟೆಯೊಳಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ದಾಖಲಾತಿಗಳನ್ನು ಸಲ್ಲಿಸಲು ದಿನಾಂಕ: 23.06.2026 ರಂದು 17.00 ಗಂಟೆಯೊಳಗೆ ಕೊನೆಯ ದಿನಾಂಕವಾಗಿದ್ದು, ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: 24.06.2026 ರಂದು ಬೆಳಿಗ್ಗೆ 11.30 ಗಂಟೆಗೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: 25.06.2026 ರಂದು ಬೆಳಿಗ್ಗೆ 11.30 ಗಂಟೆಗೆ ನಿಗಧಿಯಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ ಕ.ರಾ.ರ.ಸಾ.ನಿಗಮ, ಹಾಸನ ವಿಭಾಗ, ಇಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಲು ಕೋರಲಾಗಿದೆ. ದೂರವಾಣಿ ಸಂಖ್ಯೆ: 7760990502, 7760990533, 9972293886.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ, ಹಾಸನ ವಿಭಾಗ, ಹಾಸನ

ವಾಸಾಸಂಇ/ವಾಪ್ರ/ಸ್ಪ್ಯಾನ್/1119/2026–27

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)

ಸಂ.: ಬೆವಿಕಂ/ಪ್ರವ್ಯ(ಆ&ಮಾ.ಸಂ)/ಬಿಸಿ–50/2524/2024–25 ದಿನಾಂಕ: 11.06.2026

ಅಧಿಸೂಚನೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ದಿನಾಂಕ: 14.10.2024 ರ ಉದ್ಯೋಗ ಪ್ರಕಟಣೆಗನುಗುಣವಾಗಿ ಬೆವಿಕಂನಲ್ಲಿ ಎಸ್.ಎಸ್.ಎಲ್.ಸಿ./ 10ನೇ ತರಗತಿಯಲ್ಲಿ ಗಳಿಸಿರುವ ಅಂಕಗಳ ಜ್ಯೇಷ್ಠತೆಯ ಆಧಾರದ ಮೇರೆಗೆ ಸಹನ ಶಕ್ತಿ ಪರೀಕ್ಷೆಯಲ್ಲಿ ಅರ್ಹತೆ ಹೊಂದಿ **ಕಿರಿಯ ಪವರ್‌ಮ್ಯಾನ್** (ಎನ್.ಕೆ.ಕೆ./ಕೆ.ಕೆ) ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಗಳನ್ನು ಕಟ್–ಆಫ್ (cut-off) ಅಂಕಗಳೊಂದಿಗೆ ಅಂತರ್ಜಾಲ **https://bescom.karnataka.gov.in** ನಲ್ಲಿ ಪ್ರಕಟಿಸಲಾಗಿದೆ.

ಸಹಿ/–
ಪ್ರಧಾನ ವ್ಯವಸ್ಥಾಪಕರು (ಆಡಳಿತ ಮತ್ತು ಮಾನವ ಸಂಪನ್ಮೂಲ)
ಕಂಪನಿ ಕಾರ್ಯಾಲಯ, ಬೆವಿಕಂ,
ಬೆಳಕು ಭವನ, ಬೆಂಗಳೂರು

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

ಕರ್ನಾಟಕ ಪ್ರದೇಶ ಕೃಷಿಕ ಸಮಾಜ
ನೃಪತುಂಗ ರಸ್ತೆ, ಬೆಂಗಳೂರು– 560001,
ದೂರವಾಣಿ: 080– 22105032, 22105877

ಸಂಖ್ಯೆ: ಕಪ್ರಕೃಸ/154/2026–27 ದಿನಾಂಕ: 11.06.2026

ಪ್ರಕಟಣೆ

ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ನೃಪತುಂಗ ರಸ್ತೆ, ಬೆಂಗಳೂರು–560001. ಈ ಸಂಸ್ಥೆಯ 5 ವರ್ಷಗಳಲ್ಲಿ ಉಳಿದ ಅವಧಿಗೆ ತಾಲ್ಲೂಕು ಕೃಷಿಕ ಸಮಾಜಗಳ ಆಡಳಿತ ಮಂಡಳಿ ರಚಿಸಲು ದಿನಾಂಕ: 11.07.2026 ರಂದು ಶನಿವಾರ ಬೆಳಗ್ಗೆ: 8:00 ರಿಂದ ಮಧ್ಯಾಹ್ನ: 3:00 ಗಂಟೆಯ ವರೆಗೆ ಮಂಗಳೂರು ತಾಲ್ಲೂಕು, ಉಡುಪಿ ತಾಲ್ಲೂಕು, ಕಾಪು ತಾಲ್ಲೂಕು, ಕಳಸ ತಾಲ್ಲೂಕು, ಕಾರವಾರ ತಾಲ್ಲೂಕು, ಜೋಯಿಡ ತಾಲ್ಲೂಕು, ಯರಗಟ್ಟಿ ತಾಲ್ಲೂಕು, ನಿಪ್ಪಾಣಿ ತಾಲ್ಲೂಕು, ಕಾಗವಾಡ ತಾಲ್ಲೂಕು ಕೃಷಿಕ ಸಮಾಜಗಳ ಚುನಾವಣೆಯನ್ನು ಆಯಾ ತಾಲ್ಲೂಕುಗಳ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯ ಆವರಣದಲ್ಲಿ ಏರ್ಪಡಿಸಲಾಗಿದೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಈಗಾಗಲೇ ರೂ.110.00 ಗಳನ್ನು ಪಾವತಿಸಿದ ಸದಸ್ಯರು ಹಾಗೂ ಪರಿಷ್ಕೃತ ಹಣ ರೂ. 555.00 ಗಳನ್ನು ಪಾವತಿಸಿ ಸದಸ್ಯತ್ವ ಪಡೆದಿರುವ ಸದಸ್ಯರು ಮತ ಚಲಾಯಿಸಲು ಮತ್ತು ಚುನಾವಣೆಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಕೃಷಿಕ ಸಮಾಜಕ್ಕೆ ಯಾವುದೇ ಹಣಕಾಸಿನ ಅಥವಾ ವಸ್ತುಗಳ ಬಾಕಿ ಇಲ್ಲದವರಾಗಿರಬೇಕು. ಚುನಾವಣೆಯ ದಿನಾಂಕಕ್ಕೆ 25 ದಿನಗಳ ಮುಂಚಿತವಾಗಿ ಅರ್ಹ ಮತದಾರರ ಪಟ್ಟಿಯನ್ನು ಆಯಾ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು.

ಸೂಚನೆ: ಚುನಾವಣೆಯಲ್ಲಿ ಭಾಗವಹಿಸುವವರು ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ವಿತರಿಸಿದ ಯಾವುದಾದರೂ ಒಂದು ಗುರುತಿನ ಚೀಟಿ ಅಥವಾ ಕೃಷಿಕ ಸಮಾಜದ ಸದಸ್ಯತ್ವದ ಗುರುತಿನ ಚೀಟಿಯನ್ನು ಹೊಂದಿರತಕ್ಕದ್ದು.

ಸಹಿ/– ಅಧಿಕಾರಿ ಕಾರ್ಯದರ್ಶಿ
ಸ್ಥಳ: ಬೆಂಗಳೂರು ಕರ್ನಾಟಕ ಪ್ರದೇಶ ಕೃಷಿಕ ಸಮಾಜ

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಕಬಿನಿ ಜಲಾಶಯ ವಿಭಾಗ, ಕಬಿನಿ ಕಾಲೋನಿ, ಹೆಚ್.ಡಿ.ಕೋಟೆ ತಾ||,
ಮೈಸೂರು ಜಿಲ್ಲೆ
Ph/ Fax: 08228-268378, e-mail: xekrdhdk@yahoo.com
ಸಂ: ಕಾ.ಇಂ/ಕ.ಜ.ವಿ/ಯೋ.ಶಾ/ ಟೆಂಡರ್ ಪ್ರ.ಸಂ.04/2026–27
ದಿನಾಂಕ: 08.06.2026

ಟೆಂಡರ್ ಪ್ರಕಟಣೆ ಸಂಖ್ಯೆ: 04/2026–27, ದಿನಾಂಕ: 08.06.2026
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕನಿಷ್ಠ ಮೊತ್ತ ರೂ.154.52 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.2081.73 ಲಕ್ಷದ ಒಟ್ಟು 02 ಕಾಮಗಾರಿಗಳನ್ನು ಅರ್ಹ ವರ್ಗದ ನೊಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗೆ ಅರ್ಜಿ ಸಲ್ಲಿಸಲು ಕಡೆಯ ದಿ: 09.07.2026 ಸಾ:5.00 ಗಂಟೆವರೆಗೆ ಮತ್ತು ತಾಂತ್ರಿಕ ಬಿಡ್ಡನ್ನು ದಿ: 10.07.2026ರ ಸಾ:5.00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು, ತಾಂತ್ರಿಕ ಬಿಡ್ಡು ಅನುಮೋದನೆಯಾದ ನಂತರ ತೆರೆಯಲಾಗುವುದು. ಟೆಂಡರ್ ವಿವರಗಳನ್ನು ಕರ್ನಾಟಕ ಸರ್ಕಾರದ ವೆಬ್‌ಸೈಟ್ https://kppp.karnataka.gov.in/kppp ನಿಂದ ದಿ: 08.06.2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕಬಿನಿ ಜಲಾಶಯ ವಿಭಾಗ, ಕಬಿನಿ ಕಾಲೋನಿ.
DIPR/DDMYS/292/KSMCA/202/2026-27

ನಗರಸಭಾ ಕಾರ್ಯಾಲಯ, ಮಂಡ್ಯ.
ಸಂಖ್ಯೆ:ನಸಮಂ/ಕಾಮಗಾರಿ ವಿಭಾಗ/ಟೆಂಡರ್–14/2026–27
ದಿನಾಂಕ:08.06.2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಗ್ರೀನ್ ಲಿಂಕ್ಸ್ ಯೋಜನೆ ಅಡಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು KTTP Act 1999 & 2000ರಂತೆ, ಲೋಕೋಪಯೋಗಿ ಇಲಾಖೆ ಮತ್ತು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪೋರ್ಟಲ್ ಮುಖಾಂತರ ಟೆಂಡರ್‌ನ್ನು KW–4ರ ದಾಸ್ತಾವೇಜು ಮೂಲಕ ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು https://kppp.karnataka.gov.in ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಕೊನೆಯ ದಿನಾಂಕ : 07.07.2026 ಅಪರಾಹ್ನ 4.30 ಗಂಟೆಯೊಳಗೆ ಸಲ್ಲಿಸುವುದು. ಟೆಂಡರ್ ಪ್ರಕಟಣೆ ವಿವರವನ್ನು ಕಛೇರಿಯ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ www.mandyacity.mrc.gov.in ನಲ್ಲಿ ಪಡೆಯಬಹುದು.

ಕ್ರ ಸಂ : 01. ಇಂಡೆಂಟ್ ಸಂಖ್ಯೆ : DMA/2025-26/RD/WORK_INDENT56556. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 640.80. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : 520.34. ಇ.ಎಂ.ಡಿ ಮೊತ್ತ : 7,81,000/–.

ಸಹಿ/–ಪೌರಾಯುಕ್ತರು, ನಗರಸಭೆ, ಮಂಡ್ಯ

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/197/2026–27

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೋಲಾರ ಜಿಲ್ಲೆ,
ಕೋಲಾರ. ಜಿಲ್ಲಾ ನಗರಾಭಿವೃದ್ಧಿ ಕೋಶ, ಕೋಲಾರ
E-mail: ka.kolar.dudc@gmail.com, phone & Fax no: 08152-243555

ಸಂಖ್ಯೆ:ಜಿನಕೋ/ತಾಂತ್ರಿಕ/ಸಿಆರ್/34/2026–27 ದಿನಾಂಕ: 08.06.2026

ಟೆಂಡರ್ ಪ್ರಕಟಣೆ (ಕರ್ನಾಟಕ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೋಲಾರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕತೆ ಅಧ್ಯಾದೇಶ 2000ರಂತೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ/06/ಪಿಸಿಎಲ್/2006, ಬೆಂಗಳೂರು ರಂತೆ ಕರ್ನಾಟಕ ಪ್ರಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಟೆಂಡರ್ ಸಲ್ಲಿಕೆಗಾಗಿ ಅಂತರ್ಜಾಲ **http//kppp.karnataka.gov.in** ಮೂಲಕ ಟೆಂಡರ್ ಸಲ್ಲಿಸುವುದು. ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಟೆಂಡರ್ ತಿದ್ದುಪಡಿಗಳನ್ನು ಕರ್ನಾಟಕ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರವೇ ಪ್ರಚುರಪಡಿಸಲಾಗುತ್ತದೆ. ಇಂಡೆಂಟ್ ನಂ: **DMA/2026-27/IND6208/CALL-2** Manufacturing, Supplying and Fixing of Dr. BR Ambedkar statue (Approximtely 3500 Kgs) 21 Feet 9 Inches Height x 7 Feet 6 inches width x6 feet side In Deputy Commissioner Office Kolar. ಟೆಂಡರ್ ಇಟ್ಟ ಮೊತ್ತ ರೂ. 98.00 ಲಕ್ಷ. ಕರ್ನಾಟಕ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಹಾಗೂ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಇತರೆ ಮಾಹಿತಿ ವೆಬ್‌ಸೈಟ್ ಮೂಲಕ ಪಡೆದುಕೊಳ್ಳುವುದು.

ಸಹಿ/– ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:108/ಕೆಎಸ್‌ಎಂಸಿಎ/2026–27

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1 /ವಿ.ಲೆ.ಶೀ /ಟೆಂಡರು /2026–27/
ದಿನಾಂಕ 09–06–2026

ಅಲ್ಪಾವಧಿ ಟೆಂಡರು ಪ್ರಕಟಣೆ(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2025–26 ನೇ ಸಾಲಿನ ಕೆ.ಕೆ.ಆರ್.ಡಿ.ಪಿ ಯೋಜನೆ ಮತ್ತು 2025–26 ನೇ ಸಾಲಿನ ಸಿ.ಐ.ಎಮ್.ಡಿ.ಪಿ ಯೋಜನೆ ಒಟ್ಟು 07 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಆಹ್ವಾನಿಸಿದೆ.

ಕಾಮಗಾರಿಗಳ ಇಂಡೆಂಟ್ ಸಂಖ್ಯೆ–
1.RDPR/2026-27/BD/WORK_INDENT27227
2.RDPR/2026-27/BD/WORK_INDENT27232
3.RDPR/2026-27/RD/WORK_INDENT27220
4.RDPR/2026-27/RD/WORK_INDENT27238
5.RDPR/2026-27/BD/WORK_INDENT27223
6.RDPR/2026-27/BD/WORK_INDENT26981
7.RDPR/2026-27/RD/WORK_INDENT26014/CALL-2

ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ **ದಿನಾಂಕ 09–06–2026** ರಿಂದ **ದಿನಾಂಕ 16–06–2026** ರಂದು **ಸಂಜೆ 5.15** ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 16–06–2026 ರ 17.15** ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ **ದಿನಾಂಕ: 17–06–2026 ರಂದು 17.30** ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/226

ಕರ್ನಾಟಕ ಸರಕಾರ
ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ
ಉಪ ವಿಭಾಗ ಆಸ್ಪತ್ರೆ, ಗಂಗಾವತಿ–583227 ಜಿ|| ಕೊಪ್ಪಳ
ದೂರವಾಣಿ :08533–230102 / 230103
e-mail: sdh.gangavathi@gmail.com

ಸಂಖ್ಯೆ:ಉವಿಆಗಂ/ಎಮ್‌ಸಿಹೆಚ್/ಪಥ್ಯಾಹಾರ/48/2026–27 ದಿನಾಂಕ:11/06/2026

ಅಲ್ಪಾವಧಿ ಇ ಪ್ರೋಕ್ಯೂರ್‌ಮೆಂಟ್ ಟೆಂಡರ್

ವಿಷಯ:– ಉಪ ವಿಭಾಗ ಆಸ್ಪತ್ರೆ ಗಂಗಾವತಿಗೆ ಪಥ್ಯಾಹಾರ ವಸ್ತುಗಳು ಪೂರೈಕೆಗಾಗಿ ಅಲ್ಪಾವಧಿ ಇ ಪ್ರೋಕ್ಯೂರ್‌ಮೆಂಟ್ ಟೆಂಡರ್ ಕರೆದಿರುವ ಬಗ್ಗೆ.
ಉಲ್ಲೇಖ:– ಮಾನ್ಯ ಜಿಲ್ಲಾಧಿಕಾರಿಗಳು ಕೊಪ್ಪಳ ಇವರ ಕಡತ ಅನುಮೋದನೆ **ದಿನಾಂಕ:–09/06/2026**

ಮೇಲ್ಕಾಣಿಸಿದ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಪ ವಿಭಾಗ ಆಸ್ಪತ್ರೆ ಗಂಗಾವತಿ ಕೊಪ್ಪಳ ಜಿಲ್ಲೆಯಲ್ಲಿ, 2026–27 ನೇ ಸಾಲಿಗಾಗಿ ಪಥ್ಯಾಹಾರ ವಸ್ತುಗಳು ಅಂದಾಜು ಮೊತ್ತ **ರೂ:–53,74,366.00** ಗಳ ಅಲ್ಪಾವಧಿ ಇ ಪ್ರೋಕ್ಯೂರ್‌ಮೆಂಟ್ ಟೆಂಡರ್ ಕರೆಯಲಾಗಿದೆ. ಟೆಂಡರ್ ಮಾಹಿತಿ ಈ ಕೆಳಗಿನಂತಿರುತ್ತದೆ.

ಕ್ರಸಂ	ವಿವರ	
1	ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ	12.06.2026
2	ಟೆಂಡರ್ ಬಗ್ಗೆ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ	16.06.2026 ರಂದು ಸಂಜೆ 4.00 ಗಂಟೆಯೊಳಗೆ
3	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ	22.06.2026 ರಂದು ಸಂಜೆ 04.30 ಗಂಟೆಯೊಳಗೆ
4	ಮಾದರಿ ಸಲ್ಲಿಸುವ ದಿನಾಂಕ	23.06.2026 ರಂದು ಕಚೇರಿ ಸಮಯದಲ್ಲಿ ಸಂಜೆ 4.30 ಒಳಗೆ
5	ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ	24.06.2026 ರಂದು ಸಂಜೆ 5.00 ಗಂಟೆ
6	https://kppp.karnataka.gov.in/	DHFWS/2026-27/IND 2422/CALL-2

ಹೆಚ್ಚಿನ ಮಾಹಿತಿಗಾಗಿ ಕಚೇರಿಯ ವೇಳೆಯಲ್ಲಿ ಈ ಕೆಳಕಂಡ ಅಧಿಕಾರಿಯವರನ್ನು ಸಂಪರ್ಕಿಸಬಹುದು.

ಸಹಿ/– ಮುಖ್ಯ ವೈದ್ಯಾಧಿಕಾರಿಗಳು
ಉಪ ವಿಭಾಗ ಆಸ್ಪತ್ರೆ
ಗಂಗಾವತಿ ಜಿ|| ಕೊಪ್ಪಳ.

ವಾ.ಸಾ.ಇ/ಕೊಪ್ಪಳ/155/ದೇಶಪಾಂಡೆಪಬ್ಲಿಸಿಟಿ/2026–27

ಕರ್ನಾಟಕ ಸರ್ಕಾರ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಹಾಸನ

ಐ.ಎಫ್.ಟಿ.ಸಂಖ್ಯೆ: 08/2026.27 ದಿನಾಂಕ: 10.06.2026

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ–3 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪೋರ್ಟಲ್ https://kppp.karnataka.gov.in ನಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ ರೂ.80.65 ಲಕ್ಷಗಳು ಮತ್ತು ಕನಿಷ್ಠ ಟೆಂಡರ್ ಮೊತ್ತ ರೂ.80.26 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 19–06–2026 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆಪಿಪಿ–ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/224/ಕೆಎಸ್‌ಎಂಸಿಎ/2026–27

ಕೆನಡಾಗೆ ಇಂದು ಬೋಸ್ನಿಯಾ ಸವಾಲು

ಟೊರಾಂಟೊ: ಫಿಫಾ ವಿಶ್ವಕಪ್ ಫುಟ್ಬಾಲ್ ಟೂರ್ನಿಯ 'ಬಿ' ಗುಂಪಿನ ಪಂದ್ಯದಲ್ಲಿ ಸಹ ಆತಿಥೇಯ ಕೆನಡಾ ಮತ್ತು ಬೋಸ್ನಿಯಾ/ಹರ್ಜೆಗೋವಿನಾ ತಂಡಗಳು ಶುಕ್ರವಾರ ಪೈಪೋಟಿ ನಡೆಸಲಿವೆ. ವಿಶ್ವಕಪ್ ಇತಿಹಾಸದಲ್ಲಿ ಉಭಯ ತಂಡಗಳು ಇದೇ ಮೊದಲ ಬಾರಿ ಎದುರಾಗುತ್ತಿವೆ.

ಈ ಕ್ಷಣಕ್ಕಾಗಿ ಜೆಸ್ಸೆ ಮಾರ್ಷ್ ತರಬೇತಿಯಲ್ಲಿ ಪಳಗಿರುವ ಕೆನಡಾ ತಂಡ ಕಳೆದ ಎರಡು ವರ್ಷಗಳಿಂದ ಶ್ರಮಿಸಿದೆ. ಆತಿಥ್ಯ ವಹಿಸಿರುವ ಕಾರಣ ಸ್ವಯಂಚಾಲಿತವಾಗಿ ಟೂರ್ನಿಗೆ ಅರ್ಹತೆ ಗಳಿಸಿರುವ ಕೆನಡಾ ಶುಭಾರಂಭ ಮಾಡುವ ನಿರೀಕ್ಷೆಯಲ್ಲಿದೆ.

4-2-3-1 ಮಾದರಿಯಲ್ಲಿ ಕಣಕ್ಕಿಳಿಯಲು ಸಜ್ಜಾಗಿರುವ ಕೆನಡಾ, ಬೋಸ್ನಿಯಾಗೆ ಸವಾಲೊಡ್ಡಲು ಎದುರು ನೋಡುತ್ತಿದೆ. 39 ಅಂತಾರಾಷ್ಟ್ರೀಯ ಗೋಲ್‌ಗಳನ್ನು ಗಳಿಸಿರುವ ಜೋನಾಥನ್ ಡೇವಿಡ್ ತಂಡದ ಅಪಾಯಕಾರಿ ಆಟಗಾರರಲ್ಲಿ ಒಬ್ಬರಾಗಿದ್ದಾರೆ. ಆದರೆ ಕೆನಡಾ ಕುರಿತು ಇರುವ ಕಳವಳಕಾರಿ ಅಂಶ ಎಂದರೆ ಗುಣಮಟ್ಟದ ಪ್ರದರ್ಶನದ ಬಗ್ಗೆ. ಹಿಂದಿನ ಆವೃತ್ತಿಯಲ್ಲಿ ನೀರಸ ಪ್ರದರ್ಶನ ನೀಡಿರುವ ಕೆನಡಾ ಈ ಬಾರಿ ಉತ್ತಮ ಪ್ರದರ್ಶನ ನೀಡಲು ಎದುರು ನೋಡುತ್ತಿದೆ.

ಮಾಜಿ ರಾಷ್ಟ್ರೀಯ ತಂಡದ ನಾಯಕ ಸೆರ್ಗೆಜ್ ಬರ್ಬರೆಜ್ ಅವರ ಗರಡಿಯಲ್ಲಿ ಪಳಗಿರುವ ಬೋಸ್ನಿಯಾ, ವಿಭಿನ್ನ ರೀತಿಯಲ್ಲಿ ಟೂರ್ನಿಗೆ ಸಜ್ಜಾಗಿದೆ. 4-2-3-1 ಮಾದರಿಯಲ್ಲೇ ಕಣಕ್ಕಿಳಿಯಲು ಸಜ್ಜಾಗಿರುವ ಬೋಸ್ನಿಯಾ ರಕ್ಷಣಾತ್ಮಕ ಆಟಕ್ಕೆ ಆದ್ಯತೆ ನೀಡುವ ನಿರೀಕ್ಷೆಯಿದೆ.

ಕೆನಡಾ ತಂಡದ ಸ್ಟಾರ್ ಆಟಗಾರ ಅಲ್ಫೋನ್ಸೊ ಡೇವಿಸ್ ಬೋಸ್ನಿಯಾ ಎದುರಿನ ಆರಂಭಿಕ ಪಂದ್ಯಕ್ಕೆ ಅಲಭ್ಯರಾಗುವ ಸಾಧ್ಯತೆ ಇದೆ. ಇದು ಕೆನಡಾ ತಂಡಕ್ಕೆ ದೊಡ್ಡ ಹಿನ್ನಡೆ ಎನಿಸಿದೆ. ಬೋಸ್ನಿಯಾ ಯಾವುದೇ ಗಾಯದ ಸಮಸ್ಯೆಯಿಲ್ಲದೆ ಕಣಕ್ಕಿಳಿಯುತ್ತಿದೆ.

ಅಮೆರಿಕ -ಪರಗ್ವೆ ಪಂದ್ಯದತ್ತ ಎಲ್ಲರ ಕಣ್ಣು

ಮೆಕ್ಸಿಕನ್ ಸಿಟಿ ಕ್ರೀಡಾಂಗಣದಲ್ಲಿ ಗುರುವಾರ ತಡರಾತ್ರಿ ನಡೆದ ಉದ್ಘಾಟನಾ ಸಮಾರಂಭದಲ್ಲಿ ಕಂಡು ಬಂದ ವರ್ಣರಂಜಿತ ಕ್ರೀಡಾಂಗಣದ ವಿಹಂಗಮ ನೋಟ.

ಅಮೆರಿಕದ ಮೇಲೆ ಎಲ್ಲರ ಕಣ್ಣು: ದಿನದ ಎರಡನೇ 'ಡಿ' ಗುಂಪಿನ ಪಂದ್ಯದಲ್ಲಿ ಆತಿಥೇಯ ಅಮೆರಿಕ ಮತ್ತು ಪರಗ್ವೆ ಪೈಪೋಟಿ ನಡೆಸಲಿದ್ದು, ಇದು ಹಾಲಿ ವಿಶ್ವಕಪ್‌ನ ಪ್ರಮುಖ ಪಂದ್ಯಗಳಲ್ಲಿ ಒಂದಾಗಿದೆ.

ಮನೆಯಂಗಳದಲ್ಲಿ ಎರಡನೇ ವಿಶ್ವಕಪ್ ವೀಕ್ಷಿಸುವ ಅತ್ಯುತ್ತಮ ಅವಕಾಶವನ್ನು ಹೊಂದಿರುವ ಅಮೆರಿಕ ಅಭಿಮಾನಿಗಳು ತಂಡದ ಶುಭಾರಂಭಕ್ಕೆ ಕಾತರಿಸುತ್ತಿದ್ದಾರೆ. ಉಭಯ ತಂಡಗಳು ಚಿರಪರಿಚಿತ ತಂಡಗಳಾಗಿವೆ.

2010ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದ ವಿಶ್ವಕಪ್ ನಂತರ ಪರಗ್ವೆ ಮೊದಲ ಸಲ ವಿಶ್ವಕಪ್‌ನಲ್ಲಿ ಪಾಲ್ಗೊಳ್ಳುತ್ತಿದೆ. ಫ್ರೀಸೆ, ಫ್ರೀಮ್ಯಾನ್, ರಾಬಿನ್ಸನ್, ರೀಮ್ ಅಮೆರಿಕ ತಂಡದ ಸ್ಟಾರ್ ಆಟಗಾರರಾಗಿದ್ದರೆ, ಗೋಮೆಜ್, ಅಲ್ಡೆರೇಟ್, ಅನೋನ್ಸೊ, ಕ್ಯುಬಾಸ್ ಪರಗ್ವೆ ತಂಡದ ಪ್ರಮುಖರಾಗಿದ್ದಾರೆ. ಉಭಯ ತಂಡಗಳು ವಿಶ್ವಕಪ್‌ನಲ್ಲಿ ಒಮ್ಮೆ ಮಾತ್ರ ಎದುರಾಗಿವೆ, 1930ರಲ್ಲಿ ಅಮೆರಿಕ 3-0 ಅಂತರದಲ್ಲಿ ಗೆದ್ದ ಇತಿಹಾಸ ಹೊಂದಿದೆ.

ಇಂದಿನ ಪಂದ್ಯಗಳು

ಕೆನಡಾ vs ಬೋಸ್ನಿಯಾ / ಹರ್ಜೆಗೋವಿನಾ
ಪಂದ್ಯ ಆರಂಭ: ರಾತ್ರಿ 12: 30
ಸ್ಥಳ: ಟೊರಾಂಟೊ

ಅಮೆರಿಕ vs ಪರಗ್ವೆ
ಪಂದ್ಯ ಆರಂಭ: ಬೆಳಗ್ಗೆ 6: 30
ಸ್ಥಳ: ಲಾಸ್ ಏಂಜಲೀಸ್

ನೇರ ಪ್ರಸಾರ: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್

ಉದ್ಘಾಟನಾ ಸಮಾರಂಭದಲ್ಲಿ ಶಕೀರಾ ಗಾಯನ.

ಡ್ರೋನ್ ಭೀತಿ: 250 ಮಿಲಿಯನ್ ವೆಚ್ಚ

ವಿಶ್ವಕಪ್ ಪಂದ್ಯಾವಳಿಯ ಆಯೋಜನೆಗೆ ಡ್ರೋನ್‌ಗಳಿಂದ ಎದುರಾಗಬಹುದಾದ ಆಪತ್ತು ಆತಂಕ ತಂದಿದೆ. ಆತಿಥೇಯ ಅಮೆರಿಕದ ಡ್ರೋನ್ ಭೀತಿಯನ್ನು ಯಶಸ್ವಿಯಾಗಿ ನಿಭಾಯಿಸಲು ಇಲ್ಲಿಯವರೆಗೂ ತರಬೇತಿ ಮತ್ತು ಭದ್ರತಾ ಸಿದ್ಧತೆಗಳಿಗಾಗಿ ಬರೋಬ್ಬರಿ 2,385 ಕೋಟಿ ರೂ.ಗಳನ್ನು (250 ದಶಲಕ್ಷ ಡಾಲರ್) ವ್ಯಯಿಸಿದೆ.

ಫಿಫಾ ವಿಶ್ವಕಪ್‌ನಲ್ಲಿ ಹೊಸ ನಿಯಮಗಳು

10 ಸೆಕೆಂಡ್ ಬದಲಿ ಆಟಗಾರ ನಿಯಮ

ಮೈದಾನದಿಂದ ಹೊರಹೋಗುವ ಬದಲಿ ಆಟಗಾರನು 10 ಸೆಕೆಂಡುಗಳ ಒಳಗೆ ನಿರ್ಗಮಿಸಬೇಕು. ಇಲ್ಲದಿದ್ದರೆ ಆ ತಂಡವು ಮುಂದಿನ ಒಂದು ನಿಮಿಷದವರೆಗೆ ಒಬ್ಬ ಆಟಗಾರನಿಲ್ಲದೆ ಆಡಬೇಕಾಗುತ್ತದೆ.

5 ಸೆಕೆಂಡ್ ರಿಸ್ಟಾರ್ಟ್ ಕ್ಲಾಕ್

ಥ್ರೋ-ಇನ್ ಮಾಡಲು 5 ಸೆಕೆಂಡುಗಳಿಗಿಂತ ಹೆಚ್ಚು ಸಮಯ ತೆಗೆದುಕೊಂಡರೆ ಬಾಲ್‌ನ ಸುಪರ್ದಿ ಎದುರಾಳಿ ತಂಡಕ್ಕೆ ಸಿಗುತ್ತದೆ; ಇದೇ ತಪ್ಪನ್ನು ಗೋಲ್-ಕಿಕ್ ಮಾಡುವಾಗ ಮಾಡಿದರೆ ಎದುರಾಳಿ ತಂಡಕ್ಕೆ ಕಾರ್ನರ್ ಕಿಕ್ ನೀಡಲಾಗುತ್ತದೆ.

1 ನಿಮಿಷದ ಗಾಯಾಳು ಬೆಂಚ್ ನಿಯಮ

ಮೈದಾನದಲ್ಲಿ ಚಿಕಿತ್ಸೆ ಪಡೆದ ಗಾಯಾಳು ಆಟಗಾರರು ಮತ್ತೆ ಆಟಕ್ಕೆ ಸೇರುವ ಮುನ್ನ ಮೈದಾನದ ಹೊರಗೆ ಕಡ್ಡಾಯವಾಗಿ ಒಂದು ಪೂರ್ಣ ನಿಮಿಷ ಕಾಯಬೇಕು.

ಬಾಯಿ ಮುಚ್ಚಿಕೊಳ್ಳುವುದಕ್ಕೆ ನಿಷೇಧ

ಎದುರಾಳಿ ಆಟಗಾರರು ಅಥವಾ ಅಂಪೈರ್/ರೆಫರಿಗಳೊಂದಿಗೆ ವಾದಿಸುವಾಗ ಬಾಯಿ ಮುಚ್ಚಿಕೊಂಡರೆ ನೇರವಾಗಿ ರೆಡ್ ಕಾರ್ಡ್ (ಮೈದಾನದಿಂದ ಹೊರಕ್ಕೆ) ನೀಡಲಾಗುತ್ತದೆ.

ಪ್ರತಿಭಟನಾತ್ಮಕ ನಿರ್ಗಮನ

ರೆಫರಿ ತೀರ್ಪನ್ನು ಪ್ರತಿಭಟಿಸಿ ಆಟಗಾರ ಮೈದಾನದಿಂದ ಹೊರನಡೆದರೆ ಸ್ವಯಂಚಾಲಿತವಾಗಿ ರೆಡ್ ಕಾರ್ಡ್ ನೀಡಲಾಗುತ್ತದೆ ಮತ್ತು ಆ ತಂಡ ಪಂದ್ಯವನ್ನು ಸೋತಿದೆ ಎಂದು ಘೋಷಿಸುವ ಸಾಧ್ಯತೆಯೂ ಇರುತ್ತದೆ.

ಹಳದಿ ಕಾರ್ಡ್ ರದ್ದು

ಆಟಗಾರರು ಪಡೆದ ಒಂದೇ ಒಂದು ಹಳದಿ ಕಾರ್ಡ್ ಅನ್ನು ಪಂದ್ಯಾವಳಿಯಲ್ಲಿ ಎರಡು ಬಾರಿ ರದ್ದುಗೊಳಿಸಲಾಗುತ್ತದೆ: ಮೊದಲನೆಯದು ಗ್ರೂಪ್ ಹಂತದ ನಂತರ ಮತ್ತು ಎರಡನೆಯದು ಕ್ವಾರ್ಟರ್ ಫೈನಲ್ ಪಂದ್ಯಗಳ ನಂತರ.

2ನೇ ಹಳದಿ ಕಾರ್ಡ್ ಮರುಪರಿಶೀಲನೆ

ವಿಡಿಯೊ ರೆಫರಿಗಳು ಈಗ ಆಟಗಾರನಿಗೆ ನೀಡಲಾದ ಎರಡನೇ ಹಳದಿ ಕಾರ್ಡ್ ತಪ್ಪಾಗಿದ್ದರೆ ಅದನ್ನು ಮತ್ತೊಮ್ಮೆ ಪರಿಶೀಲಿಸಿ ರದ್ದುಗೊಳಿಸಬಹುದು.

ಕಾರ್ನರ್ ಕಿಕ್ ಪರಿಶೀಲನೆ

ತಪ್ಪಾಗಿ ನೀಡಲಾದ ಕಾರ್ನರ್ ಕಿಕ್‌ಗಳನ್ನು, ಆಟ ಆರಂಭವಾಗುವ ಮುನ್ನವೇ ವಿಡಿಯೊ ರೆಫರಿಗಳು ತಕ್ಷಣವೇ ಸರಿಪಡಿಸಬಹುದು.

ಒಂದು ಟಿಕೆಟ್ ಬೆಲೆ = 20 ತಿಂಗಳ ಆದಾಯ

ಅಮೆರಿಕ, ಕೆನಡಾ ಮತ್ತು ಮೆಕ್ಸಿಕೊ ಆತಿಥ್ಯದಲ್ಲಿ ನಡೆಯುತ್ತಿರುವ 2026ರ ಫುಟ್ಬಾಲ್ ವಿಶ್ವಕಪ್ ಪಂದ್ಯಾವಳಿಯ ಫೈನಲ್ ಟಿಕೆಟ್ ಬೆಲೆ ಫಿಫಾ ಇತಿಹಾಸದಲ್ಲಿಯೇ ದುಬಾರಿ ಎನ್ನುವ ದಾಖಲೆಗೆ ಪಾತ್ರವಾಗಿದೆ. ಭಾರತೀಯರ ಸರಾಸರಿ ಆದಾಯವನ್ನು ಗಮನದಲ್ಲಿರಿಸಿಕೊಂಡು ಹೇಳುವುದಾದರೆ ಫಿಫಾ 2026ರ ಫೈನಲ್ ಟಿಕೆಟ್ ಕೊಳ್ಳಬೇಕೆಂದರೆ ಒಬ್ಬ ಭಾರತೀಯ 20 ತಿಂಗಳ ಆದಾಯವನ್ನು ಖರ್ಚು ಮಾಡಬೇಕು.

ಫಿಫಾ ವಿಶ್ವಕಪ್ ಗರಿಷ್ಠ ಟಿಕೆಟ್ ದರ

ವರ್ಷ	ಆತಿಥ್ಯ	ಬೆಲೆ (ಡಾಲರ್‌ಗಳಲ್ಲಿ)
2026	ಕೆನಡಾ, ಅಮೆರಿಕ ಮತ್ತು ಮೆಕ್ಸಿಕೊ	7,598
2022	ಕತಾರ್	3,346
2018	ರಷ್ಯಾ	2,703
2014	ಬ್ರೆಜಿಲ್	2,039
2010	ದಕ್ಷಿಣ ಆಫ್ರಿಕಾ	1,676
2006	ಜರ್ಮನಿ	940
2002	ಜಪಾನ್ ಮತ್ತು ದಕ್ಷಿಣ ಕೊರಿಯಾ	660
1998	ಫ್ರಾನ್ಸ್	390
1994	ಅಮೆರಿಕ	475

ಕ್ರಿಸ್ಟಿಯಾನೊ ಟಿಕೆಟ್ ಮಹಿಮೆ

ಪ್ರಸಕ್ತ ಸಾಲಿನ ಫುಟ್ಬಾಲ್ ವಿಶ್ವಕಪ್ ಫೈನಲ್ ಪಂದ್ಯವು ಅತ್ಯಂತ ಗರಿಷ್ಠ ಟಿಕೆಟ್ ದರ ದಾಖಲೆಗೆ ಪಾತ್ರವಾಗಿದೆ. ಆದರ ನಂತರದ ಅತ್ಯಂತ ದುಬಾರಿ ಪಂದ್ಯ ಎಂದರೆ ಅದು ಜೂನ್ 27ರಂದು ನಡೆಯಲಿರುವ 'ಒ' ಗುಂಪಿನ ಕೊಲಂಬಿಯಾ ಮತ್ತು ಪೋರ್ಚುಗಲ್ ನಡುವಿನ ಮುಖಾಮುಖಿ. ಇದಕ್ಕೆ ಪ್ರಮುಖ ಕಾರಣ ಪೋರ್ಚುಗಲ್ ತಂಡದಲ್ಲಿರುವ ಜಗದ್ವಿಖ್ಯಾತ ತಾರೆ ಕ್ರಿಸ್ಟಿಯಾನೋ ರೊನಾಲ್ಡೊ. ಇದಕ್ಕೆ ತದ್ವಿರುದ್ಧವಾಗಿ, ಗ್ರೂಪ್ ಹಂತದ ಕಬೊ ವರ್ಡೆ ಮತ್ತು ಸೌದಿ ಅರೇಬಿಯಾ ನಡುವಿನ ಪಂದ್ಯವು ಅತ್ಯಂತ ಅಗ್ಗದ ಟಿಕೆಟ್ ದರ ಎನ್ನುವ ಹೆಸರಿಗೆ ಪಾತ್ರವಾಗಿದೆ.

ಆಂಗ್ಲರ ನಾಡಲ್ಲಿ ಮತ್ತೆ ಟಿ20 ವಿಶ್ವಕಪ್ ಸಂಭ್ರಮ

ಇಂದಿನಿಂದ ಜುಲೈ 5ರವರೆಗೆ ಮಹಿಳಾ ಟಿ20 ವಿಶ್ವಕಪ್ ಸಮರ

ಎಡ್ಜ್‌ಬಾಸ್ಟನ್: ಜಗತ್ತಿನಾದ್ಯಂತ ಫಿಫಾ ವಿಶ್ವಕಪ್ ಫುಟ್ಬಾಲ್ ಫೀವರ್ ಆವರಿಸಿರುವ ಮಧ್ಯೆಯೇ ಇಂಗ್ಲೆಂಡ್ ನೆಲದಲ್ಲಿ ಮಹಿಳೆಯರ ಟಿ20 ವಿಶ್ವಕಪ್ ಕೂಡ ಆಯೋಜನೆಗೊಂಡಿದೆ. ಜೂನ್ 12ರಿಂದ ಜುಲೈ 5ರವರೆಗೆ ನಡೆಯಲಿರುವ ಹತ್ತನೇ ಆವೃತ್ತಿಯಲ್ಲಿ ಒಟ್ಟು 12 ತಂಡಗಳು ಪ್ರಶಸ್ತಿಗಾಗಿ ಹೋರಾಟ ನಡೆಸಲಿವೆ.

2009ರಲ್ಲಿ ಆರಂಭವಾದ ಉದ್ಘಾಟನಾ ಟೂರ್ನಿಯಿಂದಲೂ ಪಾಲ್ಗೊಂಡಿರುವ ಭಾರತ, ಇದುವರೆಗೂ ಪ್ರಶಸ್ತಿ ಗೆಲ್ಲಲು ಸಾಧ್ಯವಾಗಿಲ್ಲ. 2020ರಲ್ಲಿ ರನ್ನರ್ ಅಪ್ ಹೊರತುಪಡಿಸಿ ಪ್ರಶಸ್ತಿ ಮರೀಚಿಕೆಯಾಗಿರುವ ಟೀಮ್ ಇಂಡಿಯಾಗೆ ಹರ್ಮನ್‌ಪ್ರೀತ್ ಕೌರ್ ಮತ್ತು ಬಳಗ ಪ್ರಶಸ್ತಿ ಗೆದ್ದುಕೊಡುವ ಅದಮ್ಯ ವಿಶ್ವಾಸದಲ್ಲಿದೆ. ಗುಂಪು ಹಂತದಲ್ಲಿ 5 ಪಂದ್ಯಗಳನ್ನು ಆಡಲಿರುವ ಭಾರತ, ಜೂ.14ರಂದು ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ವಿರುದ್ಧ ಅಭಿಯಾನ ಆರಂಭಿಸಲಿದೆ.

ಇಂಗ್ಲೆಂಡ್ ಮಹಿಳಾ ಟಿ20 ವಿಶ್ವಕಪ್ ಅನ್ನು 2009ರ ಬಳಿಕ ಮೊದಲ ಬಾರಿಗೆ ಆತಿಥ್ಯ ವಹಿಸುತ್ತಿದೆ. 2009ರಲ್ಲಿ ನಡೆದಿದ್ದ ಮೊದಲ ಆವೃತ್ತಿಯಲ್ಲಿ ಆಗಿನ ನಾಯಕಿ ಶಾರ್ಲೆಟ್ ಎಡ್ವರ್ಡ್ಸ್ ನೇತೃತ್ವದಲ್ಲಿ ಇಂಗ್ಲೆಂಡ್ ಪ್ರಶಸ್ತಿ ಗೆದ್ದಿತ್ತು. ಈಗ ಅವರು ತಂಡದ ಮುಖ್ಯ ಕೋಚ್ ಆಗಿದ್ದಾರೆ. ಹಾಲಿ ಚಾಂಪಿಯನ್ ನ್ಯೂಜಿಲೆಂಡ್, 6 ಬಾರಿ ಪ್ರಶಸ್ತಿ ಗೆದ್ದಿರುವ ಆಸ್ಟ್ರೇಲಿಯಾ, ಆತಿಥೇಯ ಇಂಗ್ಲೆಂಡ್ ಮತ್ತು ಭಾರತ ಈ ಬಾರಿ ಪ್ರಶಸ್ತಿ ಗೆಲ್ಲುವ ಫೇವರಿಟ್ ತಂಡಗಳಾಗಿವೆ.

ಉದ್ಘಾಟನಾ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್ ಮತ್ತು ಶ್ರೀಲಂಕಾ ತಂಡಗಳು ಸೆಣಸಲಿವೆ.

ಪಂದ್ಯ ಆರಂಭ: ರಾತ್ರಿ 11.00

ಪ್ರಶಸ್ತಿ ಮೊತ್ತ

₹21.8 ಕೋಟಿ ಚಾಂಪಿಯನ್ ತಂಡಕ್ಕೆ ಸಿಗುವ ಒಟ್ಟು ಬಹುಮಾನ ಮೊತ್ತ

₹10 ಕೋಟಿ ರನ್ನರ್ ಅಪ್ ತಂಡಕ್ಕೆ ದೊರೆಯುವ ಒಟ್ಟು ಬಹುಮಾನ ಮೊತ್ತ

12 2026ರ ಟೂರ್ನಿಯಲ್ಲಿ ಪಾಲ್ಗೊಂಡಿರುವ ಒಟ್ಟು ತಂಡಗಳು

'ಎ' ಗುಂಪು	'ಬಿ' ಗುಂಪು
ಆಸ್ಟ್ರೇಲಿಯಾ	ಇಂಗ್ಲೆಂಡ್
ಬಾಂಗ್ಲಾದೇಶ	ಐರ್ಲೆಂಡ್
ಭಾರತ	ನ್ಯೂಜಿಲೆಂಡ್
ನೆದರ್ಲೆಂಡ್ಸ್	ಸ್ಕಾಟ್ಲೆಂಡ್
ಪಾಕಿಸ್ತಾನ	ಶ್ರೀಲಂಕಾ
ದಕ್ಷಿಣ ಆಫ್ರಿಕಾ	ವೆಸ್ಟ್ ಇಂಡೀಸ್

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೋಸ್ಟಾರ್

ಮಹಿಳಾ ಟಿ20 ವಿಶ್ವಕಪ್‌ನ ಇದುವರೆಗಿನ ಚಾಂಪಿಯನ್‌ಗಳು

ತಂಡ	ವರ್ಷ
ಆಸ್ಟ್ರೇಲಿಯಾ	2010, 2012, 2014, 2018, 2020, 2023
ಇಂಗ್ಲೆಂಡ್	2009
ನ್ಯೂಜಿಲೆಂಡ್	2024
ವೆಸ್ಟ್ ಇಂಡೀಸ್	2016

33 ಟೂರ್ನಿಯಲ್ಲಿ ನಡೆಯಲಿರುವ ಒಟ್ಟು ಪಂದ್ಯಗಳು

01 ನೆದರ್ಲೆಂಡ್ಸ್ ಟಿ20 ವಿಶ್ವಕಪ್‌ನಲ್ಲಿ ಪದಾರ್ಪಣೆ ಮಾಡುತ್ತಿರುವ ಏಕೈಕ ತಂಡ. ಅರ್ಹತಾ ಪಂದ್ಯಾವಳಿಯಲ್ಲಿ ನಾಲ್ಕನೇ ಸ್ಥಾನ ಪಡೆದು ಇತಿಹಾಸ ನಿರ್ಮಿಸಿದೆ.

ಟೂರ್ನಿಯ ಮಾದರಿ

ಒಟ್ಟು 12 ತಂಡಗಳು ಟೂರ್ನಿಯಲ್ಲಿ ಪಾಲ್ಗೊಂಡಿವೆ. ಗುಂಪು ಹಂತದಲ್ಲಿ ಪ್ರತಿಯೊಂದು ತಂಡ ಉಳಿದ ಎಲ್ಲಾ ತಂಡಗಳ ವಿರುದ್ಧ ಆಡಲಿದೆ. ಪ್ರತಿ ಗುಂಪಿನ ಅಗ್ರ 2 ತಂಡಗಳು ಸೆಮಿಫೈನಲ್‌ಗೆ ಪ್ರವೇಶ ಪಡೆಯಲಿವೆ.

07 ಮಹಿಳಾ ಟಿ20 ವಿಶ್ವಕಪ್‌ನ 10ನೇ ಆವೃತ್ತಿಗೆ ಆತಿಥ್ಯವಹಿಸಿರುವ ಒಟ್ಟು ಕ್ರೀಡಾಂಗಣಗಳು. ಓಲ್ಡ್ ಟ್ರಾಫೋರ್ಡ್ ಕ್ರಿಕೆಟ್ ಗ್ರೌಂಡ್, ಹೆಡಿಂಗ್ಲೆ, ಎಡ್ಜ್‌ಬಾಸ್ಟನ್, ಬ್ರಿಸ್ಟಲ್ ಕೌಂಟಿ ಗ್ರೌಂಡ್, ಹ್ಯಾಂಪ್‌ಶೈರ್ ಬೌಲ್, ಲಾರ್ಡ್ಸ್, ದಿ ಓವಲ್.

ಭಾರತ ಮಹಿಳಾ ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನ, ದೀಪ್ತಿ ಶರ್ಮಾ, ರಾಧಾ ಯಾದವ್, ಜೆಮಿಮಾ ರೋಡ್ರಿಗಸ್, ಅರುಂಧತಿ ರೆಡ್ಡಿ, ಭಾರ್ತಿ ಫುಲ್ಮಾಲಿ, ರೇಣುಕಾ ಸಿಂಗ್ ಠಾಕೂರ್, ಶಫಾಲಿ ವರ್ಮಾ, ಯಾಸ್ತಿಕಾ ಭಾಟಿಯಾ, ರಿಚಾ ಘೋಷ್, ಶ್ರೇಯಾಂಕ ಪಾಟೀಲ್, ನಂದಿನಿ ಶರ್ಮಾ, ಕ್ರಾಂತಿ ಗೌಡ್, ಶ್ರೀ ಚರಣಿ.

ಭಾರತ ತಂಡದ ಲೀಗ್ ವೇಳಾಪಟ್ಟಿ

ದಿನಾಂಕ	ಪಂದ್ಯ	ಸ್ಥಳ	ಸಮಯ
ಜೂ.14	ಭಾರತ vs ಪಾಕಿಸ್ತಾನ	ಬರ್ಮಿಂಗ್‌ಹ್ಯಾಮ್	ಸಂಜೆ 7ಕ್ಕೆ
ಜೂ.17	ಭಾರತ vs ನೆದರ್ಲೆಂಡ್ಸ್	ಲೀಡ್ಸ್	ಸಂಜೆ 7ಕ್ಕೆ
ಜೂ.21	ಭಾರತ vs ದಕ್ಷಿಣ ಆಫ್ರಿಕಾ	ಮ್ಯಾಂಚೆಸ್ಟರ್	ಸಂಜೆ 7ಕ್ಕೆ
ಜೂ.25	ಭಾರತ vs ಬಾಂಗ್ಲಾದೇಶ	ಮ್ಯಾಂಚೆಸ್ಟರ್	ಸಂಜೆ 7ಕ್ಕೆ
ಜೂ.28	ಭಾರತ vs ಆಸ್ಟ್ರೇಲಿಯಾ	ಲಂಡನ್	ಸಂಜೆ 7ಕ್ಕೆ

ಯುವ ಪ್ರತಿಭೆಗಳ ಶೋಧಕ್ಕೆ ಮಹಾರಾಜ ಟ್ರೋಫಿ ವೇದಿಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ಮುಂಬರುವ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಯು ರಾಜ್ಯದ ಯುವ ಆಟಗಾರರಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಅತ್ಯುತ್ತಮ ವೇದಿಕೆಯಾಗಿದೆ ಎಂದು ಭಾರತ ತಂಡದ ಮಾಜಿ ನಾಯಕ ರಾಹುಲ್ ದ್ರಾವಿಡ್ ಗುರುವಾರ ಅಭಿಪ್ರಾಯಪಟ್ಟರು.

ಪ್ರಸಕ್ತ ಆವೃತ್ತಿಯು ಜೂನ್ 20ರಂದು ಮೈಸೂರಿನಲ್ಲಿ ಆರಂಭವಾಗಲಿದ್ದು, ಜುಲೈ 12ರಂದು ಮುಕ್ತಾಯಗೊಳ್ಳಲಿದೆ. ಹುಬ್ಬಳ್ಳಿ ಮತ್ತು ಬೆಂಗಳೂರು ಸಹ ಟೂರ್ನಿಗೆ ಆತಿಥ್ಯ ವಹಿಸಿವೆ.

ಕೆಎಸ್‌ಸಿಎ ಆವರಣದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಮಹಾರಾಜ ಟ್ರೋಫಿ ಟಿ20 ಟೂರ್ನಿಯ ಟ್ರೋಫಿ ಅನಾವರಣಗೊಳಿಸಿದ ನಂತರ ದ್ರಾವಿಡ್,

ಟ್ರೋಫಿ ಅನಾವರಣದ ವೇಳೆ ದ್ರಾವಿಡ್ ಅಭಿಪ್ರಾಯ

''ನಾನು ಅನೇಕ ವರ್ಷಗಳಿಂದ ಐಪಿಎಲ್‌ನಲ್ಲಿ ತೊಡಗಿಸಿಕೊಂಡಿದ್ದೇನೆ, ಇದು ಬಹಳಷ್ಟು ಐಪಿಎಲ್ ತಂಡಗಳು ಅನುಸರಿಸುವ ಪಂದ್ಯಾವಳಿಯಾಗಿದೆ ಎಂದು ನನಗೆ ತಿಳಿದಿದೆ, ಈ ಪಂದ್ಯಗಳ ಸ್ಕೋರ್‌ಗಳು, ಅಂಕಿಅಂಶಗಳು ಮತ್ತು ದತ್ತಾಂಶವನ್ನು ಬಹಳ ಹತ್ತಿರದಿಂದ ಗಮನಿಸಲಾಗುತ್ತದೆ ಮತ್ತು ಈ ಆಟಗಾರರಲ್ಲಿ ಬಹಳಷ್ಟು ಆಟಗಾರರು ಐಪಿಎಲ್‌ಗೆ ಪ್ರವೇಶಿಸಲು ಇದು ನಿಜವಾಗಿಯೂ ನೆರವಾಗುತ್ತದೆ. ಕರ್ನಾಟಕ ಮೂಲದ ರಾಜಸ್ಥಾನ್ ರಾಯಲ್ಸ್‌ನ ಲೆಗ್ ಸ್ಪಿನ್ನರ್ ಯಶ್ ರಾಜ್ ಪುಂಜಾ ಇದಕ್ಕೆ ಅತ್ಯುತ್ತಮ ಉದಾಹರಣೆ,'' ಎಂದು ಉಲ್ಲೇಖಿಸಿದರು.

ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್, 'ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿ ಯುವ ಆಟಗಾರರಿಗೆ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಲು, ಅಮೂಲ್ಯವಾದ ಅನುಭವವನ್ನು ಪಡೆಯಲು ಮತ್ತು ಅವರ ಕ್ರಿಕೆಟ್ ವೃತ್ತಿಜೀವನದಲ್ಲಿ ಮಹತ್ವದ ಹೆಜ್ಜೆಗಳನ್ನು ಇಡಲು ಪ್ರಮುಖ ವೇದಿಕೆ ಕಲ್ಪಿಸುತ್ತಿದೆ,'' ಎಂದು ಹೇಳಿದರು. ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್, '' ಪಂದ್ಯಾವಳಿಯಲ್ಲಿ ಇಂಪ್ಯಾಕ್ಟ್ ಪ್ಲೇಯರ್ ನಿಯಮವನ್ನು ಉಳಿಸಿಕೊಳ್ಳುವುದು ಸೇರಿದಂತೆ ಪಂದ್ಯದ ಸಮಯದಲ್ಲಿನ ಪ್ರಮುಖ ಬದಲಾವಣೆಗಳನ್ನು ವಿವರಿಸಿದರು. ಕಾರ್ಯಕ್ರಮದಲ್ಲಿ ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಆಫ್ಘನ್‌ಗೆ ಮಣಿದ ಭಾರತ 'ಎ' ತಂಡ

ದಂಬುಲ್ಲಾ: ಅಫಘಾನಿಸ್ತಾನ 'ಎ' ತಂಡ ಇಲ್ಲಿ ನಡೆಯುತ್ತಿರುವ ಮೂರು ರಾಷ್ಟ್ರಗಳ ಏಕದಿನ ಸರಣಿಯ ಮಳೆ ಬಾಧಿತ ತನ್ನ ಮೊದಲ ಪಂದ್ಯದಲ್ಲಿ ಡಕ್ವರ್ತ್ ಲೂಯಿಸ್ ನಿಯಮ (ಡಿಎಲ್‌ಎಸ್) ಅನ್ವಯ 4 ರನ್‌ಗಳಿಂದ ಭಾರತ 'ಎ' ತಂಡವನ್ನು ಸೋಲಿಸಿದೆ.

ಡಿಎಲ್‌ಎಸ್ ನಿಯಮದನ್ವಯ ಅಫಘಾನಿಸ್ತಾನಕ್ಕೆ 4 ರನ್ ಗೆಲುವು

ರಣ್‌ಗಿರಿ ದಂಬುಲ್ಲಾ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಭಾರತ ನೀಡಿದ 350 ರನ್‌ಗಳ ಕಠಿಣ ಗುರಿ ಬೆನ್ನಟ್ಟಿದ ಆಫ್ಘನ್ 25.5 ಓವರ್‌ಗಳಲ್ಲಿ 2 ವಿಕೆಟ್‌ಗೆ 177 ರನ್ ಗಳಿಸಿದ್ದಾಗ ಪಂದ್ಯಕ್ಕೆ ಮಳೆ ಅಡ್ಡಿಪಡಿಸಿತು. ನಂತರ ಬಿಡುವು ನೀಡದ ಕಾರಣ ಡಿಎಲ್‌ಎಸ್ ಅನ್ವಯ ಆಫ್ಘನ್ ತಂಡಕ್ಕೆ 4 ರನ್‌ಗಳ ಜಯ ಘೋಷಿಸಲಾಯಿತು.

ಅಫಘಾನಿಸ್ತಾನ ಪರ ಇಮ್ರಾನ್ ಮಿರ್ (75*) ಮತ್ತು ಬಹಿರ್ ಶಾ (51*) ಅರ್ಧ ಶತಕ ಗಳಿಸಿ ಗಮನ ಸೆಳೆದರು. ಇದಕ್ಕೂ ಮುನ್ನ ಪ್ರಭ್‌ಸಿಮ್ರನ್ (84), ವೈಭವ್ ಸೂರ್ಯವಂಶಿ (44), ಋತುರಾಜ್ ಗಾಯಕ್ವಾಡ್ (66), ನಾಯಕ ತಿಲಕ್ ವರ್ಮಾ (66) ಹಾಗೂ ಸೂರ್ಯಾಂಶ್ (40) ಅವರ ಅತ್ಯುತ್ತಮ ಬ್ಯಾಟಿಂಗ್ ಸಾಹಸದಿಂದ ಟೀಮ್ ಇಂಡಿಯಾ ಸವಾಲಿನ ಮೊತ್ತ ಪೇರಿಸಿತು. ಆಫ್ಘನ್ ತಂಡದ ಪರ ಅಹ್ಮದ್‌ಜೈ 68ಕ್ಕೆ 5 ವಿಕೆಟ್ ಪಡೆಯುವ ಮೂಲಕ ಗಮನ ಸೆಳೆದರು.

ಮೊದಲೆರಡು ಪಂದ್ಯಗಳಲ್ಲಿ ಗೆಲುವು-ಸೋಲಿನ ಮಿಶ್ರ ಫಲ ಕಂಡಿರುವ ಭಾರತ, ತನ್ನ ಮೂರನೇ ಪಂದ್ಯದಲ್ಲಿ ಜೂನ್ 15ರಂದು ಶ್ರೀಲಂಕಾ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್: ಭಾರತ ಎ: 49 ಓವರ್‌ಗಳಲ್ಲಿ 9 ವಿಕೆಟ್‌ಗೆ 349 (ಪ್ರಭ್‌ಸಿಮ್ರನ್ 84, ವೈಭವ್ 44, ಋತುರಾಜ್ 66, ತಿಲಕ್ 66, ಸೂರ್ಯಾಂಶ್ 40; ಅಬ್ದುಲ್ಲಾ ಅಹ್ಮದ್‌ಜೈ 68ಕ್ಕೆ 5, ಫರ್ಮಾನ್‌ಉಲ್ಲಾ ಸಫಿ 85ಕ್ಕೆ 3).
ಅಫಘಾನಿಸ್ತಾನ ಎ: 25.5 ಓವರ್‌ಗಳಲ್ಲಿ 2 ವಿಕೆಟ್‌ಗೆ 177 (ಇಮ್ರಾನ್ ಮಿರ್ 75*, ಬಹಿರ್ ಶಾ 51*, ಹಸನ್ ಐಸಾಖಿಲ್ 34; ಅನುಕುಲ್ 24ಕ್ಕೆ 1).

ಕ್ವಾರ್ಟರ್‌ಫೈನಲ್ಸ್‌ಗೆ ಸಿಂಧೂ, ತನ್ವಿ ಮುನ್ನಡೆ

ಆಸ್ಟ್ರೇಲಿಯನ್ ಓಪನ್ ಬ್ಯಾಡ್ಮಿಂಟನ್

ಸಿಡ್ನಿ: ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧೂ ಬಿಡಬ್ಲ್ಯೂಎಫ್ ಆಸ್ಟ್ರೇಲಿಯನ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ಸ್ ತಲುಪಿದ್ದಾರೆ.

ಗುರುವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಭಾರತೀಯ ಆಟಗಾರ್ತಿ 22-20, 21-12 ನೇರ ಗೇಮ್‌ಗಳಿಂದ ಸಹ ಸ್ಪರ್ಧಿ ಇಶಾರಾಣಿ ಬರುವಾ ವಿರುದ್ಧ ಜಯ ಗಳಿಸಿದರು.

ತನ್ವಿ ಶರ್ಮಾ

ಮೊದಲ ಗೇಮ್‌ನಲ್ಲಿ ಪ್ರಬಲ ಪ್ರತಿರೋಧ ಎದುರಿಸಿದ ಸಿಂಧೂ, ದ್ವಿತೀಯ ಗೇಮ್ ಅನ್ನು ಸುಲಭವಾಗಿ ವಶಪಡಿಸಿಕೊಂಡರು. ಸಿಂಧೂ ಮುಂದಿನ ಸುತ್ತಿನಲ್ಲಿ ಚೈನೀಸ್ ತೈಪೆಯ ಚೆನ್ ಸು ಯು ಅವರನ್ನು ಎದುರಿಸಲಿದ್ದಾರೆ.

ಮಹಿಳಾ ಸಿಂಗಲ್ಸ್ ವಿಭಾಗದ ಮತ್ತೊಂದು ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ತನ್ವಿ ಶರ್ಮಾ 21-13, 21-15 ನೇರ ಗೇಮ್‌ಗಳಿಂದ ಸಹ ಸ್ಪರ್ಧಿ ಮಾಳವಿಕಾ ಬನ್ಸೋಡ್ ಎದುರು ಸುಲಭ ಜಯ ಗಳಿಸಿದರು. ಯುವ ಆಟಗಾರ್ತಿ ತನ್ವಿ ಎರಡೂ ಗೇಮ್‌ಗಳಲ್ಲಿ ಪ್ರಾಬಲ್ಯ ಮೆರೆದರು.

ಏಷ್ಯನ್ ಗೇಮ್ಸ್‌ಗೆ ಶೂಟಿಂಗ್ ತಂಡ ಪ್ರಕಟ

ಹೊಸದಿಲ್ಲಿ: ಜಪಾನ್‌ನ ಐಚಿ-ನಗೋಯಾದಲ್ಲಿ ಸೆಪ್ಟೆಂಬರ್ 19ರಿಂದ ಅಕ್ಟೋಬರ್ 4ರವರೆಗೆ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ಭಾರತೀಯ ರಾಷ್ಟ್ರೀಯ ರೈಫಲ್ ಸಂಸ್ಥೆ ಗುರುವಾರ 30 ಸದಸ್ಯರ ತಂಡವನ್ನು ಘೋಷಿಸಿದೆ. ಒಲಿಂಪಿಕ್ ಪದಕ ವಿಜೇತೆ ಪಿಸ್ತೂಲ್ ಶೂಟರ್ ಮನು ಭಾಕರ್ ಎರಡು ಸ್ಪರ್ಧೆಗಳಲ್ಲಿ ಕಣಕ್ಕಿಳಿಯಲಿದ್ದರೆ, ಅನಿಶ್ ಭನ್ವಾಲಾ ಪುರುಷರ 25 ಮೀ. ರ‍್ಯಾಪಿಡ್‌ಫೈರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಭಾರತದ ಏಕೈಕ ಸ್ಪರ್ಧಿಯಾಗಿ ಕಣಕ್ಕಿಳಿಯಲಿದ್ದಾರೆ.

ವಿಂಬಲ್ಡನ್ ಪ್ರಶಸ್ತಿ ಮೊತ್ತ ಶೇ.20ರಷ್ಟು ಹೆಚ್ಚಳ

ಲಂಡನ್: ಟೂರ್ನಿಯ ಆದಾಯದಲ್ಲಿ ಹಂಚಿಕೆ ಮಾಡುವಂತೆ ಆಟಗಾರರು ಬೇಡಿಕೆ ಇಟ್ಟಿರುವ ಮಧ್ಯೆಯೇ ವಿಂಬಲ್ಡನ್ ಗ್ರ್ಯಾನ್ ಸ್ಲಾಮ್ ಟೆನಿಸ್ ಟೂರ್ನಿಯ ಒಟ್ಟು ಬಹುಮಾನ ಮೊತ್ತದಲ್ಲಿ ಕಳೆದ ಬಾರಿಗಿಂತ ಶೇ.20ರಷ್ಟು ಹೆಚ್ಚಳ ಮಾಡಲಾಗಿದೆ. ಹೆಚ್ಚಳ ಬಳಿಕ ಮುಂದಿನ ತಿಂಗಳು ಗ್ರಾಸ್ ಕೋರ್ಟ್‌ನಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಸಿಂಗಲ್ಸ್ ಚಾಂಪಿಯನ್ ಅಂದಾಜು 45 ಕೋಟಿ ರೂ. ಬಹುಮಾನ ಮೊತ್ತವನ್ನು ಪಡೆಯಲಿದ್ದಾರೆ.

ಭಾರತ ಕಿರಿಯರ ತಂಡಕ್ಕೆ ದ್ರಾವಿಡ್ ಪುತ್ರ ಅನ್ವಯ್

ಹೊಸದಿಲ್ಲಿ: ದಿಗ್ಗಜ ಆಟಗಾರ ರಾಹುಲ್ ದ್ರಾವಿಡ್ ಅವರ ಕಿರಿಯ ಮಗ ಅನ್ವಯ್ ದ್ರಾವಿಡ್ ಅವರನ್ನು ಜುಲೈ 4ರಿಂದ ಆರಂಭವಾಗಲಿರುವ ಶ್ರೀಲಂಕಾ ಪ್ರವಾಸಕ್ಕಾಗಿ ಭಾರತ 19 ವರ್ಷದೊಳಗಿನವರ ತಂಡಕ್ಕೆ ಗುರುವಾರ ಸೇರ್ಪಡೆಗೊಳಿಸಲಾಗಿದೆ.

ಬಿಸಿಸಿಐನ ಜೂನಿಯರ್ ಕ್ರಿಕೆಟ್ ಸಮಿತಿಯು ಮುಂಬರುವ ಶ್ರೀಲಂಕಾ ಪ್ರವಾಸಕ್ಕೆ ಭಾರತದ ಪುರುಷರ 19 ವರ್ಷದೊಳಗಿನವರ ತಂಡವನ್ನು ಆಯ್ಕೆ ಮಾಡಿದೆ. ಇದರಲ್ಲಿ ಮೂರು ಏಕದಿನ ಪಂದ್ಯಗಳು ಮತ್ತು ಎರಡು ಬಹುದಿನ ಪಂದ್ಯಗಳು ಸೇರಿವೆ. ಯಶ್ ಬರ್ಧನ್ ಸಿಂಗ್ ಚೌಹಾಣ್ ಏಕದಿನ ಮತ್ತು ಬಹುದಿನ ತಂಡಗಳನ್ನು ಮುನ್ನಡೆಸಲಿದ್ದು, ಲಕ್ಷ್ಯ ರಾಯ್ಚಂದಾನಿ ಎರಡೂ ತಂಡಗಳಲ್ಲಿ ಉಪನಾಯಕರಾಗಿದ್ದಾರೆ.

ಅನ್ವಯ್, ರಜತ್ ಬಘೇಲ್ ಜತೆ ಎರಡು ವಿಕೆಟ್ ಕೀಪರ್ ಆಯ್ಕೆಗಳಲ್ಲಿ ಒಬ್ಬರಾಗಿ ಏಕದಿನ ತಂಡದಲ್ಲಿ ಸ್ಥಾನ ಪಡೆದರೆ, ಮಾನವ್ ಕೃಷ್ಣ ಮತ್ತು ಆರ್ಯನ್ ಸಂದೇಶ್‌ರನ್ನು ಬಹು ದಿನಗಳ ಪಂದ್ಯಗಳಿಗೆ ವಿಕೆಟ್ ಕೀಪರ್‌ಗಳಾಗಿ ಆಯ್ಕೆ ಮಾಡಲಾಗಿದೆ.

17ರ ಹರೆಯದ ದ್ರಾವಿಡ್ ಕಳೆದ ವಿನೂ ಮಂಕಡ್ ಟ್ರೋಫಿಯಲ್ಲಿ ಕರ್ನಾಟಕ 19 ವರ್ಷದೊಳಗಿನವರ ತಂಡವನ್ನು ಕ್ವಾರ್ಟರ್‌ಫೈನಲ್‌ಗೆ ಮುನ್ನಡೆಸಿದ್ದರು, ಇದರಲ್ಲಿ ಅವರು 6 ಪಂದ್ಯಗಳಲ್ಲಿ 220 ರನ್ ಗಳಿಸಿದ್ದರು.

Stores in Karnataka
North Bengaluru : Hennur - Geddalahalli, New BEL Road - KGE Layout, Phoenix Mall of Asia - Bellary Road, RMZ Galleria Mall - Yelahanka | South Bengaluru : Banashankari - IV Phase, Electronic City - Neeladri Road, Forum South Bengaluru Mall - Konanakunte cross, Jayanagar - 4th Block, JP Nagar - 24th Main Road, Kanakapura Road - Raghuvanahalli, Royal Meenakshi Mall - Bannerghatta Road, RR Nagar - Jawaharlal Nehru Road, Vega City Mall - Dollar layout | South-East Bengaluru : Bommanahalli - Bandepalya, M5 Mall ECity, Nexus Koramangala, HSR Layout, Koramangala - 100 Feet Road | East Bengaluru : KR Puram - Old Madras Road, Sarjapur Road - Doddakannelli, Nexus Shantiniketan - Whitefield, Indiranagar - 100 Feet Road, Kammanahalli - HRBR Layout, Marathahalli - Outer Ring Road, Phoenix Market city - Mahadevapura, Whitefield | West Bengaluru : Margosa Road - Malleshwaram, Orion Mall - Malleshwaram | Central Bengaluru : M.G Road, Commercial Street - Kamaraj Road | Belgaum : Tilakwadi - Goaves Circle | Hubli : Koppikar Road | Mangaluru : Bejai-Kapikad Road, Fiza by Nexus Mall - Pandeshwar | Mysore : Devaraja Urs Road, Nexus Centre City Mall - Hyderali Road | Gulbarga - Station Road

www.caratlane.com - Now available in Hindi | 375+ stores across India | 044 42935000